ಹುಬ್ಬಳ್ಳಿ

ಮಂಗಳವಾರ, 7 ಏಪ್ರಿಲ್ 2026

ಸಂಪುಟ 16, ಸಂಚಿಕೆ 13, ಪುಟಗಳು 12

■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5

RNI No.KARKAN/2011/64413

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಬುಡಕಟ್ಟು ಜನರು ಕೈ ಮತಬ್ಯಾಂಕ್ | ೦೭

ಐಎಸ್ಐ ನಂಟು: ಮೂವರ ಸೆರೆ | ೦೭

ಸೈಕಲ್‌ನಲ್ಲೇ ಎವರೆಸ್ಟ್ ಬೇಸ್ ತಲುಪಿದ ಮಹಿಳೆ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಜ್ಯೇಷ್ಠೆ

ದಿನದ ಮಾತು

ಪುಣ್ಯದ ಕಾರ್ಯ ಮಾಡಲು ನಿಧಾನಿಸಿದರೆ ಮನಸ್ಸು ಪಾಪದ ಕಡೆ ಓಡುತ್ತದೆ.

▲ದಮ್ಮಪದ

ನಮ್ಮದಲ್ಲದಿದ್ದರೂ ನಮ್ಮದೇ ಆದ ಹೊರ್ಮುಜ್ ಜಲಸಂಧಿ

ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ ೬

ಕಿರುಸುದ್ದಿ

ಶೃಂಗೇರಿ ವಿಧಾನಸಭಾ ಕ್ಷೇತ್ರ: ಅಂಚೆ ಮತ ಮರು ಎಣಿಕೆಗೆ ಹೈಕೋರ್ಟ್ ಆದೇಶ

• **ಬೆಂಗಳೂರು:** ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಚಲಾವಣೆಯಾಗಿರುವ 1,811 ಅಂಚೆ ಮತಗಳ ಪೈಕಿ ತಿರಸ್ಕೃತಗೊಂಡಿರುವ 279 ಅಂಚೆ ಮತಗಳನ್ನು ಮರು ಪರಿಶೀಲಿಸಿ, ನಂತರ ಎಲ್ಲಾ ಅಂಚೆ ಮತಗಳನ್ನು



ಮರು ಎಣಿಕೆ ಮಾಡಿ ಚುನಾವಣಾಧಿಕಾರಿ ಫಲಿತಾಂಶ ಪ್ರಕಟಿಸಬೇಕು ಎಂದು ಹೈಕೋರ್ಟ್ ಸೋಮವಾರ ಮಹತ್ವದ ಆದೇಶ ಮಾಡಿದ್ದು, ಅಂತಿಮವಾಗಿ ಮಧ್ಯಂತರ ತಡೆಯಾಜ್ಞೆ ನೀಡಿದೆ. ಶೃಂಗೇರಿ ಶಾಸಕ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಆಯ್ಕೆ ಪ್ರಶ್ನಿಸಿ ಬಿಜೆಪಿ ಪರಾಜಿತ ಅಭ್ಯರ್ಥಿ ಡಿ.ಎನ್. ಜೀವರಾಜ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ.ಆರ್.ನಟರಾಜ್ ಅವರ ಏಕಸದಸ್ಯ ಪೀಠವು ಭಾಗಶಃ ಪುರಸ್ಕರಿಸಿದೆ. ➡ಪುಟ ೪

ಉಪಚುನಾವಣೆ ಬಹಿರಂಗ ಪ್ರಚಾರಕ್ಕೆ ಇಂದು ತೆರೆ

• **ಬೆಂಗಳೂರು:** ಅಬ್ಬರದ ಪ್ರಚಾರ ನಡೆಯುತ್ತಿರುವ ಉಪಚುನಾವಣೆಯ ಬಹಿರಂಗ ಪ್ರಚಾರಕ್ಕೆ ಮಂಗಳವಾರ ಸಂಜೆ ತೆರೆ ಬೀಳಲಿದ್ದು, ಚುನಾವಣಾ ಕಣದಲ್ಲಿ ಆರೋಪ –ಪ್ರತ್ಯಾರೋಪ ಮಾಡುತ್ತಿರುವ ನಾಯಕರು ಕ್ಷೇತ್ರಗಳನ್ನು ತೊರೆಯಲಿದ್ದಾರೆ. ದಾವಣಗೆರೆ ಮತ್ತು ಬಾಗಲಕೋಟೆಯಲ್ಲಿ ಬಿರುಸಿನ ಪ್ರಚಾರ ಕೈಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಾದಾಮಿಯಲ್ಲಿ ಇದ್ದು, ಮಂಗಳವಾರ ಮಧ್ಯಾಹ್ನದ ಹೊತ್ತಿಗೆ ಬೆಂಗಳೂರು ತಲುಪಲಿದ್ದಾರೆ. ಅಸ್ಸಾಂ ಚುನಾವಣೆಯ ಉಸ್ತುವಾರಿ ಜತೆಗೆ ದಾವಣಗೆರೆ ದಕ್ಷಿಣ ಕ್ಷೇತ್ರದ ಪ್ರಚಾರದಲ್ಲಿ ಭಾಗಿಯಾಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಂಗಳವಾರ ಕ್ಷೇತ್ರದ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ. ➡ಪುಟ ೪

ಸಿಇಸಿ ಪದಚ್ಯುತಿ ಕೋರಿದ್ದ ನೋಟಿಸ್ ತಿರಸ್ಕರಿಸಿದ ವಿಪಿ

• ಪುಟ ೭

ಹೈವೆಗಳಲ್ಲಿ ಜಾನುವಾರು: ರಾಜ್ಯ, ಕೇಂದ್ರಕ್ಕೆ ಸೂಚನೆ

• ಪುಟ ೭

ಜಾಗತಿಕ ಇಂಧನಕ್ಕಾಗಿ ಚಂದ್ರನ ಸುತ್ತ 6,800 ಮೈಲಿ ಉದ್ದ ಸೌರಫಲಕ ಪಟ್ಟಿ

• ಪುಟ ೭

ಅಸ್ತಿತ್ವಕ್ಕಾಗಿ ಬಿಜೆಪಿ ಯತ್ನ: ಸಿಎಂ

• ಪುಟ ೫

ಒಂದು ರಾಷ್ಟ್ರ, ಒಂದು ಚುನಾವಣೆ ಬಿಜೆಪಿ ಕಾರ್ಯಸೂಚಿ: ಮೋದಿ

ಏನಾಸಂ ಸಾಕಾರಕ್ಕೆ ಬದ್ಧ

• **ಹೊಸದಿಲ್ಲಿ:** ಬಿಜೆಪಿ ಕಾರ್ಯಸೂಚಿಗಳ ಪೈಕಿ ಏಕರೂಪ ನಾಗರಿಕ ಸಂಹಿತೆ(ಏನಾಸಂ) ಮತ್ತು ಒಂದು ರಾಷ್ಟ್ರ, ಒಂದು ಚುನಾವಣೆ ಇನ್ನಷ್ಟೇ ಸಾಕಾರಗೊಳ್ಳಬೇಕಿದೆ. ಈ ಬಗ್ಗೆ ದೇಶದಲ್ಲಿ ಗಂಭೀರ ಚರ್ಚೆಗಳಾಗುತ್ತಿವೆ. ಈ ನಿಟ್ಟಿನಲ್ಲಿ ನಾವು ಸಕಾರಾತ್ಮಕ ಹೆಜ್ಜೆಗಳನ್ನೂ ಇರಿಸಿದ್ದೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ.

1994ರಲ್ಲಿ ಮೊತ್ತ ಮೊದಲು ಮಹಿಳಾ ಮೀಸಲಾತಿ ಪರ ಧ್ವನಿ ಎತ್ತಿದ್ದೇ ಬಿಜೆಪಿ. ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ.33 ಮೀಸಲಾತಿ



ಬಿಜೆಪಿ 47ನೇ ಸಂಸ್ಥಾಪನಾ ದಿನಾಚರಣೆ

ಕಲ್ಪಿಸುವ ಮಹಿಳಾ ಮೀಸಲಾತಿ ಕಾಯಿದೆಯನ್ನು 2029ರ ಮಹಾ ಚುನಾವಣೆಗಳ ಸಂದರ್ಭ ಅನುಷ್ಠಾನಿಸಲು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಕಟಿಬದ್ಧವಿದೆ ಎಂದು ಪ್ರಧಾನಿ ಮೋದಿ, ಬಿಜೆಪಿಯ 47ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮವನ್ನು ವರ್ಚ್ಯುಅಲ್ ನೆಲೆಯಲ್ಲಿ ಉದ್ದೇಶಿಸಿ ಭರವಸೆ ನೀಡಿದರು.

ಕಾಂಗ್ರೆಸ್‌ನ್ನು ಕಟುವಾಗಿ ತರಾಟೆಗೆತ್ತಿಕೊಂಡ ಪ್ರಧಾನಿ ಮೋದಿ, ಕಾಂಗ್ರೆಸ್ ಆಳ್ವಿಕೆಯಲ್ಲಿ ಬಿಜೆಪಿ ಕಾರ್ಯಕರ್ತರು ತುರ್ತು ಪರಿಸ್ಥಿತಿ, ಅನಗತ್ಯ ದೌರ್ಜನ್ಯಗಳಂತಹ ಹಲವು ಕ್ರೂರ ಬವಣೆಗಳನ್ನು ಅನುಭವಿಸಿದ್ದಾರೆ. ಹಿಂಸಾಕಾಂಡವೇ ರಾಜಕೀಯ ಸಂಸ್ಕೃತಿಯಾಗಿರುವ ಕೇರಳ, ಪ.ಬಂಗಾಳದಲ್ಲಿನ ಹತ್ಯಾಕಾಂಡದಂತೆ ಹಲವು ಬಿಜೆಪಿ ಕಾರ್ಯಕರ್ತರ ಪ್ರಾಣಗಳೇ ಕಾಂಗ್ರೆಸ್ ಆಳ್ವಿಕೆ ಸಂದರ್ಭದ ದೌರ್ಜನ್ಯಗಳಿಗೆ ಬಲಿಯಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ➡ಪುಟ ೪



ಮಿತ್ರಕೂಟ ರಾಜನೀತಿಗೆ ಎನ್‌ಡಿಎ ಮಾದರಿ

ಪ್ರತಿ ದೇಶದಿಂದ ಸಮಾನ ಅಂತರ ಕಾಯ್ದುಕೊಳ್ಳುವುದರಲ್ಲೇ ಭಾರತ ಹೆಮ್ಮೆಪಡುವ ಕಾಲವೊಂದಿತ್ತು. ಆದರೆ ಇಂದು ಪ್ರತಿ ರಾಷ್ಟ್ರದೊಂದಿಗೆ ನಿಕಟ ಬಾಂಧವ್ಯ ಕಾಯ್ದುಕೊಳ್ಳುತ್ತಲೇ ಭಾರತ ಮುನ್ನಡೆ ಸಾಧಿಸುತ್ತಿದೆ. ಎನ್‌ಡಿಎ ಅಸ್ತಿತ್ವಕ್ಕೆ ಬಂದು 25 ವರ್ಷಗಳಾದವು. ರಾಷ್ಟ್ರದ ಹಿತಾಸಕ್ತಿ ಕಾಪಾಡಲು ಮತ್ತು ಜನರ ಕಲ್ಯಾಣಕ್ಕಾಗಿ ಶ್ರಮಿಸುವ ಏಕೈಕ ಮಿತ್ರಕೂಟವಾಗಿದೆ ಎನ್‌ಡಿಎ. ಮಿತ್ರಕೂಟ ರಾಜನೀತಿಗೆ ಎನ್‌ಡಿಎ ಮಾದರಿಯಾಗಿದೆ. ➡ಪುಟ ೪

ಪಾಕ್ ತಾಳಕ್ಕೆ ಕುಣಿಯುವ ಕಾಂಗ್ರೆಸ್: ಮೋದಿ

• **ಭವಾನಿಪುರ-ಸೊರ್ಭೋಗ್(ಅಸ್ಸಾಂ):** ಪಾಕಿಸ್ತಾನದಲ್ಲಿನ ಭಯೋತ್ಪಾದಕ ನೆಲೆಗಳ ವಿರುದ್ಧ ತನ್ನ ನೇತೃತ್ವದ ಸರ್ಕಾರ ಆಪರೇಷನ್ ಸಿಂದೂರ್ ನಡೆಸಿತು. ಆದರೆ, ಕಾಂಗ್ರೆಸ್ ನೆರೆರಾಷ್ಟ್ರದ ತಾಳಕ್ಕನುಗುಣವಾಗಿ ಹಾಡಿ ಕುಣಿಯುತ್ತಿರುವುದು ತೀರಾ ಹೇಯವೆಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅಭಿವೃದ್ಧಿಗೆ ಸಂಬಂಧಿಸಿ ವಿಪಕ್ಷದ ದೃಷ್ಟಿಕೋನ ತೀರಾ ಅಲ್ಪಕಾಲೀನವೆಂದು ಆರೋಪಿಸಿದ ಪ್ರಧಾನಿ ಮೋದಿ, ಬಿಜೆಪಿ ದೀರ್ಘಕಾಲೀನ ಬೆಳವಣಿಗೆಗೆ ಆದ್ಯತೆ ನೀಡಿದೆ. ಭ್ರಷ್ಟಾಚಾರ ತಾಂಡವಿಸಲೆಂದೇ ವಿಪಕ್ಷ ಕಾಂಗ್ರೆಸ್ ಯಾವಾಗಲು ಅಲ್ಪಾವಧಿ ಉಪಕ್ರಮಗಳನ್ನೇ ಕೈಗೊಳ್ಳುತ್ತಿತ್ತು. ಆದರೆ ಬಿಜೆಪಿ ಸಮಾಜದ ಎಲ್ಲಾ ವರ್ಗಗಳ ಸಮಗ್ರ ಅಭಿವೃದ್ಧಿಗೆ ಪೂರಕವಾಗಬಲ್ಲ ಯೋಜನೆಗಳ ಬಗ್ಗೆ ದೂರಗಾಮಿ ಚಿಂತನೆ ನಡೆಸಿಕೊಂಡೇ ನಿರ್ಧಾರ ಕೈಗೊಳ್ಳುತ್ತಿತ್ತು ಎಂದು ಮೋದಿ, ಅಸ್ಸಾಂನ ಬರ್ಪೇಟಾದಲ್ಲಿ ಸೋಮವಾರ ಚುನಾವಣಾ ರ‍್ಯಾಲಿ ಉದ್ದೇಶಿಸಿ ನುಡಿದರು. ➡ಪುಟ ೪

ಬಿಜೆಪಿ ಆಡಳಿತಶೈಲಿ ವಿಶಿಷ್ಟ

ವಂಶ ಪಾರಂಪರ್ಯ ರಾಜನೀತಿಯನ್ನು ನೀವು ಕಂಡಿರುವಿರಿ. ದೇಶದ ಹಲವು ಭಾಗಗಳಲ್ಲಿ ಈ ರಾಜನೀತಿ ಈಗಲೂ ಜ್ವಲಂತವಿದೆ. ಇನ್ನು ವಾಮಪಂಥೀಯ ಆಡಳಿತ ನೀತಿಗೂ ಸಾಕ್ಷಿಯಾಗಿರುವಿರಿ. ಆದರೆ ಬಿಜೆಪಿ ಆಡಳಿತ ಶೈಲಿ ಮಾತ್ರ ವಿಶಿಷ್ಟವಾದುದು. ಬಿಜೆಪಿಗೆ ತನ್ನದೇ ಆದ ಅಜೆಂಡಾ ಮತ್ತು ಗುರಿಗಳಿವೆ . ಪ್ರಸ್ತುತ ಬಿಕ್ಕಟ್ಟನ್ನು ನಿಭಾಯಿಸುವ ಜತೆ ಜತೆಗೆ ರಾಷ್ಟ್ರವನ್ನು ಭವಿಷ್ಯಕ್ಕಾಗಿ ಅಣಿಗೊಳಿಸುವ ಕಾರ್ಯವನ್ನೂ ಬಿಜೆಪಿ ನೇತೃತ್ವದ ಸರಕಾರ ಮಾಡುತ್ತಿದೆ. ➡ಪುಟ ೪

2029ರ ಮಹಾಚುನಾವಣೆ ಬಳಿಕ ಮಹಿಳಾ ಮೀಸಲು

ಅಸ್ಸಾಂನಲ್ಲಿ ಸಾಕಷ್ಟು ತ್ಯಾಗಗಳು ಮತ್ತು ಕಳೆದ ಹತ್ತು ವರ್ಷಗಳಲ್ಲಿ ಸಹಿ ಹಾಕಲಾಗಿರುವ ಶಾಂತಿ ಒಪ್ಪಂದಗಳ ಅನುಷ್ಠಾನಕ್ಕಾಗಿ ಸರಕಾರ ಮಾಡಿದ ಪ್ರಾಮಾಣಿಕ ಪ್ರಯತ್ನಗಳಿಂದ ರಾಜ್ಯದಲ್ಲಿಂದು ಶಾಂತಿ ನೆಲೆಯೂರಿದೆ. ಶಾಂತಿ ಮತ್ತು ಸ್ಥಿರತೆಯಿಂದಾಗಿ ಬಿಜೆಪಿ ಆಳ್ವಿಕೆಯಲ್ಲಿ ರಾಜ್ಯದಲ್ಲಿ ಅಭಿವೃದ್ಧಿ ಚಟುವಟಿಕೆಗಳ ಸಾಕಾರವಾಗಿದೆ. ಈ ಅಭಿವೃದ್ಧಿ ಯಾನ ನಿರಂತರವಾಗಬೇಕಾದರೆ ಕಾಂಗ್ರೆಸ್‌ನ್ನು ಅಧಿಕಾರದಿಂದ ದೂರವಿಡುವುದು ಅಗತ್ಯ. 2029ರ ಮಹಾ ಚುನಾವಣೆ ನಂತರ ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ. 33 ಮೀಸಲಾತಿ ಕೋಟಾವನ್ನು ಅನುಷ್ಠಾನಕ್ಕೆ ತರಲಾಗುವುದು ಎಂದು ಪ್ರಧಾನಿ ಮೋದಿ ಭರವಸೆ ನೀಡಿದರು.

ಯುಎಸ್ ಕದನ ವಿರಾಮ ಪ್ರಸ್ತಾವನೆ ತಿರಸ್ಕೃತ

ಯುದ್ಧ ಅಂತ್ಯಕ್ಕೆ ಇರಾನ್ ಆಗ್ರಹ

• **ಟೆಹ್ರಾನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿರುವ ಗಡುವು ಹತ್ತಿರವಾಗುತ್ತಿರುವ ಸಂದರ್ಭದಲ್ಲೇ ಇರಾನ್ ಸೋಮವಾರ ಇತ್ತೀಚಿನ ಕದನ ವಿರಾಮ ಪ್ರಸ್ತಾವನೆ ತಿರಸ್ಕರಿಸಿ, ಸಂಪೂರ್ಣ ಯುದ್ಧ ಅಂತ್ಯವೇ ಬೇಕೆಂದು ಸ್ಪಷ್ಟಪಡಿಸಿದೆ.

ಈ ಕುರಿತು ಕೈರೋದಲ್ಲಿರುವ ಇರಾನ್ ರಾಜತಾಂತ್ರಿಕ ನಿಯೋಗದ ಮುಖ್ಯಸ್ಥ ಮೊಜ್ತಬಾ ಫೆರ್ದೌಸಿ ಪೌರ್ ಅವರು ನಾವು ಕೇವಲ ಕದನ ವಿರಾಮವನ್ನು



ಒಪ್ಪುವುದಿಲ್ಲ, ಮತ್ತೆ ನಮ್ಮ ಮೇಲೆ ದಾಳಿ ನಡೆಯುವುದಿಲ್ಲ ಎಂಬ ಖಚಿತತೆಗಳೊಂದಿಗೆ ಯುದ್ಧದ ಸಂಪೂರ್ಣ ಅಂತ್ಯವೇ ಬೇಕು ಎಂದು ಹೇಳಿದ್ದಾರೆ. ಇರಾನ್ ಸರ್ಕಾರ ತನ್ನ ಉತ್ತರವನ್ನು ಪಾಕಿಸ್ತಾನದ ಮೂಲಕ ಕಳುಹಿಸಿದೆ ಎಂದು ವರದಿಯಾಗಿದೆ.

ಇದಕ್ಕೆ ಪ್ರತಿಯಾಗಿ ಟ್ರಂಪ್, ಒಪ್ಪಂದವಾಗದಿದ್ದರೆ ಇರಾನ್‌ನ್ನು ಶಿಲಾಯುಗಕ್ಕೆ ತಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ. ಗಡುವು ಮಂಗಳವಾರ ರಾತ್ರಿ ಅಂತ್ಯಗೊಳ್ಳುತ್ತದೆ ಎಂದು ಸೂಚಿಸಿದ್ದಾರೆ.

ಇಸ್ರೇಲ್ ದಾಳಿ, ಉದ್ವಿಗ್ನತೆ ಹೆಚ್ಚಳ: ಮಾತುಕತೆಯ ನಡುವೆಯೇ ಇರಾನ್‌ನ ದಕ್ಷಿಣ ಪಾರ್ಸ್ ಅನಿಲ ವಲಯದ ಮೇಲೆ ಇಸ್ರೇಲ್ ದಾಳಿ ನಡೆಸಿದ್ದು, ಇದರಿಂದ ರೆವಲ್ಯೂಷನರಿ ಗಾರ್ಡ್‌ನ ಇಬ್ಬರು ಮುಖ್ಯ ಅಧಿಕಾರಿಗಳು ಮೃತಪಟ್ಟಿದ್ದಾರೆ. ಈ ಅನಿಲ ವಲಯವು ಇರಾನ್ ಆರ್ಥಿಕತೆಗೆ ಪ್ರಮುಖ ಆದಾಯ ಮೂಲವಾಗಿದ್ದು, ವಿದ್ಯುತ್ ಉತ್ಪಾದನೆಯಲ್ಲಿ ಸಹ ಪ್ರಮುಖ ಪಾತ್ರ ವಹಿಸುತ್ತದೆ.

ಟೆಹ್ರಾನ್‌ನಲ್ಲಿ ಸ್ಫೋಟ: ಇರಾನ್ ರಾಜಧಾನಿ ಟೆಹ್ರಾನ್ ನಗರದಲ್ಲಿ ಸ್ಫೋಟಗಳ ಸದ್ದು ಕೇಳಿಬಂದಿದ್ದು, ಯುದ್ಧದ ತೀವ್ರತೆ ಹೆಚ್ಚುತ್ತಿದೆ. ಇಸ್ರೇಲ್ ಸೇನೆ ಟೆಹ್ರಾನ್‌ನ ಮೂರು ವಿಮಾನ ನಿಲ್ದಾಣಗಳ ಮೇಲೆ ದಾಳಿ ನಡೆಸಿದೆ ಎಂದು ಹೇಳಲಾಗಿದೆ. ಸ್ಥಳೀಯ ಮಹಿಳೆ ಯೊಬ್ಬರು ನಿರಂತರವಾಗಿ ಬಾಂಬ್ ಸದ್ದು, ಡ್ರೋನ್ ಧ್ವನಿ ಕೇಳಿಸುತ್ತಿದೆ ಎಂದು ಹೇಳಿದ್ದಾರೆ. ➡ಪುಟ ೪



ಉದ್ವಿಗ್ನತೆ ಹೆಚ್ಚಳ ಸಾಧ್ಯತೆ

ಕದನ ವಿರಾಮ ಪ್ರಸ್ತಾಪವನ್ನು ಇರಾನ್ ತಿರಸ್ಕರಿಸಿದ್ದು, ಯುದ್ಧ ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆ ಇದೆ. ಮಧ್ಯವರ್ತಿಗಳ ಪ್ರಯತ್ನಗಳು ಮುಂದುವರಿದರೂ, ಅಮೆರಿಕ ಮತ್ತು ಇಸ್ರೇಲ್‌ನ ಒತ್ತಡ ಹಾಗೂ ಇರಾನ್‌ನ ದೃಢ ನಿಲುವು ಪರಿಸ್ಥಿತಿಯನ್ನು ಮತ್ತಷ್ಟು ಸಂಕೀರ್ಣಗೊಳಿಸಿದೆ. ಜಾಗತಿಕ ಆರ್ಥಿಕತೆ ಮತ್ತು ಪ್ರಾದೇಶಿಕ ಭದ್ರತೆ ಮೇಲೆ ಇದರ ಪರಿಣಾಮ ಗಂಭೀರವಾಗುವ ಸಾಧ್ಯತೆ ಇದೆ.

ಐಆರ್‌ಜಿಸಿ ಗುಪ್ತಚರ ಮುಖ್ಯಸ್ಥನ ಹತ್ಯೆ

• ಪುಟ ೭

ಜಾತಿ ಆಧಾರಿತ ಪ್ರಚಾರದ ಆರೋಪ ತಳ್ಳಿಹಾಕಿದ ಸಿದ್ದರಾಮಯ್ಯ

ಬಿಎಸ್‌ವೈ ಪ್ರಚಾರ ಯಾರ ಪರ?: ಸಿಎಂ

• **ಬಾಗಲಕೋಟೆ:** ಬಾಗಲಕೋಟೆ ಉಪಚುನಾವಣೆ ಹಿನ್ನೆಲೆಯಲ್ಲಿ ರಾಜಕೀಯ ವಾಗ್ವಾದಗಳು ತಾರಕಕ್ಕೇರಿವೆ.



ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದು, ಯಡಿಯೂರಪ್ಪ ಅವರು ಯಾರ ಪರ ಪ್ರಚಾರಕ್ಕೆ ಬಂದಿದ್ದಾರೆ ಎಂದು ಪ್ರಶ್ನಿಸಿದರು.

ನಗರದಲ್ಲಿ ಮಾತನಾಡಿದ ಸಿಎಂ, ಜಾತಿ ಆಧಾರಿತ ಪ್ರಚಾರದ ಆರೋಪ ತಳ್ಳಿ ಹಾಕಿದರು. ನಮ್ಮ ಅಭ್ಯರ್ಥಿ ಉಮೇಶ ಮೇಟಿ ಪರ ಪ್ರಚಾರಕ್ಕೆ ಬಂದಿದ್ದೇನೆ. ಯಡಿಯೂರಪ್ಪ ಕೂಡ ಲಿಂಗಾಯತ ಅಭ್ಯರ್ಥಿ ಪರವೇ ಪ್ರಚಾರ ಮಾಡುತ್ತಿದ್ದಾರೆ. ಹಾಗಿದ್ದಾಗ ನನ್ನ ಮೇಲೆ ಜಾತಿ ರಾಜಕಾರಣದ ಆರೋಪ ಹೇಗೆ ಸರಿ ಎಂದರು. ➡ಪುಟ ೪



ಬಿಜೆಪಿಗೆ ಬೆಂಬಲ: ಜೋಶಿ ವಿಶ್ವಾಸ

• **ದಾವಣಗೆರೆ:** ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕುಟುಂಬ ರಾಜಕಾರಣವೇ ಮುಖ್ಯವಾಗಿದ್ದು, ಇದರಿಂದ ಪ್ರಜಾಪ್ರಭುತ್ವ ನಿರ್ನಾಮವಾಗಲಿದೆ. ಒಂದೇ ಕುಟುಂಬಕ್ಕೆ ಮನ್ನಣೆ ಕೊಡಬಾರದೆಂದು ಯೋಚಿಸಿರುವ ಮತದಾರರು ಈ ಬಾರಿ ಬಿಜೆಪಿಗೆ



ಬೆಂಬಲಿಸಲಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ವಿಶ್ವಾಸ ವ್ಯಕ್ತಪಡಿಸಿದರು. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮನೆಯಲ್ಲಿ ತಾತ ಇದ್ದಾಗ ಶಾಸಕರು ಹಾಗೂ ಮಂತ್ರಿಯಾಗಿದ್ದರು. ಈಗ ಅಪ್ಪ ಶಾಸಕರು ಹಾಗೂ ಮಂತ್ರಿಯಾಗಿದ್ದಾರೆ. ➡ಪುಟ ೪

ಬಾಲಗೋಕುಲಂ ಸಮಾವೇಶ ಉದ್ಘಾಟಿಸಿ ಭಾಗ್ವತ್ ಹೇಳಿಕೆ

ರಾಷ್ಟ್ರ ಸಂಪನ್ನವಾದರೆ ಜನರ ಪ್ರಗತಿ

• **ಕೊಚ್ಚಿ:** ಸಂಪನ್ನತೆ ಮತ್ತು ಸುರಕ್ಷೆಯನ್ನು ಏಕಾಂಗಿಯಾಗಿ ಸಾಧಿಸಲಾಗದು. ರಾಷ್ಟ್ರವು ಸಂಪನ್ನ ಮತ್ತು ಸುರಕ್ಷಿತವಾದಾಗ ಜನರೂ ಸಂಪನ್ನರಾಗಲು ಮತ್ತು ಸುರಕ್ಷಿತರಾಗಲು ಸಾಧ್ಯ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಹೇಳಿದ್ದಾರೆ.

ಯಾವಾಗ ದೇಶ ಸಂಪನ್ನವಾಗಿರುವುದೋ ಮತ್ತು ಸುರಕ್ಷಿತವಾಗಿರುವುದೋ ಆಗ ದೇಶದಲ್ಲಿನ ಕುಟುಂಬಗಳು ಕೂಡ ಸಂಪನ್ನವಾಗಲು, ಸುರಕ್ಷಿತವಾಗಲು ಸಾಧ್ಯ. ಜನರು ದೇಶದ ಸಂಪನ್ನತೆ, ಸುರಕ್ಷೆಗಾಗಿ ಪರಿಶ್ರಮಿಸಿದಲ್ಲಿ ಸ್ವಯಂ ಸಂಪನ್ನರಾಗಲು ಸಾಧ್ಯ ಎಂದು ಹೇಳಿದರು.

ಆರೆಸ್ಸೆಸ್‌ನ ಸಾಂಸ್ಕೃತಿಕ ಸಂಘಟನೆ ಬಾಲಗೋಕುಲಂನ ಎರಡು ದಿನಗಳ ಸಮಾವೇಶ ಉದ್ಘಾಟಿಸಿದ ಬಳಿಕ ನೆರೆದ ಜನಸ್ತೋಮವನ್ನು ಉದ್ದೇಶಿಸಿ ಡಾ.ಮೋಹನ್ ಭಾಗ್ವತ್ ಮಾತನಾಡಿದರು. ರಾಷ್ಟ್ರನಿರ್ಮಾಣಕ್ಕೆ ಕೊಡುಗೆಯಾಗುವಂತೆ, ಕೊಡುಗೆ ನೀಡುವಂತೆ ಜನರನ್ನು ಆಗಾಗ ಉತ್ತೇಜಿಸಲಾಗುತ್ತದೆ.



ಈ ವಿಚಾರದಲ್ಲಿ, ವೈಯಕ್ತಿಕ ಭವಿಷ್ಯ ನಿರ್ಮಾಣ–ಪ್ರಗತಿಗೆ ಗಮನ ನೀಡುವುದೋ ಅಥವಾ ರಾಷ್ಟ್ರದ ಅಭಿವೃದ್ಧಿಗಾಗಿ ದುಡಿಯುವುದೋ ಎಂಬ ದ್ವಂದ್ವ ದೇಶದ ಯುವಶಕ್ತಿಯನ್ನು ಕಾಡುತ್ತಿದೆ. ಭವಿಷ್ಯ ನಿರ್ಮಾಣ ಮತ್ತು ರಾಷ್ಟ್ರಕ್ಕಾಗಿ ದುಡಿಯುವುದು ಪರಸ್ಪರ ವಿರೋಧಾಭಾಸದ ವಿಚಾರಗಳಲ್ಲ. ➡ಪುಟ ೪

ದಿಲ್ಲಿ ವಿಧಾನಸಭೆಯಲ್ಲಿ ಭಾರೀ ಭದ್ರತಾ ಲೋಪ

ಗೇಟ್ ಮುರಿದು ಒಳನುಗ್ಗಿದ ಕಾರು

• **ಹೊಸದಿಲ್ಲಿ:** ದಿಲ್ಲಿ ವಿಧಾನಸಭೆ ಆವರಣದಲ್ಲಿ ಭಾರೀ ಭದ್ರತಾ ಲೋಪವಾಗಿದ್ದು, ಮಾಸ್ಕ್



ಧರಿಸಿ ವ್ಯಕ್ತಿಯೋರ್ವ ಮುಖ್ಯ ದ್ವಾರದ ಮೂಲಕ ಕಾರನ್ನು ಸ್ಪೀಕರ್ ಕಚೇರಿ ಕಡೆಗೆ ಚಲಾಯಿಸಿದ್ದರಿಂದ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಸಿತ್ತು. ಉತ್ತರಪ್ರದೇಶದ ನೋಂದಣಿ ಸಂಖ್ಯೆ ಹೊಂದಿರುವ ಕಾರು, ಮಧ್ಯಾಹ್ನ 2 ಗಂಟೆಯ ಸುಮಾರಿಗೆ ಗೇಟ್ ಸಂಖ್ಯೆ 2ನ್ನು ಮುರಿದು ವಿಧಾನಸಭಾ ಆವರಣ ಪ್ರವೇಶಿಸಿದೆ.

ಘಟನೆಗೆ ಸಂಬಂಧಿಸಿದಂತೆ ಸರಬ್ಜಿತ್ ಸಿಂಗ್ ಎಂಬಾತನನ್ನು ಬಂಧಿಸಲಾಗಿದೆ. ಆತ ಓಡಿಸುತ್ತಿದ್ದ ಟಾಟಾ ಸಿಯಾರಾ ಕಾರನ್ನು ಉತ್ತರ ದಿಲ್ಲಿ ಜನವಸತಿ ಪ್ರದೇಶವಾದ ರೂಪ್ ನಗರದಿಂದ ವಶಪಡಿಸಿಕೊಳ್ಳಲಾಗಿದೆ. ➡ಪುಟ ೪

ಮಾಲ್ಡಾ ಘಟನೆಗೆ ಸುಪ್ರೀಂ ಗಂಭೀರ ತಾಕೀತು

ಎನ್‌ಐಎಗೆ ಮಾಲ್ಡಾ ಘಟನೆ

• **ಹೊಸದಿಲ್ಲಿ:** ಮಾಲ್ಡಾ ಜಿಲ್ಲೆಯಲ್ಲಿ ವಿಶೇಷ ತೀವ್ರ ಪರಿಶೀಲನೆ (ಎಸ್‌ಐಆರ್) ಕಾರ್ಯದಲ್ಲಿ ತೊಡಗಿದ್ದ ನ್ಯಾಯಾಧಿಕಾರಿಗಳ ಮೇಲೆ ನಡೆದ ಘೇರಾವ್ ಮತ್ತು ದಾಳಿ ಪ್ರಕರಣವನ್ನು ಸುಪ್ರೀಂ ಕೋರ್ಟ್ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ವರ್ಗಾಯಿಸಿದ್ದು, ಘಟನೆಯ ದಿನ ಕೋಲ್ಕತ್ತಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಕರೆ ಸ್ವೀಕರಿಸದ ಪಶ್ಚಿಮ ಬಂಗಾಳ ಮುಖ್ಯ ಕಾರ್ಯದರ್ಶಿಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ.

ಸೋಮವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಾಧೀಶರಾದ ನ್ಯಾ.ಸೂರ್ಯಕಾಂತ್ ಹಾಗೂ ನ್ಯಾ. ಜೋಯ್ಮಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠ, ಮಾಲ್ಡಾ ಘಟನೆಯ ಕುರಿತು ಕಠಿಣ ನಿಲುವು ತಾಳಿತು. ಪಶ್ಚಿಮ ಬಂಗಾಳದ ಆಡಳಿತ ಯಂತ್ರದ ವಿಶ್ವಾಸಾರ್ಹತೆ ಕುಸಿಯುತ್ತಿದೆ ಮತ್ತು ಕಾರ್ಯಾಲಯ ಹಾಗೂ ಸರ್ಕಾರಿ ಕಚೇರಿಗಳಲ್ಲಿ ರಾಜಕೀಯ ಪ್ರಭಾವ ಹೆಚ್ಚುತ್ತಿದೆ ಎಂದು ಪೀಠ ಅಭಿಪ್ರಾಯಪಟ್ಟಿತು.

ಮಾಲ್ಡಾ ಘಟನೆಯ ಸಂಬಂಧ ರಾಜ್ಯ ಪೊಲೀಸರು ಬಂಧಿಸಿರುವ 26 ಮಂದಿಯನ್ನು, ಅವರು ನ್ಯಾಯಾಂಗ ಬಂಧನದಲ್ಲಿದ್ದರೂ ಸಹ, ಎನ್‌ಐಎ ವಿಚಾರಣೆಗೊಳಪಡಿಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ➡ಪುಟ ೪

ಮುಖ್ಯ ಕಾರ್ಯದರ್ಶಿಗೆ ತರಾಟೆ



ಏನು ಮಾಡಬೇಕೆಂಬುದು ನಮಗೆ ಗೊತ್ತು!

ಎಸ್‌ಐಆರ್‌ಗೆ ಅಡ್ಡಿ ಮಾಡುತ್ತಿರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಕೋರ್ಟ್, ರಾಜ್ಯದ ವ್ಯವಸ್ಥೆ ಕುಸಿದರೆ ಏನು ಮಾಡಬೇಕು ಎಂಬುದು ನಮಗೆ ಗೊತ್ತು ಎಂದು ಗಂಭೀರವಾಗಿಯೇ ಹೇಳಿದೆ. ನ್ಯಾಯಾಂಗ ಅಧಿಕಾರಿಗಳಿಗೆ ಒಂಬತ್ತು ಗಂಟೆಗಳ ಕಾಲ ಘೇರಾವ್ ಹಾಕಿದ ಸಂಬಂಧ ಹೇಳಿದ ಅದು, ಇಡೀ ಪ್ರಕ್ರಿಯೆ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದಿದೆ.

ತಮಿಳುನಾಡಿನ 9 ಪೊಲೀಸರಿಗೆ ಮರಣದಂಡನೆ

• **ಚೆನ್ನೈ:** ದೇಶವನ್ನೇ ನಡುಗಿಸಿದ್ದ ತಮಿಳುನಾಡಿನ ಸಾಥಾಂಕುಳಂ ಕಸ್ಟೋಡಿಯಲ್ ಸಾವು ಪ್ರಕರಣದಲ್ಲಿ ಮಹತ್ವದ ತೀರ್ಪು ಹೊರಬಿದ್ದಿದ್ದು, ಒಂಬತ್ತು ಪೊಲೀಸ್ ಸಿಬ್ಬಂದಿಗೆ ಮರಣದಂಡನೆ ವಿಧಿಸಲಾಗಿದೆ. ಮದುರೈ ಪ್ರಥಮ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು 2020ರಲ್ಲಿ ನಡೆದ ತಂದೆ–ಮಗ



ಪಿ. ಜಯರಾಜ್ ಮತ್ತು ಜೆ.ಬೆನಿಕ್ಸ್ ಅವರ ಸಾವಿಗೆ ಸಂಬಂಧಿಸಿದ ಪ್ರಕರಣದಲ್ಲಿ ಈ ಕಠಿಣ ತೀರ್ಪು ಪ್ರಕಟಿಸಿದೆ. 2020ರ ಜೂನ್‌ನಲ್ಲಿ ಕೋವಿಡ್ ಲಾಕ್‌ಡೌನ್ ನಿಯಮ ಉಲ್ಲಂಘನೆ ಆರೋಪದ ಮೇಲೆ ಜಯರಾಜ್, ಅವರ ಪುತ್ರ ಬೆನಿಕ್ಸ್‌ರನ್ನು ಸಾಥಾಂಕುಳಂ ಪೊಲೀಸರು ಬಂಧಿಸಿದ್ದರು. • ವಿವರ ಪುಟ ೭

ಕಿರುಸುದ್ದಿ

ಬಸವಣ್ಣ ದೇವರ ರಥೋತ್ಸವ ಸಂಪನ್ನ



•**ಉಪ್ಪಿನಬೆಟಗೇರಿ:** ಮಡಿಕಟ್ಟಿ ಗ್ರಾಮದ ಶ್ರೀ ಬಸವಣ್ಣ ದೇವರ ಜಾತ್ರೆ ಅಂಗವಾಗಿ ನೂತನವಾಗಿ ನಿರ್ಮಾಣಗೊಂಡ ತೇರಿನ ರಥೋತ್ಸವ ಸೋಮವಾರ ಸಂಜೆ ಭಕ್ತರ ಜಯಘೋಷಗಳ ಮಧ್ಯೆ ಸಂಭ್ರಮ ಸಡಗರದಿಂದ ವಿಜೃಂಭಣೆಯಿಂದ ಬಸವಣ್ಣ ದೇವರ ರಥೋತ್ಸವ ಜರುಗಿತು. ಬಸವಣ್ಣ ದೇವರಿಗೆ ಬೆಳಿಗ್ಗೆ ಅಭಿಷೇಕದಿಂದ ಮಹಾರುದ್ರಾಭಿಷೇಕ, ನೂರೊಂದು ಬಿಲ್ವಾರ್ಚನೆ, ಅಲಂಕಾರ ಪೂಜೆ ಹಾಗೂ ಮಹಾಮಂಗಳಾರತಿ ನೆರವೇರಿತು. ಗ್ರಾಮದ ಸಿದ್ದಾರೂಢ ಮಠದಿಂದ ಬೆಳಗೊಂಡ ರಥೋತ್ಸವಕ್ಕೆ ವೇ.ಮೂ. ಚನ್ನಯ್ಯಸ್ವಾಮಿ ಹಿರೇಮಠ, ಪ್ರಭಯ್ಯ ಚಿಕ್ಕಮಠ ಹಾಗೂ ಗುರುಪಾದಯ್ಯ ಪಂಚಾಗಮಠ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿ ರಥಕ್ಕೆ ಚಾಲನೆ ನೀಡಿದರು. ಉತ್ಸವದಲ್ಲಿ ಜಗ್ಗಲಿಗೆ, ಕರಡಿ ಮಜಲು ಹಾಗೂ ವಿವಿಧ ಭಜನಾ ಮಂಡಳಿಯ ಶಿವ ಭಜನೆ, ವಿವಿಧ ಕೋಲಾಟ ಸೇರಿದಂತೆ ಸಕಲ ಮಂಗಳ ವಾದ್ಯ ಮೇಳಗಳೊಂದಿಗೆ ನಡೆದ ರಥೋತ್ಸವ ನಡೆಯಿತು. ಗ್ರಾಮಸ್ಥರು ಪಾಲ್ಗೊಂಡು ತೇರಿಗೆ ಉತ್ತತ್ತಿ ಮತ್ತು ಬಾಳೆಹಣ್ಣು ಎಸೆದು ಭಕ್ತಿ ಸಮರ್ಪಿಸಿದ ಸಾವಿರಾರು ಭಕ್ತರ ಹರ್ಷೋದ್ಗಾರದ ಮಧ್ಯೆ ರಥೋತ್ಸವ ಜರುಗಿತು.

ವಿದ್ಯಾರ್ಥಿ ಕತೆಗಾರರಿಗೆ ಆಹ್ವಾನ



•**ಹುಬ್ಬಳ್ಳಿ:** ನಗರದ ಅಕ್ಷರ ಸಾಹಿತ್ಯ ವೇದಿಕೆ ವತಿಯಿಂದ ಡಾ. ಪ್ರಹ್ಲಾದ ಅಗಸನಕಟ್ಟೆ ಸ್ಮರಣಾರ್ಥ ವಿದ್ಯಾರ್ಥಿ ಕಥಾ ಸ್ಪರ್ಧೆ 2026 ಏರ್ಪಡಿಸಿದ್ದು, ವಿದ್ಯಾರ್ಥಿ ಕತೆಗಾರರಿಗೆ ಭಾಗವಹಿಸಲು ಆಹ್ವಾನಿಸಲಾಗಿದೆ. ಅಕ್ಷರ ಸಾಹಿತ್ಯ ವೇದಿಕೆ ಕಳೆದ 9 ವರ್ಷದಿಂದ ಸ್ಪರ್ಧೆ ಏರ್ಪಡಿಸುತ್ತ ಬಂದಿದೆ. ಎಲ್ಲ ಕಾಲೇಜು ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿದೆ. ವಿಜೇತರಿಗೆ 5 ಸಾವಿರ ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕ ನೀಡಲಾಗುವುದು. ಜೂನ್ ತಿಂಗಳಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ವಿತರಿಸಲಾಗುವುದು. ಕತೆಗಾರರು ತಮ್ಮ ಕಾಲೇಜಿನ ಮುಖ್ಯಸ್ಥರಿಂದ ಕಾಲೇಜಿನ ದೃಢೀಕೃತ ಪ್ರಮಾಣ ಪತ್ರದೊಂದಿಗೆ ಎಲ್ಲಿಯೂ ಪ್ರಕಟವಾಗದ ಕಥೆಯನ್ನು ಕಳುಹಿಸಬೇಕು. ಕತೆಯು ಕಾಗದದ ಒಂದೇ ಕಡೆ ಕಾಗುಣಿತ ತಪ್ಪಿಲ್ಲದೇ ಶುದ್ಧವಾಗಿ ಬರೆದು ಅಥವಾ ಟೈಪ್ ಮಾಡಿ ಕಳುಹಿಸಬೇಕು. ಕಥೆ ಕಳುಹಿಸಲು ಕೊನೆಯ ದಿನಾಂಕ ಮೇ 15 ಆಗಿದೆ. ಕಥೆಯನ್ನು ದೂರವಾಣಿ : 9845779387 ಮೇಲ್ ವಿಳಾಸ: sunandakadamesgmail.com ಕಳುಹಿಸಬೇಕು ಎಂದು ಪ್ರಕಟಣೆಗೆ ತಿಳಿಸಲಾಗಿದೆ.

ಚಾಕು ಇರಿತ

•**ಹುಬ್ಬಳ್ಳಿ:** ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿಯೋರ್ವನಿಗೆ ಮೂವರು ಹರಿತವಾದ ವಸ್ತುವಿನಿಂದ ಇರಿದ ಘಟನೆ ಸೋಮವಾರ ನಗರದಲ್ಲಿ ನಡೆದಿದೆ. ಉಣಕಲ್ ನಿವಾಸಿ ಯಲ್ಲಪ್ಪ ಸಣ್ಣಣ್ಣವರ(54) ಎಂಬುವರು ಹಲ್ಲೆಗೊಳಗಾಗಿದ್ದಾರೆ. ಚಾಕು ಇರಿದ ಮೂವರು ಕಾನೂನು ಸಂಘರ್ಷಕ್ಕೆ ಒಳಪಟ್ಟವರಾಗಿದ್ದಾರೆ ಎನ್ನಲಾಗುತ್ತಿದೆ. ಉಣಕಲ್ ಕೆರೆ ಹತ್ತಿರ ಯಲ್ಲಪ್ಪ ಅವರು ದ್ವಿಚಕ್ರ ವಾಹನದ ಮೇಲೆ ಹೋಗುವಾಗ ಒನ್ ವೇನಲ್ಲಿ ಬೈಕ್ ಮೇಲೆ ಎದುರಿಗೆ ಬಂದ ಮೂವರಿಗೆ ಬುದ್ಧಿ ಹೇಳಿದ್ದಾರೆ. ಇದೇ ವಿಷಯಕ್ಕೆ ಕೋಪಗೊಂಡ ಅವರು ಹರಿತವಾದ ವಸ್ತುವಿನಿಂದ ಅವರ ಹೊಟ್ಟೆಗೆ ಇರಿದಿದ್ದಾರೆ ಎಂದು ವಿದ್ಯಾನಗರ ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಪ್ರಕರಣ ದಾಖಲಾಗಿದೆ.

ಗೃಹಿಣಿ ಆತ್ಮಹತ್ಯೆ

ವರದಕ್ಷಿಣೆಗಾಗಿ ಕಿರುಕುಳ ನೀಡಿದ ಹಿನ್ನೆಲೆ ಗೃಹಿಣಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡ ಘಟನೆ ಗಿರಿಯಾಳ ರಸ್ತೆ ರೇಣುಕಾ ಕಾಲೋನಿಯಲ್ಲಿ ನಡೆದಿದೆ. ಅಶ್ವಿನಿ ಹೊಸಮನಿ ಮೃತರು. ಪತಿ ನಿಖಿಲ್ ಹೊಸಮನಿ ವಿರುದ್ಧ ಪ್ರಕರಣ ದಾಖಲಾಗಿದೆ. ಕಳೆದ ಐದು ವರ್ಷಗಳ ಹಿಂದೆ ಪ್ರೀತಿಸಿ ಮದುವೆಯಾಗಿದ್ದರು. ವರದಕ್ಷಿಣೆಗಾಗಿ ಕಿರುಕುಳ ನೀಡುತ್ತಿದ್ದು, ಕಳೆದ ದಿನ ಕೂಡ ಗಲಾಟೆಯಾಗಿದ್ದು, ಇದರಿಂದ ಮನನೊಂದು ಅಶ್ವಿನಿ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಮೃತ ಮಹಿಳೆಯ ತಾಯಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

8.12 ಲಕ್ಷ ರೂ. ಮೌಲ್ಯದ ಆಭರಣ ಕಳವು

ಇಲ್ಲಿಯ ಗೋಕುಲ ರಸ್ತೆ ಗಾಂಧಿನಗರದ ಯಶಸ್ವಿನಿ ಅಪಾರ್ಟಮೆಂಟ್‌ನ ಮಹೇಶ್ವರ ಹಿರೇಮಠ ಎಂಬುವರ ಮನೆಯ ಬೀಗ ಮುರಿದ ಕಳ್ಳರು ಮನೆಯಲ್ಲಿದ್ದ 8.12 ಲಕ್ಷ ರೂ. ಮೌಲ್ಯದ ಬಂಗಾರ, ಬೆಳ್ಳಿ ಆಭರಣಗಳನ್ನು ಕಳವು ಮಾಡಿ ಪರಾರಿಯಾಗಿದ್ದಾರೆ. 126 ಗ್ರಾಂ ತೂಕದ ಬಂಗಾರ ಹಾಗೂ 800 ಗ್ರಾಂ ತೂಕದ ಬೆಳ್ಳಿ ಆಭರಣಗಳನ್ನು ಕಳವು ಮಾಡಿದ್ದಾರೆ. ಈ ಕುರಿತು ಗೋಕುಲ ರಸ್ತೆಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಅದೇ ಅಪಾರ್ಟಮೆಂಟ್‌ನ ರಾಜಶೇಖರ ಲದ್ದಿಮಠ ಎಂಬುವರ ಮನೆಯಲ್ಲಿದ್ದ 2.18 ಲಕ್ಷ ರೂ. ಮೌಲ್ಯದ ಆಭರಣಗಳನ್ನು ಕಳವು ಮಾಡಿದ್ದಾರೆ. ಈ ಕುರಿತು ಗೋಕುಲ ರಸ್ತೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ಹುಬ್ಬಳ್ಳಿ: ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಪ್ರೇರಿತ ಸಮತಾ ಸೇವಾ ಸಂಸ್ಥೆ ಹಾಗೂ ಸಮಾಜ ಸೇವಕ ಕೃಷ್ಣ ಗಂಡ ಗಾಳೇಕರ್ ಗಾಳೇಕರ್ ನವಯುಗ ಸಂಘಟನೆಯಿಂದ ಮೇ 10ರಂದು ಹುಬ್ಬಳ್ಳಿಯ ಅಕ್ಷಯ್ ಗಾರ್ಡನ್ ಸಂತೆ ಮೈದಾನದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿದ್ದು ಈ ಹಿನ್ನೆಲೆ ಅವರ ನಿವಾಸದಲ್ಲಿ ಕಾರ್ಯಕ್ರಮದ ಪೋಸ್ಟರ್ ಅನ್ನು ಸಚಿವ ಪ್ರಹ್ಲಾದ್ ಜೋಶಿ ಬಿಡುಗಡೆ ಮಾಡಿದರು. ನವ ಯುಗ ಸಂಘಟನೆಯ ಅಧ್ಯಕ್ಷ ಕೃಷ್ಣ ಗಂಡಗಾಳೇಕರ್, ಬಿಜೆಪಿ ಮುಖಂಡರಾದ ರವಿ ನಾಯಕ, ಬಸವರಾಜ ಬೆಳಗಲಿ, ಡಾ .ರವೀಂದ್ರ ಎಲಕಾನ, ನಾಗರಾಜ ಕಲಾಲ್ ಇದ್ದರು.

ಹಿಂದುಗಳ ಭಾವನೆಗಳೊಂದಿಗೆ ಚೆಲ್ಲಾಟ ಸಲ್ಲ

•**ಹುಬ್ಬಳ್ಳಿ:** ತಮ್ಮ ಮತ ಬ್ಯಾಂಕ್ ಗಟ್ಟಿಗೊಳಿಸುವ ಏಕಮೇವ ಧ್ಯೇಯ ಹೊಂದಿರುವ ಕಾಂಗ್ರೆಸ್, ಹಿಂದುಗಳ ಭಾವನೆಗಳೊಂದಿಗೆ ಚೆಲ್ಲಾಟ ಆಡುತ್ತಿದೆ. ಸಮಾಜ ಕಂಟಕರು, ದೇಶ ದ್ರೋಹಿಗಳು, ಹಿಂದೂ ವಿರೋಧಿಗಳ ರಕ್ಷಣೆಗೆ ಧಾವಿಸಿ ನಿಂತು, ಕೇವಲ ಅಧಿಕಾರದಲ್ಲಿರಬೇಕು ಎನ್ನುವ ಹಪಾಹಪಿಯಲ್ಲಿ ಜಿಹಾದಿಗಳ ಸಂಚುಗಳಿಗೆ ಸಾಥ್ ನೀಡುತ್ತಿರುವುದು ಖೇದಕರ ಸಂಗತಿ ಎಂದು ಹು-ಧಾ ಬಿಜೆಪಿ ಪೂರ್ವ ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷ ಮಂಜುನಾಥ ಕಾಟಕರ ತಿಳಿಸಿದರು. ಸೋಮವಾರ ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ದಿನೇ ದಿನೇ ಲವ್ ಜಿಹಾದ್ ಪ್ರಕರಣಗಳು ಹೆಚ್ಚುತ್ತಿದ್ದು, ಮುಗ್ಧ ಹಿಂದೂ ಮಹಿಳೆಯರನ್ನು ಟಾರ್ಗೆಟ್ ಮಾಡಿ, ಅತ್ಯಾಚಾರ ಮಾಡುತ್ತಿದ್ದಾರೆ. ಒಪ್ಪದೆಯಿದ್ದಾಗ ಬ್ಲ್ಯಾಕ್ ಮೇಲ್ ಮಾಡುವುದು, ಅವರನ್ನು ಕೊಲ್ಲುವುದು ಸರ್ವೇಸಾಮಾನ್ಯವಾಗಿರುವಂತೆ ಭಾಸವಾಗುತ್ತಿದೆ ಎಂದು ದೂರಿದರು.

ನೇಹಾ ಹಿರೇಮಠ ಕೊಲೆ ಕೃತ್ಯ ರಜತ್ ಉಳ್ಳಾಗಡ್ಡಿಮಠ ಮರೆತಂತಿದೆ. ಹೇಗೆ ಫಯಾಜ್ ಎಂಬ ಜಿಹಾದಿ ಹಾಡಹಗಲೇ ಕೊಚ್ಚಿ ಕೊಂದಿರುವ ದೃಶ್ಯ ಇನ್ನೂ ಹಾಗೆಯೇ ಉಳಿದಿದೆ. ಇಂತಹ ಜಿಹಾದಿಗಳಿಗೆ ಕವರ್ ಫೈರ್ ನೀಡುವುದು ಕಾಂಗ್ರೆಸ್ ನಿಲ್ಲಿಸಬೇಕು ಎಂದು ಹರಿಹಾಯ್ದರು. ಆತಂಕವಾದಿಗಳ, ದೇಶ ದ್ರೋಹಿಗಳ ಕೃತ್ಯಗಳನ್ನು ಖಂಡಿಸದ ರಜತ್ ಉಳ್ಳಾಗಡ್ಡಿ ಮಠ ಸಮಯಸಾಧಕರಂತೆ ಜಿಹಾದಿಗಳ ನೆರವಿಗೆ ಧಾವಿಸುವುದು ಕೈ ಬಿಡಬೇಕು. ಶಾಸಕ ಮಹೇಶ್ ಟೆಂಗಿನಕಾಯಿ ಮತ್ತು ಹಿಂದೂಪರ ಸಂಘಟನೆಯ ನಾಯಕ ಪ್ರಮೋದ ಮುತಾಲಿಕ್ ಅವರ ಹೆಸರುಗಳಿಗೆ ಮಸಿ ಬಳೆಯುವ ಹೀನ ಕಾರ್ಯ ಬಿಟ್ಟು, ಕಾಂಗ್ರೆಸ್ ಸರಕಾರಕ್ಕೆ ಎಚ್ಚರಿಸುವ ಕೆಲಸ ಮಾಡಬೇಕು ಎಂದು ಆಗ್ರಹಿಸಿದ್ದಾರೆ.



ಹುಬ್ಬಳ್ಳಿ: ಹಸಿರು ಕ್ರಾಂತಿಯ ಹರಿಕಾರ, ಭಾರತದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಮ್ ಅವರ 119ನೆಯ ಜಯಂತಿ ಕಾರ್ಯಕ್ರಮವನ್ನು ಹುಬ್ಬಳ್ಳಿಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ನಗರದ ಇಂದಿರಾ ಗಾಜಿನ ಮನೆಯಲ್ಲಿರುವ ಬಾಬು ಜಗಜೀವನ್ ರಾಮ್ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು.

ಲವ್ ಜಿಹಾದ್ ಪ್ರಕರಣ ಎಸ್‌ಐಟಿಗೆ ವಹಿಸಿ

•**ಹುಬ್ಬಳ್ಳಿ:** ಹಿಂದು ಯುವತಿ ಮೇಲೆ ಲೈಂಗಿಕ ಶೋಷಣೆ ಹಾಗೂ ಲವ್ ಜಿಹಾದ್‌ಗೆ ಯತ್ನಿಸಿದ ಪ್ರಕರಣವನ್ನು ಎಸ್‌ಐಟಿ ತನಿಖೆಗೆ ವಹಿಸಬೇಕು. ಮಹಿಳಾ ಆಯೋಗ ಮಧ್ಯೆ ಪ್ರವೇಶಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಹಿಂದು ಜನಜಾಗೃತಿ ಸಮಿತಿಯ ರಣರಾಗಿಣಿ ಮಹಿಳಾ ವಿಭಾಗ ಸಂಯೋಜಕಿ ಭವ್ಯಗೌಡ ಆಗ್ರಹಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರೋಪಿ ಸಮೀರ್ ಮುಲ್ಲಾ ಸಹೋದರಿ ಈ ಪ್ರಕರಣ ಕಿಂಗ್ ಪಿನ್ ಆಗಿದ್ದಾರೆ. ಅವಳು ಯುವತಿಯೊಂದಿಗೆ ಸ್ನೇಹ ಬೆಳೆಸಿ ಬಳಿಕ ಅವಳ ಸಹೋದರಿಗೆ ಪರಿಚಯಿಸಿ ಲವ್ ಜಿಹಾದ್ ಮಾಡಲು ಯತ್ನಿಸಿದ್ದಾಳೆ. ಪೊಲೀಸರು ಮೊದಲು ಅವಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಬೇಕು. ಇದರ ಹಿಂದೆ ಇರುವವರನ್ನು ಪತ್ತೆ ಹಚ್ಚಬೇಕು ಎಂದು ಒತ್ತಾಯಿಸಿದರು.

ಕಳೆದ ಮೂರು ವರ್ಷದಿಂದ ಯುವತಿಗೆ ಆತ ಚಿತ್ರ ಹಿಂಸೆ ನೀಡಿದ್ದಾನೆ. ಅವಳ ಮೇಲೆ ಲೈಂಗಿಕ ದೌರ್ಜನ್ಯ ವೆಸಗಿ, ಫೋಟೋ ಹಾಗೂ ವಿಡಿಯೋ ಇಟ್ಟುಕೊಂಡು ಬೆದರಿಕೆ ಹಾಕಿದ್ದಾನೆ. ಇದೆಲ್ಲವನ್ನು ನೋಡಿದರೆ ಅವರದು ದೊಡ್ಡ ಜಾಲವಿದಂತೆ ಅನುಮಾನ ಮೂಡುತ್ತಿದೆ. ದೇಶದಲ್ಲಿಯೂ ಸಹ ಇಂತಹ ಅನೇಕ ಘಟನೆಗಳು ಬೆಳಕಿಗೆ ಬಂದಿವೆ. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ತಿಳಿಸಿದರು.

ಯುವತಿ ಇಷ್ಟು ದೊಡ್ಡ ಅನ್ಯಾಯವಾದರೂ ಸಹ ಮಹಿಳಾ ಆಯೋಗ ಸ್ವಲ್ಪವೂ ಧ್ವನಿ ಎತ್ತಿಲ್ಲ, ಇದು ಬೇಸರ ಸಂಗತಿ. ಪೊಲೀಸರ ವಶದಲ್ಲಿ ಆರೋಪಿ ಇದ್ದರು ಸಹ ಆತ ಪ್ರತಿದಿನ ಮೊಬೈಲ್ ನಲ್ಲಿ ವಿಡಿಯೋ ಮಾಡಿ ಹಾಕುತ್ತಿದ್ದಾನೆ. ಇನ್ನೂ ಆತನ ಮೇಲೆ ಪ್ರಕರಣ ದಾಖಲಾದರೂ ಸಹ ಜಿಮ್ ಸೀಜ್ ಮಾಡಿಲ್ಲ ಎಂದು ಆರೋಪಿಸಿದರು.

ಹು-ಧಾ ಎಲ್ಲ ಜಿಮ್‌ಗಳಲ್ಲಿ ಟ್ರೈನರ್‌ಗಳ ಪರಿಶೀಲನೆ ಮಾಡಬೇಕು. ಸಿಸಿಟಿವಿ ಕ್ಯಾಮೆರಾ ವ್ಯವಸ್ಥೆ ಹಾಗೂ ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿರುವುದು ಪೊಲೀಸರು ಖಚಿತಪಡಿಸಿಕೊಳ್ಳಬೇಕು. ಮಹಿಳಾ ತರಬೇತುದಾರರ ನೇಮಿಸಲು ಸೂಚಿಸಬೇಕು. ಉತ್ತರ ಪ್ರದೇಶದಲ್ಲಿ ಕೈಗೊಂಡಂತೆ ಇಲ್ಲಿಯೂ ಶೂನ್ಯ ಸಹಿಷ್ಣುತೆ ನೀತಿಯನ್ನು ಅನುಸರಿಸಿ, ಇಂತಹ ಘಟನೆಗಳು ಮರುಕಳಿಸದಂತೆ ಕಠಿಣ ಕ್ರಮ ಕೈಗೊಳ್ಳಬೇಕು. ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಧರ್ಮ ಶಿಕ್ಷಣ ವರ್ಗ ಹಾಗೂ ಸ್ವರಕ್ಷಣೆ ಕುರಿತು ಮಹಿಳೆಯರಲ್ಲಿ ಜಾಗೃತಿ ಮೂಡಿಸುತ್ತಿದ್ದು, ಮುಂದೆ ಮಾಡಲಾಗುತ್ತದೆ ಎಂದು ಹೇಳಿದರು.

ವಕೀಲರಾದ ಶಕುಂತಲಾ ಶೆಟ್ಟಿ, ರಾಣಿ ಚಂದಾವರಿ, ತೇಜಸ್ ಗೌಡ, ಗುರುಪ್ರಸಾದ ಗೌಡ, ನಿತಾ ಮೈತ್ರಾನಿ ಇದ್ದರು.



» ಹಿಂದು ಜನಜಾಗೃತಿ ಸಮಿತಿಯ ರಣರಾಗಿಣಿ ಮಹಿಳಾ ವಿಭಾಗ ಸಂಯೋಜಕಿ ಭವ್ಯಗೌಡ ಆಗ್ರಹ

ರಾಜು ಕಾಳೆ ವಾಗ್ದಾಳಿ

•**ಹುಬ್ಬಳ್ಳಿ:** ನಗರದಲ್ಲಿ ನಡೆದ ಲವ್‌ಜಿಹಾದ್ ಯತ್ನದ ಆರೋಪ ಪ್ರಕರಣವನ್ನು ಕಾಂಗ್ರೆಸ್ ಮುಖಂಡರೊಬ್ಬರು ರಾಜಕೀಯಕ್ಕೆ ಹೋಲಿಸಿ ತಮ್ಮ ಕೀಳು ಮಟ್ಟದ ಅಭಿರುಚಿ ವ್ಯಕ್ತಪಡಿಸಿದ್ದು, ಎಷ್ಟರಮಟ್ಟಿಗೆ ಸರಿ ಎಂದು ಬಿಜೆಪಿ ಸೆಂಟ್ರಲ್ ಅಧ್ಯಕ್ಷ ರಾಜು ಕಾಳೆ ತೀವ್ರವಾಗಿ ಖಂಡಿಸಿ ವಾಗ್ದಾಳಿ ನಡೆಸಿದ್ದಾರೆ. ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಬಿಜೆಪಿಗೆ ಅಥವಾ ನಮ್ಮ ಕ್ಷೇತ್ರದ ಶಾಸಕರಿಗೆ ಲವ್ ಜಿಹಾದ್ ವಿಷಯ ತೆಗೆದುಕೊಂಡು ನಿಮ್ಮಂತೆ ರಾಜಕಾರಣ ಮಾಡುವುದು ಬೇಕಾಗಿಲ್ಲ, ಗೃಹ ಲಕ್ಷ್ಮೀ ಹಣ ಎಲ್ಲಿ ಹೋಗಿದೆ ಮೊದಲು ಹೇಳಬೇಕು. ಯಾರ ಜೇಬಿಗೆ ಹೋಯಿತು? ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ಶೂನ್ಯ ಇದೊಂದು ಹಗರಣಗಳ ಸರ್ಕಾರವಾಗಿದ್ದು, ಅದಕ್ಕೆ ಉತ್ತರ ನೀಡಲು ಆಗುತ್ತಿಲ್ಲ, ಕಾಂಗ್ರೆಸ್ ನಾಯಕರ ಮೇಲಿನ ಆರೋಪ ಸ್ವತಃ ಸಂತ್ರಸ್ತೆ ಯುವತಿ ಮಾಧ್ಯಮದ ಮುಂದೆ ಹೇಳಿದ್ದಾರೆ ಎಂದರು. ಅವಳಿನಗರದ ಪ್ರಜ್ಞಾವಂತರು ಎಲ್ಲವನ್ನು ಗಮನಿಸುತ್ತಿದ್ದು, ಈ ಘಟನೆ ಕುರಿತು ಗಂಭೀರ ಹೋರಾಟ ನಡೆಸಿದ್ದಾರೆ. ಬಿಜೆಪಿ ಮೇಲೆ ಆರೋಪ ಮಾಡಿರುವ ಉಳ್ಳಾಗಡ್ಡಿ ಮಠ ಅವರು ಮನುಕುಲಕ್ಕೆ ಒಂದು ಶಾಪ ಎಂದು ಕಿಡಿ ಕಾರಿದ್ದಾರೆ.

ಜಿಮ್‌ಗಳಲ್ಲಿ ಅಸಭ್ಯ ವರ್ತನೆ: ಕಠಿಣ ಕ್ರಮಕ್ಕೆ ನಮ್ಮ ಸಹಕಾರ

» ಧಾರವಾಡ ಡಿಸ್ಟ್ರೀಕ್ಟ್ ಬಾಡಿ ಬಿಲ್ಡಿಂಗ್ ಅಸೋಸಿಯೇಷನ್ ಆಗ್ರಹ

•**ಹುಬ್ಬಳ್ಳಿ:** ಜಿಮ್‌ಗಳಲ್ಲಿ ಮಹಿಳೆಯರೊಂದಿಗೆ ಅಸಭ್ಯವಾಗಿ ವರ್ತಿಸುವ ಮಾಲೀಕರು ಹಾಗೂ ಸದಸ್ಯರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಅಂಥಹ ಜಿಮ್‌ಗಳನ್ನು ಸ್ಥಗಿತ ಮಾಡಬೇಕು. ಇದಕ್ಕೆ ನಮ್ಮ ಸಂಪೂರ್ಣ ಸಹಕಾರವಿದೆ ಎಂದು ಧಾರವಾಡ ಡಿಸ್ಟ್ರೀಕ್ಟ್ ಬಾಡಿ ಬಿಲ್ಡಿಂಗ್ ಅಸೋಸಿಯೇಷನ್ ಆಗ್ರಹಿಸಿದೆ.

ಈ ಕುರಿತು ಸೋಮವಾರ ಅಸೋಸಿಯೇಷನ್ ಖಜಾಂಚಿ ಕೃಷ್ಣಾ ಚಿಕ್ಕತುಂಬಳ ಮಾತನಾಡಿ, ಜಿಮ್ ಗಳಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಸುತ್ತಿರುವವರ ಮೇಲೆ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಸರ್ಕಾರಕ್ಕೆ ಮನವಿ ಮಾಡುತ್ತೇವೆ. ಜಿಮ್‌ಗಳು ಕಡ್ಡಾಯವಾಗಿ ನಿಯಮಗಳ ಪಾಲಿಸಬೇಕು ಎಂದು ಒತ್ತಾಯಿಸಿದರು.

ಅಸೋಸಿಯೇಷನ್ ಯಡಿ ಅವಳಿನಗರದಲ್ಲಿ 50 ಜಿಮ್‌ಗಳು ನೋಂದಣಿ ಮಾಡಿಸಿಕೊಂಡಿವೆ. ಹೈಟೆಕ್ ಹಾಗೂ ಮಲ್ಟಿಲೇವಲ್ 100 ಜಿಮ್‌ಗಳಿದ್ದು ನಮ್ಮ ಸಂಘದಿಂದ ದೂರ ಉಳಿದಿವೆ. ತಮ್ಮ ಆರ್ಥಿಕ ಲಾಭಕ್ಕಾಗಿ ಅವರು ಫರ್ಸಲ್ ತರಬೇತು ನೀಡುವ ವ್ಯವಸ್ಥೆ ಕಲ್ಪಿಸಿಕೊಂಡಿದ್ದಾರೆ. ಮಹಿಳೆಯರೊಂದಿಗೆ ಸಲುಗೆ ಬೆಳೆಸಿ ಐಷಾರಾಮಿ ಹೋಟೆಲ್ ಗಳಿಗೆ ಹೋಗಿ ಮಜಾ ಮಾಡುವುದನ್ನು ರೂಢಿಸಿಕೊಂಡಿದ್ದು, ಇದರಿಂದ ಇಂತಹ ಘಟನೆಗಳು ನಡೆಯುತ್ತಿವೆ. ಇದಕ್ಕೆ ಪೊಲೀಸರು ಕಡಿವಾಣ ಹಾಕಬೇಕು ಎಂದರು.

ವೈಯಕ್ತಿಕವಿಚಾರವನ್ನು ಜಿಮ್‌ಗಳಿಗೆ ಹೋಲಿಕೆ ಮಾಡಲಾಗುತ್ತಿದೆ. ಯಾವುದೇ ಗಲಾಟೆ ನಡೆದರು ಜಿಮ್ ಗಳ ಮೇಲೆ ಆರೋಪ ಮಾಡುತ್ತಿರುವುದು ಸರಿಯಲ್ಲ, ಉಳಿದ ಜಿಮ್‌ಗಳು ಸರಿಯಾಗಿ ನಿಯಮಗಳ ಪಾಲಿಸಿ ನಡೆಸುತ್ತಿವೆ. ಜಿಮ್‌ಗಳ ನಂಬಿಕೊಂಡು ಸಾವಿರಾರು ಜನರು ಜೀವನ ನಡೆಸುತ್ತಿದ್ದಾರೆ. ಇಂತಹ ಘಟನೆಗಳಿಂದ ಅವರ ವ್ಯವಹಾರಕ್ಕೆ ಹಾನಿಯಾಗಲಿದೆ. ಜಿಮ್‌ಗಳು ಆರೋಗ್ಯ ದೃಷ್ಟಿಯಿಂದ ಇವೆ. ಇಲ್ಲಿ ಯಾವುದೇ ಜಾತಿ, ಧರ್ಮ ಎಂಬ ಭೇದ ಭಾವ ಮಾಡಲ್ಲ, ಜಿಮ್ ಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಆದರೆ ಪ್ರತ್ಯೇಕ ತರಬೇತುದಾರರನೇಮಿಸುವುದು ನಮ್ಮಂತ ಸಣ್ಣಪುಟ್ಟ ಜಿಮ್‌ಗಳಿಗೆ ಹೊರೆಯಾಗಲಿದೆ. ಸರ್ಕಾರ ಕಟ್ಟುನಿಟ್ಟಿನ ಕ್ರಮಗಳ ಜಾರಿಗೆ ತಂದರೆ ಅದನ್ನು ನಾವು ಪಾಲಿಸುತ್ತೇವೆ. ಮಹಿಳೆಯರ ರಕ್ಷಣೆಗೆ ನಿಲ್ಲುತ್ತೇವೆ ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಸಲೀಮ್ ಗೌರ್, ಅನೀಶಸಮದ ದಲಾಲ, ಕುಶಾಲ, ಮೋಹರಾಜ, ಅರವಿಂದ ಇದ್ದರು.

ಬಾಬು ಜಗಜೀವನರಾಂ ಕೊಡುಗೆ ಅಪಾರ


•**ಧಾರವಾಡ:** ಪ್ರಸ್ತುತ ಭಾರತದಂತಹ ಪ್ರಜಾಸತ್ತಾತ್ಮಕ ದೇಶದಲ್ಲಿ ಒಬ್ಬ ವ್ಯಕ್ತಿಯ ಪರಿಚಯನ್ನು ಅವನ ಜಾತಿಯಿಂದ ಗುರುತಿಸಲ್ಪಡುತ್ತಿರುವುದು ವಿಷಾದಕರ ಸಂಗತಿ ಆಗಿದೆ ಎಂದು ಬೆಂಗಳೂರಿನ ದಲಿತ ಚಿಂತಕ ಪ್ರೊ.ಎ.ಹರಿರಾಮ ಹೇಳಿದರು.

ಕರ್ನಾಟಕ ವಿಶ್ವವಿದ್ಯಾಲಯದ ಡಾ.ಬಾಬು ಜಗಜೀವನರಾಮ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರವು ಕರ್ನಾಟಕ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವದ ಸಭಾಂಗಣದಲ್ಲಿ ಡಾ.ಬಾಬು ಜಗಜೀವನರಾಂ ಅವರ 119ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಹೊಸ ಪೀಳಿಗೆಗೆ ದೇಶದ ಮಹಾನ್ ನಾಯಕರ ಸಂದೇಶಗಳನ್ನು ತಿಳಿಸುವ ಅಗತ್ಯವಿದೆ. ದೇಶವನ್ನು ಕಟ್ಟುವಲ್ಲಿ ಅನೇಕ ಮಹನೀಯರ ಕೊಡುಗೆ ಬಹಳ ಇದೆ. ಬಾಬು ಜಗಜೀವನರಾಂ ಅವರು ಸರ್ಕಾರದಲ್ಲಿ ಉನ್ನತ ಹುದ್ದೆಯಲ್ಲಿದ್ದು ಸಮಾಜಕ್ಕೆ ತಮ್ಮದೇ ಕೊಡುಗೆ ನೀಡಿದರು ಎಂದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಮನಸೂರ ರೇವಣ ಸಿದ್ದೇಶ್ವರ ಮಹಾಮಠದ ಬಸವರಾಜ ದೇವರು ಮಾತನಾಡಿ, ಇಂದಿಗೂ ಜಾತಿ ತಾರತಮ್ಯ ಅವ್ಯಾಹತವಾಗಿ ನಡೆದಿದೆ. ಬಾಬು ಜಗಜೀವನರಾಂ ಅವರ ಸಂದೇಶಗಳನ್ನು ಜನರಿಗೆ ತಲುಪಿಸಲು ಡಾ. ಬಾಬು ಜಗಜೀವನರಾಂ ಅಧ್ಯಯನ ಕೇಂದ್ರ ಮಾಡಬೇಕಾದ ಅವಶ್ಯಕತೆ ಇದೆ ಎಂದರು.

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎ.ಎಂ.ಖಾನ್ ಮಾತನಾಡಿ, ಜಾತ್ಯತೀತ ರಾಷ್ಟ್ರ ನಿರ್ಮಾಣ ಮಾಡುವಲ್ಲಿ ಶ್ರಮಿಸಬೇಕಾದ ಅಗತ್ಯವಿದೆ ಎಂದ ಅವರು ಹಸಿರು ಕ್ರಾಂತಿ ಮತ್ತು ಆಹಾರ ಭದ್ರತೆಗೆ ಬಾಬು ಜಗಜೀವನರಾಮ ಅವರು ಮಾಡಿದ ಶ್ಲಾಘನೀಯ ಎಂದ ಅವರು ಅನೇಕ ಜನಪರ ಕಾರ್ಯಗಳನ್ನು ಮಾಡಿದ ಕೀರ್ತಿ ಬಾಬು ಜಗಜೀವನರಾಮ ಅವರಿಗೆ ಸಲ್ಲುತ್ತದೆ. ವಿದ್ಯಾರ್ಥಿಗಳ ಮಹನೀಯರ ಜೀವನ ಸಂದೇಶವನ್ನು ಅಧ್ಯಯನ ಮಾಡಬೇಕು ಎಂದರು.

ಡಾ.ಜಯಶ್ರೀ ದೇಶಮಾನೆ ಅವರ ಮೀಸಲಾತಿ ಜನಕ ಎಂಬ ಕೃತಿಯನ್ನು ಬಿಡುಗಡೆ ಮಾಡಲಾಯಿತು. ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವ ಡಾ.ಶಂಕರೆಪ್ಪ ವಣಿಕ್ಯಾಳ, ಮೌಲ್ಯಮಾಪನ ಕುಲಸಚಿವ ಡಾ.ನಿಜಲಿಂಗಪ್ಪ ಮಟ್ಟಿಹಾಳ, ಸಿಂಡಿಕೇಟ್ ಸದಸ್ಯ ಮಹೇಶ ಹುಲ್ಲೆನ್ನವರ, ಹಣಕಾಸು ಅಧಿಕಾರಿ ಪ್ರದೀಪಕುಮಾರ, ಡಾ.ಬಾಬು ಜಗಜೀವನರಾಮ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಶಿವಶರಣ.ಟಿ.ಸಿ, ಡಾ.ಎಂ.ಬಿ.ದಳಪತಿ ಸೇರಿದಂತೆ ವಿದ್ಯಾರ್ಥಿಗಳು ಸಂಶೋಧಕರು ಹಾಜರಿದ್ದರು.



ಹಸಿರು ಕ್ರಾಂತಿಯ ಹರಿಕಾರ ಬಾಬೂಜಿ

•**ನವಲಗುಂದ:** ದೇಶಾದ್ಯಂತ 'ಬಾಬುಜಿ' ಎಂದೇ ಕರೆಯಲ್ಪಡುವ ಜಗಜೀವನ ರಾಂ ಧೀಮಂತ ರಾಷ್ಟ್ರೀಯ ನಾಯಕ, ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯ ಹೋರಾಟಗಾರ ಹಾಗೂ ಅತ್ಯುತ್ತಮ ಸಂಸದೀಯ ಪಟುವಾಗಿದ್ದ ಬಾಬು ಜಗಜೀವನ ರಾಂ ನಮ್ಮ ದೇಶಕ್ಕೆ ಮಹತ್ತರ ಕೊಡುಗೆ ನೀಡಿದ್ದಾರೆ. ಬಾಲ್ಯದಿಂದಲೂ ಅಸ್ಪೃಶ್ಯತೆಯ ವಿರುದ್ಧ ಹೋರಾಟ ಮಾಡಿ, ರಾಜಕೀಯದಲ್ಲೂ ತಮ್ಮ ಛಾಪನ್ನು ಮೂಡಿಸಿ ಕೃಷಿಯಲ್ಲಿ ಸಹ ಮಹತ್ತರ ಬದಲಾವಣೆಗಳನ್ನು ತಂದು ಹಸಿರು ಕ್ರಾಂತಿಯ ಹರಿಕಾರರು ಎಂದು ಚಿರಪರಿತರಾದರು ಎಂದು ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಗಣೇಶ ಧೋಂಗಡಿ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾದ ಡಾ.ಬಾಬು ಜಗಜೀವನರಾಮ ರವರ ಜಯಂತಿಯಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಮಹಾವಿದ್ಯಾಲಯದ ಪ್ರಾಂಶುಪಾಲ ಡಾ ಎಂ. ಬಿ. ಬಾಗಡಿರವರು ಮಾತನಾಡಿ, ಭಾರತದಲ್ಲಿ ದೀರ್ಘ ಕಾಲದಿಂದ ಬೆಳೆದುಕೊಂಡು ಬಂದಿದ್ದ ಮೇಲು-ಕೀಳುತಾರತಮ್ಯ, ಜಾತಿಪದ್ಧತಿ, ಅಸ್ಪೃಶ್ಯ ಎಂಬಮನೋಭಾವಗಳನ್ನು ತೊಡೆದು ಹಾಕಲು ಸಾಮಾಜಿಕ ನೆಲೆಗಟ್ಟಿನಲ್ಲಿ ಹೋರಾಡಿದವರು ಕೆಲವೇ ಕೆಲವು ನಾಯಕರಲ್ಲಿ ಬಾಬು ಜಗಜೀವನ ರಾಂ ಒಬ್ಬರು ಎಂದರು.



ಡಾ.ಮಲ್ಲಿಕಾರ್ಜುನ ಗಡಾದ ಸ್ವಾಗತಿಸಿ, ನಿರೂಪಿಸಿದರು. ವಸಂತ ಮುಂದಿನಮನಿ ವಂದಿಸಿದರು.ಡಾ. ಸಂತೋಷ ಹುಬ್ಬಳ್ಳಿ, ಪ್ರೊಫೆಸರ್ ಸಾತಿಹಾಳ, ಡಾ. ಪ್ರಸನ್ನ ಪಂಢರಿ, ಡಾ. ನಾಗರತ್ನ ಕುರಡೇಕರ, ಗಂಗಾಧರ, ಶ್ರೀಧರ, ಚೈತ್ರಾ, ಪ್ರತಿಭಾ, ಸಮೀರ, ಡಾ. ಪ್ರವೀಣ, ಡಾ. ಸುಜಾತಾ, ಡಾ. ಚೈತ್ರಾ, ಮಧು, ಡಾ. ಗುಲಗಂಧಿ, ರವಿ, ಸುರೇಶ, ಮಂಜುನಾಥ ,ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

ಸಂಪರ್ಕ ರಸ್ತೆ, ಸೇತುವೆ ನಿರ್ಮಾಣಕ್ಕೆ ಪ್ರಾಮುಖ್ಯತೆ: ಎಂ.ಆರ್. ಪಾಟೀಲ

•**ಕುಂದಗೋಳ:** ಗ್ರಾಮೀಣ ಭಾಗದ ರೈತರ ಸಂಚಾರ ಹಾಗೂ ಕೃಷಿ ಚಟುವಟಿಕೆಗಳಿಗೆ ನೆರವಾಗುವ ಸಂಪರ್ಕ ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕೆ ಪ್ರಾಮುಖ್ಯತೆ ನೀಡಲಾಗುತ್ತಿದೆ ಎಂದು ಶಾಸಕ ಎಂ.ಆರ್. ಪಾಟೀಲ ಹೇಳಿದರು.

ಅವರು ತಾಲೂಕಿನ ಸಂಶಿ ಗ್ರಾಮದಲ್ಲಿ ನವಲಗುಂದ-ಗುಡಗೇರಿ ರಾಜ್ಯ ಹೆದ್ದಾರಿ (226) ಕಿ.ಮೀ. 44.75 ರಿಂದ 45.15ರವರೆಗೆ ಸಂಶಿ ಗ್ರಾಮದ ವ್ಯಾಪ್ತಿಯ ಸಂಶಿ-ಚಾಕಲಬ್ಬಿ ಸಂಪರ್ಕ ರಸ್ತೆಗೆ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ, ಜೊತೆಗೆ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ರೂ.2 ಕೋಟಿ ವೆಚ್ಚದಲ್ಲಿ ಸಂಶಿ-ಅತ್ತಿಗೇರಿ ರಸ್ತೆಯಲ್ಲಿರುವ ಕಗ್ಗೋಡಿ ಹಳ್ಳಕ್ಕೆ ಅಡ್ಡಲಾಗಿ 'ಬ್ರಿಡ್ಜ್ ಕಮ್ ಬ್ಯಾರೇಜ್' ನಿರ್ಮಾಣ ಕಾಮಗಾರಿಗೆ ಇತ್ತೀಚೆಗೆ ಭೂಮಿಪೂಜೆ ಸಲ್ಲಿಸಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ವಿಶೇಷ ಪ್ರಯತ್ನದಿಂದ ಕುಂದಗೋಳ ತಾಲೂಕಿಗೆ ಒಟ್ಟು 20 ಬ್ರಿಡ್ಜ್ ಕಮ್ ಬ್ಯಾರೇಜ್ ಯೋಜನೆಗಳು ಮಂಜೂರಾಗಿವೆ. ನಮ್ಮ ಅವಧಿಯಲ್ಲಿ ಇನ್ನಷ್ಟು ಅನುದಾನವನ್ನು ತಂದು ಪ್ರದೇಶದ ಸಮಗ್ರ ಅಭಿವರದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.



ಗ್ರಾಮದ ನೀಲಮ್ಮ ಚ. ಅಕ್ಕಿ ಪ್ರೌಢಶಾಲೆಯನ್ನು ಸಾರ್ವಜನಿಕ (ಪಬ್ಲಿಕ್) ಶಾಲೆಯಾಗಿ ಮೇಲ್ದರ್ಜೆಗೆ ಏರಿಸಲಾಗಿದ್ದು, ಇದರಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಸೌಲಭ್ಯ ದೊರೆಯಲಿದೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಎನ್.ಎನ್. ಪಾಟೀಲ, ಡಿ.ವೈ. ಲಕ್ಕನಗೌಡ್ರ, ಗಿರೀಶಗೌಡ ಪಾಟೀಲ, ಪ್ರಕಾಶಗೌಡ ಪಾಟೀಲ, ದಾನಪ್ಪ ಗಂಗಾಯಿ, ಗುರಪಾದಪ್ಪ ಬಂಕದ ಸೇರಿದಂತೆ ಅಧಿಕಾರಿಗಳು, ರೈತರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಸಮಸ್ಯೆ ಸರಿಪಡಿಸುವ ಪ್ರಯತ್ನ: ಸಿಇಒ

•**ಕುಂದಗೋಳ :** ತಾಲೂಕಿನ ಬೆಟದೂರ ಗ್ರಾಮದಲ್ಲಿ ಜಿಲ್ಲಾ ಪಂಚಾಯತಿ ಸಿಇಒ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಕುಂದು ಕೊರತೆ ಸಭೆ ಸೋಮವಾರ ಜರುಗಿತು.

ಅರಿವಿನ ಕೇಂದ್ರ, ಅಂಗನವಾಡಿ ಕಟ್ಟಡ ನಿವೇಶನ. ಹೊಲದ ರಸ್ತೆಗಳ ಸುಧಾರಣೆ, ಬೆಟದೂರ-ಕುಂದಗೋಳ ರಸ್ತೆ, ಸುದಾರಣೆ, ಪ್ರಾಥಮಿಕ ಆರೋಗ್ಯ ಕೇಂದ್ರ, ವಿದ್ಯುತ್ ಟಿಸಿ ಬದಲಾವಣೆ ಸೇರಿದಂತೆ ಲಿಖಿತ ರೂಪದಲ್ಲಿ ಬಂದ 12 ಅರ್ಜಿಗಳ ಕುರಿತು ಚರ್ಚೆ ನಡೆಸಲಾಗಿ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು ಸರಿಪಡಿಸಲು ಪ್ರಯತ್ನ ಮಾಡುವುದಾಗಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ದೇವಿದಾಸ್ ಪಾಟೀಲ ಹೇಳಿದರು.

ಗ್ರಾಮದ ಇನ್ನೂ ಜೀವಂತ ವ್ಯಕ್ತಿ ಓರ್ವರ ಹೆಸರಿನ ಪಹಣಿಯಲ್ಲಿ ಪೋತಿ ಎಂದು ಕಂದಾಯ ಇಲಾಖೆ ನಮೋದಿಸಲಾಗಿದೆ ಎಂದು ಬಂದ ದೂರನ್ನು ಚರ್ಚಿಸಿ ಕಂದಾಯ ಇಲಾಖೆ ಆರ್. ಐ ಅಶೋಕ್ ಮಲ್ಲೂರ ಅವರಿಗೆ ತ್ವರಿತವಾಗಿ ಪರಿಶೀಲಿಸಿ ಸರಿಪಡಿಸಲು ಸೂಚಿಸಿದರು.



ಸಭೆಯಲ್ಲಿ ಪಂಚ ಗ್ಯಾರಂಟಿ ತಾಲೂಕಾಧ್ಯಕ್ಷ ಸತೀಶ ಕೊಬ್ಬಯ್ಯನವರ, ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ. ಇಓ ಪ್ರಶಾಂತ ತುರಕಾಣಿ, ಪಿಡಿಒ ಹನುಮರೆಡ್ಡಿ ನಾಗಾವಿ, ಗ್ರಾಪಂ ಮಾಜಿ ಅಧ್ಯಕ್ಷ ರಾಜು ದೊಡ್ಡಶಂಕರ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ಗ್ರಾಮದ ಮುಖಂಡರಾದ ತಮ್ಮನಗೌಡ್ರ ಪಾಟೀಲ,ರಮೇಶ ಚಲವಾದಿ, ದ್ಯಾಮಣ್ಣ ಕಾಳಿ, ವೀರಣ್ಣ ಮಾಗನೂರ, ಅರ್ಜುನ ಹೊಂಡದ ಆಶಾ-ಅಂಗನವಾಡಿ ಕಾರ್ಯಕರ್ತರು, ಮಹಿಳಾ ಸ್ವ-ಸಹಾಯ ಸಂಘದವರು ಹಾಗೂ ಗ್ರಾಮಸ್ಥರಿದ್ದರು.

ಬಿಜೆಪಿಯ ಹಳೆಯ ತಂತ್ರ: ಬಲೋಗಿ

•**ಹುಬ್ಬಳ್ಳಿ:** ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ರಜತ್ ಉಳ್ಳಾಗಡ್ಡಿಮಠ ಅವರು ಮಾಡಿರುವ ಆರೋಪಗಳು ಸತ್ಯದ ಆಧಾರದ ಮೇಲಿವೆ. ಸಮಾಜದಲ್ಲಿ ದ್ವೇಷ ಬಿತ್ತುವ ಮತ್ತು ಶಾಂತಿಯನ್ನು ಕದಡುವ ಶಕ್ತಿಗಳ ಮುಖವಾಡವನ್ನು ಅವರು ಕಳಚಿದ್ದಾರೆ. ಇದನ್ನು 'ರಾಜಕೀಯ ಪ್ರೇರಿತ' ಎನ್ನುವುದು ಬಿಜೆಪಿಯ ಹಳೆಯ ತಂತ್ರವಾಗಿದೆ ಎಂದು ಹುಬ್ಬಳ್ಳಿ ಧಾರವಾಡ ಮಹಾನಗರ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಗೌರಮ್ಮ ಬಲೋಗಿ ತಿಳಿಸಿದರು.

ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಕಾಂಗ್ರೆಸ್ ಪಕ್ಷಕ್ಕೆ ಯಾವಾಗಲೂ ಮಹಿಳೆಯರ ಗೌರವ ಮತ್ತು ಜನರ ಭದ್ರತೆ ಮೊದಲ ಆದ್ಯತೆ. ಹಾದಿ ಬೀದಿಯಲ್ಲಿ ನಿಂತು ಜನರಲ್ಲಿ ಭಯ ಹುಟ್ಟಿಸಿ, ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟುಕೊಂಡು ರಾಜಕೀಯ ಬೇಳೆ ಬೇಯಿಸಿ ಕೊಳ್ಳುವುದು ನಮ್ಮ ಸಂಸ್ಕೃತಿಯಲ್ಲ, ಬಿಜೆಪಿಯ ನಾಯಕರು ಜನರ ಸಮಸ್ಯೆಗಳಿಗೆ ಸ್ಪಂದಿಸುವ ಬದಲು ಕೇವಲ 'ಟೂಲ್ ಕಿಟ್' ಎಂಬ ಹಣೆಪಟ್ಟಿ ಹಚ್ಚಿ ನುಣುಚಿಕೊಳ್ಳುತ್ತಿದ್ದಾರೆ ಎಂದಿದ್ದಾರೆ.

ಸರ್ಕಾರದ ಗ್ಯಾರಂಟಿ ಯೋಜನೆಗಳು ಎಲ್ಲ ಜಾತಿ, ಧರ್ಮದ ಜನರನ್ನು ತಲುಪುತ್ತಿವೆ. ಇದು ಕೇವಲ ಒಂದು ವರ್ಗದ ಓಲೈಕೆಯಲ್ಲ, ಇದು ಸರ್ವಜನರ ಸಮಾನ ಕಲ್ಯಾಣ. ಜನರನ್ನು ಭಯಪಡಿಸಿ ಮತ ಕೇಳುವ ಅವಶ್ಯಕತೆ ಕಾಂಗ್ರೆಸ್‌ಗೆ ಇಲ್ಲ, ನಾವು ಮಾಡಿದ ಕೆಲಸದ ಆಧಾರದ ಮೇಲೆ ಜನರ ಮುಂದೆ ಹೋಗುತ್ತೇವೆ ಎಂದು ಹೇಳಿದ್ದಾರೆ.

ಕೋಮು ಧ್ರುವೀಕರಣಕ್ಕೆ ಸಂಚು: ಉಳ್ಳಾಗಡ್ಡಿ

•**ಹುಬ್ಬಳ್ಳಿ:** ಹುಬ್ಬಳ್ಳಿಯಲ್ಲಿ ಕಳೆದ ಕೆಲವು ದಿನಗಳಿಂದ ನಡೆಯುತ್ತಿರುವ ಬೆಳವಣಿಗೆಗಳು ಅತ್ಯಂತ ಖೇದಕರವಾಗಿದ್ದು, ವೈಯಕ್ತಿಕ ವಿಚಾರಗಳನ್ನು ಬೇಕೆಂದೇ ''ಲವ್ ಜಿಹಾದ್'' ಎಂದು ಬಿಂಬಿಸುವ ಮೂಲಕ ಕೋಮು ಧ್ರುವೀಕರಣಕ್ಕೆ ಸಂಚು ರೂಪಿಸಲಾಗುತ್ತಿದೆ. ಇದು ನಮ್ಮ ನಗರದ ದೀರ್ಘ ಕಾಲದ ಶಾಂತಿ ಮತ್ತು ಸಾಮರಸ್ಯವನ್ನು ಹಾಳು ಮಾಡಲು ಬಿಜೆಪಿ ಬಳಸುತ್ತಿರುವ ಒಂದು ವ್ಯವಸ್ಥಿತ 'ಟೂಲ್ ಕಿಟ್' ಆಗಿದೆ ಎಂದು ಕಾಂಗ್ರೆಸ್ ಮುಖಂಡ ರಜತ್ ಉಳ್ಳಾಗಡ್ಡಿ ಮಠ ಆರೋಪಿಸಿದರು.

ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ನಡೆಯುತ್ತಿರುವ ಉಪಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ರೀತಿಯ ಪ್ರಕರಣಗಳನ್ನು ಸೃಷ್ಟಿಸಲಾಗುತ್ತಿದೆ. ಹುಬ್ಬಳ್ಳಿಯಲ್ಲಿ ಭಯ ಮತ್ತು ಅಶಾಂತಿಯ ವಾತಾವರಣ ನಿರ್ಮಿಸುವ ಮೂಲಕ ನೆರೆಯ ಜಿಲ್ಲೆಗಳಲ್ಲಿ ರಾಜಕೀಯ ಲಾಭ ಪಡೆಯುವ ತಂತ್ರ ಇದಾಗಿದೆ ಎಂದು ದೂರಿದರು.

ಈ ಎಲ್ಲಾ ಬೆಳವಣಿಗೆಗಳ ಹಿಂದೆ ಬಿಜೆಪಿ ಶಾಸಕ ಮಹೇಶ್ ಟೆಂಗಿನಕಾಯಿ ಮತ್ತು ಪ್ರಮೋದ್ ಮುತಾಲಿಕ್ ಅವರ ಪ್ರಚೋದನಾಕಾರಿ ನಡೆಗಳಿವೆ. ಸುಳ್ಳು ಆರೋಪಗಳನ್ನು ಹರಡುವ ಮೂಲಕ ಮತ್ತು ಜನರನ್ನು ಪ್ರಚೋದಿಸುವ ಮೂಲಕ ಹುಬ್ಬಳ್ಳಿಯ ಸೌಹಾರ್ದತೆಯನ್ನು ಇವರು ನಾಶಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ವಿವಿಧ ಕಾಮಗಾರಿಗೆ ಕೋನರಡ್ಡಿ ಭೂಮಿಪೂಜೆ

•**ಹುಬ್ಬಳ್ಳಿ:** ತಾಲೂಕಿನ ಬ್ಯಾಹಟ್ಟಿ ಗ್ರಾಮದ ನೂತನ ಹನಮಂತ ದೇವರ ದೇವಸ್ಥಾನ ಕಟ್ಟಡ ನಿರ್ಮಾಣ ಹಾಗೂ ಶಾದಿ ಮಹಲ ಕಟ್ಟಡ ನಿರ್ಮಾಣದ ಕಾಮಗಾರಿಗೆ ಶಾಸಕ ಎನ್.ಎನ್. ಕೋನರಡ್ಡಿ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಹನುಮಂತ ದೇವರ ದೇವಸ್ಥಾನದ ಕಟ್ಟಡ ನಿರ್ಮಾಣಕ್ಕೆ 50 ಲಕ್ಷ ಹಾಗೂ ಶಾದಿ ಮಹಲ ಕಟ್ಟಡ ನಿರ್ಮಾಣಕ್ಕೆ 15 ಲಕ್ಷ ಅನುದಾನ ಬಿಡುಗಡೆ ಮಾಡಿಸಿದ್ದು ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗಿದೆ. ಇದು ಗ್ರಾಮಸ್ಥರಿಗೆ ಸಂತೋಷ ತರಿಸಿದೆ ಎಂದರು.

ಬ್ಯಾಹಟ್ಟಿ ಗ್ರಾಮಕ್ಕೆ ಈಗಾಗಲೇ ರೈತರ ಬಹುದಿನ ಬೇಡಿಕೆಯಾದ ಬ್ಯಾಹಟ್ಟಿ-ಕಿರೆಸೂರ-ಇಂಗಳಹಳ್ಳಿ ರಸ್ತೆಯಲ್ಲಿರುವ ದೊಡ್ಡ ಹಳ್ಳಕ್ಕೆ ಬ್ರಿಡ್ಜ್ ಕಂಬ್ಯಾರೇಜ್ ಸೇತುವೆ ನಿರ್ಮಿಸಲಾಗಿದೆ ಎಂದರು.

ಹೆಬಸೂರದಿಂದ ಬ್ಯಾಹಟ್ಟಿ ಸುಳ್ಳದವರೆಗಿನ ರಸ್ತೆ ಸಂಪೂರ್ಣ ಹದಗೆಟ್ಟು ಹಲವಾರು ವರ್ಷಗಳಿಂದ ಸಾರ್ವಜನಿಕರು ವ್ಹಾಯಾ ಹುಬ್ಬಳ್ಳಿ ಮೂಲಕ ಪ್ರಯಾಣಿಸುವಂತಾಗಿತ್ತು. ತಾವು ಆಶೀರ್ವದಿಸಿ ನಾನು ಅಧಿಕಾರಕ್ಕೆ ಬಂದ 2 ವರ್ಷದಲ್ಲಿ ರಸ್ತೆ ಡಾಂಬರೀಕರಣ ಮಾಡಿ ಸಂಚಾರಕ್ಕೆ ಮುಕ್ತೊಗಳಿಸಲಾಗಿದೆ.



ರೈತರು ಬ್ಯಾಹಟ್ಟಿ-ಹಣಸಿ, ಬ್ಯಾಹಟ್ಟಿ-ಮೊರಬ ರಸ್ತೆ ಮುಂತಾದ ರಸ್ತೆಗಳ ಅಭಿವೃದ್ಧಿ ಪಡೆಸಲು, ಹಳ್ಳಗಳಿಗೆ ಸೇತುವೆ ಕಾಮಗಾರಿಗಳು ಆರಂಭವಾಗಿವೆ ಎಂದರು.

ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಹೆಚ್ಚುವರಿಗೆ 5ಕೊಠಡಿ ನಿರ್ಮಿಸಲು 141.97 ಲಕ್ಷಗಳ ಅನುದಾನ ಬಿಡುಗಡೆ ಆಗಿದೆ ಎಂದರು.

ಬ್ಯಾಹಟ್ಟಿ ಹಿರೇಮಠದ ಮರಳುಸಿದ್ದ ಶ್ರೀಗಳು ಸಾನಿಧ್ಯ ವಹಿಸಿಕೊಡ್ಡಿದರು. ವೀರನಗೌಡ್ರ ಮರಿಗೌಡ್ರ, ಗ್ರಾಪಂ ಅಧ್ಯಕ್ಷೆ ಮಹಾದೇವಿ ಹಂಗರಕಿ, ಉಪಾಧ್ಯಕ್ಷೆ ಮಧು ಹುಬ್ಬಳ್ಳಿ, ಸದಸ್ಯರಾದ ಗಂಗಮ್ಮ ರೂಗಿ, ನಿರ್ಮಲಾ ದ್ಯಾವನಗೌಡ್ರ, ಅನಸಮ್ಮ ತಳವಾರ, ದವಲಸಾಬ ಅಣ್ಣಿಗೇರಿ, ಭೂನ್ಯಾಯ ಮಂಡಳಿ ಸದಸ್ಯ ಸಚಿನ್ ಹಿರೇಗೌಡ್ರ, ಗ್ರಾಮಸ್ಥರಾದ ಪಮ್ಮು ಯಡ್ರಾವಿ, ಬಸನಗೌಡ ತಿರ್ಲಾಪುರ, ಸಂತೋಷ ಜೀವನಗೌಡ್ರ ಇದ್ದರು.

ಬಿಜೆಪಿ ವಿರುದ್ಧ ಸಿಎಂ ಸಿದ್ದರಾಮಯ್ಯ ಆಕ್ರೋಶ

ಕೇಂದ್ರದಿಂದ ರಾಜ್ಯಕ್ಕೆ ಮೋಸ

ಬಾಗಲಕೋಟೆ: ಮುಂಬಾಗಿಲಿನಿಂದ ಬಿಜೆಪಿಯವರು ಒಂದು ದಿನವೂ ಅಧಿಕಾರ ನಡೆಸಿಲ್ಲ. ಬದಲಾಗಿ ನನ್ನ ಬಗ್ಗೆ ಟೀಕೆ ಮಾಡುತ್ತಾರೆ ಎಂದು ಸಿಎಂ ಸಿದ್ದರಾಮಯ್ಯ ಬಿಜೆಪಿ ವಿರುದ್ಧ ಟೀಕಾ ಪ್ರಹಾರ ನಡೆಸಿದರು.

ಬಾಗಲಕೋಟೆ ಉಪಚುನಾವಣೆ ಹಿನ್ನೆಲೆಯಲ್ಲಿ ಬಾಗಲಕೋಟೆಯ ಬಸವೇಶ್ವರ ಸರ್ಕಲ್‌ನಲ್ಲಿ ನಡೆದ ಬಹಿರಂಗ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು.

ನಾನು ವಿಶ್ವಾಸ ದ್ರೋಹಿ, ಭ್ರಷ್ಟಾಚಾರಿ ಎಂದು ಯಡಿಯೂರಪ್ಪ ಹೇಳುತ್ತಿದ್ದಾರೆ. ಆದರೆ, ನಾನು ಹಾಗೆಹೇಳಲ್ಲ. ಅವರು ಪಕ್ಷದಿಂದಉಚ್ಛಾಟನೆಗೊಂಡ ಬಸನಗೌಡ ಪಾಟೀಲ ಯತ್ನಾಳ, ಎಚ್. ವಿಶ್ವನಾಥ ಅವರೆ ಹೇಳಿದ್ದಾರೆ. ಯಡಿಯೂರಪ್ಪ ಹಾಗೂ ಅವರ ಮಗ ವಿಜಯೇಂದ್ರ ಕಡು ಭ್ರಷ್ಟರು ಎಂದು. ಇದಕ್ಕಿಂತ ಉದಾಹರಣೆ ಬೇಕಾ ಎಂದು ಪ್ರಶ್ನಿಸಿದರು.

ಕೇಂದ್ರ ಸರ್ಕಾರ ನಮಗೆ ಕೊಡಬೇಕಾದ ಹಣವನ್ನು ಸರಿಯಾಗಿ ಕೊಟ್ಟಿಲ್ಲ. ಭದ್ರಾ ಯೋಜನೆಗೆ ಕೊಡುತ್ತೇವೆ ಎಂದು ಹೇಳಿದ ಹಣವನ್ನು ಕೂಡ ಕೊಡದೇ ಕರ್ನಾಟಕದ ಜನರಿಗೆ ಮೋಸ ಮಾಡಿದ್ದಾರೆ ಎಂದು ಆರೋಪಿಸಿದರು.

ನಾನು ಯಾರಿಗೆ ವಿಶ್ವಾಸದ್ರೋಹ ಮಾಡಿದ್ದೇನೆ ಎನ್ನುವುದನ್ನು ಉಲ್ಲೇಖಿಸಿ ಯಡಿಯೂರಪ್ಪ ಅವರು ಆರೋಪ ಮಾಡಬೇಕು. ಅರಳು ಮರಳು ಯಡಿಯೂರಪ್ಪ ಅವರು ಆಧಾರ ಸಹಿತವಾಗಿ ಮಾತನಾಡಬೇಕು ಎಂದರು.



> **ಕಾಂಗ್ರೆಸ್ ನುಡಿದಂತೆ ನಡೆದಿದೆ. 2023ರಲ್ಲಿ ಕೊಟ್ಟ ಭರವಸೆಗಳನ್ನೆಲ್ಲ ಈಡೇಸಿದ್ದೇವೆ. ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯಲ್ಲಿ ನಮ್ಮ ಪಕ್ಷದ ಇಬ್ಬರು ಅಭ್ಯರ್ಥಿಗಳು ಗೆಲ್ಲಲಿದ್ದಾರೆ.**
> ■ ಸಿದ್ದರಾಮಯ್ಯ, ಸಿಎಂ

ತಮ್ಮ ಜಾತಿಯ ಅಭ್ಯರ್ಥಿ ಆದ ಕಾರಣ ಸಿದ್ದರಾಮಯ್ಯ ಅವರು ಬಾಗಲಕೋಟೆಯಲ್ಲಿ ಠಿಕಾಣಿ ಹೂಡಿದ್ದಾರೆ ಎನ್ನುವ ಯಡಿಯೂರಪ್ಪ ಅವರ ಆರೋಪದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಿಎಂ, ದಾವಣಗೆರೆ ದಕ್ಷಿಣದಲ್ಲಿ ನಮ್ಮ ಅಭ್ಯರ್ಥಿ ಸಮರ್ಥ್ ಶಾಮನೂರು ಪರವಾಗಿ ಅಲ್ಲೇ ಠಿಕಾಣಿ ಹೂಡಿ ಪ್ರಚಾರ ಮಾಡಿದ್ದೇನೆ. ಅವರು ಯಾವ ಜಾತಿ? ಎಂದು ಪ್ರಶ್ನಿಸಿದ ಅವರು, ನಾವು ಜಾತಿ ಕಾರಣಕ್ಕೆ ಪ್ರಚಾರ ಮಾಡುವುದಿಲ್ಲ. ಪಕ್ಷದ ಅಭ್ಯರ್ಥಿ ಪರವಾಗಿ ಪ್ರಚಾರ ಮಾಡ್ತೀವಿ ಎಂದರು.

ಮುಖ್ಯಮಂತ್ರಿ ಯಾರಾಗಿರಬೇಕು ಎನ್ನುವ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಮೋದಿ ಪ್ರಧಾನಿಯಾದಾಗ ಎಪ್ಪತ್ತೈದು ರೂ. ಇದ್ದ ಪೆಟ್ರೋಲ್ ಈಗ ನೂರಾ ಎರಡು ರೂ. ದಾಟಿದೆ. ಇದಕ್ಕೆ ಕಾರಣ ಮೋದಿ. ಯುದ್ದದಿಂದ ತೈಲ ಬೆಲೆ ಏರಿದೆ ಆದರೆ ಮೊದಲೇ ಇದೆ ಬಗ್ಗೆ ಏಕೆ ಯೋಚಿಸಲಿಲ್ಲ ಎಂದರು.

ವೇದಿಕೆ ಮೇಲೆ ಜಮೀರ್ ಅಹ್ಮದ ಖಾನ್, ಬೈರತಿ ಸುರೇಶ್, ಎಂ.ಬಿ.ಪಾಟೀಲ, ಶಿವಾನಂದ ಪಾಟೀಲ, ಆರ್.ಬಿ.ತಿಮ್ಮಾಪೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಉಪಚುನಾವಣೆ ಬಳಿಕ ಸಿದ್ದರಾಮಯ್ಯ ರಾಜಕೀಯ ಡೊಂಬರಾಟ ಅಂತ್ಯ: ಬಿಎಸ್‌ವೈ

ಬಾಗಲಕೋಟ: ದಾವಣಗೆರೆ ಮತ್ತು ಬಾಗಲಕೋಟ ಉಪಚುನಾವಣೆ ಗೆಲ್ಲುವ ಮುಖಾಂತರ ಬಳಿಕ ಸಿಎಂ ಸಿದ್ದರಾಮಯ್ಯನವರ ರಾಜಕೀಯ ಡೊಂಬರಾಟ ಅಂತ್ಯವಾಗಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪ ಹೇಳಿದರು.

ನಗರದಲ್ಲಿ ಆಯೋಜಿಸಿದ್ದ ಸಕಲ ಸಮುದಾಯದ ಮುಂಖಡರ ಸಭೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠರ ಪರವಾಗಿ ಮತಯಾಚಿಸಿ ಮಾತನಾಡಿದ ಅವರು, ಹಣ, ಹೆಂಡದ, ತೋಳುಬಲ, ಅಧಿಕಾರ ಬಲ, ಜಾತಿಯ ವಿಷ ಬೀಜ ಬಿತ್ತಿ ಚುನಾವಣೆಯಲ್ಲಿ ಗೆಲ್ಲಬೇಕು ಎನ್ನುವ ಭ್ರಮೆನಲ್ಲಿ ಮುಖ್ಯಮಂತ್ರಿಗಳಿದ್ದಾರೆ. ಆದರೆ, ಮತದಾರರು ಜಾಗೃತರಾಗಿದ್ದಾರೆ. ವೀರಣ್ಣ ಚರಂತಿಮಠ ಒಬ್ಬ ಪ್ರಾಮಾಣಿಕ, ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಿರುವ ವ್ಯಕ್ತಿಗೆ ಮತ ನೀಡಬೇಕು ಎಂದರು.

ದೇವರುಶಕ್ತಿ ಕೊಟ್ಟರೆ, ಇನ್ನೂ ನಾಲ್ಕೈದು ವರ್ಷ ರಾಜ್ಯದ ಉದ್ದಗಲಕ್ಕೆ ಓಡಾಡಿ, ಉಪಚುನಾವಣೆ ಅಷ್ಟೆ ಅಲ್ಲದೆ, 2028ರ ವಿಧಾನಸಭಾ ಚುನಾವಣೆಯಲ್ಲಿ ಬಹುಮತವನ್ನು ಪಡೆದು ಸರ್ಕಾರ ರಚಿಸುತ್ತೇವೆ. ರಾಜ್ಯದ ಯಾವುದೇ ಕ್ಷೇತ್ರದಲ್ಲಿ ಚುನಾವಣೆ ನಿಲ್ಲುವ ಧೈರ್ಯವನ್ನ ಸಿದ್ದರಾಮಯ್ಯ ಮಾಡದ ರೀತಿಯಲ್ಲಿ ನಾವು ಜಾಗೃತರಾಗಬೇಕಾಗಿದೆ ಎಂದರು.

ಬಾಗಲಕೋಟೆಯಲ್ಲಿ 10, 15 ಸಾವಿರ



ಅಂತರದಲ್ಲಿ ಗೆಲ್ಲುವುದರ ಬಗ್ಗೆ ಯಾವುದೇ ಸಂಶಯ ಇಲ್ಲ. ವೀರಣ್ಣ ಚರಂತಿಮಠರ ಗೆಲುವನ್ನು ಲಕ್ಷ ಜನ ಕಾರ್ಯಕರ್ತರೊಂದಿಗೆ ವಿಜಯೋತ್ಸವ ಆಚರಿಸೋಣ. ರಾಷ್ಟ್ರೀಯ ರಕ್ಷಣೆ ನಮ್ಮದಾಗಿದೆ. ಭಾರತ ಭೂಮಿ, ಧರ್ಮ, ಯೋಗ, ತ್ಯಾಗ, ಕರ್ಮ, ಸೇವೆಗೆ ಪ್ರಸಿದ್ಧಿ. ಇದು ರಾಮ ನಡೆದ, ಕೃಷ್ಣ ಬೋಧಿಸಿದ ಹಾಗೂ ಈಶ್ವರನ ತಪೋಭೂಮಿ. ವಿದೇಶಿಗರು ಸಹ ಕೊಂಡಾಡುವಂತಹ ಸಂಸ್ಕೃತಿ ಪರಂಪರೆ ನಮ್ಮದಾಗಿದೆ. ಇದನ್ನು ಉಳಿಸಿ, ಬೆಳೆಸುವುದು ಭಾರತೀಯ ಜನತಾ ಪಾರ್ಟಿಯಿಂದ ಮಾತ್ರ ಸಾಧ್ಯ ಎಂದರು.

ಮಾಜಿ ಮುಖ್ಯಮಂತ್ರಿ ಮತ್ತು ಸಂಸದರಾದ ಬಸವರಾಜ ಬೊಮ್ಮಾಯಿ ಮಾತನಾಡಿ, 21ನೇಯ ಶತಮಾನದಲ್ಲಿ ಕರ್ನಾಟಕದಲ್ಲಿ ರಾಜಕೀಯ, ಆರ್ಥಿಕ,ಸಾಮಾಜಿಕ ಕ್ರಾಂತಿಯನ್ನು ವೀರಣ್ಣ ಚರಂತಿಮಠರನ್ನು ಗೆಲ್ಲಿಸುವ ಮೂಲಕ ಪ್ರಾರಂಭಿಸೋಣ ಎಂದರು.

ಈ ಸಂದರ್ಭದಲ್ಲಿ ಜಗದೀಶ ಶೆಟ್ಟರ, ಗೋವಿಂದ ಕಾರಜೋಳ, ಮುರಗೇಶ ನಿರಾಣಿ, ಸಿ.ಸಿ.ಪಾಟೀಲ, ವೆಂಕಟಗೌಡ ನಾಡಗೌಡ, ಶಿವರಾಜ ಪಾಟೀಲ, ಸಿದ್ದು ಪಾಟೀಲ, ರಾಜಶೇಖರ ಶೀಲವಂತ, ಬಸವರಾಜ ಮತ್ತಿಮೊಡ್, ಜಿ.ಎನ್.ಪಾಟೀಲ ಸೇರಿದಂತೆ ಇತರರು ಇದ್ದರು.

ಕಿರುಸುದ್ದಿ

ಸಾವಿನಲ್ಲೂ ಒಂದಾದ ದಂಪತಿ

ಬೆಳಗಾವಿ: ಅನಾರೋಗ್ಯಕ್ಕೆ ಬೇಸತ್ತು ಆತ್ಮಹತ್ಯೆಗೆ ಯತ್ನಿಸಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು, ಪತ್ನಿಯನ್ನು ನೋಡಲು ಆಸ್ಪತ್ರೆಗೆ ತೆರಳುತ್ತಿದ್ದ ವೇಳೆ ಪತಿ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ತಂದೆ-ತಾಯಿ ಕಳೆದುಕೊಂಡಿರುವ ಮೂವರು ಮಕ್ಕಳು ಅನಾಥರಾಗಿರುವ ಹೃದಯ ವಿದ್ರಾವಕ ಘಟನೆ ನಡೆದಿದೆ. ಬೈಲಹೊಂಗಲ ತಾಲೂಕಿನ ಅರವಳ್ಳಿ ಗ್ರಾಮದ ನಿವಾಸಿ ಮಧುರಾ ಕರೆಪ್ಪ (30) ಆತ್ಮಹತ್ಯೆಗೆ ಶರಣಾದ ಪತ್ನಿ ಮಹಿಳೆ. ಕರೆಪ್ಪ ಗಂಗಪ್ಪ ಮಾದರ (36) ಅಪಘಾತದಲ್ಲಿ ಮೃತಪಟ್ಟ ಪತಿ. ದಂಪತಿಗೆ ಮೂವರು ಮಕ್ಕಳು. ಮಧುರಾ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು. ಅನಾರೋಗ್ಯಕ್ಕೆ ಮನನೊಂದು ವಿಷ ಸೇವಿಸಿದ ಮಧುರಾ ಅವರನ್ನು ಬೈಲಹೊಂಗಲ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಹಿಳೆ ಸ್ಥಿತಿ ಗಂಭೀರವಾಗಿದ್ದಕ್ಕೆ ಬೆಳಗಾವಿ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮಧುರಾ ಕೊನೆಯುಸಿರೆಳೆದಿದ್ದಾರೆ. ಪತ್ನಿ ಆಸ್ಪತ್ರೆಯಲ್ಲಿ ಮೃತಪಟ್ಟ ಸುದ್ದಿ ಕೇಳಿ ಪತಿ ಕರೆಪ್ಪ ಗಡಿಬಿಡಿಯಲ್ಲಿ ಬೈಕ್‌ನಲ್ಲಿ ಆಸ್ಪತ್ರೆಗೆ ತೆರಳುತ್ತಿದ್ದ ವೇಳೆ ಅರವಳ್ಳಿ ಕ್ರಾಸ್ ಬಳಿ ಕೆಎಸ್ಆರ್‌ಟಿಸಿ ಬಸ್ ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ಗಂಭೀರವಾಗಿ ಗಾಯಗೊಂಡ ಕರೆಪ್ಪ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನಾ ಸ್ಥಳಕ್ಕೆ ಬೈಲಹೊಂಗಲ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ತಂದೆ-ತಾಯಿ ಕಳೆದುಕೊಂಡಿರುವ ಮಕ್ಕಳ ಆಕ್ರಂದನ ಮುಗಿಲು ಮುಟ್ಟಿದೆ.

ಸರ್ಕಾರಿ ಶಾಲಾ ಶಿಕ್ಷಕಿ ಹತ್ಯೆ ಮಾಡಿ ಸುಟ್ಟು ಹಾಕಿರುವ ಶಂಕೆ

ಕಲಬುರಗಿ: ಸರ್ಕಾರಿ ಶಾಲಾ ಶಿಕ್ಷಕಿಯೊಬ್ಬರನ್ನು ಮಾರಕಾಸ್ತ್ರಗಳಿಂದ ಬರ್ಬರವಾಗಿ ಹತ್ಯೆ ಮಾಡಿ ಶವವನ್ನು ಸುಟ್ಟು ಹಾಕಿರುವ ಭೀಕರ ಘಟನೆ ಜಿಲ್ಲೆಯ ಕಮಲಾಪುರ ತಾಲೂಕಿನ ಕಲ್ಮೂಡ ಗ್ರಾಮದಲ್ಲಿ ಬೆಳಕಿಗೆ ಬಂದಿದೆ. ಹತ್ಯೆಗೀಡಾದವರು ಕಲಬುರಗಿ ನಗರದ ಆನಂದ್ ಕಾಲೋನಿ ನಿವಾಸಿ ಜ್ಯೋತಿ ಕಪಾಳೆ (ಹೆಸರು ಬದಲಿಸಲಾಗಿದೆ) ಎಂದು ಗುರುತಿಸಲಾಗಿದೆ. ಅವರು ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ವಂದರಖೇಡ ಗ್ರಾಮದಲ್ಲಿರುವ ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಕೆಲಸದ ನಿಮಿತ್ತ ಅವರು ಬೀದರ್‌ನಲ್ಲಿ ವಾಸವಿದ್ದು, ವಾರಕ್ಕೊಮ್ಮೆ ಕಲಬುರಗಿಗೆ ಬಂದು ಹೋಗುತ್ತಿದ್ದರು ಎಂದು ತಿಳಿದು ಬಂದಿದೆ. ಘಟನೆಯ ದಿನ ಜ್ಯೋತಿ ಕಲಬುರಗಿಯಿಂದ ಬೀದರ್‌ಗೆ ತೆರಳುವ ವೇಳೆ ಮಾರ್ಗ ಮಧ್ಯದಲ್ಲಿರುವ ಕಮಲಾಪುರ ತಾಲ್ಲೂಕಿನ ಕಲ್ಮೂಡ ಗ್ರಾಮದ ಬಳಿ ದುಷ್ಕರ್ಮಿಗಳು ದಾಳಿ ನಡೆಸಿ ಮಾರಕಾಸ್ತ್ರಗಳಿಂದ ಹತ್ಯೆ ನಡೆಸಿದ್ದಾರೆ. ಬಳಿಕ ಗುರುತು ಸಿಗದಂತೆ ಮಾಡಲು ಶವವನ್ನು ಸುಟ್ಟು ಹಾಕಿರುವುದು ಪೊಲೀಸರು ಶಂಕಿಸಿದ್ದಾರೆ. ಪ್ರಾಥಮಿಕವಾಗಿ ಅಪರಿಚಿತ ಶವ ಪತ್ತೆ ಪ್ರಕರಣವಾಗಿ ಕಮಲಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಂತರ ನಡೆದ ತನಿಖೆಯಲ್ಲಿ ಶವ ಜ್ಯೋತಿ ಅವರದ್ದೆಂದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಕೊಲೆ ಪ್ರಕರಣವಾಗಿ ಪರಿಗಣಿಸಿ ಪೊಲೀಸರು ತನಿಖೆಯನ್ನು ತೀವ್ರಗೊಳಿಸಿದ್ದಾರೆ.

ಸಣ್ಣ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಕಲ್ಪಿಸಿದ್ದು ಬಿಜೆಪಿ

ಬಾಗಲಕೋಟೆ: ಅಲೆಮಾರಿ, ಕೊರಮ,ಕೊರಚ ಸೇರಿದಂತೆ ಸಣ್ಣ ಸಮುದಾಯಕ್ಕೆ ಸಾಮಾಜಿಕ ನ್ಯಾಯವನ್ನು ಬಿಜೆಪಿ ಕಲ್ಪಿಸಿಕೊಟ್ಟಿದೆ. ಈ ಉಪಚುನಾವಣೆಯಲ್ಲಿ ಸಣ್ಣ ಸಮುದಾಯಗಳು ಕೂಡ ಬಿಜೆಪಿಗೆ ಬೆಂಬಲ ವ್ಯಕ್ತಪಡಿಸಲಿವೆ ಎಂದು ಅಲೆಮಾರಿ,ಅರೆ ಅಲೆಮಾರಿ ಸಮುದಾಯದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಲೋಹಿತ್ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸಣ್ಣ ಸಮುದಾಯಗಳಿಗೆ ಒಳಮೀಸಲಾತಿ ವಿಚಾರದಲ್ಲಿ ದೊಡ್ಡ ಘೋರ ಅನ್ಯಾಯ ಮಾಡಿದೆ. ಇದನ್ನು ನಮ್ಮ ಸಮುದಾಯದವರು ಗಮನದಲ್ಲಿಟ್ಟುಕೊಂಡು ಈ ಬಾರಿಯ



ಉಪಚುನಾವಣೆಯಲ್ಲಿ ತಕ್ಕ ಪಾಠವನ್ನು ಕಾಂಗ್ರೆಸ್‌ಗೆ ಕಲಿಸಲಿದ್ದಾರೆ ಎಂದು ಹೇಳಿದರು.

ಧರ್ಮ ಜಾಗರಣೆ ಮಾಡಿಕೊಂಡು ಜೀವನ ನಡೆಸುವ ಅಲೆಮಾರಿ ಸಮುದಾಯಕ್ಕೆ ನ್ಯಾ.ನಾಗಮೋಹನ್ ದಾಸ ವರದಿ ಪ್ರಕಾರ ಶೇ.1ರಷ್ಟು ಮೀಸಲಾತಿ ಕಲ್ಪಿಸಬೇಕು ಎಂದು ಶಿಫಾರಸ್ಸು ಮಾಡಿದರೂ ಕಾಂಗ್ರೆಸ್ ಸರ್ಕಾರ ಅನ್ಯಾಯ ಮಾಡಿದೆ ಎಂದು ಹೇಳಿದರು.

ಅಲೆಮಾರಿ ಸಮುದಾಯದ ಮುಖಂಡ ನಾಗೂರ ಮಾತನಾಡಿ, ನಗರದ ಸೆಟಲ್‌ಮೆಂಟ್ ಕಾಲೋನಿಯ ಜನಾಂಗದವರಿಗೆ ಎಸ್ಟಿ ವರ್ಗಕ್ಕೆ ಸೇರಿಸಿ ಗೆಜೆಟ್ ನೋಟಿಫಿಕೇಶನ್ ಹೊರಡಿಸಿದ್ದು ಬಿಜೆಪಿ ಸರ್ಕಾರ ಎಂದು ಹೇಳಿದರು.

ಸಫಾಯಿ ಕರ್ಮಚಾರಿ ಅಧ್ಯಕ್ಷ ಎಚ್.ಹಣಮಂತಪ್ಪ ಮಾತನಾಡಿ, ಕಾಂಗ್ರೆಸ್ ಪಕ್ಷ ದಲಿತ ಸಮುದಾಯಕ್ಕೆ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿದೆ. ಎಸ್ಸಿ,ಎಸ್ಟಿ ಸಮುದಾಯಕ್ಕೆ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿ ಯೋಜನೆಗೆ ಬಳಕೆ ಮಾಡಿ ನಮ್ಮ ಸಮುದಾಯಕ್ಕೆ ಅನ್ಯಾಯವನ್ನು ಸರ್ಕಾರ ಮಾಡಿದೆ ಎಂದು ದೂರಿದರು.

ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಮುತ್ತಣ್ಣ ಬೆಣ್ಣೂರ ಮಾತನಾಡಿ, ಸಚಿವ ಆರ್.ಬಿ.ತಿಮ್ಮಾಪುರ, ಸತೀಶ ಜಾರಕಿಹೊಳಿಯವರು ದಲಿತರಿಗೆ ಚುನಾವಣೆಯಲ್ಲಿ ಹಣದ ಆಮಿಷ ಒಡ್ಡುತ್ತಿದ್ದಾರೆ. ಇದರಿಂದ ದಲಿತರ ಮತ ಸೆಳೆಯಲು ಮುಂದಾಗಿದ್ದಾರೆ. ಇವರ ಆಮಿಷಕ್ಕೆ ದಲಿತರು ಒಲವು ತೋರಿಸುವುದಿಲ್ಲ ಎಂದರು.

ಹುಬ್ಬಳ್ಳಿಯಲ್ಲಿ ಲವ್ ಜಿಹಾದ್ ಜಾಲ: ಯತ್ನಾಳ

ಹುಬ್ಬಳ್ಳಿ: ನಗರದಲ್ಲಿ ಲವ್ ಜಿಹಾದ್ ನಡೆಸುವ ವ್ಯವಸ್ಥಿತ ಜಾಲವಿದ್ದು, ಇದಕ್ಕೆ ಭಯೋತ್ಪಾಕ ಸಂಘಟನೆ ಬೆಂಬಲ ಇದೆ. ಪೊಲೀಸ್ ಇಲಾಖೆಗೆ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಒಂದು ವಾರದಲ್ಲಿ ಹೋರಾಟದ ರೂಪರೇಷ ಸಿದ್ಧಪಡಿಸಲಾಗುವುದು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

ಸೋಮವಾರ ಇಲ್ಲಿಯ ವಿಕಾಸನಗರ ಸಂತ್ರಸ್ತೆ ಮನೆಗೆ ಭೇಟಿ ನೀಡಿ ಅವರ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪೊಲೀಸ್ ಇಲಾಖೆ ಏನು ಮಾಡದೆ ಸುಮ್ಮನಿರುವುದು ನೋಡಿದರೆ, ಗೃಹ ಸಚಿವ ಜಿ. ಪರಮೇಶ್ವರ ಹಾಗೂ ಸ್ಥಳೀಯ ಶಾಸಕರ ಮಾತು ಕೇಳಿ ಸುಮ್ಮನೆ ಕುಳಿತಿರುವಂತೆ ಕಾಣುತ್ತಿದೆ ಎಂದು ಆರೋಪಿಸಿದರು.

ಜೈಲಿನಲ್ಲಿ ಕುಳಿತ ಆರೋಪಿಯೊಬ್ಬ ಯುವತಿಗೆ ವಿಡಿಯೋ ಕರೆ ಮಾಡಿ ಧಮಕಿ ಹಾಕುತ್ತಾನೆ. ಕಾಂಗ್ರೆಸ್ ನಲ್ಲಿ ಮುಸ್ಲಿಂ ನಾಯಕರಿದ್ದಾರೆ. ಅವರಿಗೆ ಯಾವನೋ ಒಬ್ಬ ಕರೆ ಮಾಡಿ, ನಾನು ಲವ್ ಜಿಹಾದ್ ಮಾಡುತ್ತೇನೆ ಎನ್ನುತ್ತಾನೆ. ಜಾಮೀನು ಪಡೆಯುತ್ತಾನೆ. ಪೊಲೀಸರು ಹಣ ಕೊಟ್ಟು ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದು ದೂರಿದರು.

ಅವರಿಗೆ ದೇಶ ಹಾಳಾಗಲಿ, ಲವ್ ಜಿಹಾದ್ ಆದರೂ ಏನು ಸಂಬಂಧ ಬೀಳುವುದಿಲ್ಲ. ಹಿಂದು ಕಾರ್ಯಕರ್ತರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ನಮ್ಮ ಸರ್ಕಾರ ಬಂದಾಗ ನೀವು (ಪೊಲೀಸರು) ಎಲ್ಲಿಗೆ ಹೋಗುತ್ತೀರಿ? ಕರ್ನಾಟಕದಲ್ಲಿಯೇ ಇರಬೇಕು. ಧರ್ಮ, ದೇಶದ ಅಭಿಮಾನ ನೀವು ಇಟ್ಟುಕೊಳ್ಳಬೇಕು ಎಂದು ಚಾಟಿ ಬೀಸಿದರು. ಪಾಲಿಕೆ ಸದಸ್ಯ ರಾಜಣ್ಣ ಕೊರವಿ, ಹನುಮಂತಸಾ ನಿರಂಜನ ಇತರರು ಇದ್ದರು.

ವಿಭೂತಿ ಜಲಪಾತದಲ್ಲಿ ಮುಳುಗಿ ಪ್ರವಾಸಿಗ ಸಾವು

ಅಂಕೋಲಾ: ತಾಲೂಕಿನ ಅಚವೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಚನಗಾರದ ವಿಭೂತಿ ಜಲಪಾತದಲ್ಲಿ ಪ್ರವಾಸಿಗನೊಬ್ಬ ಮುಳುಗಿ ಮೃತಪಟ್ಟ ಘಟನೆ ಸೋಮವಾರ ಸಂಜೆ ನಡೆದಿದೆ. ತೆಲಂಗಾಣ ರಾಜ್ಯದ ಅಜಯ್(24) ಮೃತ ವ್ಯಕ್ತಿಯಾಗಿದ್ದು, ತೆಲಂಗಾಣದಿಂದ ಪ್ರವಾಸಕ್ಕೆ ಬಂದಿದ್ದ 6 ಜನರ ತಂಡದಲ್ಲಿದ್ದ ಈತ ಜಲಪಾತದ ನೀರಿಗಿಳಿದ ಸಂದರ್ಭದಲ್ಲಿ ಕಾಲು ಜಾರಿ ಆಳ ನೀರಿಗೆ ಬಿದ್ದು ಮುಳುಗಿ ಮೇಲೆಳಲು ಸಾಧ್ಯವಾಗದೇ ಮೃತಪಟ್ಟಿರುವುದಾಗಿ ತಿಳಿದು ಬಂದಿದೆ.ಸ್ಥಳದಲ್ಲಿದ್ದ ಪ್ರವಾಸಿಗರು ರಕ್ಷಣೆಗೆಪ್ರಯತ್ನಿಸಿದರೂ ಯಾವುದೇಪ್ರಯೋಜನ ಆಗದಕಾರಣ ಅಂಕೋಲಾ ಅಗ್ನಿಶಾಮಕ ಕೇಂದ್ರಕ್ಕೆ ಮಾಹಿತಿ ನೀಡಲಾಗಿತ್ತು. ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಗಳು ಸ್ಥಳೀಯ ಜನರ ಸಹಕಾರದಲ್ಲಿ ನೀರಿನಲ್ಲಿ ಶೋಧ ಕಾರ್ಯ ನಡೆಸಿ ಮೃತದೇಹ ಮೇಲೆತ್ತಿದರು. ಅಂಕೋಲಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದು ಹೆಚ್ಚಿನ ಮಾಹಿತಿ ಲಭ್ಯವಾಗಬೇಕಿದೆ.

ಕೆರೆಯಲ್ಲಿ ಮುಳುಗಿ ಯುವಕ ಸಾವು

ಹನುಮಸಾಗರ: ಸಮೀಪದ ಕಾಟಾಪುರ ಗ್ರಾಮದಲ್ಲಿ ಎತ್ತುಗಳಿಗೆ ನೀರು ಕುಡಿಸಲು ಕೆರೆಗೆ ಹೋದ ಸಂದರ್ಭದಲ್ಲಿ ಕಾಲು ಜಾರಿ ನೀರಿಗೆ ಬಿದ್ದು ಯುವಕನೊಬ್ಬ ಮೃತಪಟ್ಟ ಘಟನೆ ಸಮೀಪದ ಕಾಟಾಪುರ ಸೀಮಾದಲ್ಲಿ ಭಾನುವಾರ ಮಧ್ಯಾಹ್ನ ಸಂಭವಿಸಿದೆ. ಹನುಮಸಾಗರ ನಿವಾಸಿ ಆಕಾಶ್ ಶರಣಪ್ಪ ಹಕ್ಕಿ (18) ಮೃತಪಟ್ಟ ದುರ್ದೈವಿ. ಆಕಾಶ್ ತನ್ನ ತಂದೆಯೊಂದಿಗೆ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದನು. ಭಾನುವಾರ ಮಧ್ಯಾಹ್ನ ಸುಮಾರು 12:30ರ ಸುಮಾರಿಗೆ ಸಮೀಪದ ಕಾಟಾಪುರ ಸೀಮಾದಲ್ಲಿರುವ ಕೆರೆಗೆ ಎತ್ತುಗಳಿಗೆ ನೀರು ಕುಡಿಸಲು ಹೋದಾಗ ಈ ಘಟನೆ ನಡೆದಿದೆ.



ಹೊಲದಲ್ಲಿ ಎತ್ತುಗಳನ್ನು ಮೇಯಿಸುತ್ತಿದ್ದ ಆಕಾಶ್, ಮಧ್ಯಾಹ್ನದ ವೇಳೆಗೆ ನೀರು ಕುಡಿಸಲು ಕೆರೆಯ ದಂಡೆಗೆ ಕರೆ ತಂದಿದ್ದನು. ಈ ವೇಳೆ ಆಕಸ್ಮಿಕವಾಗಿ ಕಾಲು ಜಾರಿ ಕೆರೆಯ ನೀರಿನಲ್ಲಿ ಮುಳುಗಿದ್ದಾನೆ. ತಕ್ಷಣ ಆತನನ್ನು ನೀರಿನಿಂದ ಹೊರತೆಗೆದು ಹೆಚ್ಚಿನ ಚಿಕಿತ್ಸೆಗಾಗಿ ಇಳಕಲ್ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ, ಆಕಾಶ್ ಕೊನೆಯುಸಿರೆಳೆದಿದ್ದಾನೆ ಎಂದು ತಿಳಿದುಬಂದಿದೆ.

ಈ ಕುರಿತು ಮೃತನ ತಂದೆ ಶರಣಪ್ಪ ವಿರೂಪಾಕ್ಷಪ್ಪ ಹಕ್ಕಿ ಅವರು ಹನುಮಸಾಗರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಹನುಮಸಾಗರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪೊಲೀಸ್ ಸಿಬ್ಬಂದಿ ಮೇಲೆ ಚಾಕು ಇರಿತ

ಹುಬ್ಬಳ್ಳಿ: ಇಲ್ಲಿಯ ಎಸ್.ಎಂ.ಕೆ ನಗರದ ಸ್ಮಶಾನಗಟ್ಟಿಯಲ್ಲಿ ನಾಲ್ವರು ಪೊಲೀಸ್ ಸಿಬ್ಬಂದಿಯೊರ್ವರಿಗೆ ಚಾಕುವಿನಿಂದ ಇರಿದು ಕೊಲೆ ಮಾಡಲು ಯತ್ನಿಸಿದಲ್ಲದೇ ಇನ್ನು ಮೂವರಿಗೆ ಹಲ್ಲೆ ಮಾಡಿದ ಪ್ರಕರಣ ಕಸಬಪೇಟ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಎಸ್.ಎಸ್, ಮೇಟಿ ಎಂಬುವರಿಗೆ ಚಾಕುವಿನಿಂದ ಇರಿಯಲಾಗಿದ್ದು, ಎಚ್. ಆರ್ ರಾಮಾಪುರ, ರಮನಜನಿಬ್, ಪಿ.ಕೆ. ಚಲವಾದಿ ಎಂಬುವರ ಮೇಲೆ ಹಲ್ಲೆ ನಡೆಸಿದ್ದಾರೆ. ಈಶ್ವರ ನಗರದ ಆಯಾನರಫೀಕ್ ಬಹದೂರ(19), ಸಮೀರ್ ಹುಚ್ಚಸಾಬನವರ(20), ತೌಫಿಕ್ ಹಾಗೂ ವಿನಾಯಕ ದುಂಡಿ ಎಂಬುವರನ್ನು ಬಂಧಿಸಿದ್ದಾರೆ. ಪೊಲೀಸರು ಪೆಟ್ರೋಲಿಂಗ್ ಮಾಡುವಾಗ ಸ್ಮಶಾನದಲ್ಲಿ ಕಾನೂನು ಬಾಹಿರ ಚಟುವಟಿಕೆ ನಡೆಸುತ್ತಿದ್ದರು. ಈ ವೇಳೆ ವಿಚಾರಣೆ ತೆರಳಿದಾಗ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ದಲಿತ ಸಮುದಾಯದಿಂದ ಕಾಂಗ್ರೆಸ್‌ಗೆ ಬೆಂಬಲ: ಶ್ರೀಧರ

ಬಾಗಲಕೋಟೆ: ಮತಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ್ ಮೇಟಿ ಇವರನ್ನು ದಲಿತ ಸಮುದಾಯದವರು ಬೆಂಬಲಿಸಲಿದ್ದಾರೆ ಎಂದು ದಲಿತ ಸಂಘರ್ಷ ಸಮಿತಿಗಳ ಮತ್ತು ದಲಿತ ಸಂಘಟನೆಗಳು ಒಕ್ಕೂಟದ ರಾಜ್ಯಾಧ್ಯಕ್ಷ ಶ್ರೀಧರ್ ಕಲಿವೀರ್ ಹೇಳಿದರು.

ನವನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಿ. ಎಚ್.ವೈ.ಮೇಟಿ ಕ್ಷೇತ್ರಕ್ಕೆ ಅಭಿವೃದ್ಧಿ ಕಾರ್ಯ ಮಾಡಿದ್ದು ಅದನ್ನು ಮುಂದುವರಿಸಿಕೊಂಡು ಹೋಗಲು ಕಾಂಗ್ರೆಸ್ ಪಕ್ಷದಿಂದ ಕಣಕ್ಕೆ ಇಳಿದಿರುವ ಉಮೇಶ ಮೇಟಿಯವರನ್ನು ದಲಿತ ಸಮುದಾಯ ಬೆಂಬಲಿಸಬೇಕು. ಬಾಗಲಕೋಟೆ ಸಮಗ್ರ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಲು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವ ಸರ್ಕಾರ ಬಾಗಲಕೋಟೆಗೆ ಮೆಡಿಕಲ್ ಕಾಲೇಜ್ ನೀಡಿದ್ದು ಇದು ಮೇಟಿ ಅವರ ಕನಸಿನ ಕೂಸಾಗಿದೆ ಎಂದು ತಿಳಿಸಿದರು.




ರಾಜ್ಯ ಸಂಚಾಲಕ ಎಂ.ಗುರುಮೂರ್ತಿ ಮಾತನಾಡಿ, ರಾಜ್ಯದ ಕಾಂಗ್ರೆಸ್ ಸರ್ಕಾರ 5 ಗ್ಯಾರಂಟಿ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ರಾಜ್ಯದ ಎಲ್ಲಾ ಜಾತಿಗಳ ಎಲ್ಲಾ ಧರ್ಮಗಳ ಜನತೆಯ ಬದುಕನ್ನು ಉತ್ತಮಪಡಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತಿರುವುದು ಮತದಾರಿಗೆ ಮನವರಿಕೆಯಾಗಿದೆ ಎಂದರು. ರಾಜ್ಯ ಸಂಘಟನಾ ಸಂಚಾಲಕ ಹನುಮಂತಪ್ಪ ಕಾಕರ್ಗಲ್ ಇದ್ದರು.

ಬಿಜೆಪಿಯವರು ಅಭಿವೃದ್ಧಿ ಮಾಡಿಲ್ಲ: ಸಚಿವ ತಿಮ್ಮಾಪುರ

ಬಾಗಲಕೋಟೆ: ರಾಜ್ಯ ಕಾಂಗ್ರೆಸ್ ಸರ್ಕಾರದ ಕಾರ್ಯಕ್ರಮಗಳಿಗೆ ಜನರ ಮೆಚ್ಚುಗೆ ವ್ಯಕ್ತವಾಗುತ್ತಿದ್ದು, ನಿರೀಕ್ಷೆಗೂ ಮೀರಿ ಲೀಡ್ ಸಿಗಲಿದೆ ಎಂದು ಅಬಕಾರಿ ಮತ್ತು ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯವರು ಯಾವತ್ತೂ ಸತ್ಯ ಹೇಳಿಲ್ಲ. ಅಭಿವೃದ್ಧಿಯಂತೂ ಮಾಡಿಲ್ಲ ಎಂದು ಟೀಕಿಸಿದರು. ಜಾತಿ, ಧರ್ಮದ ಹೆಸರಿನಲ್ಲಿ



ಕಾಂಗ್ರೆಸ್ ಯಾವತ್ತೂ ರಾಜಕೀಯ ಮಾಡಿಲ್ಲ. ಬಸವಧರ್ಮ ಪಾಲನೆ ಮಾಡೊದು ನಮ್ಮ ಕಾಂಗ್ರೆಸ್. ಗ್ಯಾರಂಟಿ ಯೋಜನೆಗಳಿಗೆ ಪ್ರಶಂಸೆ ವ್ಯಕ್ತಪಡಿಸಿರುವ ಜನರು, ಪ್ರಚಾರಕ್ಕೆ ಹೋದಲೆಲ್ಲಾ ಉತ್ತಮ ಬೆಂಬಲ ನೀಡುತ್ತಿದ್ದು, ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿಗೆ ಮತ ಹಾಕುವ ಭರವಸೆ ನೀಡುತ್ತಿದ್ದಾರೆ ಎಂದು ಹೇಳಿದರು.

ಅಪಘಾತ: ಇಬ್ಬರು ಫಾರೆಸ್ಟ್ ವಾಚರ್ಸ್ ಸಾವು

ವಿಜಯನಗರ: ಬೈಕ್‌ಗೆ ಗುದ್ದಿದ ಬುಲೇರೋ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಅರಣ್ಯ ಇಲಾಖೆಯ ಇಬ್ಬರು ಫಾರೆಸ್ಟ್ ವಾಚರ್ಸ್ ಮೃತಪಟ್ಟಿರುವ ಘಟನೆ ಹೊಸಪೇಟೆ ತಾಲೂಕಿನ ವೆಂಕಟಾಪುರ ಗ್ರಾಮದ ಬಳಿ ಸೋಮವಾರ ತಡ ರಾತ್ರಿ ಸಂಭವಿಸಿದೆ.

ಕಮಲಾಪುರ ಗ್ರಾಮದ ಕೃಷ್ಣ(26) ವೆಂಕಟಾಪುರ ಗ್ರಾಮದ ಹನುಮಂತಪ್ಪ(50) ಎಂಬುವವರು ಮೃತಪಟ್ಟಿದ್ದಾರೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದ ಅರಣ್ಯ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವಾಚರ್ಸ್, ರಾತ್ರಿ ಬೈಕ್‌ನಲ್ಲಿ ತೆರಳುತ್ತಿದ್ದಾಗ ಹಿಂಬದಿಯಿಂದ ಬಂದ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ಇಬ್ಬರೂ ಗಂಭೀರವಾಗಿ ಗಾಯಗೊಂಡಿದ್ದು, ಹೊಸಪೇಟೆಯ ಸರ್ಕಾರಿ ಉಪ ವಿಭಾಗೀಯ ಆಸ್ಪತ್ರೆಗೆ ಸಾಗಿಸಲಾಗಿದೆ. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಇಬ್ಬರೂ ಕೊನೆಯುಸಿರೆಳೆದಿದ್ದಾರೆ.

ಈ ಕುರಿತು ಮಾಹಿತಿ ತಿಳಿಯುತ್ತಿದ್ದಂತೆ ಎಸ್ಪಿ ಎಸ್.ಜಾಹ್ನವಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ



ನಡೆಸಿದರು. ಅಪಘಾತದ ಗಂಭೀರತೆಯನ್ನು ಅರಿತ ಅವರು, ಅಪಘಾತಕ್ಕೆ ಕಾರಣವಾದ ವಾಹನವನ್ನು ತಕ್ಷಣ ಪತ್ತೆ ಮಾಡುವಂತೆ ಅಧಿಕಾರಿಗಳಿಗೆಸೂಚಿಸಿದರು. ಈ ಹಿನ್ನೆಲೆಯಲ್ಲಿ ಕ್ಷಿಪ್ರ ಕಾರ್ಯಾಚರಣೆ ನಡೆಸಿದ ಹಂಪಿ ಸಿಪಿಐ ರಾಜೇಶ್ ಭಟಗುರ್ಕಿ ನೇತೃತ್ವದ ಪೊಲೀಸ್ ಸಿಬ್ಬಂದಿ ಅಪಘಾತ ಸಂಭವಿಸಿದ ಕೆಲಸವೇ ಸಮಯದಲ್ಲಿ ಡಿಕ್ಕಿ ಹೊಡೆದಿರುವ ಬುಲೇರೋ ಗೂಡ್ಸ್ ವಾಹನವನ್ನು ಪತ್ತೆ ಮಾಡಿದರು.

ಈ ಕುರಿತು ಕಮಲಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

> **ಖಾಯಂ ನೌಕರಿಗೆ ಒತ್ತಾಯ**
>
> ಅಪಘಾತದಿಂದ ಆತಂಕಗೊಂಡಿದ್ದ ಮೃತರ ಸಂಬಂಧಿಕರು ಆಸ್ಪತ್ರೆ ಎದುರು ಜಮಾಯಿಸಿದರು. ಇದರಿಂದ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣಗೊಂಡಿತ್ತು. ಇದೇ ವೇಳೆ ಆಸ್ಪತ್ರೆಗೆ ಭೇಟಿ ನೀಡಿದ ಉಪ ಅರಣ್ಯ ಸಂರಕ್ಷಣಾಧಿಕಾರಿ ಅನುಪಮಾ ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ಧೈರ್ಯ ತುಂಬಿದರು. ಕರ್ತವ್ಯದ ವೇಳೆ ಅಪಘಾತದಲ್ಲಿ ಮೃತಪಟ್ಟಿರುವ ಫಾರೆಸ್ಟ್ ವಾಚರ್‌ಗಳಾದ ಕೃಷ್ಣ ಮತ್ತು ಹನುಮಂತಪ್ಪ ಅವರ ಕುಟುಂಬಸ್ಥರಿಗೆ ಸರ್ಕಾರ ಖಾಯಂ ಉದ್ಯೋಗ ನೀಡಬೇಕು ಸೂಕ್ತ ಪರಿಹಾರ ನೀಡಬೇಕು ಎಂದು ಸಂಬಂಧಿಕರು ಒತ್ತಾಯಿಸಿದರು. ಕೃಷ್ಣ ಮತ್ತು ಹನುಮಂತಪ್ಪ ಅವರು ಹೊರಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದರಿಂದ ಸಂಬಂಧಿಸಿದ ಏಜೆನ್ಸಿಯವರು ತುಂಬಿರುವ ಇಪಿಎಫ್ ಹಣ, ಪರಿಹಾರ ದೊರೆಯಲಿದೆ. ಅಲ್ಲದೇ, ಬ್ಯಾಂಕ್ ಆಫ್ ಬರೋಡಾದಲ್ಲಿ ಉಳಿತಾಯ ಖಾತೆ ಮಾಡಿಸಿದ್ದರಿಂದ ಅವರಿಗೆ ಅಪಘಾತ ಪರಿಹಾರವಾಗಿ 1 ಕೋಟಿ ರೂ. ವರೆಗೆ ದೊರೆಯುವ ಸಾಧ್ಯತೆಗಳಿವೆ. ಜೊತೆಗೆ ಮೃತರ ಕುಟುಂಬಸ್ಥರ ಪೈಕಿ ಒಬ್ಬರನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ ಹಿಂದು ವಿರೋಧಿಗಳ ಸರ್ಕಾರ: ಯತ್ನಾಳ

ಹುಬ್ಬಳ್ಳಿ: ರಾಜ್ಯದಲ್ಲಿ ಹಿಂದು ವಿರೋಧಿಗಳ ಸರ್ಕಾರವಿದೆ. 2028 ರಾಜ್ಯದಲ್ಲಿ ಹೊಸ ಅಧ್ಯಾಯ ಬರೆಯಲಿದ್ದು, ಹಿಂದುಗಳ ಪರ ಸರ್ಕಾರ ಬರಲಿದೆ. ನಾನೇ ಮುಖ್ಯಮಂತ್ರಿಯಾಗುವೆ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಭವಿಷ್ಯ ನುಡಿದರು.

ಶ್ರೀರಾಮ ಉತ್ಸವ ಸಮಿತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಇಲ್ಲಿಯ ಆನಂದ ನಗರದ ಲಾಸ್ಟ್ ಬಸ್ ಸ್ಟಾಪ್‌ನಲ್ಲಿ ಭಾನುವಾರ ಏರ್ಪಡಿಸಿದ್ದ 12ನೇ ವರ್ಷದ ರಾಮ ನವಮಿ ಹಾಗೂ ಹನುಮ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.ನಮ್ಮದು ಜೆಸಿಬಿ ಸರ್ಕಾರ. ಪೊಲೀಸ್ ಠಾಣೆ ಬಳಿ ಇವುಗಳನ್ನು ನಿಲ್ಲಿಸುತ್ತೇವೆ. ಗೃಹ ಮಂತ್ರಿಗಳಿದ್ದೂ ಉಪಯೋಗವಿಲ್ಲ. ಪ್ರತಿಯೊಂದಕ್ಕೂ ಕಠಿಣ ಕ್ರಮ ಜರುಗಿಸಲಾಗುವುದು, ನನಗೆ ಗೊತ್ತಿಲ್ಲ. ಪರಿಶೀಲಿಸಲಾಗುವುದು ಎಂದೆಲ್ಲ ಹೇಳುತ್ತಾರೆ. ನಮ್ಮ ಸರ್ಕಾರ ಬಂದರೆ ಇವೆಲ್ಲ ಇರುವುದಿಲ್ಲ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಹಿಂದೂಗಳಿಗೆ ಯಾವುದೇ ಅನುದಾನ ಮೀಸಲಿಟ್ಟಿಲ್ಲ. ಬರೀ ಮುಸ್ಲಿಮರಿಗೆ



ಅನುದಾನ ಕೊಟ್ಟಿದ್ದಾರೆ. ನಾವು ಅಧಿಕಾರಕ್ಕೆ ಬಂದರೆ ಮುಸ್ಲಿಮರ ಮೀಸಲಾತಿಯನ್ನೇ ತೆಗೆದು ಹಾಕುತ್ತೇನೆ. ಆ ಮೀಸಲಾತಿಯನ್ನು ಹಿಂದುಳಿದವರು, ಎಸ್‌ಸಿ, ಎಸ್‌ಟಿಗೆ ಹಂಚಲಾಗುವುದು ಎಂದರು.

ವಿಧಾನಸಭೆ ಪ್ರತಿಪಕ್ಷ ನಾಯಕ ಅರವಿಂದ ಬೆಲ್ಲದ ಮಾತನಾಡಿ, ಹಿಂದುಗಳು ಈಗ ಜಾಗೃತರಾಗುತ್ತಿದ್ದಾರೆ. ಆದರೂ ಲವ್ ಜಿಹಾದ್ ಪ್ರಕರಣಗಳು ಹುಬ್ಬಳ್ಳಿಯಲ್ಲಿ ನಡೆಯುತ್ತಿದ್ದು, ಹಿಂದುಗಳು ಎಚ್ಚರಿಕೆಯಿಂದ ಇರಬೇಕು. ಲವ್ ಜಿಹಾದ್ ಬಲೆಗೆ ಬಿದ್ದ ಯುವತಿಯ ಮನೆಗೆ ಹೋಗಿದ್ದೆ. ಕಣ್ಣೀರು ಹಾಕಿದರು. ನಮ್ಮ ಮಕ್ಕಳಿಗೆ ಈಗಿನಿಂದಲೇ ಸ್ವಯಂ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ಇದಕ್ಕೂ ಮೊದಲು ಬಸನಗೌಡ ಪಾಟೀಲ ಯತ್ನಾಳ ಅವರನ್ನು ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು. ದಾರಿಯುದ್ದಕ್ಕೂ ಯತ್ನಾಳ ಅವರಿಗೆ ಹೂಮಳೆ ಗರೆಯಲಾಯಿತು.

ಪ್ರಮುಖರಾದ ಚಂದ್ರಶೇಖರ ಧವಳಗಿ, ಗೌರಿಶಂಕರ ಮೋಟ್, ಕುಮಾರ ಹಕಾರಿ, ರಮೇಶ ಕುಲಕರ್ಣಿ, ಅರುಣಕುಮಾರ ವಳಸಂಗ, ವಿ.ಕೆ.ಪಾಟೀಲ, ನಾರಾಯಣ ಮಿಸ್ಕಿನ್ ಇತರರು ಇದ್ದರು.

ರಾಷ್ಟ್ರೋತ್ಥಾನದ ಸಿಬಿಎಸ್‌ಇ ಶಾಲಾ ಕಟ್ಟಡ ಲೋಕಾರ್ಪಣೆ

ಬೆಂಗಳೂರು: ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ ಸಿಬಿಎಸ್‌ಇ ಶಾಲಾ ಸಮೂಹದ 19ನೇ ಶಾಲಾ ಕಟ್ಟಡದ ಲೋಕಾರ್ಪಣೆಯು ಎಲೆಕ್ಟ್ರಾನಿಕ್ ಸಿಟಿ 1ನೇ ಹಂತದ ಹುಲಿಮಂಗಲದಲ್ಲಿ ಸೋಮವಾರ ಜರುಗಿತು. ಶಾಲೆಯು ಜೂನ್‌ನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲಿದೆ.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಶಾಲೆಗಳು ಹೇರಳವಾಗಿದ್ದು, ಶಾಲೆಗಳು ಮುಚ್ಚುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಶಾಲೆಗಳು ದೇಶಕ್ಕೆ, ಸಮಾಜಕ್ಕೆ ಉತ್ತಮ ಸ್ತ್ರೀ-ಪುರುಷರನ್ನು ಕೊಡುವಂತಿರಬೇಕು. ಆದರೆ ಶಾಲಾ-ಕಾಲೇಜಿನ ಅಧ್ಯಾಪಕರ ನಿಯೋಜನೆ, ಶೇಕಡಾವಾರು ಫಲಿತಾಂಶದ ಮೇಲೆ ಆದರ ವಿಶ್ವಾಸಾರ್ಹತೆ ನಿರ್ಣಯವಾಗುತ್ತಿದೆ. ಭಾರತದ ಕಲ್ಪನೆಯಲ್ಲಿ ಶಾಲೆ ಇಷ್ಟೇ ಅಲ್ಲ, ನಮ್ಮ ಶಾಲೆಯಲ್ಲಿ ಇಂತಹ ವ್ಯಕ್ತಿಗಳು ಕಲಿತಿದ್ದರು ಎನ್ನುವುದರ ಮೇಲೆ ಆ ಶಾಲೆಯ ವಿಶ್ವಾಸಾರ್ಹತೆ ಅರ್ಥವಾಗುತ್ತದೆ ಎಂದು ಹೇಳಿದರು.

ಸಮಾಜದ ಒಂದು ವರ್ಗ ಅಂದಂದಿನ ಜೀವನ ಮುಗಿದರೆ ಸಾಕು ಎಂದರೆ ನಾಗರಿಕ ವರ್ಗ ತಾನು, ಮನೆ, ಮಕ್ಕಳು ಎನ್ನುತ್ತಾರೆ. ಆದರೆ, ಈ ಮಣ್ಣಿನ ಮಕ್ಕಳ ವರ್ಗ ಮಾತ್ರ ದೇಶ, ಸಮಾಜ ಎನ್ನುತ್ತದೆಯಾದರೂ ಅಂತಹವರ ಸಂಖ್ಯೆ ಸಣ್ಣದಿದೆ. ನಳಂದಾ, ತಕ್ಷಶಿಲಾ ವಿಶ್ವವಿದ್ಯಾಲಯಗಳು



ನಿಯೋಜನೆ, ಫಲಿತಾಂಶದ ಮೇಲೆ ನಿಂತಿರಲಿಲ್ಲ. ಚಾಣಕ್ಯ, ಚಂದ್ರಗುಪ್ತನನ್ನು ಕೊಟ್ಟಿದ್ದೇ ಶೇಕಡಾವಾರು ಫಲಿತಾಂಶ. ಅವೆಲ್ಲ ಕರ್ತವ್ಯದ ಕಾರಣಕ್ಕಾಗಿ ಆದ ನಿಯೋಜನೆಗಳು ಎಂದು ವಿವರಿಸಿದರು.

ವಿದ್ಯೆ ಕಲಿಯಬೇಕು, ಅಂಕತೆಗೆಯಬೇಕು ಆದರೆ ಅದೇ ಕೊನೆಯಲ್ಲ, ಸಮಾಜದಲ್ಲಿ ನಿಯಮ, ಮೌಲ್ಯ ಎನ್ನುವುದಿದೆ. ನಿಯಮಕ್ಕೆ ನಿಲ್ಲದೇ ಮೌಲ್ಯದ ಕಡೆಗೆ ಸಾಗಬೇಕು. ಭಾರತದ ಶಾಲೆಗಳು ನಿಯಮಕ್ಕೆ, ವಿದ್ಯೆಗೆ ನಿಲ್ಲದೇ ಮೌಲ್ಯ, ವಿವೇಕದ ಕಡೆಗೆ ಸಾಗುತ್ತಿದ್ದವು. ಪೋಷಕರು ಶಾಲೆಗೆ ಸೇರಿಸಿ ಅಂಕ ನಿರೀಕ್ಷೆ ಮಾಡುವುದು ಮಾತ್ರವಲ್ಲ, ಮಕ್ಕಳ ಏಳ್ಗೆಯಲ್ಲಿ ಪಾಲುದಾರರಾಗಬೇಕು. ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎನ್ನುವುದರ ತಿಳುವಳಿಕೆಯನ್ನು ಶಿಕ್ಷಣ ನೀಡಬೇಕು. ಹಂಚುವುದನ್ನು ಕಲಿಸಬೇಕು. ಮನೆಯ ವಾತಾವರಣ ಶಾಲೆಯಲ್ಲಿ, ಶಾಲೆಯ ವಾತಾವರಣ ಮನೆಯಲ್ಲಿರಬೇಕು. ಹೊರಗಿನಿಂದ ಬಂದ ಶಿಕ್ಷಕರು ಇಲ್ಲಿ ಹೊಸದನ್ನು ಕಲಿಯಬೇಕು ಎಂದು ಅಭಿಪ್ರಾಯಪಟ್ಟರು.

ರಾಷ್ಟ್ರೋತ್ಥಾನ ಶಾಲೆಯಲ್ಲಿ ವಿದ್ಯೆ ವಿವೇಕವಾಗುವುದನ್ನು ಮತ್ತು ನಿಯಮ ಮೌಲ್ಯವಾಗುವುದನ್ನು ಕಲಿಸಲಾಗುತ್ತದೆ. ಪೋಷಕರು, ಶಿಕ್ಷಕರು ಪರಸ್ಪರ ಪೂರಕವಾಗಿ ಮಕ್ಕಳನ್ನು ಬೆಳೆಸಬೇಕು. ರಾಷ್ಟ್ರೋತ್ಥಾನಕ್ಕೆ ಯಾರೂ ಮಾಲೀಕರಿಲ್ಲ, ಅದು ಸಾಮಾಜಿಕ ಸಂಸ್ಥೆ. ಪೋಷಕರು ಈ ಆಸ್ತಿಯಲ್ಲಿ ಒಂದಾಗಬೇಕು ಎಂದು ಕರೆ ನೀಡಿದರು.

ಮೈಸೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀಮುಕ್ತಿದಾನಂದ ಮಹಾರಾಜ್ ಆಶೀರ್ವಚನ ನೀಡಿ, ರಾಷ್ಟ್ರೋತ್ಥಾನ ಶಿಕ್ಷಣ ಸಂಸ್ಥೆಗಳು ಆದರ್ಶಪ್ರಾಯವಾಗಿವೆ. ನಮ್ಮ ದೇಶಕ್ಕೆ ನಿಜವಾಗಿ ನಮ್ಮ ಸಂಸ್ಕೃತಿ, ಮೌಲ್ಯ ಪರಂಪರೆಯನ್ನು ಮುಂದಿನ ಪೀಳಿಗೆಗೆ ದಾಟಿಸುವ ಶಿಕ್ಷಣ ಸಂಸ್ಥೆಗಳ ಅವಶ್ಯಕತೆಯಿದೆ. ಶಿಕ್ಷಣವು ಸಮಾಜದ ಎಲ್ಲ ಪಿಡುಗಿಗೆ ದಿವ್ಯೌಷಧ ಎನ್ನುತ್ತಾರೆ ವಿವೇಕಾನಂದರು. ಮಕ್ಕಳು ಆದರ್ಶಪ್ರಾಯರಾಗಲು ಯೋಗ್ಯ ಶಿಕ್ಷಣಬೇಕು. ಚಾರಿತ್ರ್ಯ ನಿರ್ಮಾಣ ಮಾಡುವ ಶಿಕ್ಷಣ ನಮಗೆ ಬೇಕಾಗಿದೆ. ಪ್ರತಿಯೊಬ್ಬರಲ್ಲೂ ಅಡಗಿರುವ ಮೌಲ್ಯವನ್ನು ಹೊರತರಬೇಕು. ನಮ್ಮೊಳಗಿರುವ ದೈವತ್ವದೊಡನೆ ಅನುಸಂಧಾನ ಮಾಡುವ ಶಿಕ್ಷಣಬೇಕು ಎಂದರು.

ಕಟ್ಟಡಕ್ಕೆ ಸ್ಥಳವನ್ನು ದಾನಮಾಡಿದ ಎಚ್.ಟಿ. ಸೋಮಶೇಖರ್ ರೆಡ್ಡಿ ಮತ್ತು ಅವರ ಪುತ್ರ ವಿಧಾನಪರಿಷತ್ ಸದಸ್ಯ ಎಚ್.ಎಸ್. ಗೋಪಿನಾಥರೆಡ್ಡಿ ಹಾಗೂ ಪತ್ನಿ ಗಾಯತ್ರಿ ರೆಡ್ಡಿ ಅವರನ್ನು ಗೌರವಿಸಲಾಯಿತು. ಕಟ್ಟಡ ನಿರ್ಮಾಣ ಮಾಡಿಕೊಟ್ಟ ಮೈಸೂರು ಕನ್ಸಲ್ಟೆಂಟ್ಸ್ ಪ್ರತಿನಿಧಿಗಳನ್ನು ಸನ್ಮಾನಿಸಲಾಯಿತು. ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಯುದ್ಧ ಅಂತ್ಯಕ್ಕೆ ಇರಾನ್ ಆಗ್ರಹ

ಪುಟ ೧ರಿಂದ **ಪ್ರಾದೇಶಿಕ ಉದ್ವಿಗ್ನತೆ, ಪ್ರತಿದಾಳಿ:** ಕುವೈತ್, ಯುಎಇ ಮತ್ತು ಸೌದಿ ಅರೇಬಿಯಾ ತಮ್ಮ ವಾಯು ರಕ್ಷಣಾ ವ್ಯವಸ್ಥೆಯನ್ನು ಸಕ್ರಿಯಗೊಳಿಸಿವೆ. ಇರಾನ್ ಕ್ಷಿಪಣಿಗಳು ಮತ್ತು ಡ್ರೋನ್ ದಾಳಿಗಳನ್ನು ಮುಂದುವರಿಸಿದೆ. ಇಸ್ರೇಲ್‌ನ ಹೈಫಾ ನಗರದಲ್ಲಿ ಕ್ಷಿಪಣಿ ದಾಳಿಯಿಂದ ನಾಲ್ವರು ಮೃತಪಟ್ಟಿದ್ದಾರೆ.
ಮಧ್ಯವರ್ತಿಗಳ ಯತ್ನ, ರಾಜತಾಂತ್ರಿಕ ಒತ್ತಡ: ಈಜಿಪ್ಟ್, ಪಾಕಿಸ್ತಾನ ಮತ್ತು ಟರ್ಕಿ ಮಧ್ಯವರ್ತಿಗಳಾಗಿ 45 ದಿನಗಳ ಕದನ ವಿರಾಮ ಪ್ರಸ್ತಾವನೆಯನ್ನು ಇರಾನ್, ಅಮೆರಿಕಕ್ಕೆ ನೀಡಿವೆ. ಆದರೆ, ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರರು, ಬೆದರಿಕೆಗಳ ನಡುವೆ ಮಾತುಕತೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ.
ತೈಲ ಬೆಲೆ ಏರಿಕೆ, ಆರ್ಥಿಕ ಸಂಕಷ್ಟ: ಯುದ್ಧದ ಪರಿಣಾಮವಾಗಿ ಬ್ರೆಂಟ್ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 109 ಡಾಲರ್‌ವರೆಗೆ ಏರಿಕೆಯಾಗಿದೆ. ಇದು ಯುದ್ಧ ಆರಂಭದ ನಂತರ ಸುಮಾರು 50% ಹೆಚ್ಚಳವಾಗಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಅನಿಶ್ಚಿತತೆ ಮುಂದುವರಿದಿದೆ. ಇರಾನ್ ಮಾಜಿ ವಿದೇಶಾಂಗ ಸಚಿವರು, ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆದರೆ ಸಂಪೂರ್ಣ ಪ್ರದೇಶವೇ ಕತ್ತಲೆಯಲ್ಲಿ ಮುಳುಗಬಹುದು ಎಂದು ಎಚ್ಚರಿಸಿದ್ದಾರೆ.
ಹಾರ್ಮುಜ್ ಪರಿಣಾಮ: ಟ್ರಂಪ್ ನೀಡಿದ್ದ ಗಡುವಿನ ಪ್ರಮುಖ ಅಂಶವೆಂದರೆ, ಹಾರ್ಮುಜ್ ಜಲಸಂಧಿ ತೆರೆಯುವುದು. ಸಾಮಾನ್ಯ ಪರಿಸ್ಥಿತಿಯಲ್ಲಿ ವಿಶ್ವದ ಸುಮಾರು ಐದನೇ ಭಾಗದ ತೈಲ ಸಾಗಾಟ ಇದೇ ಮಾರ್ಗದ ಮೂಲಕ ನಡೆಯುತ್ತದೆ. ಇರಾನ್ ಈ ಮಾರ್ಗದ ಮೇಲಿನ ನಿಯಂತ್ರಣ ಹೆಚ್ಚಿಸಿರುವುದರಿಂದ ತೈಲದ ಬೆಲೆಗಳು ಏರಿಕೆಯಾಗಿದ್ದು ಜಾಗತಿಕ ಆರ್ಥಿಕತೆಗೆ ಧಕ್ಕೆಯಾಗಿದೆ. ಇರಾನ್ ಮತ್ತು ಒಮಾನ್ ಅಧಿಕಾರಿಗಳು ಈ ಸಾಗರ ಮಾರ್ಗದ ನಿರ್ವಹಣೆಗೆ ಹೊಸ ವ್ಯವಸ್ಥೆ ರೂಪಿಸಲು ಚರ್ಚೆ ನಡೆಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ನಾವು ಸಾಲ ಮಾಡಿದ್ದೇವೆ ನಿಜ, ಪ್ರಧಾನಿ ಮೋದಿ ಸಾಲವನ್ನೇ ಮಾಡಿಲ್ಲವೆ? – ಡಿಕೆಶಿ
– ಆಪತ್ತಿನಲ್ಲಿ, ದೇಶದ ಹಿತಕ್ಕಾಗಿ ಸಾಲ ಮಾಡೋದು ತಪ್ಪಲ್ಲ, ತುಪ್ಪ ತಿನ್ನಲು, ಪಕ್ಷದ ಹಿತಕ್ಕಾಗಿ ಸಾಲ ಮಾಡೋದು ಸರಿಯಲ್ಲ!

ದಿನ ಭವಿಷ್ಯ

ಮೇಷ
ನಿಲ್ಲಿಸಿದ್ದ ಯೋಜನೆ ಅಥವಾ ಕಾರ್ಯಕ್ಕೆ ಮರುಚಾಲನೆ ನೀಡಿ. ಅನ್ಯರ ವಿಷಯದಲ್ಲಿ ಹಸ್ತಕ್ಷೇಪ ಮಾಡದಿರಿ. ಕೌಟುಂಬಿಕ ಸಾಮರಸ್ಯ.

ವೃಷಭ
ಹೊರಗಿನ ವ್ಯವಹಾರದಲ್ಲಿ ಹೆಚ್ಚು ವ್ಯಸ್ತ. ಆರ್ಥಿಕ ಸ್ಥಿರತೆ. ದಂಪತಿಗಳಿಗೆ ಶುಭ ಬೆಳವಣಿಗೆ. ಆಸ್ತಿ ಮಾರಾಟಕ್ಕೆ ಸೂಕ್ತ ದಿನ.

ಮಿಥುನ
ಸಹೋದ್ಯೋಗಿ ಜತೆ ಎಚ್ಚರದಿಂದ ವ್ಯವಹರಿಸಿ. ಜಗಳ, ಭಿನ್ನಮತ ಉಂಟಾದೀತು. ದೀರ್ಘಾವಧಿ ಯೋಜನೆಗೆ ಹಣ ಹೂಡಬೇಡಿ.

ಕಟಕ
ಹೊಟ್ಟೆ ಕೆಡುವ ಸಾಧ್ಯತೆ. ಆಹಾರದಲ್ಲಿ ಎಚ್ಚರ ವಹಿಸಿ. ಸಂಗಾತಿ ಜತೆ ಭಿನ್ನಾಭಿಪ್ರಾಯ. ದೇಹಾಭ್ಯಾಸ ಅತಿಯಾಗಿ ಮಾಡಬೇಡಿ.

ಸಿಂಹ
ಲಾಭವೂ ಇಲ್ಲದ ನಷ್ಟವೂ ಇಲ್ಲದ ದಿನ. ಹಣ ಗಳಿಕೆಯ ಸುಲಭ ದಾರಿಗೆ ಹೋಗದಿರಿ. ಆಪ್ತರೊಬ್ಬರು ಮನಸ್ಸಿಗೆ ನೆಮ್ಮದಿ, ಸಂತೋಷ ತರುವರು.

ಕನ್ಯಾ
ಮನೆಯವರ ಜತೆ ಅನುನಯದಿಂದ ವರ್ತಿಸಿ. ಕೋಪತಾಪ ಬೇಡ. ಮಕ್ಕಳು ಹಠಮಾರಿ ಧೋರಣೆ ತೋರುವರು. ಸಂಯಮವಿರಲಿ.

ತುಲಾ
ಆರ್ಥಿಕ ಸ್ಥಿರತೆ, ವ್ಯವಹಾರ ಹಿಗ್ಗಿಸಲು ಅವಕಾಶ. ಕೌಟುಂಬಿಕ ವಿಚಾರದಲ್ಲಿ ತುಸು ಚಿಂತೆ. ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಅಗತ್ಯ.

ವೃಶ್ಚಿಕ
ಸ್ವಂತ ವ್ಯವಹಾರ ಆರಂಭಿಸಲು ಕಾಲ ಸೂಕ್ತವಾಗಿದೆ. ವಿದ್ಯಾರ್ಥಿಗಳು ಜಡತ್ವ ಬಿಟ್ಟು ಉತ್ಸಾಹಿಗಳಾಗಬೇಕು. ಆರ್ಥಿಕ ಒತ್ತಡ ಅಂತ್ಯ.

ಧನು
ಇತರರ ಜತೆ ಮಾತನಾಡುವಾಗ ತಾಳ್ಮೆ ವಹಿಸಿ. ಸಣ್ಣ ವಿಷಯಕ್ಕೆ ರೇಗದಿರಿ. ಬಂಧುಗಳ ಜತೆ ಪ್ರವಾಸ ಹೋಗುವ ಅವಕಾಶ ಸಿಗಲಿದೆ.

ಮಕರ
ಮನಸ್ಥಿತಿ ಏರುಪೇರು ಮಾಡುವ ಬೆಳವಣಿಗೆ ಉಂಟಾದೀತು. ಎಲ್ಲವನ್ನು ಸರಿತೂಗಿಸಿಕೊಂಡು ಹೋಗಿ. ಅನ್ಯರ ತಿರಸ್ಕಾರಕ್ಕೆ ಬೆಲೆ ಕೊಡಬೇಡಿ.

ಕುಂಭ
ವೃತ್ತಿಯಲ್ಲಿ ಹೊಸ ಸವಾಲು. ಧೃತಿಗೆಡಬೇಡಿ. ಆರ್ಥಿಕ ನಷ್ಟ, ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಬಂಧು ಜತೆ ವಿರಸವಾದೀತು.

ಮೀನ
ಸಂಗಾತಿ ಜತೆ ಪ್ರಾಮಾಣಿಕತೆಯಿಂದ ವರ್ತಿಸಿ. ಮುಚ್ಚುಮರೆ ಬೇಡ. ವೃತ್ತಿಯಲ್ಲಿ ತೊಡಕು. ಗಮನವಿಟ್ಟು ಕಾರ್ಯ ನಿರ್ವಹಿಸಿ.

ರಾಹುಕಾಲ: 3.00-4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 4,7,3,1

ದಿಲ್ಲಿ ವಿಧಾನಸಭೆಯಲ್ಲಿ ಭಾರೀ ಭದ್ರತಾ ಲೋಪ

ಪುಟ ೧ರಿಂದ ಘಟನಾ ಸ್ಥಳದಿಂದ ಹೊರಬರುವ ಮುನ್ನ ಬಂಧಿತ ಸಿಂಗ್, ಸಭಾಧ್ಯಕ್ಷ ವಿಜೇಂದ್ರ ಗುಪ್ತಾ ಅವರ ಕಚೇರಿಯ ಬಳಿ ಹೂವಿನ ಪುಷ್ಪಗುಚ್ಛ ಇರಿಸಿದ್ದಾನೆಂದು ವರದಿಯಾಗಿದೆ. ಇದನ್ನು ಪ್ರಮುಖ ಭದ್ರತಾ ಉಲ್ಲಂಘನೆ ಎಂದು ಪರಿಗಣಿಸಿ, ಗಂಭೀರ ಭದ್ರತಾ ಕಳವಳಗಳನ್ನು ಹುಟ್ಟುಹಾಕಿದೆ ಎಂದು ಅಧಿಕಾರಿ ಹೇಳಿದರು. ಈ ಮಧ್ಯೆ, ವಿಧಿವಿಜ್ಞಾನ ತಜ್ಞರು ಸಭೆಯ ಆವರಣದೊಳಗೆ ಇರಿಸಲಾಗಿರುವ ಹೂವಿನ ಪುಷ್ಪಗುಚ್ಛವನ್ನು ಪರಿಶೀಲಿಸಿದ್ದಾರೆ. ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನದಳವು ಪ್ರದೇಶವನ್ನು ಕೂಲಂಕಷವಾಗಿ ಪರಿಶೀಲಿಸಿದೆ.
ಸಿಸಿಟಿವಿ ದೃಶ್ಯಾವಳಿ ಸಹಾಯದಿಂದ ಸೆರೆ: ದಿಲ್ಲಿ ಪೊಲೀಸರು ಸಿಸಿಟಿವಿ ದೃಶ್ಯಾವಳಿಗಳು ಹಾಗೂ ಇತರ ಪುರಾವೆಗಳನ್ನು ಅವಲಂಬಿಸಿ ವಾಹನವನ್ನು ಪತ್ತೆಹಚ್ಚಿ ಚಾಲಕನನ್ನು ಬಂಧಿಸಿದ್ದಾರೆ. ಅಂತೆಯೇ ಸಮಗ್ರ ತನಿಖೆ ಆರಂಭಿಸಿದ್ದಾರೆ. ಇತ್ತೀಚೆಗೆ ಮುಕ್ತಾಯಗೊಂಡ ಬಜೆಟ್ ಅಧಿವೇಶನದಲ್ಲಿ ವಿಧಾನಸಭೆಗೆ ಬಾಂಬ್ ಬೆದರಿಕೆಗಳು ಬಂದ ಬೆನ್ನಲ್ಲೇ ಈ ಘಟನೆ ಸಂಭವಿಸಿರುವುದು ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ.

ರಾಷ್ಟ್ರ ಸಂಪನ್ನವಾದರೆ ಜನರ ಪ್ರಗತಿ

ಪುಟ ೧ರಿಂದ ಹಾಗಾಗಿ ಈ ವಿಚಾರದಲ್ಲಿ ಗೊಂದಲವಿರಕೂಡದು. ಸೂಕ್ತ ಮಾರ್ಗವನ್ನು ಆಯ್ಕೆ ಮಾಡುವುದೇ ಮುಖ್ಯವೆಂದು ಕರೆ ನೀಡಿದರು. ಕಾರ್ಯಕ್ರಮದಂಗವಾಗಿ ಭಗವಾನ್ ಶ್ರೀಕೃಷ್ಣನ ಪ್ರತಿಮೆಗೆ ಸರಸಂಘಚಾಲಕರು ಪುಷ್ಪಾರ್ಚನೆ ಮಾಡಿದರು. ಬಾಲಗೋಕುಲಂ ಸಮಾವೇಶದಲ್ಲಿ ಪಾಲ್ಗೊಂಡ ಚಿಣ್ಣರೊಂದಿಗೆ ಡಾ.ಭಾಗ್ವತ್ ಅವರು ಇದೇ ವೇಳೆ ಸಂವಾದ ನಡೆಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಿವಿಮಾತು

ಯೋಜನೆ ಜನರಿಗೆ ತಲುಪಲಿ

ಬಾಗಲಕೋಟೆ: ಬೂತ್ ಮಟ್ಟದಲ್ಲಿ ನಾವು ಜನರ ಕಣ್ಣೀರನ್ನು ಒರೆಸುವ ಕೆಲಸ ಮಾಡಬೇಕು. ಹಿಂದಿನ ಬಿಜೆಪಿ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಬೇಕು ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹೇಳಿದರು.

ನವನಗರದ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಏರ್ಪಡಿಸಿದ ಬಿಜೆಪಿ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಮಾತನಾಡಿ, ಹಿರಿಯರ ಅನುಭವದ ಜೊತೆ ಯುವಕರ ಉತ್ಸಾಹ ಸೇರಿದರೆ ಸಂಘಟನೆ ಬಲಿಷ್ಠವಾಗಲು ಸಾಧ್ಯ. ನಮ್ಮದು ವಿಶ್ವದ ಅತಿ ದೊಡ್ಡ ರಾಜಕೀಯ ಪಕ್ಷ ಎಂದರು.

ಪಕ್ಷದ ಬೆಳವಣಿಗೆಗೆ ಶ್ರಮಿಸಿದ ಎಲ್ಲ ಮಹನೀಯರನ್ನು ನೆನಪಿಸಿಕೊಂಡರು. 1980ರಲ್ಲಿ ಆರಂಭವಾದ ನಮ್ಮ ಪಕ್ಷದ ಪ್ರಯಾಣ ಜನರ ಆಶೀರ್ವಾದ ಮತ್ತು ನಿಮ್ಮ ಬೆಂಬಲದಿಂದ ಇವತ್ತು ಬಲಿಷ್ಠ ಮತ್ತು ಇಷ್ಟು ಎತ್ತರಕ್ಕೆ ಬೆಳೆದಿದೆ ಎಂದು ಅವರು ತಿಳಿಸಿದರು. ಜನರೇ ನಮ್ಮ ದೇವರು, ಜನಸೇವೆಯೇ ನಮ್ಮ ಕಾಯಕ. ಅವರ ಮುಂದೆ ನಾವು ನಮ್ರವಾಗಿ ಇರಬೇಕು ಎಂದು ಸೂಚಿಸಿದರು.

ಅಟಲ್ ಬಿಹಾರಿ ವಾಜಪೇಯಿ ಅವರ ಶ್ರಮ, ಅಡ್ವಾಣಿಯವರ ಸಂಘಟನಾ ಶಕ್ತಿ ಪ್ರತಿಯೊಬ್ಬ ಕಾರ್ಯಕರ್ತನ ಹೃದಯದಲ್ಲಿದೆ. ಪಕ್ಷದ ಬೆಳವಣಿಗೆಗೆ ಅನೇಕ ಮಹನೀಯರು ಶ್ರಮಿಸಿದ್ದಾರೆ ಎಂದು ವಿವರಿಸಿದರು. ಮಾಜಿ ಸಿಎಂ ಬಸವರಾಜ ಎಸ್.ಬೊಮ್ಮಾಯಿ ಮಾಜಿ ಸಚಿವರಾದ ಸಿ.ಸಿ.ಪಾಟೀಲ್, ಬಸವರಾಜ ಮತ್ತಿಮೂಡ, ಸಿದ್ದು ಸವದಿ, ಸಿ.ಕೆ.ರಾಮಮೂರ್ತಿ, ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ ಇದ್ದರು.



ಸಿದ್ದರಾಮಯ್ಯ ಜಾತಿವಾದಿ: ಬಿ.ಎಸ್.ಯಡಿಯೂರಪ್ಪ

ಸಿದ್ದರಾಮಯ್ಯ ಜಾತಿವಾದಿಯಾಗಿದ್ದು, ಕೆಲವೇ ಜನಾಂಗವನ್ನು ಎತ್ತಿ ಹಿಡಿದು ಅಧಿಕಾರ ನಡೆಸುತ್ತಿದ್ದಾರೆ. ಬಿಜೆಪಿ ಅಧಿಕಾರದಲ್ಲಿದ್ದಾಗ ಎಲ್ಲ ಜನಾಂಗಕ್ಕೂ ಪ್ರಾಶಸ್ತ್ಯ ನೀಡಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಗಲಕೋಟೆ, ದಾವಣಗೆರೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವುದು ನಿಶ್ಚಿತ. ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ 10 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ. ಮತದಾರರು ಕಾಂಗ್ರೆಸ್ ಪಕ್ಷಕ್ಕೆ ಈ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹೇಳಿದರು. ಬಾಗಲಕೋಟೆ ಮತ್ತು ದಾವಣಗೆರೆಯ ಉಪಚುನಾವಣೆಯಲ್ಲಿ ಬಿಜೆಪಿ ಪರವಾಗಿ ಜನ ಒಲವು ತೋರಿಸುತ್ತಿದ್ದಾರೆ. ಕಳೆದ ಮೂರು ವರ್ಷದಲ್ಲಿ ಕಾಂಗ್ರೆಸ್ ಸರ್ಕಾರದ ಸಾಧನೆ ಶೂನ್ಯವಾಗಿದೆ. ಅಭಿವೃದ್ಧಿ ಕಾರ್ಯ ಯಾವುದೂ ನಡೆದಿಲ್ಲ, ಮುಖ್ಯಮಂತ್ರಿ ಕುರ್ಚಿಗಾಗಿ ಕಾದಾಡುತ್ತಿದ್ದಾರೆ ಟೀಕಿಸಿದರು.

ಶೃಂಗೇರಿ ವಿಧಾನಸಭಾ ಕ್ಷೇತ್ರ: ಅಂಚೆ ಮತ ಮರು ಎಣಿಕೆಗೆ ಹೈಕೋರ್ಟ್ ಆದೇಶ

ಪುಟ ೧ರಿಂದ ತಿರಸ್ಕೃತಗೊಂಡಿರುವ 279 ಅಂಚೆ ಮತಗಳನ್ನು ಚುನಾವಣಾಧಿಕಾರಿ ಪರಿಶೀಲಿಸಬೇಕು. ಮರುಪರಿಶೀಲಿಸುವಾಗ ಚುನಾವಣಾ ಅಧಿಕಾರಿಗಳ ಕೈಪಿಡಿ 2023ರ ಮಾರ್ಗಸೂಚಿ 15.14.7ನ್ನು ಅನೂಚಾನವಾಗಿ ಪಾಲಿಸಬೇಕು, ಅಂಚೆ ಮತಗಳು ಸಮಸ್ಯಾತ್ಮಕವಾಗಿದೆಯೇ ಎಂಬುದನ್ನು ಪತ್ತೆ ಮಾಡಬೇಕು. ಅಂಚೆ ಮತಗಳನ್ನು ಪರಿಶೀಲಿಸಿದ ಬಳಿಕ ಎಲ್ಲಾ ಅಂಚೆ ಮತಗಳನ್ನು ಮರುಎಣಿಕೆ ಮಾಡಿ ಅರ್ಜಿದಾರರು ಅಥವಾ ಪ್ರತಿವಾದಿಗಳು ಪಡೆದಿರುವ ಮತಗಳ ಫಲಿತಾಂಶ ಪ್ರಕಟಿಸಬೇಕು.

ಇದನ್ನು ಎರಡು ವಾರಗಳಲ್ಲಿ ಮಾಡಬೇಕು ಎಂದು ನ್ಯಾಯಾಲಯ ನಿರ್ದೇಶಿಸಿದೆ. ಆದೇಶದ ಪ್ರತಿಯನ್ನು ಭಾರತೀಯ ಚುನಾವಣಾ ಆಯೋಗ, ಜಿಲ್ಲಾ ಚುನಾವಣಾಧಿಕಾರಿ, ಶೃಂಗೇರಿಯ ಚುನಾವಣಾಧಿಕಾರಿಗೆ ರಿಜಿಸ್ಟ್ರಿ ಸ್ಪೀಡ್ ಪೋಸ್ಟ್ ಅಥವಾ ಇ-ಮೇಲ್ ಮೂಲಕ ಕಳುಹಿಸಿಕೊಡಬೇಕು ಎಂದು ನ್ಯಾಯಾಲಯ ಆದೇಶಿಸಿತು. ರಾಜೇಗೌಡ ಪರ ಹಿರಿಯ ವಕೀಲ ಕೆ.ಎನ್. ಫಣೀಂದ್ರ ಅವರು ಆದೇಶಕ್ಕೆ ಎರಡು-ಮೂರು ವಾರಗಳ ತಡೆ ನೀಡಬೇಕು. ಇದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು ಎಂದರು. ಇದಕ್ಕೆ ಒಪ್ಪಿದ ನ್ಯಾಯಾಲಯವು ಆದೇಶಕ್ಕೆ ಎರಡು ವಾರಗಳಿಗೆ ತಡೆ ನೀಡಿತು.

ಆದೇಶಕ್ಕೆ ತಡೆ ನೀಡುವುದಕ್ಕೆ ಜೀವರಾಜ್ ಪರ ವಕೀಲೆ ಪಿ.ಎಲ್. ವಂದನಾ ಅವರು ವಿರೋಧಿಸಿದರು. 2023ರ ವಿಧಾನಸಭಾ ಚುನಾವಣೆಯಲ್ಲಿ ಶೃಂಗೇರಿ ಕ್ಷೇತ್ರದಲ್ಲಿ 1,811 ಅಂಚೆ ಮತಗಳು ಚಲಾವಣೆಯಾಗಿದ್ದು, ಕಾಂಗ್ರೆಸ್‌ನ ರಾಜೇಗೌಡ ಅವರು 201 ಮತಗಳಿಂದ ವಿಜೇತರಾಗಿದ್ದರು.

ಬದಲಿ ನಿವೇಶನ: ಹೈಗೆ ಇಡಿ ಅರ್ಜಿ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಅಕ್ರಮವಾಗಿ ಬದಲಿ ನಿವೇಶನ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಬಿ ರಿಪೋರ್ಟ್ ಅಂಗೀಕರಿಸಿದ್ದ ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ, ಜಾರಿ ನಿರ್ದೇಶನಾಲ(ಇಡಿ)ಯ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ವಿಶೇಷ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಇ.ಡಿ. ಸೋಮವಾರವಷ್ಟೇ ಅರ್ಜಿ ಸಲ್ಲಿಸಿದ್ದು, ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಾಗಿದೆ. ಇದೇ ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣದ ದೂರುದಾರ ಸ್ನೇಹಮಯಿ ಕೃಷ್ಣ ಈಗಾಗಲೇ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯ ವಿಚಾರಣೆ ನಡೆಸಿರುವ ನ್ಯಾ. ಸುನೀಲ್ ದತ್ತ ಯಾದವ್ ಅವರಿದ್ದ ಪೀಠ, ಲೋಕಾಯುಕ್ತ ಪೊಲೀಸರು, ಜಾರಿ ನಿರ್ದೇಶನಾಲಯ (ಇ.ಡಿ), ಮುಡಾದ ಮಾಜಿ ಆಯುಕ್ತ ಜಿ.ಟಿ. ದಿನೇಶ್ ಕುಮಾರ್, ಜಮೀನಿನ ಮೂಲ ಮಾಲೀಕ ದೇವರಾಜು ಸೇರಿದಂತೆ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿದೆ.

ಬಿಎಸ್‌ವೈ ಪ್ರಚಾರ ಯಾರ ಪರ?: ಸಿಎಂ

ಪುಟ ೧ರಿಂದ ಯಡಿಯೂರಪ್ಪ ಮಾಡಿದ ನಂಬಿಕೆ ದ್ರೋಹಿ ಎಂಬ ಆರೋಪಕ್ಕೂ ಸಿಎಂ ಕಿಡಿಕಾರಿದರು. ನಾನು ಯಾರಿಗೆ ದ್ರೋಹ ಮಾಡಿದ್ದೇನೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಸುಮ್ಮನೆ ಆರೋಪ ಮಾಡಿದರೆ ಅದು ಸತ್ಯವಾಗುವುದಿಲ್ಲ ಎಂದು ತಿರುಗೇಟು ನೀಡಿದರು. ಎನ್‌ಎಸ್‌ಯುಐ ಕರಪತ್ರ ಹಂಚಿಕೆ ವಿಚಾರಕ್ಕೂ ಪ್ರತಿಕ್ರಿಯಿಸಿದ ಅವರು, ಬಿಜೆಪಿಯವರೇ ಇದರಲ್ಲಿ ಭಾಗಿಯಾಗಿರಬಹುದು. ಆದರೆ, ತಪ್ಪು ಯಾರಿಂದಾದರೂ ನಡೆದಿದ್ದರೆ ಅವರ ವಿರುದ್ಧ ಕ್ರಮವಾಗಬೇಕು ಎಂದು ಹೇಳಿದರು.

ಬಿಜೆಪಿಗೆ ಬೆಂಬಲ: ಜೋಶಿ ವಿಶ್ವಾಸ

ಪುಟ ೧ರಿಂದ ತಾಯಿ ಸಂಸದರು. ಇದರ ಜತೆಗೆ ಮಗನೂ ಶಾಸಕನಾಗಬೇಕು ಎಂದು ಟಿಕೆಟ್ ನೀಡಿದ್ದಾರೆ. ಒಂದೇ ಕುಟುಂಬಕ್ಕೆ ಮಣೆ ಹಾಕುವ ಮೂಲಕ ದಾವಣಗೆರೆಯನ್ನು ಕಬ್ಜಾ ಮಾಡಲು ಮುಂದಾಗಿದ್ದಾರೆ. ಕಾಂಗ್ರೆಸ್ ಈ ಬಾರಿಯೂ ಗೆದ್ದರೆ ಮುಂದಿನ 40 ವರ್ಷ ಕಾಂಗ್ರೆಸ್ ಪಕ್ಷದಿಂದ ಬೇರೆ ಯಾರಿಗೂ ಟಿಕೆಟ್ ಸಿಗುವುದಿಲ್ಲ ಎಂದು ಎಚ್ಚರಿಸಿದರು. ದಾವಣಗೆರೆಯಲ್ಲಿ ಬೇರೆ ಯಾರೂ ಸಮರ್ಥರೇ ಇಲ್ಲ ಎಂಬಂತೆ ಶಾಮನೂರು ಕುಟುಂಬಕ್ಕೆ ಟಿಕೆಟ್ ನೀಡಿದ್ದಾರೆ. ಸೋನಿಯಾ ಗಾಂಧಿ ಕುಟುಂಬದಂತೆ ಶಾಮನೂರು ಕುಟುಂಬವೂ ಅಧಿಕಾರದಲ್ಲಿ ಇರಬೇಕು ಎಂದು ಬಯಸಿದ್ದಾರೆ. ಈ ಕುಟುಂಬದಲ್ಲಿ ಭ್ರಷ್ಟಾಚಾರದಿಂದ ಮಾಡಿದ ಹಣವಿದೆ. ದುಡ್ಡಿನ ಬಲದಿಂದ ಪ್ರಜಾಪ್ರಭುತ್ವವನ್ನು ನಿರ್ನಾಮ ಮಾಡಲು ಹೊರಟಿದ್ದಾರೆ. ಇದನ್ನು ಜನ ಗಂಭೀರವಾಗಿ ಪರಿಗಣಿಸಬೇಕು. ಕಾಂಗ್ರೆಸ್ ಪಕ್ಷಕ್ಕೆ ಮತದಾರ ಈ ಬಾರಿ ತಕ್ಕ ಬುದ್ಧಿ ಕಲಿಸಬೇಕು ಎಂದು ಅವರು ಸಲಹೆ ನೀಡಿದರು.

ಉಪಚುನಾವಣೆ ಬಹಿರಂಗ ಪ್ರಚಾರಕ್ಕೆ ಇಂದು ತೆರೆ

ಪುಟ ೧ರಿಂದ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಕಳೆದ ಬಾರಿಯ ಉಪ ಚುನಾವಣೆಯ ರೀತಿಯಲ್ಲೇ ತಂತ್ರ ರೂಪಿಸಿ ಗೆಲ್ಲುವ ಲೆಕ್ಕಾಚಾರ ಹಾಕಿದ್ದು, ಸಂಪುಟದ ಪ್ರಭಾವಿ ಸಚಿವರಿಗೆ ಉಸ್ತುವಾರಿ ನೀಡಲಾಗಿದೆ. ಮುನಿಸಿಕೊಂಡಿದ್ದ ಸಚಿವ ಜಮೀರ್ ಅಹ್ಮದ್ ಕೂಡ ದಾವಣಗೆರೆಯಲ್ಲಿ ಪ್ರಚಾರ ಕೈಗೊಂಡಿದ್ದಾರೆ. ಬಿಜೆಪಿಯಿಂದಲೂ ಜೋರು ಪ್ರಚಾರ ನಡೆದಿದ್ದು, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ, ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರತಿಪಕ್ಷ ನಾಯಕ ಆರ್. ಅಶೋಕ ಪ್ರಚಾರ ನಡೆಸಿದ್ದಾರೆ. ಉಚ್ಚಾಟಿತ ನಾಯಕ ಯತ್ನಾಳ ಕೂಡ ಬಾಗಲಕೋಟೆ ಪ್ರಚಾರದಲ್ಲಿ ಭಾಗಿಯಾಗಿದ್ದು, ಚುನಾವಣಾ ಕಣ ರಂಗೇರಿದೆ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಬಿಜೆಪಿ ಅಭ್ಯರ್ಥಿಗಳ ಪ್ರಚಾರ ನಡೆಸಿದ್ದಾರೆ.
ಮನೆ ಮನೆ ಪ್ರಚಾರ: ಉಪಚುನಾವಣೆಯ 2ಕ್ಷೇತ್ರಗಳ ಬಹಿರಂಗ ಪ್ರಚಾರಕ್ಕೆ ಸಂಜೆ ತೆರೆ ಬೀಳಲಿದ್ದು, ನಂತರ ಮನೆ ಮನೆ ಪ್ರಚಾರಕ್ಕೆ ಮಾತ್ರ ಅವಕಾಶ ಇರಲಿದೆ. ಮತದಾರರನ್ನು ಒಲೈಸಲು ವಿವಿಧ ಪ್ರಕಾರದ ಲೆಕ್ಕಾಚಾರಗಳನ್ನು ಉಭಯ ಪಕ್ಷಗಳು ರೂಪಿಸಿವೆ.

ಎನ್‌ಐಎಗೆ ಮಾಲಾ ಘಟನೆ

ಪುಟ ೧ರಿಂದ ಘಟನೆ ದಿನವಾದ ಏ.1ರಂದು ನ್ಯಾಯಾಧಿಕಾರಿಗಳನ್ನು ಘೇರಾವ್ ಮಾಡಲಾಗಿದ್ದಾಗ, ಕೋಲ್ಕತ್ತಾ ಹೈ ಮುಖ್ಯ ನ್ಯಾಯಮೂರ್ತಿಗಳ ಕರೆ ಸ್ವೀಕರಿಸದಿರುವುದು ಗಂಭೀರ ನಿರ್ಲಕ್ಷ್ಯ ಎಂದು ಹೇಳಿದ ನ್ಯಾಯಾಲಯ, ಮುಖ್ಯ ಕಾರ್ಯದರ್ಶಿ ದುಷ್ಯಂತ್ ನಾರಿಯಾಲಾ ಅವರು ಕ್ಷಮೆ ಕೇಳಬೇಕು ಎಂದು ಸೂಚಿಸಿದೆ. ಇದು ಜಿಲ್ಲಾ ಆಡಳಿತದ ವೈಫಲ್ಯ ತೋರಿಸುತ್ತದೆ ಎಂದು ಪೀಠ ಸ್ಪಷ್ಟಪಡಿಸಿದೆ. ಅಲ್ಲದೆ, ಎಸ್‌ಐಆರ್ ಕಾರ್ಯದಲ್ಲಿ ತೊಡಗಿದ್ದ ನ್ಯಾಯಾಧಿಕಾರಿಗಳನ್ನು ಗಂಟೆಗಳ ಕಾಲ ಘೇರಾವ್ ಮಾಡಿರುವ ಘಟನೆ ಪೂರ್ವನಿಯೋಜಿತ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಪ್ರಸ್ತುತ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮತದಾರರ ಪಟ್ಟಿಯಿಂದ ಹೊರಗೊಳ್ಳಲಾದ 60 ಲಕ್ಷಕ್ಕೂ ಹೆಚ್ಚು ಆಕ್ಷೇಪಣೆಗಳನ್ನು ಪರಿಶೀಲಿಸಲು ಪಶ್ಚಿಮ ಬಂಗಾಳ, ಒಡಿಶಾ ಮತ್ತು ಜಾರ್ಖಂಡ್ ರಾಜ್ಯಗಳಿಂದ ಸುಮಾರು 700 ನ್ಯಾಯಾಧಿಕಾರಿಗಳನ್ನು ನಿಯೋಜಿಸಲಾಗಿದೆ.

ಏನಾಸಂ ಸಾಕಾರಕ್ಕೆ ಬದ್ಧ

ಪುಟ ೧ರಿಂದ **ಸವಾಲು ನಿಭಾಯಿಸಲು ಶ್ರಮ:** ನಮ್ಮ ಧ್ಯೇಯಗಳ ಸಾಕಾರ ನಿಟ್ಟಿನಲ್ಲಿ ಪ್ರಯತ್ನಗಳು ಸಾಗಿವೆ. ದೇಶವನ್ನು ಸಂಪನ್ನ ಮತ್ತು ಸ್ವಾವಲಂಬಿಯಾಗಿಸುವುದು ಬಿಜೆಪಿ ಗುರಿ ಮತ್ತು ಈ ಗುರಿಯ ಸಾಕಾರ ನಿಟ್ಟಿನಲ್ಲಿ ನಿರಂತರ ಪ್ರಯತ್ನಗಳನ್ನು ಮುಂದುವರೆಸಲಿದೆ. ಎದುರಾಗುವ ಪ್ರತಿಯೊಂದು ಸವಾಲುಗಳನ್ನು ನಿಭಾಯಿಸಲು ಬಿಜೆಪಿ ಪ್ರಾಮಾಣಿಕವಾಗಿ ಶ್ರಮಿಸುತ್ತಿದೆ ಎಂದು ಪ್ರಧಾನಿ ಹೇಳಿದರು. ಒಂದು ರಾಷ್ಟ್ರ ಒಂದು ಚುನಾವಣೆ ವ್ಯವಸ್ಥೆಯಲ್ಲಿ ಏಕಕಾಲಕ್ಕೆ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಚುನಾವಣೆ ನಡೆಸುವುದು ಮೋದಿ ಸರಕಾರದ ಆಶಯ. ಜಾತಿ ಮತ ಭೇದರಹಿತವಾಗಿ ದೇಶದ ಪ್ರತಿ ಪ್ರಜೆಗೂ ಮುಖ್ಯವಾಗಿ ವಿವಾಹ, ದತ್ತು ಸ್ವೀಕಾರ ಮತ್ತಿತರ ವಿಚಾರಗಳಲ್ಲಿ ಸಮಾನ ಕಾನೂನನ್ನು ಅನ್ವಯಿಸುವುದು ಏನಾಸಂ ಸಂಹಿತೆಯ ಧ್ಯೇಯವಾಗಿದೆ.
ನೂರಾರು ಸತ್ಕಾರ್ಯ ಸಾಕಾರ: ಬ್ರಿಟಿಷರ ಕಾಲದಿಂದಲೇ ಊರ್ಜಿತದಲ್ಲಿದ್ದ ನೂರಾರು ದೋಷಪೂರ್ಣ ಕಾಯಿದೆಗಳನ್ನು ರದ್ದುಪಡಿಸಲಾಗಿದೆ. ಹೊಸ ಸಂಸತ್ ಭವನ ನಿರ್ಮಾಣ, ಜನರಲ್ ಕೆಟಗರಿಯಲ್ಲಿ ಬಡವರಿಗೆ ಶೇ.10 ಮೀಸಲಾತಿ, ತ್ರಿವಳಿ ತಲಾಖ್ ರದ್ದತಿ, ಪೌರತ್ವ ತಿದ್ದುಪಡಿ ಕಾಯಿದೆ, ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಹೀಗೆ ಸಾಕಾರಗೊಂಡಿರುವ ಅದೆಷ್ಟೋ ನೂರಾರು ಸತ್ಕಾರ್ಯಗಳು ಬಿಜೆಪಿಯ ಪ್ರಾಮಾಣಿಕ ಪ್ರಯತ್ನಗಳ ಫಲವಾಗಿದೆ. 1994ರಲ್ಲಿ ಪ್ರಥಮವಾಗಿ ವಡೋದರಲ್ಲಿ ಮಹಿಳಾ ಮೀಸಲಾತಿಯ ಪ್ರಸ್ತಾವ ಮುಂದಿಟ್ಟದ್ದು ಕೂಡ ಬಿಜೆಪಿ ಎಂದು ಪ್ರಧಾನಿ ಮೋದಿ ಗಮನ ಸೆಳೆದರು.
ವಸುಧೈವ ಕುಟುಂಬಕಮ್: ನಮ್ಮ ಪಕ್ಷ ಸಂಘಟನೆಯಲ್ಲಿ ಮಹಿಳೆಯರಿಗೆ ಉತ್ತೇಜನವೀಯಲು ನಾವು ನಿರ್ಧರಿಸಿದ್ದೆವು ಮತ್ತು ಅಧಿಕಾರಕ್ಕೆ ಬಂದಾಕ್ಷಣ ಈ ಭರವಸೆ ಸಾಕಾರಗೊಳಿಸಿದ್ದೇವೆ. ಇನ್ನೀಗ 2029ರ ಮಹಾ ಚುನಾವಣೆಗಳ ಸಂದರ್ಭ ನಾರಿ ವಂದನ್ ಅಧಿನಿಯಮ್ (ಮಹಿಳಾ ಮೀಸಲಾತಿ ಕಾಯಿದೆ)ನ್ನು ಅನುಷ್ಠಾನಿಸಲು ನಾವು ಸಂಪೂರ್ಣ ಬದ್ಧರಿದ್ದೇವೆ. ಯುದ್ಧದ ಸಂದರ್ಭವೂ ವಸುಧೈವ ಕುಟುಂಬಕಮ್ ಸಿದ್ಧಾಂತಕ್ಕೆ ಬದ್ಧರಿರುವರು ನಾವು ಎಂದು ಪ.ಏಷ್ಯಾ ಸಂಘರ್ಷವನ್ನು ಉಲ್ಲೇಖಿಸಿ ನುಡಿದರು.

ಬಿಜೆಪಿ ಆಡಳಿತ ಶೈಲಿ ವಿಶಿಷ್ಟ

ಪುಟ ೧ರಿಂದ ಜನಸಂಖ್ಯಾ ಸ್ವರೂಪ ಬದಲಾವಣೆ, ಅಕ್ರಮ ನುಸುಳುವಿಕೆ, ಭ್ರಷ್ಟಾಚಾರ, ಪರಿವಾರ ರಾಜಕಾರಣ, ಜನರನ್ನು ಗುಲಾಮಗಿರಿ ಮನೋಸ್ಥಿತಿಯಿಂದ ಮುಕ್ತಗೊಳಿಸುವುದೇ ಇತ್ಯಾದಿ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಸರಕಾರ ಶ್ರಮ ನಿರತವಾಗಿದೆ. ದೇಶವನ್ನು ಇವೆಲ್ಲಾ ಸವಾಲುಗಳಿಂದ ಮುಕ್ತಗೊಳಿಸುವ ಹೊಣೆಗಾರಿಕೆ ಬಿಜೆಪಿಗಿದೆ ಮತ್ತು ಈ ಹೊಣೆಗಳನ್ನು ನಿಭಾಯಿಸುವ ಸಾಮರ್ಥ್ಯವಿರುವುದು ಕೂಡ ಬಿಜೆಪಿಗೆ ಮಾತ್ರ ಎಂದು ಪ್ರಧಾನಿ ಗಮನ ಸೆಳೆದರು. ಜಮ್ಮು ಕಾಶ್ಮೀರವನ್ನು ಸಂಪೂರ್ಣವಾಗಿ ದೇಶದ ಇತರ ಭಾಗಗಳೊಂದಿಗೆ ಜೋಡಿಸುವ ಪ್ರಯತ್ನಗಳಿಗೆ ತಡೆಯಾಗಿದ್ದ ಸಂವಿಧಾನದ 370ನೇ ವಿಧಿ ರದ್ದತಿ ಅಸಂಭವ ಎಂದು ಜನರು ಭಾವಿಸಿದ್ದರು. ಈ ವಿಧಿಯನ್ನು ರದ್ದುಪಡಿಸಿಯೇ ಸಿದ್ಧ ಎಂದು ನಾವು ಭರವಸೆ ನೀಡಿದ್ದೆವು ಮತ್ತು 2019ರಲ್ಲಿ ಭರವಸೆಯನ್ನು ಸಾಕಾರಗೊಳಿಸಿಬಿಟ್ಟೆವು ಎಂದು ಪ್ರಧಾನಿ ಮೋದಿ ಹೆಮ್ಮೆ ವ್ಯಕ್ತಪಡಿಸಿದರು.

ಮಿತ್ರಕೂಟ ರಾಜನೀತಿಗೆ ಎನ್‌ಡಿಎ ಮಾದರಿ

ಪುಟ ೧ರಿಂದ ಎನ್‌ಡಿಎಯು ಎಲ್ಲರ ಒಳಗೊಳ್ಳುವಿಕೆಗೆ ಅವಕಾಶವಿರುವ ಮಿತ್ರಕೂಟವಾಗಿದೆ ಮತ್ತು ಎನ್‌ಡಿಎಯ ನಿರಂತರ ವಿಸ್ತರಣೆ ಇದಕ್ಕೆ ಸಾಕ್ಷಿ. ವಲಯವಾರು ಆಶೋತ್ತರಗಳಿಗೆ ಪ್ರಾಧಾನ್ಯತೆ ನೀಡುವ ಮುಖೇನ ಎನ್‌ಡಿಎ ಕಾರ್ಯ ನಿರ್ವಹಿಸುತ್ತಿದೆ ಎಂದು ಪ್ರಧಾನಿ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು.

ಪಾಕ್ ತಾಳಕ್ಕೆ ಕುಣಿಯುವ ಕಾಂಗ್ರೆಸ್: ಮೋದಿ

ಪುಟ ೧ರಿಂದ 2016ರ ಸರ್ಜಿಕಲ್ ಸ್ಟ್ರೈಕ್ ಮತ್ತು 2025ರ ಆಪರೇಷನ್ ಸಿಂದೂರ್ ಸಂದರ್ಭದಲ್ಲೂ ಕಾಂಗ್ರೆಸ್ ಪಾಕಿಸ್ತಾನದ ಗುಣಗಾನದಲ್ಲೇ ನಿರತವಾಗಿತ್ತು ಮತ್ತು ನೆರೆ ರಾಷ್ಟ್ರದ ಅಜೆಂಡಾಗೆ ಮಹತ್ವ ನೀಡಿತ್ತು. ಪಾಕ್ ಜತೆಗಿನ ಈ ಸಖ್ಯ ದೇಶಕ್ಕೆ ಘನ ಹೊರೆಯಾಗಿದೆ ಮತ್ತು ನಾವು ಇದಕ್ಕೆ ಎಂದಿಗೂ ಅವಕಾಶ ಕೊಡಕೂಡದು ಎಂದು ಪ್ರಧಾನಿ ಮೋದಿ ಎಚ್ಚರಿಸಿದರು. ಸರಕಾರ ಮಾಜಿ ಯೋಧರಿಗೆ ಪ್ರಸ್ತುತ ಯೋಜನೆ ಜಾರಿಗೊಳಿಸುವ ಮುಖೇನ ನ್ಯಾಯ ನೀಡಿದೆ. ಇದುವರೆಗೆ 1.24ಲಕ್ಷ ಕೋಟಿ ರೂ.ಮೊತ್ತವನ್ನು ಮಾಜಿ ಸೇನಾ ಸಿಬ್ಬಂದಿಯ ಬ್ಯಾಂಕ್ ಖಾತೆಗಳಿಗೆ ಬಿಡುಗಡೆ ಮಾಡಿದೆ ಎಂದು ಪ್ರಧಾನಿ ಮಾಹಿತಿ ನೀಡಿದರು.

ಸಾಮಾಜಿಕ ಜಾಲತಾಣ ಬಿಟ್ಟು ಪ್ರಾಚೀನ ಯುದ್ಧ ಕಲೆ ಕಲಿತ ಪ್ರಣಿಕಾ ರಂಜಿನಿ

ಕಳರಿಪಯಟ್ಟುವಿನಲ್ಲಿ ಅಸಾಧಾರಣ ಸಾಧನೆ

ಅನುಷಾ ಕೆ.

ದಿಗಂತ ವಿಶೇಷ

ಬೆಂಗಳೂರು: ಇತ್ತೀಚೆಗೆ ಯುವಕರು ಸಾಮಾಜಿಕ ಜಾಲತಾಣಕ್ಕೆ ವ್ಯಾಮೋಹಿತರಾಗಿ, ಭಾರತೀಯ ಕಲೆಯ ಮೇಲೆ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಈ ನಡುವೆ ಪ್ರಾಚೀನ ಯುದ್ಧ ಕಲೆ ಕಳರಿಪಯಟ್ಟು, ಭರತನಾಟ್ಯದಲ್ಲಿ ಶ್ರೇಷ್ಠತೆ ಮೂಲಕ ಯುವ ಜನತೆಗೆ ಸಿಲಿಕಾನ್ ಸಿಟಿಯ ಪ್ರಣಿಕಾ ರಜಿನಿ ಮಾದರಿಯಾಗಿದ್ದಾರೆ.



ಭಾರತವು ಸಾವಿರಾರು ವರ್ಷಗಳ ಶ್ರೀಮಂತ ಸಾಹಿತ್ಯ, ಕಲೆ ಹಾಗೂ ಸಂಸ್ಕೃತಿಯ ತವರೂರಾಗಿದೆ. ಹಾಗೇ ಯುವಕರ ಕೈಗೆ ಈ ನೆಲದ ವಿಶಿಷ್ಟ ಸಂಸ್ಕೃತಿ, ಪರಂಪರೆ ಸೇರಿದರೆ ಭಾರತದ ಸೊಗಡು ಉಳಿಯಲು ಸಾಧ್ಯ. ಆದರೆ, ಇತ್ತೀಚೆಗೆ ಯುವಕರು ಜಾಲತಾಣಕ್ಕೆ ವ್ಯಾಮೋಹಿತರಾಗಿ, ಭಾರತೀಯ ಕಲೆ ಮೇಲೆ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಹೀಗಿರುವಾಗ ಭರತನಾಟ್ಯ, ಶಾಸ್ತ್ರೀಯ ಕಲಾತ್ಮಕತೆ ಮತ್ತು ಸಮರಶಿಸ್ತಿನ ಸಂಗಮ ಪ್ರತಿನಿಧಿಸುವ ಕಳರಿಪಯಟ್ಟುವಿನಲ್ಲಿ ಪ್ರಣಿಕಾ ರಜಿನಿ ಅಸಾಧಾರಣ ಸಾಧನೆ ಮಾಡುವ ಮೂಲಕ ಯುವ ಜನತೆಗೆ ಮಾದರಿಯಾಗಿ ಹೊರಹೊಮ್ಮುತ್ತಿದ್ದಾರೆ.

ಈ ಯುವ ಪ್ರತಿಭೆಯು ಬೆಂಗಳೂರಿನ ವೀವಾ ಸೈಂಟಿಫಿಕ್ ಪ್ರೈವೇಟ್ ಇಂಡಿಯಾ ಲಿಮಿಟೆಡ್ ಸ್ಥಾಪಕ ನಿರ್ದೇಶಕ ರಜಿನಿ ಲೋಕನಾಥನ್ ಹಾಗೂ ರಾಷ್ಟ್ರೀಯ ನೃತ್ಯ, ಕಲೆ ಮತ್ತು ಸಂಗೀತ ಸಂಸ್ಥೆ ಸ್ಥಾಪಕ ನಿರ್ದೇಶಕಿ ಪೂರ್ಣಿಮಾ ರಜಿನಿ ದಂಪತಿಯ ಪುತ್ರಿಯಾಗಿದ್ದಾರೆ. ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗೆ ಕುಮಾರಣ್ಣನ ಮಕ್ಕಳ ಮನೆಯಲ್ಲಿ ಕಲಿತು, ಪ್ರಥಮ ಪಿಯು ಅನ್ನು ರಯಾನ್ ಅಂತಾರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಣ ಪೂರೈಸಿ, ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದಾರೆ. ಎಸ್.ಎಸ್.ಎಲ್.ಸಿಯಲ್ಲಿ ಶೇ.98 ಅಂಕ ಪಡೆಯುವ ಮೂಲಕ ಪಾಠದೊಂದಿಗೆ ಪಠ್ಯೇತರ ಚಟುವಟಿಕೆಯಲ್ಲಿಯೂ ಸೈ ಅನಿಸಿಕೊಂಡಿದ್ದಾರೆ.
ಕಳರಿಪಯಟ್ಟು ಹಾಗೂ ಭರತನಾಟ್ಯದಲ್ಲಿ ಶ್ರೇಷ್ಠತೆ: ಎಂಟನೇ ವಯಸ್ಸಿನಿಂದಲೇ ಅಯೋಧನ ಗುರುಕುಲದ ಗುರು ಮನೋಜ್ ಕುಮಾರ್ ಗುರುಕ್ಕಲ್ ಅವರ ಮಾರ್ಗದರ್ಶನದಲ್ಲಿ ಕಳರಿಪಯಟ್ಟು ಅಭ್ಯಾಸ ಮಾಡುತ್ತಿದ್ದಾರೆ. ಚಾವುಟ್ಟು ಪುಂಗಿಯಲ್ಲಿ ಪರಿಣತಿ ಹೊಂದಿರುವ ಪ್ರಣಿಕಾ ವಡಕ್ಕನ್ ಕಳರಿಪಯಟ್ಟು ಕಠಿಣ ತರಬೇತಿ ಪಡೆಯುತ್ತಿದ್ದಾರೆ. ಇದರೊಂದಿಗೆ ಭರತನಾಟ್ಯ, ಚಿತ್ರಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕಲಿಕೆಗೆ ತಾಯಿಯೇ ಮೊದಲ ಗುರು ಎನ್ನುವಂತೆ ಇವರಿಗೆ ಭರತನಾಟ್ಯ ಕಲಿಕೆಯಲ್ಲಿಯೂ ತಾಯಿ ವಿದುಷಿ ಪೂರ್ಣಿಮಾ ರಜಿನಿ ಅವರ ಮಾರ್ಗದರ್ಶನದಲ್ಲಿ ನಾಲ್ಕನೇ ವಯಸ್ಸಿನಿಂದ ಭರತನಾಟ್ಯ ಅಭ್ಯಾಸ ಮಾಡುತ್ತಿದ್ದಾರೆ. ಈಗಾಗಲೇ ಜೂನಿಯರ್ ಪರೀಕ್ಷೆ ಬರೆದಿದ್ದಾರೆ.

ನಾಲ್ಕು ಬಾರಿ ರಾಷ್ಟ್ರೀಯ ಗರಿ

ಪ್ರಣಿಕಾ ಕಳರಿಪಯಟ್ಟುವಿನಲ್ಲಿ ಸತತ ನಾಲ್ಕು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದಾರೆ ಹೊರಹೊಮ್ಮಿದ್ದಾರೆ. 2023ರಲ್ಲಿ ರಾಷ್ಟ್ರೀಯ ಕಳರಿಪಯಟ್ಟು ಚಾಂಪಿಯನ್ ಶಿಪ್‌ನಲ್ಲಿ ಕಂಚಿನ ಪದಕ, 2024ರಲ್ಲಿ ಜಿಲ್ಲಾಮಟ್ಟದಲ್ಲಿ ಚಿನ್ನದ ಪದಕ, ರಾಜ್ಯಮಟ್ಟದಲ್ಲಿ ಚಿನ್ನದ ಪದಕ, ರಾಷ್ಟ್ರೀಯ ಮಟ್ಟದಲ್ಲಿ ಕಂಚಿನ ಪದಕ, 2025ರಲ್ಲಿ ಜಿಲ್ಲಾಮಟ್ಟದಲ್ಲಿ ಚಿನ್ನದ ಪದಕ, ರಾಜ್ಯಮಟ್ಟದಲ್ಲಿ ಚಿನ್ನದ ಪದಕ, ರಾಷ್ಟ್ರೀಯ ಮಟ್ಟದಲ್ಲಿ ಕಂಚಿನ ಪದಕ ಪಡೆದುಕೊಂಡಿದ್ದಾರೆ. ಜ.17,18ರವರೆಗೆ ನಡೆದ ಜೂನಿಯರ್ 18 ವರ್ಷದೊಳಗಿನ ರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಪದಕ ಪಡೆದುಕೊಂಡಿದ್ದಾರೆ.

ಕಳರಿಪಯಟ್ಟುವಿನಿಂದ ಜೀವನದಲ್ಲಿ ಶಿಸ್ತು, ಆತ್ಮವಿಶ್ವಾಸ, ದೈಹಿಕ ಮತ್ತು ಮಾನಸಿಕ ಶಕ್ತಿ ಹೆಚ್ಚಾಗಿದೆ, ಮುಂದಿನ ದಿನಗಳಲ್ಲಿ ನನಗೆ ವೈದ್ಯಳಾಗಿ, ಕಳರಿಪಯಟ್ಟು ಮತ್ತು ಭರತನಾಟ್ಯವನ್ನು ಮುಂದುವರಿಸಬೇಕೆಂದಿದ್ದೇನೆ.
■ ಪ್ರಣಿಕಾ ರಂಜಿನಿ, ಕಳರಿಪಯಟ್ಟು ಕಲಾವಿದೆ

ಅನಿಲ ಪೂರೈಕೆ ವಿಫಲ: ಸಚಿವ

•**ಬೆಂಗಳೂರು:** ರಾಜ್ಯದಲ್ಲಿ ಇಂಧನ ತೈಲ ಮತ್ತು ಅನಿಲ ಪೂರೈಕೆಯ ಸಮಸ್ಯೆಯ ಹಿನ್ನೆಲೆಯಲ್ಲಿ ಆಹಾರ ಸಚಿವ ಕೆ.ಎಚ್ ಮುನಿಯಪ್ಪ ಆತಂಕ ವ್ಯಕ್ತಪಡಿಸಿದ್ದು, ಕೇಂದ್ರ ಸರ್ಕಾರವು ಸಮಯೋಚಿತ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ವಿದೇಶಾಂಗ ನೀತಿ ಮತ್ತು ಇಂಧನ ನಿರ್ವಹಣೆಯ ನಡುವೆ ಸಮನ್ವಯದ ಕೊರತೆ ಕಾಣಿಸಿಕೊಂಡಿದ್ದು, ಅದರ ಹೊರೆ ಜನರ ಮೇಲೆ ಬಿದ್ದಿದೆ ಎಂದು ತಿಳಿಸಿದ್ದಾರೆ.



ದೇಶದಲ್ಲಿ ಎಲ್‌ಪಿಜಿ ಗ್ಯಾಸ್, ವಾಣಿಜ್ಯ ಗ್ಯಾಸ್ ಸಿಲಿಂಡರ್, ಸಿಎನ್‌ಜಿ, ಪೆಟ್ರೋಲ್ ಹಾಗೂ ಡೀಸೆಲ್ ಪೂರೈಕೆ ಮಾಡುವ ಜವಾಬ್ದಾರಿ ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಅಧೀನದಲ್ಲಿದೆ. ಪೆಟ್ರೋಲಿಯಂ, ನೈಸರ್ಗಿಕ ಅನಿಲ ಸಚಿವಾಲಯದ ಮೂಲಕ ಈ ವ್ಯವಸ್ಥೆ ನಡೆಯುತ್ತದೆ. ರಾಜ್ಯ ಸರ್ಕಾರಕ್ಕೆ ಈ ಪೂರೈಕೆಯನ್ನು ನೇರವಾಗಿ ನಿಯಂತ್ರಿಸುವ ಅಧಿಕಾರವಿಲ್ಲ ಎಂಬುದು ಸಾರ್ವಜನಿಕರು ಗಮನಿಸಬೇಕಾದ ವಿಷಯವಾಗಿದೆ ಎಂದು ಮಾಧ್ಯಮ ಹೇಳಿಕೆ ನೀಡಿದ್ದಾರೆ. ಸಿಎನ್‌ಜಿ ಕೊರತೆಯಿಂದ ಆಟೋ ಚಾಲಕರು ಸಂಕಷ್ಟದಲ್ಲಿದ್ದು, ಹೋಟೇಲ್ ಮತ್ತು ಆಹಾರ ಉದ್ಯಮಗಳು ವಾಣಿಜ್ಯ ಗ್ಯಾಸ್ ಕೊರತೆಯಿಂದ ತೊಂದರೆ ಅನುಭವಿಸುತ್ತಿವೆ ಮತ್ತು ಗೃಹಿಣಿಯರು ಅಡುಗೆ ಮಾಡಲು ಗ್ಯಾಸ್ ಸಿಗದೆ ಪರದಾಡುತ್ತಿರುವುದನ್ನು ಗಮನಿಸಿದಾಗ ಇಂಧನ ಪೂರೈಕೆಯಲ್ಲಿ ರಾಜ್ಯಗಳ ನಡುವೆ ಸಮಾನತೆ ಕಾಣುತ್ತಿಲ್ಲ ಎಂಬ ಅಂಶವೂ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ.

ಆಟೋ ಚಾಲಕರ ಮುತ್ತಿಗೆ

ರಾಜಧಾನಿಯಲ್ಲಿ ಉಂಟಾಗಿರುವ ಆಟೋ ಗ್ಯಾಸ್ ವ್ಯತ್ಯಯದಿಂದ ಕಂಗೆಟ್ಟಿರುವ ಆಟೋ ಚಾಲಕರು ಸೋಮವಾರ ಸಚಿವ ಮುನಿಯಪ್ಪ ನಿವಾಸಕ್ಕೆ ಮುತ್ತಿಗೆ ಹಾಕಿ, ಪ್ರತಿಭಟನೆ ನಡೆಸಿದರು. ಹೆಬ್ಬಾಳದ ಸಂಜಯನಗರದಲ್ಲಿರುವ ಸಚಿವರ ಮನೆ ಎದುರು ಜಮಾಯಿಸಿದ ಆಟೋ ಚಾಲಕರು ಗ್ಯಾಸ್ ಕೊಡಬೇಕು ಎಂದು ಘೋಷಣೆ ಕೂಗಿದರು.

ಆರಾಧನಾ ಮಹೋತ್ಸವ



ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲೂಕಿನ ತಾವರಕೆರೆಯಲ್ಲಿ ಶ್ರೀ ರಾಮೇಶ್ವರ ಸ್ವಾಮಿ, ಶ್ರೀ ಸಿದ್ದೇಶ್ವರ ಸ್ವಾಮಿ ದೇವಸ್ಥಾನದ ವತಿಯಿಂದ ಆಯೋಜಿಸಿದ್ದ ಕುಲದೇವತಾ ಆರಾಧನಾ ಮಹೋತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಕಾಗಿನೆಲೆ ಮಹಾಸಂಸ್ಥಾನದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಸಚಿವ ಬೈರತಿ ಸುರೇಶ್ ಉಪಸ್ಥಿತರಿದ್ದರು.

ಕರ್ನಾಟಕಕ್ಕೆ ಮೂರನೇ ಸ್ಥಾನ

•**ಬೆಂಗಳೂರು:** ಕೌಶಲ ಕ್ಷೇತ್ರದಲ್ಲಿ ಕರ್ನಾಟಕ ಈಗ ಇಡೀ ದೇಶದಲ್ಲಿ ಮುಂಚೂಣಿಯತ್ತ ಸಾಗುತ್ತಿದೆ. ಇತ್ತೀಚೆಗೆ ಗ್ರೇಟರ್ ನೋಯ್ಡಾದ ಇಂಡಿಯಾ ಎಕ್ಸ್‌ಪೋ ಮಾರ್ಟ್‌ನಲ್ಲಿ ನಡೆದ ಇಂಡಿಯಾ ಸ್ಕಿಲ್ಸ್ 2025-26ರ ರಾಷ್ಟ್ರೀಯ ಸ್ಪರ್ಧೆಯಲ್ಲಿ ಕರ್ನಾಟಕ 3ನೇ ಸ್ಥಾನ ಪಡೆದುಕೊಂಡಿದೆ.



32 ಕೌಶಲ ವಿಭಾಗದಲ್ಲಿ ನಡೆದ ಸ್ಪರ್ಧೆಗಳಲ್ಲಿ 48 ಮಂದಿ ಭಾಗವಹಿಸಿದ್ದು, ಒಟ್ಟು 29 ವಿಭಾಗದಲ್ಲಿ ಕರ್ನಾಟಕ ತನ್ನ ಹಿರಿಮೆ ಮೆರೆದಿದೆ. ಕ್ಲೌಡ್ ಕಂಪ್ಯೂಟಿಂಗ್, ಸೈಬರ್ ಸೆಕ್ಯುರಿಟಿ, ಮೆಕಾಟ್ರಾನಿಕ್ಸ್, ಸಂಯೋಜಕ ಉತ್ಪಾದನೆ ಮತ್ತು ಬೇಕರಿ ಮತ್ತು ದೃಶ್ಯ ವ್ಯಾಪಾರೀಕರಣ ಸೇರಿದಂತೆ ಹೈಟೆಕ್ ಮತ್ತು ಸೃಜನಶೀಲ ಕ್ಷೇತ್ರಗಳಲ್ಲಿ ಕರ್ನಾಟಕ ಗಮನಾರ್ಹ ಸಾಧನೆ ಮಾಡಿದೆ.

ಈ ಕುರಿತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಮಾತನಾಡಿ, ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮ (ಕೆಎಸ್‌ಡಿಸಿ)ದಿಂದ ತರಬೇತಿ ಪಡೆದ ಕರ್ನಾಟಕದ ವಿದ್ಯಾರ್ಥಿಗಳು 10 ಚಿನ್ನ, 6 ಬೆಳ್ಳಿ, 6 ಕಂಚು ಮತ್ತು 7 ಶ್ರೇಷ್ಠತೆ ಪದಕಗಳನ್ನು ಒಳಗೊಂಡಂತೆ ಒಟ್ಟು 29 ಪದಕಗಳನ್ನು ಪಡೆದುಕೊಂಡಿದ್ದಾರೆ ಎಂದು ತಿಳಿಸಿದರು. ಕರ್ನಾಟಕ ತಂಡದ ರಾಜ್ಯ ಅಧಿಕಾರಿ ಮತ್ತು ಮಾರ್ಗದರ್ಶಕ ಕ್ಯಾಪ್ಟನ್ ಕೌಸ್ತವ್ ನಾಥ್ ಮಾತನಾಡಿ, ಈ ಫಲಿತಾಂಶ ನಿಜಕ್ಕೂ ಗಮನಾರ್ಹ ಸಾಧನೆಯಾಗಿದೆ. ನಾವು ಅಪಾರ ಪ್ರತಿಭೆಯನ್ನು ತೋರಿಸಿದ್ದೇವೆ. ಮುಂದಿನ ಬಾರಿ ಅಗ್ರ ಸ್ಥಾನವನ್ನು ಪಡೆಯಲು ಉತ್ತಮ ರೀತಿಯಲ್ಲಿ ಪರಿಶ್ರಮ ಪಡುತ್ತೇವೆ ಎಂದರು.

ಕಿರುಸುದ್ದಿ

ಏ.15ರಂದು ಭೈರವೈಕ್ಯ ಮಂದಿರ ಲೋಕಾರ್ಪಣೆಗೆ ಮೋದಿ

•**ನಾಗಮಂಗಲ:** ತಾಲೂಕಿನ ಆದಿಚುಂಚನಗಿರಿ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರ ಶ್ರೀಗುರು ಭೈರವೈಕ್ಯ ಮಂದಿರವನ್ನು ಏ.15ರಂದು ಲೋಕಾರ್ಪಣೆಯನ್ನು ಪ್ರಧಾನಿ ನರೇಂದ್ರ ಮೋದಿ ಮಾಡಲಿದ್ದಾರೆ ಎಂದು ಶ್ರೀ ಮಠದ ಆಡಳಿತ ಮಂಡಳಿ ತಿಳಿಸಿದೆ. ತಾಲೂಕಿನ ಆದಿಚುಂಚನಗಿರಿ ಶ್ರೀ ಕ್ಷೇತ್ರದ ಅಧಿದೇವತೆ ಶ್ರೀ ಕಾಲಭೈರವೇಶ್ವರಸ್ವಾಮಿ ದೇವಾಲಯದ ಸಮೀಪದಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ರಾಜ್ಯದ ವಿವಿಧ ಮಠಾಧೀಶರು ಭಾಗವಹಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಉದ್ಘಾಟನಾ ಕಾರ್ಯಕ್ರಮದ ಸ್ಥಳ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿ ಡಾ.ಕುಮಾರ್ ಹಾಗೂ ಎಸ್ಪಿ ಡಾ.ಶೋಭಾರಾಣಿ ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.



ಪೊಲೀಸರಿಂದ 862ಕೆಜಿ ಮಾದಕ ವಸ್ತು ನಾಶ

•**ಹಾರೋಹಳ್ಳಿ:** ಮೈಸೂರು ದಕ್ಷಿಣ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರಕರಣವೊಂದರಲ್ಲಿ ವಶಪಡಿಸಿಕೊಂಡಿದ್ದ 862.853ಕೆಜಿ ಮಾದಕ ವಸ್ತುವನ್ನು ಹಾರೋಹಳ್ಳಿ ಕೈಗಾರಿಕಾ ಪ್ರದೇಶದ ಇನ್ಯಾನೋ ಇನ್ಸಿನ್‌ಟೆಕ್ ಕಾರ್ಖಾನೆ ಯಲ್ಲಿ ನಾಶಪಡಿಸಲಾಯಿತು. ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಇನ್ಯಾನೋ ಇನ್ಸಿನ್‌ಟೆಕ್ ಕಾರ್ಖಾನೆಯಲ್ಲಿ ಅಪಾರ ಪ್ರಮಾಣದ ಮಾದಕ ವಸ್ತುಗಳನ್ನು ನಾಶಪಡಿಸಲಾಗಿದ್ದು ಮೈಸೂರು ದಕ್ಷಿಣ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದರು. ಮೈಸೂರು ದಕ್ಷಿಣ ಪೊಲೀಸರು ಮನೆ ಮನೆಗೆ ಪೊಲೀಸರು ಎಂಬ ವಿಶೇಷ ಅಭಿಯಾನವನ್ನು ಹಮ್ಮಿಕೊಂಡಿದ್ದ ವೇಳೆಯಲ್ಲಿ ಈ ಪ್ರಕರಣ ಪತ್ತೆಯಾಗಿದ್ದು, ಮೈಸೂರು ಜಿಲ್ಲೆಯ ಎಸ್.ಪಿ. ಮಲ್ಲಿಕಾರ್ಜುನ ಬಾಲದಂಡಿಯವರ ನೇತೃತ್ವದಲ್ಲಿ ವಿಶೇಷ ಕಾರ್ಯಾಚರಣೆಯನ್ನು ನಡೆಸಿ 862ಕೆಜಿ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು ಎಂದು ಪೊಲೀಸರು ಮಾಹಿತಿ ನೀಡಿದರು. ಇನ್ನು ಮಾದಕ ವಸ್ತುಗಳನ್ನ ನಾಶಪಡಿಸುವ ಸಲುವಾಗಿ ನ್ಯಾಯಾಲಯದಿಂದ ಅನುಮತಿಯನ್ನು ಪಡೆಯಲಾಗಿದ್ದು ಮೈಸೂರು ಜಿಲ್ಲೆಯ ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ, ಸದಸ್ಯರಾದ ಎಲ್.ನಾಗೇಶ್, ಡಿವೈಎಸ್‌ಪಿ ಟಿ.ಬಿರಾಜಣ್ಣ ನೇತೃತ್ವದಲ್ಲಿ ಸಭೆ ನಡೆಸಿ ಹಾರೋಹಳ್ಳಿ ಕೈಗಾರಿಕಾ ಪ್ರದೇಶದ ಇ ನ್ಯಾನೋ ಇನ್‌ಸಿನ್‌ಟೆಕ್ ಕಾರ್ಖಾನೆಯಲ್ಲಿ ಮಾದಕ ವಸ್ತುಗಳನ್ನು ನಾಶಪಡಿಸಲು ತೀರ್ಮಾನಿಸಲಾಯಿತು. ಅದರಂತೆ ಹೆಚ್ಚುವರಿ ಪೊಲೀಸ್ ಅಧೀಕ್ಷಕ ನಾಗೇಶ್ ಅವರ ನೇತೃತ್ವದಲ್ಲಿ ಮಾದಕ ವಸ್ತುಗಳನ್ನು ನಾಶಪಡಿಸಲಾಯಿತು.

ಸಚಿವ ಜಮೀರ್‌ಗೆ ಎಐಸಿಸಿ ಮಟ್ಟದಲ್ಲಿ ಸ್ಥಾನಮಾನ

•**ಬೆಂಗಳೂರು:** ಸಚಿವ ಜಮೀರ್ ಅಹಮದ್ ಅವರನ್ನು ಎಐಸಿಸಿ ಅಲ್ಪಸಂಖ್ಯಾತರ ಘಟಕದ ಸಲಹಾ ಪರಿಷತ್‌ನ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ತಾರೀಖ್ ಅನ್ವರ್, ಸಲ್ಮಾನ್ ಖುರ್ಶಿದ್, ಅಭಿಷೇಕ್ ಮನು ಸಿಂಗ್ವಿ, ಇಮ್ರಾನ್ ಪ್ರತಾಪ್ ಗಡಿ ಅವರು ಎಐಸಿಸಿ ಅಲ್ಪಸಂಖ್ಯಾತರ ಘಟಕದ ಸಲಹಾ ಪರಿಷತ್‌ನಲ್ಲಿ ಇದ್ದು, ಜಮೀರ್ ಅಹಮದ್‌ಗೆ ಎಐಸಿಸಿ ಮಟ್ಟದಲ್ಲಿ ಮಹತ್ವದ ಸ್ಥಾನಮಾನ ದೊರೆತಿದೆ.

ಕೊಟ್ಟ ಕುದುರೆ ಏರದವನು ವೀರನೂ ಅಲ್ಲ, ಶೂರನೂ ಅಲ್ಲ

ಅಸ್ತಿತ್ವಕ್ಕಾಗಿ ಬಿಜೆಪಿ ಯತ್ನ: ಸಿಎಂ

•**ದಾವಣಗೆರೆ:** ಈಗ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಬಿಜೆಪಿ ಸೇರಿರುವವರೆಲ್ಲರೂ ಈ ಹಿಂದೆ ಬಿಜೆಪಿ, ಆರೆಸ್ಸೆಸ್, ಮೋದಿಯವರ ಬಗ್ಗೆ ಏನೇನು ಮಾತಾಡಿದ್ದಾರೆ? ಇವರಿಗೆಲ್ಲಾ ನಮ್ಮನ್ನು ಟೀಕಿಸುವ ಯಾವ ನೈತಿಕತೆ ಇದೆ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.



ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ಹೆಚ್.ಡಿ.ದೇವೇ ಗೌಡರು, ಹೆಚ್.ಡಿ.ಕುಮಾರಸ್ವಾಮಿ, ಚಲವಾದಿ ನಾರಾಯಣಸ್ವಾಮಿ ಮೊದಲೆಲ್ಲಾ ಬಿಜೆಪಿ, ಆರೆಸ್ಸೆಸ್, ಮೋದಿಯವರ ಬಗ್ಗೆ ಎಂತೆಂಥಾ ಮಾತಾಡಿದ್ದಾರೆ ಗೊತ್ತಾ? ಚಲವಾದಿ ನಾರಾಯಣಸ್ವಾಮಿ ಮೊದಲು ಕಾಂಗ್ರೆಸ್ಸಿನಲ್ಲಿದ್ದು ಲಾಭ ಪಡೆದರು. ಈಗ ಬಿಜೆಪಿಗೆ ಹೋಗಿ ಅಲ್ಲೂ ಲಾಭ ಮಾಡಿ ಕೊಂಡಿದ್ದಾರೆ. ದೇವೇಗೌಡರು, ಕುಮಾರಸ್ವಾಮಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಈಗ ಬಿಜೆಪಿ ಜೊತೆ ಸೇರಿದ್ದಾರೆ. ಅವರೆಲ್ಲಾ ಬಿಜೆಪಿ, ಆರೆಸ್ಸೆಸ್ ಬಗ್ಗೆ ಏನೇನು ಮಾತಾಡಿದ್ದಾರೆ ಎಂಬುದನ್ನು ನೆನಪಿಸಿಕೊಳ್ಳಲಿ ಎಂದರು.

ನಾನು ಜೆಡಿಎಸ್ ಅಧ್ಯಕ್ಷನಾಗಿದ್ದಾಗ 59 ಸೀಟ್ ಗೆದ್ದಿದ್ದೆವು. ಅನಂತರ ಅಷ್ಟು ಸೀಟ್ ಗೆಲ್ಲಲೇ ಇಲ್ಲ. ಈಗ 19 ಸ್ಥಾನಕ್ಕೆ ಇಳಿದಿದ್ದಾರೆ. ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಕಾಂಗ್ರೆಸ್ ಸಹಕರಿಸುತ್ತಿಲ್ಲ ಎನ್ನುವ ಕುಮಾರಸ್ವಾಮಿಯದ್ದು ಕೊಟ್ಟ ಕುದುರೆಯನ್ನು ಏರದವನು ವೀರನೂ ಅಲ್ಲ, ಶೂರನೂ ಅಲ್ಲ ಎಂಬಂತಹ ಸ್ಥಿತಿ ಎಂದು ಅವರು ವ್ಯಂಗ್ಯವಾಡಿದರು.

ನಾವು ಕುಟುಂಬ ರಾಜಕಾರಣ ಮಾಡಲ್ಲ, ಜನರೇ ನಮ್ಮನ್ನು ಕರೆ ತಂದು ಚುನಾವಣೆಗೆ ನಿಲ್ಲಿಸಿದ್ದಾರೆ ಎನ್ನುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಗ ಚನ್ನಪಟ್ಟಣದಲ್ಲಿ ಸೋತಿದ್ದು ಏಕೆ? ಜನ ಬಯಸಿದಾಗ ಚುನಾವಣೆಗೆ ಸ್ಪರ್ಧಿಸುವುದು ತಪ್ಪಲ್ಲ, ಜನ ತಿರಸ್ಕರಿಸಿದಾಗಲೂ ಆ ರೀತಿ ಮಾತಾಡುತ್ತಾರಲ್ಲಾ? ಎಂದು ಅವರು ತಿರುಗೇಟು ನೀಡಿದರು.

ಉಪಚುನಾವಣೆ ಗೆಲ್ಲಲು ಕಾಂಗ್ರೆಸ್ ಹರಸಾಹಸ

•**ದಾವಣಗೆರೆ:** ರಾಜ್ಯದಲ್ಲಿ ನಡೆಯುತ್ತಿರುವ ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗಳು ಕಾಂಗ್ರೆಸ್ ಸರ್ಕಾರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು. ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿಗಳ ಮುಖವಾಡದ ಹಿಂದೆ ಜನರನ್ನು ಮರುಳಾಗಿಸಲು ಯತ್ನಿಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಈ ಉಪಚುನಾವಣೆಗಳು ಕಬ್ಬಿಣದ ಕಡಲೆಯಾಗಿವೆ. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳನ್ನು ಉಳಿಸಿಕೊಳ್ಳುವ ಒತ್ತಡದಲ್ಲಿ ಮುಖ್ಯಮಂತ್ರಿ ಮತ್ತು ಸಚಿವರು ತಬ್ಬಿಬ್ಬಾಗಿದ್ದಾರೆ. ಚುನಾವಣೆಯು ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಿದ್ದೆ ಕದಡಿದ್ದು, ಈ ಕ್ಷೇತ್ರಗಳನ್ನು ಗೆಲ್ಲಲು ಮುಖ್ಯಮಂತ್ರಿ ಹರಸಾಹಸ ಪಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು. ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಯಾವುದೇ ಗಮನಾರ್ಹ ಅಭಿವೃದ್ಧಿ ಕೆಲಸಗಳು ನಡೆದಿಲ್ಲ. ಗ್ಯಾರಂಟಿ ಯೋಜನೆಗಳನ್ನೇ ಮುಂದಿಟ್ಟುಕೊಂಡು, ಅವುಗಳನ್ನೇ ಅಭಿವೃದ್ಧಿ ಅಂತಾ ಬಿಂಬಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಮುಖ್ಯಮಂತ್ರಿ ಮತ್ತು ಸಚಿವರು ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತಿದ್ದಾರೆ. ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅನುಭವ ರಾಜ್ಯದ ಅಭಿವೃದ್ಧಿಗೆ ಪ್ರಯೋಜನವಾಗುತ್ತಿಲ್ಲ. ಅಹಿಂದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಸರ್ಕಾರವು ಹಿಂದುಳಿದ ವರ್ಗಗಳನ್ನು ನಿರ್ಲಕ್ಷಿಸಿದೆ. ವಿಶೇಷವಾಗಿ ಅಲ್ಪಸಂಖ್ಯಾತರನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿದರು.



ಬಿಜೆಪಿ ಗ್ಯಾರಂಟಿ ವಿರೋಧಿ

ಜನರು ಕಾಂಗ್ರೆಸ್ಸಿನ ಗ್ಯಾರಂಟಿ ಯೋಜನೆಗಳನ್ನು ಮೆಚ್ಚಿಕೊಂಡಿದ್ದಾರೆ. ಬಿಜೆಪಿ ಗ್ಯಾರಂಟಿಗಳನ್ನು ವಿರೋಧಿಸುತ್ತಿದೆ. ಹೀಗೆ ಬಡವರ ವಿರೋಧಿ, ಸಂವಿಧಾನ ವಿರೋಧಿಯಾಗಿರುವ ಬಿಜೆಪಿಯನ್ನು ಬೆಂಬಲಿಸಲು ರಾಜ್ಯದ ಜನರಿಗೆ ಕಾರಣವೇ ಇಲ್ಲ ಎಂದರಲ್ಲದೆ, ಸಚಿವ ಜಮೀರ್ ಅಹಮದ್ ಕೇರಳ, ಬಾಗಲಕೋಟೆ ಸೇರಿ ಎಲ್ಲಾ ಕಡೆ ಕೆಲಸ ಮಾಡಿದ್ದಾರೆ. ಹಾಗೆಯೇ ದಾವಣಗೆರೆಗೂ ಬಂದು ಪ್ರಚಾರ ಮಾಡಿ ಹೋಗಿದ್ದಾರೆ. ಜಮೀರ್ ಪಕ್ಷದ ಸಿಪಾಯಿಯಾಗಿದ್ದು, ಕಾಂಗ್ರೆಸ್ ಪರವಾಗಿ ಮತದಾರರಿಗೆ, ಕಾರ್ಯಕರ್ತರಿಗೆ ಸ್ಪಷ್ಟ ಸಂದೇಶ ನೀಡಿದ್ದಾರೆ ಎಂದು ಅವರು ಸಮರ್ಥಿಸಿಕೊಂಡರು.

ಸಿದರಾಮಯ್ಯ ಇನ್ನೂ 2 ವರ್ಷ ಸಿಎಂ: ಪರಂ

•**ಮೈಸೂರು:** ಇನ್ನೂ ಎರಡು ವರ್ಷಗಳ ಕಾಲ ಸಿದ್ದರಾಮಯ್ಯನವರೇ ಸಿಎಂ ಆಗಿ ಮುಂದುವರಿ ಯಲಿದ್ದಾರೆ. 5 ವರ್ಷಗಳ ಅಧಿಕಾರದ ಅವಧಿಯನ್ನು ಪೂರ್ಣಗೊಳಿಸಲಿದ್ದಾರೆ ಎಂದು ಗೃಹ ಸಚಿವ ಪರಮೇಶ್ವರ್ ಹೇಳಿದರು.



ಸೋಮವಾರ ಖಾಸಗಿ ಕಾರ್ಯಕ್ರಮವೊಂದಕ್ಕಾಗಿ ಮೈಸೂರಿಗೆ ಆಗಮಿಸಿದ್ದ ಸುದ್ದಿಗಾರರೊಂದಿಗೆ ಮಾತನಾಡಿ, ಈಗ ಸಿದ್ದರಾಮಯ್ಯನವರು ಸಿಎಂ ಆಗಿದ್ದಾರೆ. ಇನ್ನೂ 2 ವರ್ಷ ಅವರೇ ಮುಖ್ಯಮಂತ್ರಿಯಾಗಿ ಇರುತ್ತಾರೆ. 2013ರಲ್ಲಿ ಸಿದ್ದರಾಮಯ್ಯ 5 ವರ್ಷ ಸಿಎಂ ಎಂದು ಹೈಕಮಾಂಡ್ ಘೋಷಣೆ ಮಾಡಿರಲಿಲ್ಲ, ಆದರೂ ಅವರು 5 ವರ್ಷ ಸಿಎಂ ಆಗಿದ್ದರು. 2023ರಲ್ಲಿ ಸಿದ್ದರಾಮಯ್ಯ ಸಿಎಂ ಎಂದು ಹೈಕಮಾಂಡ್ ಘೋಷಣೆ ಮಾಡಿತ್ತು. ಅದರ ಅಧಿಕಾರದ ಅವಧಿ 2028,. ಅದನ್ನ ಮುಗಿಸಬೇಕು ತಾನೇ. ಹೈಕಮಾಂಡ್ ನೀವೇ 5 ವರ್ಷ ಸಿಎಂ ಎಂದು ಪ್ರತ್ಯೇಕವಾಗಿ ಸಿದ್ದರಾಮಯ್ಯನವರಿಗೆ ಸ್ಪಷ್ಟೀಕರಣ ಕೊಡುವ ಅವಶ್ಯಕತೆ ಇಲ್ಲ, ಹೈಕಮಾಂಡ್ ಯಾವ ಗೊಂದಲಗಳನ್ನ ಸೃಷ್ಟಿ ಮಾಡಿಲ್ಲ, ಯಾರು ಏನೇ ಹೇಳಿದರು ಅದು ಮುಖ್ಯ ಅಲ್ಲ.

ಹೈಕಮಾಂಡ್ ಯಾವತ್ತಾದರೂ ಸಿದ್ದರಾಮಯ್ಯ ಅವಧಿ ಇಷ್ಟು ಎಂದು ಹೇಳಿದ್ಯಾ? ಯಾವತ್ತಾದರೂ ಬದಲಾವಣೆ ಬಗ್ಗೆ ಮಾತನಾಡಿದ್ದಾರಾ?. ಅದರ ಅರ್ಥ ಆ ರೀತಿಯ ಯಾವ ಬೆಳವಣಿಗೆ ಇಲ್ಲ ಎಂದು. ಸಿಎಂ ಸ್ಥಾನ ಬದಲಾವಣೆ ಮಾಡಬೇಕಾಗಿರುವುದು ಹೈಕಮಾಂಡ್. ಅಲ್ಲಿಯವರೆಗೆ ಯಾರು ಏನೇ ಮಾತನಾಡಿದರೂ, ಅದು ಅವರ ವೈಯಕ್ತಿಕ ಹೇಳಿಕೆಯ ಅಭಿಪ್ರಾಯವಷ್ಟೇ. ಅಭಿಮಾನಿಗಳು ಸಾಮಾನ್ಯವಾಗಿ ಅವರ ನಾಯಕರು ಸಿಎಂ ಆಗಲೆಂದು ಆಸೆಪಡುತ್ತಾರೆ. ಸದ್ಯ ಸಿಎಂ ಹುದ್ದೆ ಖಾಲಿ ಇಲ್ಲ ಎಂದರು.

ಎಲ್ಲಾ ಶಾಸಕರು ಸಿಎಂ ಸ್ಥಾನಕ್ಕೆ ಅರ್ಹರು

ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ, ಡಿಸಿಎಂ ಆಗಿದ್ದಾರೆ. ಅವರು ನಮ್ಮ ನಾಯಕರು. ಅವರಿಗೆ ಯಾವ ಸಮಸ್ಯೆಯೂ ಆಗಿಲ್ಲ. ಸಿಎಂ ಸಿದ್ದರಾಮಯ್ಯನವರೇ ವಿಧಾನಸಭೆಯಲ್ಲೇ ನಮ್ಮ ಎಲ್ಲಾ ಶಾಸಕರು ಸಿಎಂ ಸ್ಥಾನಕ್ಕೆ ಅರ್ಹರು ಎಂದು ಹೇಳಿದ್ದಾರೆ. ಆದರಲ್ಲಿ ನಾನು ಅರ್ಹ, ಇನ್ನೊಬ್ಬರು ಎಂಬ ಪ್ರಶ್ನೆಯೇ ಬರುವುದಿಲ್ಲ ಎಂದರು. 2 ವಿಧಾನ ಸಭಾ ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಯ ಫಲಿತಾಂಶಕ್ಕೂ ಬೇರೆ ವಿಚಾರಕ್ಕೆ ಸಂಬಂಧವೇ ಇಲ್ಲ, ಈ ಉಪಚುನಾವಣೆ ಫಲಿತಾಂಶ ರಾಜ್ಯ ರಾಜಕೀಯದ ದಿಕ್ಸೂಚಿ ಅಲ್ಲ. ಉಪಚುನಾವಣೆಯ ಫಲಿತಾಂಶ ರಾಜ್ಯ ಸರ್ಕಾರಕ್ಕೆ ನೀಡುವ ಮಾರ್ಕ್ಸ್ ಕೂಡ ಅಲ್ಲ, ಆದರ ಫಲಿತಾಂಶದ ಮೇಲೆ ಯಾವ ಬದಲಾವಣೆಯೂ ಆಗುವುದಿಲ್ಲ ಎಂದರು.

ಕೈಗೆ ಸೋಲುವ ಭಯ: ಅಶೋಕ

•**ಬೆಂಗಳೂರು:** ದಾವಣಗೆರೆ ದಕ್ಷಿಣ, ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿಗೆ ದೊಡ್ಡ ಅಂತರದ ಗೆಲುವು ಸಿಗಲಿದೆ. ಕಾಂಗ್ರೆಸ್‌ಗೆ ಎರಡೂ ಕಡೆ ಸಮಸ್ಯೆಗಳಿವೆ. ದಾವಣಗೆರೆಯಲ್ಲಿ ಮುಸ್ಲಿಮರು ಮತ ಹಾಕುವುದಿಲ್ಲ ಎನ್ನುತ್ತಿದ್ದಾರೆಂದು ಪ್ರತಿಪಕ್ಷದ ನಾಯಕ ಆರ್. ಅಶೋಕ ತಿಳಿಸಿದರು.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೋಲುವ ಸುಳಿವು ಸಿಕ್ಕ ಕೂಡಲೇ ಕೇರಳಕ್ಕೆ ಹೋದ ಮುಖ್ಯಮಂತ್ರಿ ಬಾಗಲಕೋಟೆಗೆ ದೌಡಾಯಿಸಿದ್ದಾರೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಮಾಡಿದ್ದರೆ, ಗ್ಯಾರಂಟಿಗಳನ್ನು ಸರಿಯಾಗಿ ಕೊಟ್ಟಿದ್ದರೆ ಇಷ್ಟು ಕಷ್ಟ ಯಾಕೆ ಪಡಬೇಕಿತ್ತು? ಇವರು ಅಭಿವೃದ್ಧಿ ಮಾಡಿದ್ದರೆ ಜನರೇ ಹತ್ತಿರ ಬಂದು ನಿಮಗೆ ಮತ ಹಾಕುತ್ತೇವೆ ಎನ್ನುತ್ತಿದ್ದರು. ಆದರೆ ಹಾಗೆ ಇಲ್ಲ, ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಏನೂ ಆಗಿಲ್ಲ. ಅಭಿವೃದ್ಧಿ ಶೂನ್ಯವಾಗಿದೆ. ಸಾಲಗಾರರ ರಾಜ್ಯವನ್ನಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿದರು. ಅಭಿವೃದ್ಧಿ ಹೋಗಲಿ; ಗ್ಯಾರಂಟಿ ಸಹ ಸರಿಯಾಗಿ ಕೊಡಲಿಲ್ಲ, ಅನ್ನಭಾಗ್ಯವನ್ನು ಕನ್ನಭಾಗ್ಯ ಮಾಡಿದ್ದಾರೆ. ಕಾಂಗ್ರೆಸ್ ಅಭಿವೃದ್ಧಿ ವಿರೋಧಿ ಆಗಿರುವುದಿಂದ ಜನರೇ ಪಾಠ ಕಲಿಸಲಿದ್ದಾರೆ ಎಂದು ವಿಶ್ಲೇಷಿಸಿದರು.

ಎರಡೂ ಕಡೆ ಕಾಂಗ್ರೆಸ್‌ನವರೇ ಬಂದು ಒಳಗೊಳಗೆ ಬಿಜೆಪಿ ಪರ ಪ್ರಚಾರ ಮಾಡುತ್ತಿದ್ದಾರೆ. ದಾವಣಗೆರೆಯಲ್ಲಿ ಬಡವರನ್ನು ಗೆಲ್ಲಿಸಿ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ದಾವಣಗೆರೆಯ ಬಿಜೆಪಿ ಅಭ್ಯರ್ಥಿ ಬಡವರು. ಆದ್ದರಿಂದ ಸಿದ್ದರಾಮಯ್ಯ ಸಹ ನಮ್ಮ ಪರ ಪ್ರಚಾರ ಮಾಡಿದ್ದಾರೆ ಎಂದು ಹೇಳಿದರು.

ಇಡೀ ದೇಶಕ್ಕೆ ಅಡುಗೆ ಅನಿಲ ಸಮಸ್ಯೆ

ಅಡುಗೆ ಅನಿಲ ಸಮಸ್ಯೆ ಇಡೀ ದೇಶಕ್ಕೆ ಆಗಿದೆ. ನಮ್ಮ ದೇಶದಲ್ಲಿ ಮಾತ್ರವಲ್ಲ. ರಾಹುಲ್ ಗಾಂಧಿ ಅವರು ಮೆಚ್ಚುವ ದೇಶ ಪಾಕಿಸ್ತಾನದಲ್ಲಿ ಪೆಟ್ರೋಲ್ 500 ರೂ. ಆಗಿದೆ. ಇದೆಲ್ಲ ತಿಳಿಯದ ಡಿ.ಕೆ. ಶಿವಕುಮಾರ್ ಅವರು ಗ್ಯಾಸ್ ಸಮಸ್ಯೆಗೆ ಪ್ರಧಾನಿ ಮೋದಿ ಕಾರಣ ಎಂದು ಟೀಕೆ ಮಾಡುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೊಲ್ಲಿ ರಾಷ್ಟ್ರಗಳಲ್ಲಿ ಯುದ್ಧ ಇದ್ದರೂ ಇರಾನ್ ಜೊತೆ ಮಾತನಾಡಿ ಹಡಗುಗಳು ಭಾರತಕ್ಕೆ ಬರುವಂತೆ ಪ್ರಧಾನಿ ಮೋದಿ ಮಾಡಿದ್ದಾರೆ. ಹರ್ಮುಜ್ ಜಲಸಂಧಿಯಿಂದ ಸಮಸ್ಯೆಯಾಗಿದೆ. ಬೇರೆ ದೇಶದ ಹಡಗುಗಳಿಗೆ ಬಿಡುತ್ತಿಲ್ಲ. ಆದರೆ, ಭಾರತದ ಹಡಗುಗಳಿಗೆ ಅನುಮತಿ ನೀಡಿದ್ದಾರೆ. ಇದು ಕೇಂದ್ರ ಸರ್ಕಾರದ ಪ್ರಯತ್ನದಿಂದ ಸಾಧ್ಯವಾಗಿದೆ. ಇಷ್ಟೆಲ್ಲ ಆದರೂ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರು ಬೆಂಕಿ ಹಚ್ಚಲು ಕಾಯುತ್ತಿದ್ದಾರೆ ಎಂದರು.

ಡ್ರಗ್ಸ್ ಮುಕ್ತ ಭಾರತಕ್ಕಾಗಿ ಸಂಕಲ್ಪ ತೊಡಿ



•**ಕಲಬುರಗಿ:** ಸಮಾಜದ ಬಲವರ್ಧನೆಗಾಗಿ ಕುಟುಂಬ ವ್ಯವಸ್ಥೆಗೂ ಮಹತ್ವ ನೀಡಬೇಕಿದ್ದು, ಪ್ರತಿಯೊಬ್ಬ ಹಿಂದು ಕನಿಷ್ಠ ಮೂರು ಮಕ್ಕಳನ್ನು ಹೊಂದಬೇಕು ಎಂದು ವಿಶ್ವ ಹಿಂದು ಪರಿಷತ್ತಿನ ಕೇಂದ್ರೀಯ ಸಂಘಟನಾ ಮಹಾಮಂತ್ರಿ ಮಿಲಿಂದ್ ಪರಾಂಡೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ವಿಶ್ವ ಹಿಂದು ಪರಿಷತ್ ಕಲಬುರಗಿ ಗ್ರಾಮಾಂತರ ಜಿಲ್ಲಾ ಘಟಕದ ವತಿಯಿಂದ ನಗರದ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಸ್ಯಾಕ್ ಆಡಿಟೋರಿಯಂನಲ್ಲಿ ನೂರು ಸಮಿತಿಗಳ ಉದ್ಘಾಟನೆ ಹಾಗೂ ಕಾರ್ಯಕರ್ತರ ಅಭ್ಯಾಸ ವರ್ಗ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಎಲ್ಲ ಹಿಂದು ನಮ್ಮವರು ಎಂಬ ಭಾವನೆ ಪ್ರತಿಯೊಬ್ಬರಲ್ಲಿ ಬಲವಾಗಿರಬೇಕು. ಧರ್ಮೋ ರಕ್ಷತಿ ರಕ್ಷಿತಃ ಎಂಬ ಸಂಕಲ್ಪ ನಮ್ಮದಾಗಿರಬೇಕು ಎಂದು ಹೇಳಿದ ಅವರು, ಕನ್ಯಾ ಭ್ರೂಣ ಹತ್ಯೆ ನಿರ್ಮೂಲನೆಗೆ ಎಲ್ಲರೂ ಪಣ ತೊಡಬೇಕು ಎಂದು ಕರೆ ನೀಡಿದರು.

ಇಂದಿನ ಯುವ ಪೀಳಿಗೆಗೆ ನಶಾ ಮುಕ್ತ ಭಾರತ ನಿರ್ಮಾಣಕ್ಕಾಗಿ ಕಾರ್ಯಕರ್ತರು ಸಮಾಜದಲ್ಲಿ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳಬೇಕು. ವರದಕ್ಷಿಣೆ ನಿರ್ಮೂಲನೆಗೆ ಯುವಕರು ಮುಂದಾಗಬೇಕು. ಸಮಾಜದಲ್ಲಿ ಉತ್ತಮ ಮೌಲ್ಯ ಬೆಳೆಸುವಲ್ಲಿ ಕಾರ್ಯಕರ್ತರ ಪಾತ್ರ ಮಹತ್ವದಾಗಿದ್ದು, ಎಲ್ಲವನ್ನೂ ಪೂಜಿಸುವ ಮೂಲಕ ನಾವು ಬೇರೆ ಸಮಾಜದವರನ್ನೂ ಗೌರವದಿಂದ ಕಾಣಬೇಕು ಎಂದರು.

> **ಇಂದಿನ ವರ್ತನೆ ಸುಧಾರಿಸಿದರೆ ಭವಿಷ್ಯವೂ ಉತ್ತಮವಾಗುತ್ತದೆ. ಸಂಘಟಿತ ಸಮಾಜವೇ ಶಕ್ತಿಯ ಮೂಲವಾಗಿದ್ದು, ದೇಶ, ಧರ್ಮ ಸಂಸ್ಕೃತಿಯ ಉಳಿವಿಗಾಗಿ ಹಿಂದೂ ಸದಾ ಸಾಮಾಜಿಕ ಕಾರ್ಯದಲ್ಲಿ ಹಾಗೂ ರಾಷ್ಟ್ರ ಜಾಗೃತಿಯ ಕಾರ್ಯದಲ್ಲಿ ಸದಾ ಮುಂಚೂಣಿಯಲ್ಲಿರುವ ಸಾಹಸ ಮಾಡಬೇಕು.**
> ■ **ಮಿಲಿಂದ್ ಪರಾಂಡೆ, ಕೇಂದ್ರೀಯ ಸಂಘಟನಾ ಮಹಾಮಂತ್ರಿ, ವಿಶ್ವ ಹಿಂದು ಪರಿಷತ್**

ಚಿಕಿತ್ಸೆಗೆ ವಿನಾಯಿತಿ

•**ಬೆಂಗಳೂರು:** ಚಿಕ್ಕಬಳ್ಳಾಪುರದ ಶ್ರೀ ಸತ್ಯಸಾಯಿ ಸರಳ ಮೆಮೋರಿಯಲ್ ಆಸ್ಪತ್ರೆ, ವಿಜಯಪುರದ ಎಂ.ಬಿ. ಪಾಟೀಲ್ ಮೆಡಿಕಲ್ ಕಾಲೇಜ್ ಆಸ್ಪತ್ರೆ ರಿಸರ್ಚ್ ಸೆಂಟರ್‌ನಿಂದ ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಇನ್ನೂ ಒಂದು ವರ್ಷದ ಅವಧಿಗೆ ಪ್ರಾಯೋಗಿಕ ಆಧಾರದ ಮೇಲೆ 2ಬಿ ಚಿಕಿತ್ಸಾ ವಿಧಾನಗಳು ಹಾಗೂ 3ಎ ಚಿಕಿತ್ಸಾ ವಿಧಾನಗಳಿಗೆ ಸರ್ಕಾರಿ ಆಸ್ಪತ್ರೆಗಳ ಶಿಫಾರಸ್ಸುಗಳು ಇಲ್ಲದೇ ನೇರವಾಗಿ ಚಿಕಿತ್ಸೆ ನೀಡಲು ಅನುಕೂಲವಾಗುವಂತೆ ವಿನಾಯಿತಿ ಮುಂದುವರೆಸಿ ಸರ್ಕಾರ ಆದೇಶಿಸಿದೆ.

ಈ 2ಬಿ, 3ಎ ಚಿಕಿತ್ಸಾ ವಿಧಾನಗಳ ರೆಫರಲ್ ವಿನಾಯಿತಿಯು ಪ್ರಾಯೋಗಿಕವಾಗಿ ಒಂದು ವರ್ಷದ ಅವಧಿಯ ನಂತರ ಈ ಪ್ರಾಯೋಗಿಕ ಯೋಜನೆ ವಾಸ್ತವಾಂಶಗಳೊಂದಿಗೆ ಮುಂದಿನ ನಿರ್ಧಾರಕ್ಕಾಗಿ ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಸೂಚಿಸಿದೆ. 2ಬಿ, 3ಎ ಚಿಕಿತ್ಸಾ, 4ಎ ಚಿಕಿತ್ಸಾ ವಿಧಾನ ಗಳ ಪೈಕಿ ಸಮಾನಾಂತರ ವಿಧಾನಗಳಿಗೆ ಯಾವ ಕಡಿಮೆ ದರ ಇರುವುದೋ ಅದನ್ನು ಪಾವತಿಸಲಾಗುತ್ತದೆ ಎಂದು ಆರೋಗ್ಯ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಕೋಟ್ಯಂತರ ಕಾರ್ಡ್‌ದಾರರಿಗೆ ಸಿಗದ ಪಡಿತರ | ತಿಂಗಳಿಗೆ 4.34 ಲಕ್ಷ ಮೆಟ್ರಿಕ್ ಟನ್ ಆಹಾರ ಪೂರೈಕೆ

ನ್ಯಾಯಬೆಲೆ ಅಂಗಡಿ ವರ್ತಕರಿಂದ ಹಗಲು ದರೋಡೆ

▶ ನಂದಿನಿ ಎನ್.

ದಿಗಂತ ವಿಶೇಷ

•**ಬೆಂಗಳೂರು:** ಕೇಂದ್ರ ಮತ್ತು ರಾಜ್ಯ ಸರ್ಕಾರವು ಸಾವಿರಾರು ಕೋಟಿ ರೂ. ಹಣ ಭರಿಸಿ, ಬಡವರಿಗೆ ಉಚಿತವಾಗಿ ರೇಷನ್ ನೀಡುತ್ತಿದೆ. ಆದರೆ, ರಾಜ್ಯದಲ್ಲಿ ಕೋಟ್ಯಂತರ ಕಾರ್ಡ್‌ದಾರರ ಪಾಲಿಗೆ ಸೇರಬೇಕಿದ್ದ ಪಡಿತರ ಕೊಡದೆ ನ್ಯಾಯಬೆಲೆ ಅಂಗಡಿ ವರ್ತಕರು ಹಗಲು ದರೋಡೆ ಮಾಡುತ್ತಿದ್ದಾರೆ.

ರಾಜ್ಯದಲ್ಲಿ 1.28 ಕೋಟಿ ಬಿಪಿಎಲ್, 10.80 ಲಕ್ಷ ಅಂತ್ಯೋದಯ ಕಾರ್ಡ್ (ಎಎವೈ)ಗಳಿಂದ ಒಟ್ಟಾರೆ 4.11 ಕೋಟಿ ಫಲಾನುಭವಿಗಳಿದ್ದಾರೆ. ಪ್ರತಿ ತಿಂಗಳು 4.34 ಲಕ್ಷ ಮೆಟ್ರಿಕ್ ಟನ್ ಆಹಾರ ಪದಾರ್ಥಗಳನ್ನು ಕಾರ್ಡ್‌ದಾರರಿಗೆ ವಿತರಿಸಬೇಕು. ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಹಾಗೂ ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆ ಅಡಿಯಲ್ಲಿ ತಲಾ 5 ಕೆ.ಜಿ ಸೇರಿ ಒಟ್ಟು 10 ಕೆ.ಜಿ ಅಕ್ಕಿ ಹಾಗೂ ರಾಗಿಯನ್ನು ಬಿಪಿಎಲ್ ಹೊಂದಿರುವ ಪ್ರತಿ ಸದಸ್ಯರಿಗೂ ವರ್ತಕರು, ಪ್ರತಿ ತಿಂಗಳು ಉಚಿತವಾಗಿ ನೀಡಬೇಕು.



ಅಂತ್ಯೋದಯ ಕಾರ್ಡ್‌ಗೆ 20 ಕೆ.ಜಿ ಅಕ್ಕಿ, 15 ಕೆ.ಜಿ ರಾಗಿ ಸೇರಿ ಒಟ್ಟು 35 ಕೆ.ಜಿ ನೀಡಬೇಕು. ಪ್ರತಿ ತಿಂಗಳು 1ನೇ ತಾರೀಖಿನಿಂದ ಸಗಟು ಮಳಿಗೆಗಳಿಂದ ಎತ್ತುವಳಿ ಮಾಡುವ ನ್ಯಾಯಬೆಲೆ ಅಂಗಡಿಗಳು, ಆಯಾ ತಿಂಗಳಿನ 5ನೇ ತಾರೀಖಿನಿಂದ ಕಾರ್ಡ್‌ದಾರರಿಗೆ ಪಡಿತರ ಹಂಚಿಕೆ ಪ್ರಾರಂಭ ಮಾಡುತ್ತಾರೆ. ಈ ವೇಳೆ ರೇಷನ್ ಕಾರ್ಡ್ ಸಂಖ್ಯೆಯನ್ನು ನಮೂದಿಸಿ, ಕಾರ್ಡ್‌ದಾರರ ಬೆರಳಚ್ಚು ಪಡೆದು ಪಡಿತರ ನೀಡಲಾಗುತ್ತಿದೆ. ಆದರೆ, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಪ್ರಕಾರ 2 ಯೋಜನೆಗಳಿಂದ ಬಿಪಿಎಲ್ ಹೊಂದಿರುವ ಪ್ರತಿ ಫಲಾನುಭವಿಗೆ 10 ಕೆ.ಜಿ ಬದಲಾಗಿ 5 ಕೆ.ಜಿ ಆಹಾರ ಪದಾರ್ಥ ಕೊಡುವ ಮಾಲೀಕರು, ಉಳಿದ ಅಕ್ಕಿಯನ್ನು ಕಾಳಸಂತೆಯಲ್ಲಿ ದಂಧೆಕೋರರಿಗೆ ಮಾರಾಟ ಮಾಡುವ ಮೂಲಕ ಮಾಲೀಕರು, ಲಕ್ಷಾಂತರ ರೂ. ಹಣವನ್ನು ಗಳಿಸುತ್ತಿದ್ದಾರೆ.

ವಲಸಿಗರಿಗೆ ಸಿಗುತ್ತಿಲ್ಲ ಆಹಾರ ಪದಾರ್ಥ: ಒನ್ ನೇಷನ್ ಒನ್ ಕಾರ್ಡ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಕ್ಕೆ ತರಲಾಗಿದೆ. ಯೋಜನೆಯ ಅಡಿ ಕೂಲಿ ಕೆಲಸಕ್ಕಾಗಿ ಊರು ಬಿಟ್ಟು ನಗರ ಪ್ರದೇಶಗಳಿಗೆ ಅಥವಾ ಬೇರೆ ಜಿಲ್ಲೆಗಳಿಗೆ ಗುಳೆ ಹೋಗುವ ಕಾರ್ಮಿಕರಿಗೆ, ಮನೆಗೆಲಸದವರು ಸೇರಿ ವಲಸಿಗರು ರೇಷನ್ ಪಡೆಯಬಹುದು. ರಾಜ್ಯದಲ್ಲಿ ಸರಾಸರಿ 5 ರಿಂದ 6 ಲಕ್ಷ ವಲಸಿಗರು ರೇಷನ್ ಪಡೆಯಲು ಒಂದು ಅಂಗಡಿಯಿಂದ ಮತ್ತೊಂದು ಅಂಗಡಿಗೆ ಅಲೆದಾಡಬೇಕಿದೆ.

ರೇಷನ್ ಸಾಗಾಟ

ನ್ಯಾಯಬೆಲೆ ಅಂಗಡಿ ಮಾಲೀಕರು ರೇಷನ್ ವಿತರಣೆ ವೇಳೆ ತೂಕದಲ್ಲಿ ಮೋಸ ಮಾಡಿದರೆ, ಅಕ್ಕಿ ಗಿರಣಿ ಮಾಲೀಕರು ಕಾಳಸಂತೆಯಲ್ಲಿ ಅಕ್ರಮವಾಗಿ ಅಕ್ಕಿ ಖರೀದಿಸಿ ಪಾಲಿಶ್, ಸಾರ್ಟೆಕ್ಸ್ ಮಾಡಿ ವಿವಿಧ ಬ್ರ್ಯಾಂಡ್ ಹೆಸರಿನಲ್ಲಿ ಪ್ಯಾಕಿಂಗ್ ಮಾಡಿ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಕೆಲ ಸಂದರ್ಭದಲ್ಲಿ ಗೋದಾಮುಗಳಿಂದ ಪಡಿತರ ಸಾಗಾಣೆ ಮಾಡುವ ವೇಳೆ ಟೆಂಡರ್‌ನಲ್ಲಿ ನೋಂದಾಯಿಸದೆ ಇರುವ ವಾಹನಗಳಲ್ಲಿ ಅಪಾರ ಪ್ರಮಾಣದಲ್ಲಿ ರೇಷನ್ ಸಾಗಿಸಲಾಗುತ್ತಿದೆ ಎಂದು ಆರೋಪ ಕೇಳಿಬಂದಿದೆ.

> **ಕೆಲವೊಮ್ಮೆ ಅಕ್ಕಿ ಕೊಟ್ಟರೆ ರಾಗಿ ಕೊಡುವುದಿಲ್ಲ, ರಾಗಿ ಕೊಟ್ಟರೆ ಅಕ್ಕಿ ಕೊಡುವುದಿಲ್ಲ, ನ್ಯಾಯಬೆಲೆ ಅಂಗಡಿ ಮಾಲೀಕರನ್ನು ಪ್ರಶ್ನಿಸಿದರೆ ಕಾರ್ಡ್ ರದ್ದು ಮಾಡುವುದಾಗಿ ಬೆದರಿಕೆ ಹಾಕುತ್ತಾರೆ. ಹಾಗಾಗಿ, ಅನಿವಾರ್ಯವಾಗಿ ವರ್ತಕರು ಎಷ್ಟು ಅಕ್ಕಿ ಕೊಡುತ್ತಾರೋ ಅಷ್ಟನ್ನೂ ಮಾತ್ರ ಮನೆಗೆ ತೆಗೆದುಕೊಂಡು ಹೋಗುತ್ತೇವೆ.**
> ■ **ಪ್ರಕಾಶ್ ಎಸ್., ಬಿಪಿಎಲ್ ಕಾರ್ಡ್‌ದಾರ**

ಏ.20ರಿಂದ ಮಕ್ಕಳಿಗಾಗಿ ಸ್ಟಾಪ್ ಮೋಷನ್ ಅನಿಮೇಷನ್ ಶಿಬಿರ

•**ಬೆಂಗಳೂರು:** ಪರಮ್ ಫೌಂಡೇಶನ್ ವತಿಯಿಂದ 11 ರಿಂದ 16 ವರ್ಷ ವಯಸ್ಸಿನ ಮಕ್ಕಳಿಗಾಗಿ ಹಳೆಯ ನೀತಿಕಥೆಗಳಿಗೆ ಆಧುನಿಕ ಸಮಾಜದ ಸವಾಲುಗಳನ್ನು ಬೆರೆಸಿ, ಕಿರುಚಿತ್ರ ತಯಾರಿಸುವ ವಿನೂತನ ಸ್ಟಾಪ್ ಮೋಷನ್ ಅನಿಮೇಷನ್ ಶಿಬಿರವನ್ನು ಏ.20ರಿಂದ ಮೇ 8ರವರೆಗೆ ಆಯೋಜಿಸಲಾಗಿದೆ.

ಶಿಬಿರವು ಸೋಮವಾರದಿಂದ ಶುಕ್ರವಾರದವರೆಗೆ ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೆ (ತಜ್ಞರ ಸೆಷನ್ ಬೆಳಗ್ಗೆ 11 ರಿಂದ 12 ಗಂಟೆವರೆಗೆ) ಜಯನಗರದ ಪರಮ್ ಸೈನ್ಸ್ ಎಕ್ಸ್‌ಪೀರಿನ್ಸ್ ಸೆಂಟರ್‌ನಲ್ಲಿ ನಡೆಯಲಿದೆ.

ಈ ಶಿಬಿರದಲ್ಲಿ ಸಂಗೀತಗಾರ ರಘು ದೀಕ್ಷಿತ್ ತಮ್ಮ ವಿಶಿಷ್ಟ ಸಂಗೀತದ ಮೂಲಕ ಸಿನಿಮಾದಲ್ಲಿ ಭಾವನೆಗಳನ್ನು ತುಂಬುವ ಕಲೆ ಕಲಿಸಲಿದ್ದಾರೆ. ಸಂಗೀತ ಗಾಯಕಿ ಎಂ.ಡಿ. ಪಲ್ಲವಿ ಮತ್ತು ಶ್ವೇತಾ ಕಥೆಯ ಪಾತ್ರಗಳಿಗೆ ಜೀವ ತುಂಬುವ ಧ್ವನಿ ಸಂಯೋಜನೆ ಕುರಿತು ತರಬೇತಿ ನೀಡಲಿದ್ದಾರೆ. ಗೀತ ರಚನೆಕಾರ ಕಾರ್ತಿಕ್ ಸರಗೂರು ದೃಶ್ಯಕಾವ್ಯವನ್ನು ಕಟ್ಟಿಕೊಡುವ ಪರಿ ಹಾಗೂ ಇತಿಹಾಸದ ಮಹತ್ವ ವಿವರಿಸಲಿದ್ದಾರೆ.

ಚಿತ್ರಕಥೆಗಾರ ಸಿದ್ಧಾರ್ಥ್ ಭರತ್ ಮಕ್ಕಳಿಗೆ ಅನಿಮೇಷನ್‌ನಲ್ಲಿ ವಿಜ್ಞಾನದ ಆವಿಷ್ಕಾರಗಳನ್ನು ಹೇಗೆ ಅಳವಡಿಸಬಹುದು ಎಂಬ ವಿಭಿನ್ನ ನೋಟ ನೀಡಲಿದ್ದಾರೆ. ಅಮೆರಿಕದ ರಾಷ್ಟ್ರೀಯ ಅನಿಮೇಷನ್ ವಸ್ತುಸಂಗ್ರಹಾಲಯದ ರಾಬಿನ್ ಸ್ಟಾಟ್ಸ್ಕಿ ಅವರು ಶಿಬಿರದಲ್ಲಿ ಭಾಗಿಯಾಗಲಿದ್ದಾರೆ.

ಮೇ 9ರಂದು ನಡೆಯಲಿರುವ ಗ್ರ್ಯಾಂಡ್ ಶೋಕೇಸ್‌ನಲ್ಲಿ ಪೋಷಕರು, ಪ್ರೇಕ್ಷಕರ ಸಮ್ಮುಖದಲ್ಲಿ ಮಕ್ಕಳೇ ಸಿದ್ಧಪಡಿಸಿದ ಈ ಅದ್ಭುತ ಕಿರುಚಿತ್ರಗಳನ್ನು ಪ್ರದರ್ಶಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ Paramfoundation.org ಹಾಗೂ ಮೊಬೈಲ್ 84312 66867 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

ಸಂಪಾದಕೀಯ

ಮರಳಿ ಚಂದ್ರನತ್ತ...

ಮಾನವನ ಈ ಸಣ್ಣ ಹೆಜ್ಜೆಯು ಮನುಕುಲದ ಪಾಲಿಗೆ ಬೃಹತ್ ನೆಗೆತ ಎಂಬುದಾಗಿ ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ಮೊದಲ ಹೆಜ್ಜೆಯೂರಿದಾಗ ನುಡಿದಿದ್ದ. ಅದಾಗಿ ಈಗ ಅರ್ಧ ಶತಮಾನವೇ ಕಳೆದಿದೆ. ಚಂದ್ರನ ಮೇಲೆ ಹೆಜ್ಜೆಯೂರಲು ಭಾರೀ ಪೈಪೋಟಿ ನಡೆಸಿದ್ದ ಮಾನವ ಕೆಲವರ್ಷಗಳ ಬಳಿಕ ಚಂದ್ರನ ಕುರಿತು ಆಸಕ್ತಿ ಕಳಕೊಂಡು ಬಿಟ್ಟ. ಅದಕ್ಕೂ ಕಾರಣವಿತ್ತು.



ಅಂದು ಚಂದ್ರನೆಡೆಗೆ ನಡೆದ ಖಗೋಳಯಾನಗಳು ಅಮೆರಿಕ ಮತ್ತು ರಶ್ಯಾಗಳ ವ್ಯೋಮ ಸಾರ್ವಭೌಮತೆಯ ಕುರಿತಂತೆ ಉಂಟಾದ ಸ್ಪರ್ಧೆಯ ಕಾರಣದಿಂದಾಗಿತ್ತು. ಅಮೆರಿಕವು ರಶ್ಯಾದ ಮೇಲೆ ಮೇಲುಗೈ ಸಾಧಿಸಿದ್ದು ಸಾಬೀತಾದ ಮೇಲೆ ಆ ಕುರಿತಾದ ಆಸಕ್ತಿ ಮರೆಯಾಯಿತು. ಆದರೆ ಇತ್ತೀಚಿನ ವರ್ಷಗಳಲ್ಲಿ ಮತ್ತೆ ಚಂದ್ರನ ಕುರಿತಂತೆ ವಿಜ್ಞಾನಿ ಸಂಕುಲಕ್ಕೆ ಕುತೂಹಲ ಹೆಚ್ಚಿದೆ. ಆದರೆ ಈ ಬಾರಿಯದು ಸಂಶೋಧನಾತ್ಮಕ ಕುತೂಹಲ. ಚಂದ್ರನಲ್ಲಿ ಏನಿದೆ- ಏನಿಲ್ಲ, ಆತ ಮಾನವವಾಸಕ್ಕೆ ಯೋಗ್ಯನೇ ಅಲ್ಲವೆ ಎಂಬ ಕುತೂಹಲ. ಈ ಉದ್ದೇಶದಿಂದಲೇ ಈಗ ಅಮೆರಿಕದ ಆರ್ಟೆಮಿಸ್-2 ಎಂಬ ವ್ಯೋಮವಾಹನವು ನಾಲ್ವರು ಗಗನಯಾನಿಗಳನ್ನು ಹೊತ್ತು ಚಂದ್ರನತ್ತ ಹೊರಟಿರುವುದು. ಆ ಮೂಲಕ ಚಂದ್ರನತ್ತ ಮಾನವ ಸಹಿತ ಯಾತ್ರೆಯೊಂದು ಕಾರ್ಯಗತಗೊಂಡಿದೆ.

ಹಾಗೆಂದು ಈ ಚಂದ್ರಯಾನದಲ್ಲಿ ಚಂದ್ರನಲ್ಲಿ ಇಳಿಯುವ ಯೋಜನೆಯಿಲ್ಲ. ಏನಿದ್ದರೂ ವಾಹನದಲ್ಲಿದ್ದುಕೊಂಡೇ ಚಂದ್ರನನ್ನು ಸುತ್ತು ಬರುವುದು. ಚಂದ್ರನಿಗಿಂತಲೂ ಆಚೆ 6400 ಕೀ.ಮೀ. ದೂರ ಸಾಗಿ ಬರುವುದರಿಂದ ಮಾನವನು ಖಗೋಳದಲ್ಲಿ ಅತ್ಯಧಿಕ ದೂರ ಪ್ರಯಾಣಿಸಿದ ದಾಖಲೆ ನಿರ್ಮಿಸಲ್ಪಡಲಿದೆ. ಅಷ್ಟು ದೂರದ ಖಗೋಳ ಪಯಣವು ಮಾನವನ ಮೇಲೆ ಎಂತಹ ಪರಿಣಾಮ ಬೀರಬಲ್ಲುದು, ಮುಂದಕ್ಕೆ ಚಂದ್ರನಲ್ಲಿ ಮಾನವ ವಾಸ್ತವ್ಯ ನಿರ್ಮಿಸಲು ಸಹಕಾರಿಯಾದ ವಾತಾವರಣವಿದೆಯೆ ಮುಂತಾದ ವಿಚಾರಗಳು ಈ ಚಂದ್ರಯಾನದಿಂದ ಸಾಬೀತುಗೊಳ್ಳಲಿದೆ.

ಅಪೋಲೋ ಸರಣಿಯಲ್ಲಿ ಚಂದ್ರನತ್ತ ಸಾಗಿದ್ದವರೆಲ್ಲ ಮಿಲಿಟರಿ ಪೈಲಟ್‌ಗಳಾಗಿದ್ದರೆ, ಈಗ ಚಂದ್ರನತ್ತ ಹೊರಟಿರುವುದು ವೈಜ್ಞಾನಿಕ ಆಸಕ್ತಿಯುಳ್ಳ ಗಗನಯಾನಿಗಳು. ಅಲ್ಲಿಗೆ ಈಗಿನ ಚಂದ್ರಯಾನದ ಗುರಿಯೇ ಬೇರೆ ಎಂಬುದು ಸ್ಪಷ್ಟವಾಗುತ್ತದೆ. ಹಿಂದಿನದು ಸ್ಪರ್ಧಾತ್ಮಕ ಯಾತ್ರೆಗಳಾಗಿದ್ದರೆ ಈಗಿನದು ಪರಸ್ಪರ ಸಹಕಾರ ವೃದ್ಧಿಯ ಯಾತ್ರೆ. ಅಪೋಲೋ ಸರಣಿಯ ಯಾತ್ರೆಗಳು ಅಮೆರಿಕಕ್ಕಷ್ಟೇ ಸೀಮಿತವಾಗಿತ್ತು. ಈಗಿನದು ಅಂತಾರಾಷ್ಟ್ರೀಯ ಯೋಜನೆ ಎಂದೆನ್ನಬಹುದು. ಈ ಯಾನದಿಂದ ಸಿಗಲಿರುವ ಮಾಹಿತಿಗಳು ಎಲ್ಲಾ ದೇಶಗಳಿಗೂ ಉಪಯುಕ್ತವಾಗಲಿವೆ. ಒಟ್ಟಿನಲ್ಲಿ, ಚಂದ್ರ ಆಗಿನಿಂದ ಈಗಿನವರೆಗೆ ಬದಲಾಗದೆ ಉಳಿದಿದ್ದಾನೆ. ಆದರೆ ಚಂದ್ರನ ಕುರಿತಾದ ಮಾನವನ ಆಸಕ್ತಿ ಬದಲಾಗುತ್ತಲೇ ಬಂದಿದೆ.

ಸಾಧನೆಗೆ ಬೇಕು ಶ್ರದ್ಧೆ ಮತ್ತು ಪ್ರಯತ್ನ

ಅಂಧೇನ ಬಧಿರೇಣಾಪಿ ಖಂಜೇನಾಪಿ ಚ ಪಂಗುನಾ।
ಶ್ರದ್ಧಾವತಾ ಯತ್ನವತಾ ಸಾಧ್ಯತೇ ಕಿಂಚಿದದ್ಭುತಮ್॥ -ಸುವಚನ ಶತಕಮ್

ಮನುಷ್ಯನು ಕುರುಡನಾಗಲಿ, ಕಿವುಡನಾಗಲಿ, ಕುಂಟನಾಗಲಿ, ಎರಡೂ ಕಾಲು ಇಲ್ಲದವನಾಗಲಿ, ಅವನಲ್ಲಿ ಶ್ರದ್ಧೆಯೂ ಪ್ರಯತ್ನವೂ ಇದ್ದರೆ ಅವನು ಅದ್ಭುತವಾದ ಏನನ್ನಾದರೂ ಸಾಧಿಸಬಲ್ಲ -ಎಂಬುದು ಶ್ಲೋಕಾರ್ಥ.

ಮನುಷ್ಯರ ಬೇಡಿಕೆ ಸಾಕಷ್ಟಿರುತ್ತದೆ. ಬಯಕೆಯಂತೂ ಕೊನೆಯಿಲ್ಲದ್ದು. ಬೇಕುಗಳ ಪಟ್ಟಿಗೆ ಬ್ರೇಕ್ ಇಲ್ಲವೇ ಇಲ್ಲ. ಸಮಯ ಸಂದಂತೆ ಪಟ್ಟಿ ಬೆಳೆಯುತ್ತಾ ಸಾಗುತ್ತದೆ. ಇಂತಹ ಬೇಡಿಕೆಗಳನ್ನು ಹೊಂದಿರುವ ಮನುಷ್ಯ ಅವುಗಳನ್ನು ಸಾಧಿಸಲು ಅನುಸರಿಸಬೇಕಾದ ಮಾರ್ಗವನ್ನು ತುಳಿಯುವುದಿಲ್ಲ. ಸಾಧನೆಯ ಮಾರ್ಗದಲ್ಲಿ ಧೈರ್ಯದಿಂದ ಮುನ್ನುಗ್ಗಿ ಶ್ರದ್ಧೆಯಿಂದ ಪರಿಶ್ರಮ ಚೆಲ್ಲಿದರೆ ಅಸಾಧ್ಯವೆಂಬುದಿಲ್ಲ. ಧೈರ್ಯ, ಶ್ರದ್ಧೆ ಹಾಗೂ ಪರಿಶ್ರಮ ಸಂಕಲ್ಪವನ್ನು ಸಾಕಾರಗೊಳಿಸುತ್ತವೆ.

ಶ್ಲೋಕ ಸಾಗರ

ಡಾ. ಸೋಂದಾ ಭಾಸ್ಕರ ಭಟ್

'ನಾಸ್ತ್ಯಸಾಧ್ಯಂ ನರಾಣಾಮ್' ಎಂಬುದು ಸೋತ್ಸಾಹಿ ಪುರುಷನ ಕುರಿತು ಹೇಳಿದ ಸೂಕ್ತಿ. ''ಶ್ರದ್ಧಾಂ ಕಾಮಸ್ಯ ಮಾತರಮ್'' ಹಾಗೆಯೇ ಬಯಕೆಯ ತಾಯಿ ಎಂಬ ಸೂಕ್ತಿ ಶ್ರದ್ಧೆಯ ಪಾರಮ್ಯವನ್ನು ಹೇಳುವಂಥದ್ದು. ಒಟ್ಟಿನಲ್ಲಿ ಶ್ರದ್ಧೆ ಮತ್ತು ಶ್ರಮ ಯಾರನ್ನೂ ಸಾಧಕನನ್ನಾಗಿ ಮಾಡುತ್ತದೆ. ಆದ್ದರಿಂದಲೇ ಪ್ರಕೃತ ಸುಭಾಷಿತದಲ್ಲಿ ಶ್ರದ್ಧಾವಂತ ಹಾಗೂ ಯತ್ನವಂತ ಅದ್ಭುತವನ್ನು ಸಾಧಿಸಬಲ್ಲ ಎಂದು ಹೇಳಲಾಗಿದೆ. ಅವಯವಗಳೆಲ್ಲ ಚೆನ್ನಾಗಿದ್ದು, ಸಾಧಿಸಲು ಬೇಕಾದ ಎಲ್ಲ ಬಗೆಯ ಅನುಕೂಲಗಳಿದ್ದೂ ಸಾಧಿಸದಿರುವವರು ಸಾಕಷ್ಟು ಜನರಿದ್ದಾರೆ. ಇವರು ಶ್ರದ್ಧೆ ಮತ್ತು ಶ್ರಮವನ್ನು ಸರಿಯಾಗಿ ಬಳಸಿಕೊಳ್ಳದ ಆಲಸಿಗಳು. ಇವುಗಳನ್ನು ಸರಿಯಾಗಿ ಬಳಸಿಕೊಂಡು ಎತ್ತರಕ್ಕೇರಿದ ವಿಕಲಾಂಗರು ಸಾಕಷ್ಟಿದ್ದಾರೆ.

ಎರಡೂ ಕಣ್ಣಿಲ್ಲದಿದ್ದರೂ ಸಂಗೀತದಲ್ಲಿ ಅಪೂರ್ವ ಸಾಧನೆ ಮಾಡಿದ ಪುಟ್ಟರಾಜ ಗವಾಯಿ ಸ್ವಾಮೀಜಿ ಲೋಕಕ್ಕೆಲ್ಲ ಗೊತ್ತು. ನೂರಾರು ಜನರಿಗೆ ಸಂಗೀತದ ಮಹಾಗುರುವಾಗಿ ಗುರುತಿಸಲ್ಪಟ್ಟಿದ್ದಾರೆ. ಶಿವಮೊಗ್ಗದ ಅಂಧ ಮಕ್ಕಳು ಕಣ್ಣಿರುವವರೂ ನಾಚುವ ತೆರದಲ್ಲಿ ಯಕ್ಷಗಾನ ಮಾಡುತ್ತಾರೆ. ಕಣ್ಣಿಲ್ಲದವರು ಕ್ರಿಕೆಟ್ ಆಡುವುದು ನಮಗೆಲ್ಲ ಗೊತ್ತು. ಅಂಗವಿಕಲರಾಗಿ ಹುಟ್ಟಿ, ಅವಯವಗಳಿರುವವರೂ ನಾಚುವ ರೀತಿಯಲ್ಲಿ ಸಮಾಜಸೇವೆ ಮಾಡಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದವರಿದ್ದಾರೆ. ಕಾಲಿಲ್ಲದೇ ಹಿಮಾಲಯವನ್ನು ಏರಿದವರಿದ್ದಾರೆ. ಹೀಗೆ ಹೇಳುತ್ತಾ ಹೋದರೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಇವರೆಲ್ಲರ ಈ ಸಾಧನೆಗೆ ಮುಖ್ಯವಾದದ್ದು ಅವರಿಗಿರುವ ಶ್ರದ್ಧೆ ಮತ್ತು ನಿರಂತರ ಪ್ರಯತ್ನ. ಇವೆರಡಿದ್ದರೂ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಈ ಎಲ್ಲ ದೃಷ್ಟಾಂತಗಳು ಸಾಕ್ಷಿ. ಶ್ರದ್ಧೆ ಮತ್ತು ಪ್ರಯತ್ನಗಳನ್ನು ರೂಢಿಸಿಕೊಂಡ ಯಾರು ಬೇಕಾದರೂ ಸಾಧನೆ ಮಾಡಿ ಗೌರವಕ್ಕೆ ಭಾಜನರಾಗಬಹುದು. ಅಂತಹ ಮನೋಭಾವವನ್ನು ಬೆಳೆಸಿಕೊಳ್ಳಬೇಕು.

ನಾವು ಜೀವನದಲ್ಲಿ ಸೋಲುವುದಕ್ಕೆ, ಬಡವರಾಗಿಯೇ ಉಳಿಯುವುದಕ್ಕೆ ಇವೆರಡೇ ಪ್ರಮುಖ ಕಾರಣಗಳು. ಆದ್ದರಿಂದ ಸದಾ ಜಾಗ್ರತರಾಗಿ ಕರ್ತವ್ಯ ಪಥದಲ್ಲಿ ಮುಂದುವರಿಯಬೇಕು. ಪ್ರಯತ್ನವಿಲ್ಲದೇ ಯಾವುದೂ ಒಲಿಯುವುದಿಲ್ಲ. ಮೃಗರಾಜನಾದರೂ ಸಿಂಹ ಹಸಿದರೆ ಬೇಟೆಯಾಡಲೇಬೇಕು. ಆಹಾರಕ್ಕಾಗಿ ಶ್ರಮಿಸಲೇಬೇಕು.

ಆದ್ದರಿಂದ ದುಃಸಾಧ್ಯವಾದದ್ದನ್ನು ಸಾಧಿಸಲು ಸದಾ ಪ್ರಯತ್ನಿಸೋಣ. ಶ್ರದ್ಧೆಯಿಂದ ಮುಂದುವರಿಯೋಣ.

ಭವಿಷ್ಯದ ಬೆಂಗಳೂರು...

ಪತ್ರ ಮಿತ್ರ

ಬೆಂಗಳೂರಿನಲ್ಲಿ ದಿನೇದಿನೇ ವಾಹನಗಳ ಸಂಖ್ಯೆ ಅತೀವ ವೇಗದಲ್ಲಿ ಏರುತ್ತಿರುವುದು ಗಂಭೀರ ಸಮಸ್ಯೆಯಾಗಿದೆ. ಇತ್ತೀಚಿನ ವರದಿಗಳ ಪ್ರಕಾರ ಬೆಂಗಳೂರಿನಲ್ಲಿ ಪ್ರತಿದಿನ 2100 ವಾಹನಗಳು ನೋಂದಣಿಯಾಗುತ್ತಿದ್ದು, ವಾಹನಗಳ ಸಂಖ್ಯೆ 1.2 ಕೋಟಿ ಗಡಿ ದಾಟಿದೆ. ಇಂದಿನ ಪರಿಸ್ಥಿತಿಯಲ್ಲೇ ಸಂಚಾರ ದಟ್ಟಣೆ, ವಾಯುಮಾಲಿನ್ಯ ಮತ್ತು ಪಾರ್ಕಿಂಗ್ ಸಮಸ್ಯೆಗಳು ನಾಗರಿಕರನ್ನು ಕಂಗೆಡಿಸುತ್ತಿವೆ. ಇದೇ ರೀತಿ ಮುಂದುವರಿದರೆ, ಮುಂದಿನ ದಿನಗಳಲ್ಲಿ ನಗರದಲ್ಲಿ ಕಾಲಿಡಲು ಸಹ ಜಾಗವಿಲ್ಲದಂತಾಗುವ ಭೀತಿ ಎದುರಾಗಿದೆ.

ಈ ಹಿನ್ನೆಲೆಯಲ್ಲಿ ಸರ್ಕಾರವು ವಾಹನ ನೋಂದಣಿಗೆ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರುವುದು ಅತ್ಯಗತ್ಯ. ಪ್ರತಿ ಮನೆಗೆ ಕೇವಲ ಒಂದು ವಾಹನಕ್ಕೆ ಮಾತ್ರ ಅನುಮತಿ ನೀಡುವ ಬಗ್ಗೆ ಪರಿಗಣಿಸಬೇಕು. ಜೊತೆಗೆ, ಹೊಸ ವಾಹನ ನೋಂದಣಿಗೆ ಪಾರ್ಕಿಂಗ್ ಸೌಲಭ್ಯವನ್ನು ಕಡ್ಡಾಯಗೊಳಿಸಬೇಕು. ಪಾರ್ಕಿಂಗ್ ವ್ಯವಸ್ಥೆ ಇಲ್ಲದ ಮನೆಗಳಿಗೆ ವಾಹನ ನೋಂದಣಿ ನಿರಾಕರಿಸುವ ಕ್ರಮವನ್ನು ಅನುಸರಿಸಿದರೆ, ರಸ್ತೆಗಳಲ್ಲಿ ಅಕ್ರಮ ಪಾರ್ಕಿಂಗ್ ಕಡಿಮೆಯಾಗುತ್ತದೆ. ಅದೇ ರೀತಿ, ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸಿ, ಜನರು ಅದರತ್ತ ಆಕರ್ಷಿತರಾಗುವಂತೆ ಕ್ರಮ ಕೈಗೊಳ್ಳಬೇಕು. ಮೆಟ್ರೋ, ಬಸ್ ಸೇವೆಗಳನ್ನು ವಿಸ್ತರಿಸುವುದು ಹಾಗೂ ಅವುಗಳನ್ನು ಸಮಯಪಾಲನೆಗೆ ಒಳಪಡಿಸುವುದು ಮುಖ್ಯ. ನಗರದ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ತಕ್ಷಣ ಕ್ರಮ ಕೈಗೊಳ್ಳುವುದು ಅಗತ್ಯ. ಇಲ್ಲವಾದರೆ, ಬೆಂಗಳೂರು ಜೀವಿಸಲು ಕಷ್ಟವಾದ ನಗರವಾಗುವ ಅಪಾಯವಿದೆ.

-ಜಿ.ನಾಗೇಂದ್ರ ಕಾವೂರು, ಸಂಡೂರು

ನಮ್ಮದಲ್ಲದಿದ್ದರೂ ನಮ್ಮದೇ ಆದ ಹೊರ್ಮುಜ್ ಜಲಸಂಧಿ

ಆಳದಲ್ಲಿ ತಾವು ಭಾರತೀಯರೊಂದಿಗೆ ಬೆಸೆದುಕೊಂಡವರೇ ಎನ್ನುವುದು ಇವತ್ತಿಗೂ ಇರಾನ್‌ನಲ್ಲಿ ಇರುವವರಿಗೆ ಗೊತ್ತು.

ರಾಘವಾಂಕಣ

ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com

ಎಷ್ಟೋ ಸಲ ನಮ್ಮ ಕಲಿಕೆಗಳು ತೀರಾ ಅನಿರೀಕ್ಷಿತ ತಿರುವುಗಳಲ್ಲಿ ಅಡಗಿ ಕುಳಿತಿರುತ್ತವೆ. ಮೊದಲನೇ ಮಹಾಯುದ್ಧದಲ್ಲಿ ಅದುವರೆಗೂ ಯಾರು ಕೂಡ ಊಹಿಸಲೂ ಸಾಧ್ಯವಿರದ ವಾಯುಯುದ್ಧ, ಟ್ಯಾಂಕ್, ವಿಷಾನಿಲ, ಸಬ್‌ಮರೀನ್‌ಗಳು ಅಸ್ತಿತ್ವಕ್ಕೆ ಬಂದವು. ಎರಡನೇ ಮಹಾಯುದ್ಧದವರೆಗೂ ಕೇವಲ ಪಠ್ಯಕ್ಕೆ ಸೀಮಿತವಾಗಿದ್ದ ಅಣುಶಕ್ತಿ ಎಂಬ ಕಲ್ಪನೆ, ಹಠಾತ್ತನೆ ಎಲ್ಲರಿಗೂ ಬಾಯಿಪಾಠವಾಯ್ತು. ಜೊತೆಗೇ ಜೆಟ್ ಇಂಜಿನ್, ಕ್ಷಿಪಣಿ, ಕಂಪ್ಯೂಟರುಗಳು, ಪೆನಿಸಿಲಿನ್‌ಗಳು ಕೂಡಾ ಮನೆಮಾತಾದವು. ಕಳೆದೊಂದು ತಿಂಗಳಿನಿಂದ ನಮ್ಮೆಲ್ಲರಿಗೂ ಬಾಯಿಪಾಠವಾಗಿರುವ ಹೊಸ ಪದಗಳೆಂದರೆ ಅಸಮಪಾರ್ಶ್ವದ ಯುದ್ಧ (asymmetric warfare), ಆತ್ಮಾಹುತಿ ಡ್ರೋನುಗಳು (Kamikaze drones or loitering ammunition), ಇಂಧನ ಭದ್ರತೆ (energy security), ಇದರೊಂದಿಗೆ ನಾವೆಲ್ಲ ಕಲಿತ ಇನ್ನೊಂದು ಹೊಸ ವಿಷಯ 'ಹೊರ್ಮುಜ್ ಜಲಸಂಧಿ'.

ಜಲಸಂಧಿ ಅನ್ನುವುದನ್ನೇ ಮೊದಲಬಾರಿಗೆ ಕೇಳಿದವರೂ ಈ ಬಾರಿಯ ಕಲಿಕೆಯ ಗುಂಪಿನಲ್ಲಿರಬಹುದು. ಆದರೆ ಎಷ್ಟೋ ಜನ ಹೊರ್ಮುಜ್ ಜಲಸಂಧಿಯ ಬಗ್ಗೆಯಂತೂ ಖಂಡಿತಾ ತಿಳಿದುಕೊಂಡರು. ದುಬೈ ಎಲ್ಲಿದೆ ಅಂತಾ ತಿಳಿದವರು ಕೂಡಾ, ಅದರ ಪಕ್ಕದಲ್ಲೇ ಹೀಗೊಂದು ಜಾಗತಿಕ ಪ್ರಾಮುಖ್ಯತೆಯ ಜಾಗವಿದೆಯೆಂದೂ, ಮತ್ತದಕ್ಕೆ ನಮ್ಮ ಮನೆಯ ಅಡುಗೆ ಮನೆಯನ್ನೇ ಅಲ್ಲಾಡಿಸುವಷ್ಟು ತಾಕತ್ತಿದೆಯೆಂದು ಅಂದಾಜು ಮಾಡಿರಲಿಲ್ಲ. ಅಮೆರಿಕ ತೆಗೆದ ಕ್ಯಾತೆಯಿಂದಾಗಿ, ಹೊರ್ಮುಜ್ ಜಲಸಂಧಿಯಂತೂ ಖ್ಯಾತಿ ಪಡೆಯಿತು.

ಅರೇಬಿಯನ್ ಸಮುದ್ರ ಪಾಕಿಸ್ತಾನದ ಗಡಿಯನ್ನು ದಾಟಿ, ಇರಾನ್ ಮತ್ತು ಒಮಾನ್ ದೇಶಗಳ ಎಡಬಲಗಳನ್ನು ಸವರಿ, ಸರಕ್ಕನೇ ಎಡಕ್ಕೆ ತಿರುಗಿ ಪರ್ಷಿಯನ್ ಕೊಲ್ಲಿ ಅಥವಾ ಗಲ್ಫ್ ಕೊಲ್ಲಿಯೊಳಗೆ ನುಗ್ಗುವ ತೀರಾ ಇಕ್ಕಟ್ಟಿನ ಪ್ರದೇಶವೇ ಈ ಹೊರ್ಮುಜ್ ಜಲಸಂಧಿ. ಈ ಲೇಖನ ಜಲಸಂಧಿಯ ಪ್ರಾಮುಖ್ಯತೆಯನ್ನು ವಿವರಿಸಲಿಕ್ಕಲ್ಲ. ಅದನ್ನು ಈಗಾಗಲೇ ನೂರಾರು ಚಾನಲ್ಲುಗಳು ಹಾಗೂ ಲೇಖನಗಳು ತಿಳಿಸಿರಬಹುದು. ಈ ಲೇಖನ, ಆ ಜಲಸಂಧಿಗೆ ಹಾಗೊಂದು ಹೆಸರು ಬರಲಿಕ್ಕೆ ಕಾರಣ, ಅದರ ಇತಿಹಾಸ ಹಾಗೂ ಭಾರತದೆಡೆಗೆ ಅದಕ್ಕಿರುವ ಸಂಬಂಧದ ಬಗ್ಗೆ ಬೆಳಕು ಚೆಲ್ಲಲಿಕ್ಕಷ್ಟೇ.

ಈ ಯುದ್ಧಕ್ಕೂ ಮೊದಲೇ, ವರ್ಷಗಳಲ್ಲ, ದಶಕಗಳಲ್ಲ, ಶತಮಾನಗಳಷ್ಟೇ ಅಲ್ಲ, ಒಂದೆರಡು ಸಹಸ್ರಮಾನಕ್ಕೂ ಮೊದಲೇ ಈ ಜಲಸಂಧಿ ಭಾರತಕ್ಕೆ ಚಿರಪರಿಚಿತ. ಜಗತ್ತಿನ ಪುರಾತನ ನಾಗರಿಕತೆಗಳಲ್ಲೊಂದಾದ ಪರ್ಷಿಯನ್ ನಾಗರಿಕತೆಗೂ, ಅಷ್ಟೇ ಅಥವಾ ಅದಕ್ಕೂ ಪುರಾತನ ನಾಗರಿಕತೆಯಾದ ಭರತ ಖಂಡಕ್ಕೂ ಸಂಪರ್ಕದ ಸುಲಭ ದಾರಿಯಾಗಿದ್ದದ್ದೇ ಈ ಹೊರ್ಮುಜ್ ಜಲಸಂಧಿ. ಕಾಕಾಸಸ್ ಪರ್ವತ ಪ್ರದೇಶಗಳಿಂದ ಕಂಧಹಾರ್‌ವರೆಗೂ ಹರಡಿದ್ದ ಎರಡೂವರೆ ಮೂರು ಸಾವಿರ ವರ್ಷಗಳ ಹಿಂದಿನ ಪರ್ಶಿಯಾದಲ್ಲಿದ್ದದ್ದು ನಮ್ಮ ಸನಾತನ ಧರ್ಮದಂತದ್ದೇ, ಬಹುದೇವ ಆರಾಧಕ ಜನಪದ ಗುಂಪುಗಳು. ಅವರುಗಳು ಮುಖ್ಯವಾಗಿ ಪೂಜಿಸುತ್ತಿದ್ದ ಮೂರು ದೇವರುಗಳೆಂದರೆ 'ಮಿತ್ರ' ಎಂಬ ಹೆಸರಿನ ಒಡಂಬಡಿಕೆ-ಒಪ್ಪಂದಗಳು, ಬೆಳಕು, ಪ್ರಮಾಣಗಳು, ನ್ಯಾಯ, ನೀತಿ ಮತ್ತು ಸ್ನೇಹದ ದೇವರಾದ ಸೂರ್ಯ. 'ಅನಾಹಿತ' ಎಂಬ ಹೆಸರಿನ ನೀರು ಮತ್ತು ಫಲವತ್ತತೆಯ ದೇವತೆ. 'ವೈರತ್ರಘ್ನ' ಎಂಬ ಯುದ್ಧ ಮತ್ತು ವಿಜಯದ ದೇವರು. ಎಲಮೈಟ್, ಅಸ್ಸಿರಿಯನ್, ಅರ್ಮೇನಿಯನ್, ಖಸ್ಸಿ, ಲುಲ್ಲುಬಿ, ಯಜ್ದಿ, ಜಿರೊಫ್ಟ್ ಮುಂತಾದ ಬುಡಕಟ್ಟುಗಳಿದ್ದ ಈ ಗುಂಪುಗಳಲ್ಲಿ ಹಲವಾರು ದೇವರಿದ್ದರು. ಆ ದೇವರುಗಳಿಗೆ ಆಕಾರಗಳೂ, ಮೂರ್ತಿಗಳೂ ಇದ್ದವು. ಮತ್ತವುಗಳ ಆರಾಧನೆಗೆಂದೇ ಕಟ್ಟಿದ ದೇವಸ್ಥಾನಗಳಿದ್ದವು, ಅದರ ಉಸ್ತುವಾರಿಗೆಂದೇ ನೇಮಕವಾದ ಜನರಿದ್ದರು. ಸುಮಾರು ಕ್ರಿಸ್ತಪೂರ್ವ 700ರವರೆಗೂ ಹಲವು ದೇವರುಗಳಲ್ಲಿ ಹಂಚಿಹೋಗಿದ್ದ ಈ ಧರ್ಮಗಳನ್ನು ಒಂದೇ ನಿಯಮದಡಿ, ಒಂದು ಅಥವಾ ಎರಡು ದೇವರಡಿ ಬರುವಂತೆ ಮಾಡುವಲ್ಲಿ 'ಜರಾತುಷ್ಟ' ಎಂಬ ಧಾರ್ಮಿಕ ಸುಧಾರಕನ ದೊಡ್ಡ ಪಾತ್ರವಿದೆ. ಝೋರಾಷ್ಟ್ರಿಯನ್ ಧರ್ಮದ ಆರಾಧಕರು ಇವನನ್ನು 'ಜರಾತುಷ್ಟ ಪಿತಾಮಹ' ಎಂದೇ ಕರೆಯುತ್ತಾರೆ. ಈತ ಕ್ರಿಪೂ 700 ಮತ್ತು 500ರ ನಡುವಿನ ಕಾಲಘಟ್ಟದಲ್ಲೆಲ್ಲೋ ಅಂದಿನ ಪ್ರಾಚೀನ ಇರಾನಿನ ಧರ್ಮದ ತತ್ವಗಳನ್ನು ಪ್ರಶ್ನಿಸಿ, ಧಾರ್ಮಿಕ ನಿಯಮಗಳನ್ನು ಹೊಸದಾಗಿ ಬರೆದು ಝೋರಾಷ್ಟ್ರಿಯನ್ ಧರ್ಮದ ಆಧ್ಯಾತ್ಮಿಕ ಸ್ಥಾಪಕನಾದ. ಈತನ ಬರಹಗಳು ಹಾಗೂ ಚಿಂತನೆಗಳು ಕಾಲಾನಂತರದಲ್ಲಿ ಮುಂದೆಬಂದ ಗ್ರೀಕ್ ತತ್ವಶಾಸ್ತ್ರಜ್ಞರಾಗಿದ್ದ ಹೆರಾಕ್ಲಿಟಸ್, ಪ್ಲೇಟೋ ಹಾಗೂ ಪೈಥಾಗೋರಸ್ ಮುಂತಾದವರನ್ನೂ ಪ್ರಭಾವಿಸಿತು. ಇಷ್ಟೆಲ್ಲಾ ಪ್ರಭಾವ ಬೀರಿದ ಈತನ ಚಿಂತನೆಗಳು ನಂತರ ಬಂದ ಅಬ್ರಾಹಾಮಿಕ್ ಮತಗಳನ್ನು ಪ್ರಭಾವಿಸದೇ ಇರಲು ಸಾಧ್ಯವೇ ಇಲ್ಲ.

ಈತ ಹುಟ್ಟುಹಾಕಿದ ಈ ಹೊಸ ಧರ್ಮದಲ್ಲಿ ಅಗ್ನಿಗೆ ಮಹತ್ವದ



ಸ್ಥಾನವಿತ್ತು. ಸೂರ್ಯನ ಬೆಳಕು ಹಾಗೂ ಪವಿತ್ರೀಕರಿಸಿದ ಅಗ್ನಿಯನ್ನು 'ಅಥರ್' ಎಂಬ ಹೆಸರಿನಿಂದ ಕರೆಯುತ್ತಿದ್ದ ಝೋರಾಷ್ಟ್ರಿಯನ್ನರು ಅದನ್ನು ಪೂಜಿಸುತ್ತಿರಲಿಲ್ಲ. ಬದಲಿಗೆ ಸೂರ್ಯ ಹಾಗೂ ಅಗ್ನಿ ಅವರ ಪಾಲಿಗೆ ದೇವರಿಗೆ ತಮ್ಮ ಪ್ರಾರ್ಥನೆಯನ್ನು ತಲುಪಿಸುವ ಮಾಧ್ಯಮಗಳಾಗಿದ್ದವು. ನಮ್ಮ ಅಗ್ನಿಹೋತ್ರಿಗಳ ಪದ್ಧತಿಯಂತೆಯೇ ಅವರ ದೇವಾಲಯದ ಗರ್ಭಗುಡಿಯಲ್ಲಿ ಪವಿತ್ರೀಕರಿಸಿದ ಅಗ್ನಿ ಆರದೇ, ಸದಾಕಾಲ ಉರಿಯುತ್ತಿತ್ತು. ಇವರು ವಿಗ್ರಹಾರಾಧಕರಾಗಲಿ ಅಥವಾ ಬಹುದೇವೋಪಾಸಕರಾಗಲೀ ಆಗಿರಲಿಲ್ಲ. ಜರಾತುಷ್ಟ ಪಿತಾಮಹ ಬರೆದ 'ಗಾಥೆಗಳು' ಎಂಬ ಗ್ರಂಥಸರಣಿಯ ಪ್ರಕಾರ ಅವರ ದೇವ 'ಅಹುರ ಮಜ್ದ' ಎಂಬವನಾಗಿದ್ದ. ಅಂದು ಬಳಕೆಯಲ್ಲಿದ್ದ ಅವೆಸ್ತಾನ್ ಭಾಷೆಯಲ್ಲಿ ಅಹುರ ಮಜ್ದ ಎಂದರೆ 'ವಿವೇಕವುಳ್ಳ ಅಥವಾ ಬುದ್ಧಿವಂತ ದೇವರು' ಎಂದರ್ಥ. ತಮ್ಮ ನಾಗರಿಕತೆಗೆ ಹೊಸ ಅತಿಥಿಗಳು ನೆಲದಮೂಲಕ ನೂರು ಬದಿಗಳಿಂದ ಬಂದರೂ, ಅವರನ್ನು ಸಮುದ್ರಮಾರ್ಗದಲ್ಲಿ ಕರೆತರಬಲ್ಲ ಏಕೈಕ ಮಾರ್ಗವಾಗಿದ್ದ ಆ ಜಲಸಂಧಿಗೆ ಅವರಿಟ್ಟ ಹೆಸರೇ 'ಅಹುರ ಮಜ್ದ ಜಲಸಂಧಿ'. ಇದೇ ಪದ ಮುಂದೆ ಹಳೆ ಪರ್ಷಿಯನ್ ಭಾಷೆಯಲ್ಲಿ ಔರಮಜ್ದ ಎಂದಾಗಿ, ಪಾರ್ಥಿಯನ್ ಭಾಷೆಯಲ್ಲಿ ಅಹುರ್ಮಜ್ದ್ ಎಂದಾಗಿ, ಪಹ್ಲಾವೀ ಭಾಷೆಯಲ್ಲಿ ಹೋರ್ಮಿಜ್ದ್ ಎಂದಾಗಿ, ಹೊಸಪರ್ಷಿಯನ್ನಿನಲ್ಲಿ ಹೊರ್ಮುಜ್ ಎಂದಾಗಿದ್ದು, ಅದರ ಮೂಲಕ ಈ ಜಲಸಂಧಿ ಹೊರ್ಮುಜ್ ಜಲಸಂಧಿಯಾಯ್ತು.

ಇಲ್ಲೊಂದೆರಡು ಕುತೂಹಲಕಾರಿ ವಿಷಯಗಳನ್ನು ಕೇಳಿ ನಿಮಗೆ ತಲೆಧಿಮ್ಮೆನ್ನಬಹುದು. ಈ ಝೋರಾಷ್ಟ್ರಿಯನ್ನರ ಪಿತಾಮಹ ಇದ್ದನಲ್ಲ, ಆದೇ ಜರಾತುಷ್ಟ ಪಿತಾಮಹ, ಆತ ತನ್ನ ಸಮಕಾಲೀನರು ಪೂಜಿಸುತ್ತಿದ್ದ ದೇವರನ್ನು ಧಿಕ್ಕರಿಸಿದನಲ್ಲ, ಅವುಗಳನ್ನು ಆತ ಕರೆದದ್ದೇನು ಗೊತ್ತೇನು? 'ದೈವಗಳು' ಎಂದು!! ಅಂದಿನ ಅವೆಸ್ತಾ ಭಾಷೆಯಲ್ಲಿ ದೈವ ಎಂದರೆ 'ಕೆಟ್ಟದ್ದು' ಎಂದರ್ಥವಿತ್ತು. ''ಹಾಗಾದರೆ ಒಳ್ಳೆಯದು ಎಂಬುದಕ್ಕೆ ಅವರಲ್ಲಿದ್ದ ಪದ ಯಾವುದು?'' ಎಂಬುದು ನಿಮ್ಮ ಪ್ರಶ್ನೆಯಾದರೆ, ಅದಕ್ಕುತ್ತರ 'ಅಹುರ'. ಅವೆಸ್ತಾದಲ್ಲಿ ಸ ಎಂಬಕ್ಷರ ಇರಲಿಲ್ಲವಾಗಿಯೇ, ಪರ್ಷಿಯನ್ನರು ಸಿಂಧೂ ನದಿಗೆ ಹಿಂದೂ ನದಿ ಎಂದದ್ದು. ಸಿಂಧೂವಿನ ಆ ತಟದಲ್ಲಿದ್ದವರಿಗೆ ಹಿಂದೂ ಎಂಬ ಹೆಸರು ಬಂದದ್ದು. ನಮ್ಮ ಸೋಮ, ಅವರಿಗೆ ಹೌಮ. ನಮ್ಮ ಸಪ್ತ ಅವರಿಗೆ ಹಪ್ತ. ಅಸುರ ಅವರಲ್ಲಿ ಅಹುರ.



ಈ ಹೊಸ ಧರ್ಮದ ಸ್ಥಾಪನೆಗಾಗಿ ಜರಾತುಷ್ಟ ಯುದ್ಧಗಳನ್ನೇನೂ ಸಾರಲಿಲ್ಲ. ಚರ್ಚೆ ಹಾಗೂ ಧಾರ್ಮಿಕ ಚಿಂತನೆಗಳಿಗೆ ಹೊಸಹೊಳಹು ಕೊಟ್ಟು ಆತ ಜನರನ್ನು ಸೆಳೆದ. ಆದರೆ ಈತನ ಕಾಲಾನಂತರ, ತನ್ನ ಹಳೆಯ ಧರ್ಮವನ್ನು ತೊರೆದು ಝೋರಾಷ್ಟ್ರಿಯನ್ ಧರ್ಮಕ್ಕೆ ಸೇರಿದ ವಿಶ್ತಸ್ಪ ಎಂಬ ರಾಜ ತನ್ನನ್ನು ತಾನೇ ಈ ಧರ್ಮದ ರಕ್ಷಕನೆಂದು ಕರೆದುಕೊಂಡು, ದೈವಗಳನ್ನು ಆರಾಧಿಸುತ್ತಿದ್ದವರ ಮೇಲೆ ಯುದ್ಧಸಾರಿದ. ಬಹಳಷ್ಟು ಬುಡಕಟ್ಟುಗಳು ಆಗ ಅಫ್ಘಾನಿಸ್ತಾನದ ಕಡೆಗೆ ವಲಸೆ ಹೋಗಿ, ಅಥವಾ ಸಿಂಧೂನದಿಯನ್ನೂ ದಾಟಿ, ಅಲ್ಲಿದ್ದ ಸನಾತನ ಧರ್ಮದ ಗುಂಪುಗಳೊಂದಿಗೆ ಒಂದಾದರು. ಝೋರಾಷ್ಟ್ರಿಯನ್ ಇತಿಹಾಸದಲ್ಲಿ ಇದನ್ನು 'ದೈವಾರಾಧಕರ ಮೇಲಿನ ಧರ್ಮಯುದ್ಧ' ಎಂದೇ ಉಲ್ಲೇಖಿಸಲಾಗಿದೆ. ಈಗ ನಮ್ಮ ತರ್ಕದಲ್ಲಿ ನಾವು ಕಾಣಬಹುದಾದ ಹೊಳಹುಗಳೆಂದರೆ, ಈ ಜರಾತುಷ್ಟ ಪಿತಾಮಹನ ಸುಧಾರಣೆಗಳನ್ನೂ, ವಿಶ್ತಸ್ಪನ ಆಕ್ರಮಣಶೀಲತೆಯನ್ನೂ ವಿರೋಧಿಸಿ ಬಂದ ಬುಡಕಟ್ಟುಗಳು ತಮ್ಮ ದೇವರುಗಳನ್ನೇ (ಒಳ್ಳೆಯತನದ ಪ್ರತೀಕವಾದ) ದೈವಗಳೆಂದೂ, ತಮ್ಮ ನಂಬಿಕೆಗಳನ್ನು ಹಳಿಯಲು ಬಂದವರನ್ನು ತಪ್ಪೆಂದು ಹೇಳಲಿಕ್ಕಾಗಿ ಅವರ ಅಹುರ ದೇವರನ್ನೇ (ಕೆಟ್ಟದರ ಪ್ರತೀಕವಾದ) ಅಸುರರೆಂದೂ ಕರೆದಿರಲಿಕ್ಕೆ ಸಾಕು.

ಮತ್ತೊಂದು ವಿಷಯವೆಂದರೆ, ಆರಂಭಿಕ ವೈದಿಕ ಪಠ್ಯಗಳಲ್ಲಿ ಅಸುರ ಎಂಬ ಪದದ ಅರ್ಥ ಮೂಲತಃ ರಾಕ್ಷಸ ಎಂದಲ್ಲ. ಋಗ್ವೇದದಲ್ಲಿ ಕೆಲವು ಪ್ರಮುಖ ದೇವರುಗಳನ್ನು ಸಕಾರಾತ್ಮಕ ಅರ್ಥದಲ್ಲೇ ಅಸುರ ಎಂದೂ ಕರೆಯುತ್ತಾರೆ. ಉದಾಹರಣೆಗೆ, ವರುಣ ಅಸುರನೇ. ಮಿತ್ರ, ಅಗ್ನಿ, ಸವಿತ್ರ ಮಾತ್ರವಲ್ಲ ಇಂದ್ರ ಹಾಗೂ ರುದ್ರ ಎಂಬ ಹೆಸರುಗಳೂ ಅಸುರವರ್ಗದಿಂದಲೇ ಬಂದವು. ಅಸುರ ಎಂದರೆ ''ಪರಾಕ್ರಮಿ, ಅಧಿಪತಿ, ವಿಶೇಷ ಶಕ್ತಿಯುಳ್ಳವ'' ಎಂಬ ಅರ್ಥವನ್ನು ನೀಡುತ್ತದೆ. ಮುಂದೆ ಅಥರ್ವವೇದದಲ್ಲಷ್ಟೇ ಅಸುರ ಎಂದರೆ ಸುರರ ಅಥವಾ ದೈವದ ವೈರಿ ಎಂಬರ್ಥದಲ್ಲಿ ಉಲ್ಲೇಖವಾದದ್ದು. ಆದರೆ, ಇದು ದೇವರ ಮೇಲಿನ ನಂಬಿಕೆ, ಭಾಷೆ, ನಾಗರಿಕತೆಗಳ ನೈತಿಕ ಮೌಲ್ಯಗಳು ಇತ್ಯಾದಿ ಹತ್ತಾರು ವಿಷಯಗಳ ಸಂಗಮದ ವಿಚಾರವಾದ್ದರಿಂದ ನಾನಿದನ್ನು ಇದಮಿತ್ಥಂ ಎಂದು ಬರೆಯುವ ದಾರ್ಷ್ಟ್ಯ ತೋರಲಾರೆ.

ಕಾಕಾಸಸ್ ಪರ್ವತ ಪ್ರದೇಶಗಳಿಂದ ಕಂದಹಾರ್‌ವರೆಗೂ ಹರಡಿದ್ದ ಝೋರಾಷ್ಟ್ರಿಯನ್ ಧರ್ಮ ಕ್ರಿ.ಪೂ.700 ರಿಂದ ಕ್ರಿಶ ಏಳನೇ ಶತಮಾನದವರೆಗೂ ಉಚ್ಛ್ರಾಯ ಸ್ಥಿತಿಯಲ್ಲಿದ್ದು, ಇರಾನಿನ ಮೇಲೆ ಅರಬ್-ಮುಸ್ಲಿಂ ದಾಳಿಗಳು ಪ್ರಾರಂಭವಾದಮೇಲೆ ಇಳಿಮುಖವಾಯ್ತು. ಎಂಟನೇ ಶತಮಾನದಲ್ಲಿ ಮುಸ್ಲಿಮರ ಕ್ರೌರ್ಯಕ್ಕೆ ಬಲಿಯಾಗದಂತೆ ಜೀವ ಉಳಿಸಿಕೊಂಡು ತಮ್ಮ ಪವಿತ್ರ ಅಗ್ನಿಯನ್ನು ಹಿಡಿದುಕೊಂಡು, ಇದೇ ಹೊರ್ಮುಜ್ ಜಲಸಂಧಿಯ ಮೂಲಕ ತಪ್ಪಿಸಿಕೊಂಡು, ಗುಜರಾತಿನ ತಟಕ್ಕೆ ಬಂದಿಳಿದು, ಅಲ್ಲಿನ ಹಿಂದೂ ರಾಜನಿಗೆ ''ನಮಗೆ ಹಾಗೂ ನಮ್ಮ ದೇವರಿಗೆ ಜಾಗ ಬೇಕು ಹಾಗೂ ನಮ್ಮ ದೇವರ ಸುತ್ತಮುತ್ತ ಹತ್ತು ಯೋಜನದಲ್ಲಿ ಬೇರೆ ಯಾವ ದೇವರೂ ಇರುವಂತಿಲ್ಲ'' ಎಂಬ ಬೇಡಿಕೆಯಿಟ್ಟಾಗ, ಅದಕ್ಕೆ ಒಪ್ಪಿ, ಇಂದಿನ ದಿಯು ದ್ವೀಪ ಪ್ರದೇಶವನ್ನು ಅವರಿಗೆ ಕೊಡಲಾಯ್ತು. ಹಾಗೆ ತಳವೂರಿ ನಿಂತವರೇ ಪರ್ಷಿಯಾದ ಕೊನೆಯ ತಲೆಮಾರಿನ ಜನರಾದ ಪಾರ್ಸಿಗಳು. ಅವತ್ತು ಬಂದಿಳಿದ ಆ ಪವಿತ್ರ ಅಗ್ನಿ ಇವತ್ತಿಗೂ ಸಾವಿರದಮುನ್ನೂರು ವರ್ಷಗಳ ನಂತರವೂ ನಿರಂತರವಾಗಿ ಗುಜರಾತಿನ ಉದವಾಡಾದಲ್ಲಿ ಇರಾನ್ ಶಾ ಆತಶ್ ಬೆಹ್ರಾಮ್ ಎಂಬ ಹೆಸರಿನಲ್ಲಿ ಉರಿಯುತ್ತಲೇ ಇದೆ. ಸರಿಸುಮಾರು ಮೂರುಸಾವಿರ ವರ್ಷಗಳ ಹಿಂದೆ ಇದೇ ಇರಾನಿನಲ್ಲಿ ಹುಟ್ಟಿದ ಆ ಅಗ್ನಿಯ ಕುರುಹು ಇವತ್ತು ಉಳಿದಿರುವುದು ಟೆಹ್ರಾನ್‌ನಲ್ಲಿ ಅಲ್ಲ, ಶಿರಾಜ್‌ನಲ್ಲಿ ಅಲ್ಲ, ಭಾರತದಲ್ಲಿ! ಒಟ್ಟಿನಲ್ಲಿ ಯಾವ ದೈವೋಪಾಸಕರನ್ನು ಝೋರಾಷ್ಟ್ರಿಯನ್ನರು ಓಡಿಸಿದ್ದರೋ, ಅದೇ ನೆಲಕ್ಕೆ ಅವರೂ ಬಂದು ಸೇರಿದರು.

ಪರ್ಷಿಯಾ ತನ್ನನ್ನು ತಾನೇ ಉಳಿಸಿಕೊಳ್ಳಲು ಸಾಧ್ಯವಾಗದಿದ್ದಾಗ, ಆ ಪರ್ಷಿಯನ್ ನಾಗರಿಕತೆಯನ್ನು ಉಳಿಸಿದ್ದು ನಮ್ಮ ಹೆಮ್ಮೆಯ ಭಾರತ.

ಮರಳಿ ಮುಖ್ಯ ವಿಷಯಕ್ಕೆ ಬಂದರೆ ಹೊರ್ಮುಜ್ ಜಲಸಂಧಿ ಭಾರತಕ್ಕೆ ಬಹಳ ವಿಶೇಷವಾದದ್ದು. ಯಾಕೆಂದರೆ, ಜಗತ್ತಿನಲ್ಲಿ ಇನ್ನೂ ಅಬ್ರಹಾಮಿಕ್ ತತ್ವಗಳ 'ಅ' ಕೂಡಾ ಹುಟ್ಟದೇ ಇದ್ದಾಗಲೂ, ಈ ಜಲಸಂಧಿಯ ಆಚೆ ಪರ್ಷಿಯಾ ಇತ್ತು. ಈಚೆ ಭಾರತವಿತ್ತು. ಸಹಸ್ರಮಾನಗಳ ನಂತರವೂ, ಇಸ್ಲಾಮಿಕ್ ಕತ್ತಿಯಲುಗಿನ ಪ್ರಹಾರದ ನಂತರವೂ 'ಇರಾನ್ ಶಹರ್'ನ ಜನರಿಗೆ ಭಾರತದ ನಂಟಿನ ಅರಿವಿತ್ತು. ಇಸ್ಲಾಂ ಧಾಳಿ, ಶಾಗಳ ಆಳ್ವಿಕೆ, ಅಯಾತೊಲ್ಲಾನ ಉಕ್ಕಿನ ಆಡಳಿತದ ನಂತರವೂ, ಅದೊಂದು ನಂಟು ಎರಡೂ ದೇಶಗಳ ನಡುವೆ ಉಳಿದೇ ಇತ್ತು. ಮತ್ತದು ಉಳಿದೇ ಇರುತ್ತದೆ. ಆಳದಲ್ಲಿ ನಾವು ಭಾರತೀಯರೊಂದಿಗೆ ಬೆಸೆದುಕೊಂಡವರೇ ಎನ್ನುವುದು ಇವತ್ತಿಗೂ ಇರಾನ್‌ನಲ್ಲಿ ಇರುವವರಿಗೆ ಗೊತ್ತು. ನೂರಾರು ವರ್ಷಗಳ ಹಿಂದೆ ಅವರು ಮತಾಂತರಗೊಂಡರೂ, ಸಂಸ್ಕೃತವನ್ನು ನಿಗ್ರಹಿಸಿದರೂ, ತಕ್ಷಶಿಲಾ ಮರೆತುಹೋದರೂ, ಸಂಪರ್ಕವೇ ಬಹುತೇಕ ಕಳೆದುಹೋದರೂ, ಡಿಎನ್‌ಎಗೆ ಆ ನಂಟು ನೆನಪಿದೆ. ನಂಬಿಕೆ ಉಳಿದುಕೊಂಡಿದೆ. ಮತ್ತದು ಯಾವಾಗಲೂ ಹಾಗೆಯೇ ಇರುತ್ತದೆ.

ಇದೇ ಕಾರಣಕ್ಕೆ ಇಂದಿನ ಘೋರ ಯುದ್ಧದ ನಡುವೆಯೂ ಭಾರತದ ಹಡಗುಗಳ ಮುಕ್ತಸಂಚಾರಕ್ಕೆ ಒಂದೇ ಒಂದು ಫೋನ್ ಕಾಲ್ ಸಾಕಾಗಿದ್ದು. ಇದು ಕೇವಲ ಪ್ರಸ್ತುತ ನಾಯಕರ ಸಂಬಂಧವಷ್ಟೇ ಅಲ್ಲ, ಇದು ಭಾರತದೆಡೆಗೆ ನಾಗರಿಕತೆಯೊಂದರ ನಂಬಿಕೆಯ ಕುರುಹೂ ಹೌದು..

ಕೊನೆಯ ಮಾಹಿತಿ: ಇರಾನಿನ ಹಳೆಯ ಹೆಸರು 'ಆಯಿರಾನ್ ಶಹರ್'. ಆರ್ಯನ್ನರ ಊರು ಎಂದು ಅದರರ್ಥ. ನಾವು ಆರ್ಯಾವರ್ತ ಎಂದೆವು. ಅವರ ಆಯಿರಾನ್ ಶಹರ್ ಮುಂದೆ 'ಇರಾನ್ ಶಹರ್' ಆಯಿತು. 1935ರಲ್ಲಿ ಶಾ ಪಹ್ಲಾವಿಯ ಆಡಳಿತದಲ್ಲಿ ಇರಾನ್ ಆಯಿತು. ಪರ್ಷಿಯಾ ಅನ್ನೋದು ಪಶ್ಚಿಮದವರು ಗ್ರೀಕರ ಪುಸ್ತಕಗಳನ್ನೋದಿ ಅರೆತರ್ಕದಲ್ಲಿ ಕೊಟ್ಟ ಹೆಸರಷ್ಟೇ. ಇವತ್ತಿನ ಶಿರಾಝ್ ನಗರವನ್ನು ರಾಜಧಾನಿಯಾಗಿಸಿಕೊಂಡಿದ್ದ ದಕ್ಷಿಣ ಇರಾನಿನ ಫಾರ್ಸ್/ಫಾರ್ಸಿಸ್ತಾನ್ ಪ್ರಾಂತ್ಯಕ್ಕೆ ಬಂದಿಳಿದ ಗ್ರೀಕರಲ್ಲಿ 'ಫ' ಅಕ್ಷರದ ಬಳಕೆಯಿರಲಿಲ್ಲವಾಗಿ ತಮ್ಮ ನಕ್ಷೆಗಳಲ್ಲಿ ಇದನ್ನು ಪಾರ್ಸ್ ಎಂದು ಗುರುತಿಸಿದರು. ಮುಂದಿನ ನಕ್ಷೆಗಳಲ್ಲಿ ಅದರ ಸುತ್ತಮುತ್ತಲಿನ ಪ್ರಾಂತ್ಯಗಳೆಲ್ಲಾ ಸೇರುತ್ತಾ ಹೋಗಿ, ಇಂದಿನ ಪರ್ಷಿಯಾ ಆಗಿದ್ದು.

ಗೋಬರ್‌ಗ್ಯಾಸ್: ಸ್ವಾವಲಂಬನೆಯ ಸಂಕೇತ

ನಮ್ಮ ದೇಶದಲ್ಲಿ ಲಭ್ಯವಿರುವ ಕಚ್ಚಾ ವಸ್ತುಗಳನ್ನು ಸರಿಯಾಗಿ ಬಳಸಿಕೊಂಡಲ್ಲಿ ಇಂದಿಗೂ ತೈಲ ಕ್ಷೇತ್ರದಲ್ಲಿ ನಾವು ಸ್ವಾವಲಂಬಿಯಾಗಬಹುದಾಗಿದೆ.

ಧರಣಿ ಮಂಡಲ

ಕೆ.ಎಸ್. ಶೈಲೇಶ್ ಹೊಳ್ಳ
shyleshholla@gmail.com

ಪೆಟ್ರೋಲ್, ಡೀಸೆಲ್ ಸೇರಿದಂತೆ ಎಲ್ಲಾ ರೀತಿಯ ತೈಲೋತ್ಪನ್ನಗಳು ಇನ್ನೇನು ಒಂದೆರಡು ದಶಮಾನಗಳಲ್ಲಿ ಮುಗಿದು ಹೋಗುತ್ತದೆ ಎಂದೇ ಹೇಳಲಾಗುತ್ತಿದೆ. ಇದು ನಿಜವಾದಲ್ಲಿ ಭಾಗಶಃ ಮನುಷ್ಯನ ನಾಗರಿಕತೆಯೇ ಮುಗಿದಂತೆ. ವಾಸ್ತವದಲ್ಲಿ ಭಾರತ ಅತಿ ಹೆಚ್ಚು ತೈಲ ಆಮದು ಮಾಡಿಕೊಳ್ಳುತ್ತಿರುವುದು ರಷ್ಯಾದಿಂದ. ಸದ್ಯಕ್ಕೆ ಎರಡನೇ ಸ್ಥಾನದಲ್ಲಿ ಅರಬ್ ದೇಶಗಳು ಹಾಗೂ ಇರಾಕ್ ಇದೆ. ಅಮೆರಿಕದ ವಶದಲ್ಲಿರುವ ವೆನೆಜುವೆಲಾದ ತೈಲ ಭಾರತಕ್ಕೆ ತೆರೆದುಕೊಂಡರೆ ಬಹುಶಃ ಅದೇ ನಂಬರ್ ಒನ್ ಆಗುವ ಸಾಧ್ಯತೆ ಇದೆ ಎನ್ನಲಾಗಿದೆ.

ದೇಶದಲ್ಲಿರುವ ಒಂದಷ್ಟು ಎಡಪಂಥೀಯರದ್ದು ಯಾವಾಗಲೂ ಏನಾದರೊಂದು ಗೋಳು. ಈ ಬಾರಿಯ ವರಸೆ ಧೈರ್ಯವಿದ್ದರೆ ಅರಬ್ ದೇಶಗಳಲ್ಲಿ ಸಿಗುವ ಪೆಟ್ರೋಲಿಯಂ ಉತ್ಪನ್ನಗಳನ್ನು ಕೇಂದ್ರ ಸರ್ಕಾರ ಬಹಿಷ್ಕರಿಸಲಿ ಎಂಬುದಾಗಿದೆ. ನಿಮಗೆ ತಿಳಿದಿರಲಿ, ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆ ಇರುವುದು ಭಾರತದಲ್ಲಿ, 700 ಕೋಟಿಯಲ್ಲಿ 150 ಕೋಟಿ ಇಲ್ಲೇ ಇದೆ. ಹಾಗಾಗಿ ಬೇಡಿಕೆಗೆ ತಕ್ಕಂತೆ ಪೂರೈಕೆ ಸ್ವಲ್ಪ ಸವಾಲಾಗಿರುವುದು ನಿಜ. ಹೇಗೆ ಭಾರತಕ್ಕೆ ಇಂಧನದ ಅವಶ್ಯಕತೆ ಇದೆಯೋ ಹಾಗೆಯೇ ಮರಳುಗಾಡಿನ ರಾಷ್ಟ್ರಗಳಿಗೆ ಜೀವನ ನಿರ್ವಹಣೆಗೆ ಮತ್ತು ಬದುಕಲು ಬೇಕಾದ ಅಕ್ಕಿ, ಗೋಧಿ, ಹಣ್ಣು, ತರಕಾರಿಗಳೆಲ್ಲವೂ ಭಾರತ ಸೇರಿದಂತೆ ಬೇರೆ ದೇಶಗಳಿಂದಲೇ ಬರಬೇಕು. ಅವರ ಆರ್ಥಿಕತೆ ನಿಂತಿರುವುದೇ ತೈಲೋತ್ಪನ್ನಗಳ ಮೇಲೆ. ಆದರೆ ಭಾರತದ ಆರ್ಥಿಕತೆ ಹಾಗಲ್ಲ. ಅರಬ್ ದೇಶಗಳಲ್ಲಿ ಪೆಟ್ರೋಲ್ ಸಿಗದಿದ್ದರೆ ಬೇರೆ ದೇಶಗಳಲ್ಲಿ ದೊರೆಯುತ್ತದೆ. ಇತ್ತೀಚೆಗೆ ಅರ್ಜೆಂಟೀನಾ ಸೇರಿದಂತೆ ಬೇರೆ ದೇಶಗಳಿಂದಲೂ ಇಂಧನ ಬರುವಂತಾಗಿದೆ. ತೀರಾ ವಿಷಮ ಸ್ಥಿತಿ ಎದುರಾದರೂ ಪೆಟ್ರೋಲ್ ಇಲ್ಲದೇ, ಪರ್ಯಾಯ ಯಾವುದಾದರೊಂದು ಇಂಧನ ಬಳಸಿ ಹೇಗೋ ನಾವು ಬದುಕಬಲ್ಲೆವು. ಆದರೆ ಅವರ ಕಥೆ ಹಾಗಲ್ಲ, ಬರೀ ಪೆಟ್ರೋಲ್ ಕುಡಿದೇ ಬದುಕಲು ಸಾಧ್ಯವಿಲ್ಲ.

ದೇಶದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳಿಂದ ಇಂಧನ ಉತ್ಪಾದನೆ ಮಾಡಿದಲ್ಲಿ ನಮಗೆ ಯಾವುದೇ ದೇಶದ ಮುಂದೆ ಕೈಕಟ್ಟಿ ಕೂರುವ ಪ್ರಮೇಯವೇ ಇರುವುದಿಲ್ಲ. ಪ್ರಮುಖವಾಗಿ ಸಾರಿಗೆಯ ದೂರ ಕಡಿಮೆಯಾಗುತ್ತದೆ, ತ್ಯಾಜ್ಯ ಕಡಿಮೆಯಾಗುತ್ತದೆ ಮತ್ತು ಗ್ರಾಮೀಣ ಆರ್ಥಿಕತೆ ಬಲವಾಗುತ್ತದೆ. ಇಂದಿನ ಜಗತ್ತಿನಲ್ಲಿ ಯುದ್ಧಗಳು, ಬಾಂಬ್ ಸ್ಫೋಟಗಳು ಮತ್ತು ದೊಡ್ಡ ಮಟ್ಟದ ಕೈಗಾರಿಕಾ ಮಾಲಿನ್ಯಗಳು ಪ್ರತಿ ದಿನ ವಾತಾವರಣಕ್ಕೆ ಅಪಾರ ಪ್ರಮಾಣದ ಅನಿಲಗಳನ್ನು ಬಿಡುಗಡೆ ಮಾಡುತ್ತಿವೆ. ಇಂತಹ ಜಾಗತಿಕ ಮಾಲಿನ್ಯದ ನಡುವೆ ಗ್ರಾಮೀಣ ಭಾರತದಲ್ಲಿ ಸ್ಥಳೀಯ ಬಯೋಮಾಸ್ ಇಂಧನವನ್ನು ಸಮರ್ಥವಾಗಿ ಬಳಸುವುದರಿಂದ ಒಂದೆಡೆ ಇಂಧನದ ಸಮಸ್ಯೆ ಬಗೆಹರಿಯುವುದರೊಂದಿಗೆ ಮಾಲಿನ್ಯದ ಸಮಸ್ಯೆಯೇ ಉದ್ಭವಿಸುವುದಿಲ್ಲ. ಗ್ರಾಮ ಸ್ವರಾಜ್ಯ ಎಂಬ ತತ್ವವು ಕೇವಲ ರಾಜಕೀಯ ಅಥವಾ ಸಾಮಾಜಿಕ ಕಲ್ಪನೆಯಲ್ಲ; ಅದೊಂದು ಆರ್ಥಿಕ ಮತ್ತು ಪರಿಸರದ ದೃಷ್ಟಿಯಿಂದಲೂ ಅತ್ಯಂತ ಪ್ರಸ್ತುತವಾದುದಾಗಿದೆ. ಗ್ರಾಮಗಳು ತಮ್ಮದೇ ಆಹಾರ, ಗೊಬ್ಬರ ಮತ್ತು ಇಂಧನವನ್ನು ಉತ್ಪಾದಿಸುವ ವ್ಯವಸ್ಥೆ ನಿರ್ಮಾಣವಾದರೆ ದೇಶದ ಆರ್ಥಿಕತೆ ಸದೃಢವಾಗುವುದರೊಂದಿಗೆ ಇಂಧನ ಭದ್ರತೆಯೂ ಹೆಚ್ಚುತ್ತದೆ.

ಇಂಧನ ಸ್ವಾವಲಂಬನೆಯ ಮತ್ತೊಂದು ದಾರಿಯೇ ಗ್ಯಾಸೀಕರಣ ಎನ್ನಲಾಗಿದೆ. ಕಲ್ಲಿದ್ದಲು ಅಥವಾ ಬಯೋಮಾಸ್‌ನ್ನು ಗ್ಯಾಸೀಕರಣ ಪ್ರಕ್ರಿಯೆಗೆ ಒಳಪಡಿಸಿದರೆ ಸಿಂಥೆಟಿಕ್ ಗ್ಯಾಸ್ ದೊರೆಯುತ್ತದೆ. ಈ ಅನಿಲವನ್ನು ವಿದ್ಯುತ್ ಉತ್ಪಾದನೆ, ಕೈಗಾರಿಕೆಗಳು ಮತ್ತು ಅಡುಗೆ ಇಂಧನವಾಗಿ ಬಳಸಬಹುದಾಗಿದೆ. ಭಾರತ ಕಲ್ಲಿದ್ದಲು ಸಂಪತ್ತಿನಲ್ಲಿ ಶ್ರೀಮಂತವಾಗಿರುವುದರಿಂದ ಈ ತಂತ್ರಜ್ಞಾನ ದೇಶಕ್ಕೆ ಮಹತ್ವದ ಅವಕಾಶವಾಗಿದೆ ಎಂದೇ ಹೇಳಲಾಗುತ್ತದೆ. ಇದರೊಂದಿಗೆ ಇಂದು ಸರ್ಕಾರದ ನವೀಕರಿಸಬಹುದಾದ ಇಂಧನ ಸಚಿವಾಲಯ ಬಯೋಗ್ಯಾಸ್ ಮತ್ತು ಬಯೋಮಾಸ್ ಯೋಜನೆಗಳಿಗೆ ಕೆಲವು ಅನುದಾನಗಳನ್ನು ನೀಡುತ್ತಿದೆ. ಆದರೆ ಗ್ರಾಮ ಮಟ್ಟದಲ್ಲಿ ಈ ಕಾರ್ಯಕ್ರಮಗಳನ್ನು ಇನ್ನಷ್ಟು ಬಲಪಡಿಸುವ ಅಗತ್ಯ ಇದೆ. ಗ್ರಾಮ ಪಂಚಾಯತಿಗಳಲ್ಲಿ ಸಮೂಹ ಬಯೋಗ್ಯಾಸ್ ಘಟಕಗಳಿಗೆ ಹೆಚ್ಚುವರಿ ಅನುದಾನವನ್ನು ನೀಡುವ ಮೂಲಕ ಇಂತಹ ಯೋಜನೆಗಳನ್ನು ಪ್ರೋತ್ಸಾಹಿಸಬೇಕಿದೆ. ಕೃಷಿ ತ್ಯಾಜ್ಯದಿಂದ ಸಿಗುವ ಬಯೋಮಾಸ್ ಬ್ರಿಕೆಟ್ ಉದ್ಯಮಗಳಿಗೆ ಪ್ರೋತ್ಸಾಹ ನೀಡಬೇಕಿದೆ. ಕಲ್ಲಿದ್ದಲು ಮತ್ತು ಬಯೋಮಾಸ್ ಆಧಾರಿತ ಗ್ಯಾಸೀಕರಣ ಘಟಕಗಳ ಸ್ಥಾಪನೆಯನ್ನು ಹೆಚ್ಚಿಸಬೇಕಿದೆ. ಸಣ್ಣ ಹೋಟೆಲ್ ಸೇರಿದಂತೆ ದೊಡ್ಡ ಹೋಟೆಲ್‌ಗಳಲ್ಲಿಯೂ ಬಯೋಮಾಸ್ ಅಥವಾ ಬಯೋಗ್ಯಾಸ್ ಬಳಕೆಗೆ ಪ್ರೋತ್ಸಾಹ ಯೋಜನೆಯನ್ನು ಅನುಷ್ಠಾನಗೊಳಿಸಬೇಕಿದೆ. ಇವೆಲ್ಲದರಿಂದ ಗ್ರಾಮೀಣ ಉದ್ಯೋಗಾವಕಾಶವನ್ನು ಹೆಚ್ಚಿಸಬಹುದಾಗಿದೆ.

ಇಂಟರ್ ನ್ಯಾಷನಲ್ ಎನರ್ಜಿ ಇನಿಷಿಯೇಟಿವ್ ಎಂಬ ಸಂಸ್ಥೆಯ ಅಂಗ ಸಂಸ್ಥೆಯಾದ ದಿ ಏಷ್ಯನ್ ರೀಜನಲ್ ಎನರ್ಜಿ ಇನಿಷಿಯೇಟಿವ್ ಎಂಬ ಸಂಸ್ಥೆಯು ತುಮಕೂರು ತಾಲ್ಲೂಕಿನ ಹೆಬ್ಬೂರು ಹೋಬಳಿಯ ಚಿಕ್ಕಣ್ಣದೇವರ ಹಟ್ಟಿ ಎಂಬ ಪುಟ್ಟ ಗ್ರಾಮದಲ್ಲಿ ಸಮೂಹ ಗೋಬರ್ ಗ್ಯಾಸ್ ಉತ್ಪಾದನಾ ಘಟಕವನ್ನು ಬಹಳ ಹಿಂದೆಯೇ ಸ್ಥಾಪಿಸಿತ್ತು. ಇದರಿಂದ ಆ ಗ್ರಾಮದ ಪ್ರತಿ ಮನೆಗೂ ಗೋಬರ್ ಗ್ಯಾಸ್ ಸಂಪರ್ಕ ಸಿಗುವಂತಾಗಿ 24 ಘಂಟೆ ಜೈವಿಕ ಅನಿಲದ ಸರಬರಾಜಾಗುತ್ತಿತ್ತು ಮತ್ತು ಪ್ರತಿಯೊಂದು ಮನೆಯಲ್ಲೂ ಕನಿಷ್ಠ ಒಂದೆರಡು ದೀಪಗಳು ಬೆಳಗುತ್ತಿತ್ತು. ಈ ವ್ಯವಸ್ಥೆಯನ್ನು ಸಂಸ್ಥೆಯು ಸಂಪೂರ್ಣ ಉಚಿತವಾಗಿ ಮಾಡಿಕೊಟ್ಟಿದ್ದಲ್ಲದೇ ಯಾವುದೇ ರೀತಿಯ ಹಣ ಹಾಗೂ ತೆರಿಗೆಯನ್ನು ವಿಧಿಸಿರಲಿಲ್ಲ. ಇದೊಂದು ಸಾಮೂಹಿಕ ಗೋಸಾಕಣೆ ಮತ್ತು ಗೋಬರ್ ಗ್ಯಾಸ್ ಪ್ಲಾಂಟ್‌ಗಳ ನಿರ್ಮಾಣವಾಗಿದ್ದು, ಏಷ್ಯಾದ ಮೊದಲ ಮಾದರಿ ಜೈವಿಕ ಇಂಧನ ಅಭಿವೃದ್ಧಿ ಯೋಜನೆಯಾಗಿತ್ತು. 15 ತಿಂಗಳಲ್ಲಿ 38 ಲಕ್ಷ ರೂಪಾಯಿ ವೆಚ್ಚ ಮಾಡಿ ಈ ಯೋಜನೆಯನ್ನು ಪೂರ್ಣಗೊಳಿಸಿದ್ದ ಸಂಸ್ಥೆಯು ಇದರ ನಿರ್ವಹಣೆಯನ್ನು ಸಂಪೂರ್ಣವಾಗಿ ನಂತರ ಗ್ರಾಮಸ್ಥರಿಗೆ ವಹಿಸಿತ್ತು.

ದಶಮಾನದ ಒಂದು ಹಿಂದಿನ ಸಮೀಕ್ಷೆಯ ಪ್ರಕಾರ ದೇಶದಲ್ಲಿರುವ ಜಾನುವಾರುಗಳು ತಮ್ಮ ಎಳೆಯುವ ಶಕ್ತಿಯ ಮೂಲಕ ವರ್ಷಕ್ಕೆ ಸುಮಾರು 50 ಸಾವಿರ ಕೋಟಿ ರೂಪಾಯಿಗಳಷ್ಟು ಪೆಟ್ರೋಲಿಯಂ ತೈಲವನ್ನು ಉಳಿತಾಯ ಮಾಡುತ್ತಿದ್ದವೆಂಬುದು ತಿಳಿದುಬರುತ್ತದೆ. ಇಂದಿನ ಲೆಕ್ಕಾಚಾರ ಲೆಕ್ಕಕ್ಕೂ ಸಿಗದಂತಾಗಿದೆ. ಮತ್ತೊಂದು ಸಮೀಕ್ಷೆಯ ಪ್ರಕಾರ ನಮ್ಮ ದೇಶದಲ್ಲಿ ಶೇಕಡಾ 65ರಿಂದ 90ರಷ್ಟು ಭೂಮಿಯನ್ನು ಎತ್ತುಗಳೇ ಸಾಗುವಳಿ ಮಾಡುತ್ತಿರುವುದರಿಂದ ಪ್ರತಿ ವರ್ಷ ಸುಮಾರು 60 ಲಕ್ಷ ಟನ್ ಡೀಸೆಲ್ ಉಳಿಯುತ್ತಿದೆಯಂತೆ. ಹೀಗೆ ಭಾರತೀಯ ಗೋವುಗಳು ಪ್ರತಿ ವರ್ಷ ಸುಮಾರು 24 ದಶ ಲಕ್ಷ ಟನ್‌ಗಳಷ್ಟು ಇಂಧನವನ್ನು ಉಳಿಸುವ ಮೂಲಕ ದೇಶದ ಆರ್ಥಿಕ ಹೊರೆಯನ್ನು ಕಡಿಮೆ ಮಾಡುತ್ತಿವೆಯಂತೆ.

ಒಂದು ಅಂದಾಜಿನಂತೆ ಪ್ರತಿಯೊಂದು ಮನೆಗೆ ತಿಂಗಳಿಗೆ ಒಂದು ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ನ ಅವಶ್ಯಕತೆ ಇರುತ್ತದೆ. ಈ ಲೆಕ್ಕಾಚಾರದಂತೆ ವರ್ಷಕ್ಕೆ ಸುಮಾರು 12 ಸಿಲಿಂಡರ್‌ಗಳು ಬೇಕಾಗುತ್ತವೆ. ಮನೆಯಲ್ಲಿ ಒಂದೆರಡು ಗೋವುಗಳನ್ನು ಕಟ್ಟಿಕೊಂಡು ಅದರಿಂದ ಗೋಬರ್‌ಗ್ಯಾಸ್‌ನ್ನು ಅಡುಗೆ ಮಾಡಲು ಬಳಸಿಕೊಂಡಿದ್ದೇ ಆದಲ್ಲಿ ವರ್ಷಕ್ಕೆ ಸುಮಾರು 6 ಎಲ್‌ಪಿಜಿ ಸಿಲಿಂಡರ್‌ಗಳು ಉಳಿತಾಯವಾಗಲಿವೆ. ಈ ಎಲ್‌ಪಿಜಿ ಸಿಲಿಂಡರ್ ಸೇರಿದಂತೆ ಬಹುತೇಕ ಪೆಟ್ರೋಲಿಯಂ ಉತ್ಪನ್ನಗಳಿಗೆ ನಾವು ಹೊರ ರಾಷ್ಟ್ರಗಳನ್ನೇ ನಂಬಿದ್ದೇವೆ. ಒಂದೊಮ್ಮೆ ಪ್ರತಿಯೊಂದು ಮನೆಯಲ್ಲಿ ಒಂದೆರಡು ಗೋವುಗಳನ್ನು ಕಟ್ಟುವ ಮೂಲಕ ಗೋಬರ್ ಗ್ಯಾಸ್ ಬಳಕೆ ಪ್ರಾರಂಭವಾದಲ್ಲಿ ನಾವು ದೇಶಕ್ಕೆ ಒಂದು ಉತ್ತಮ ಕೊಡುಗೆಯನ್ನೇ ನೀಡುತ್ತಿದ್ದೇವೆ ಎಂದರ್ಥ. ಈಗ ಉದ್ಭವಿಸಿರುವ ಅನಿರೀಕ್ಷಿತ ಗ್ಯಾಸ್ ಕೊರತೆಯ ಸಮಯದಲ್ಲಂತೂ ಗೋವಿನ ಸಗಣಿಯಿಂದ ತಯಾರಾಗುವ ಗೋಬರ್‌ಗ್ಯಾಸ್ ಘಟಕವು ಸ್ವಾಭಿಮಾನದ ಸಂಕೇತವೆಂಬಂತೆ ಕಾಣಿಸತೊಡಗಿದೆ. ಕೆಲವರು ಗೋಮಯ ಅಥವಾ ಕೃಷಿ ಅವಶೇಷಗಳನ್ನು ಸುಡುವುದು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತದೆ ಎಂದು ವಾದಿಸುತ್ತಾರೆ. ಪರಿಸರದ ಬಗ್ಗೆ ಕಾಳಜಿ ಅಗತ್ಯವೇ ಸರಿ. ಕೃಷಿ ಅವಶೇಷಗಳನ್ನು ಸುಡುವುದು ಮಾಲಿನ್ಯಕ್ಕೆ ಕಾರಣವಾಗುತ್ತದಾದರೂ ಗೋಮಯದಿಂದ ದೊರೆಯುವ ಬೆರಣಿ ಅಥವಾ ಗ್ಯಾಸ್ ಪರಿಸರ ಸಂರಕ್ಷಣೆಗೆ ಸಹಾಯಕವಾದುದಾಗಿದೆ. ಒಂದು ವಾಸ್ತವವನ್ನು ಗಮನಿಸಬೇಕು; ಸರಿಯಾದ ತಂತ್ರಜ್ಞಾನವನ್ನು ಬಳಸಿದ್ದೇ ಆದಲ್ಲಿ ಮಾಲಿನ್ಯವನ್ನು ನಿಯಂತ್ರಿಸಬಹುದು. ಉದಾಹರಣೆಗೆ ಮಣ್ಣಿನ ಇಟ್ಟಿಗೆ ಅಥವಾ ಸಿಮೆಂಟ್‌ನಿಂದ ತಯಾರಿಸಿದ ಅಡುಗೆ ಒಲೆ ಅಥವಾ ಸುಧಾರಿತ ಚುಲ್ಲಿಗಳು, ಬಯೋಗ್ಯಾಸ್ ಘಟಕಗಳು ಅಥವಾ ಗ್ಯಾಸೀಕರಣ ಘಟಕಗಳನ್ನು ಬಳಸಿದರೆ ಮಾಲಿನ್ಯವನ್ನು ಬಹಳ ಮಟ್ಟಿಗೆ ಕಡಿಮೆ ಮಾಡಬಹುದು.

ನಮ್ಮ ದೇಶದಲ್ಲಿ ಲಭ್ಯವಿರುವ ಕಚ್ಚಾ ವಸ್ತುಗಳನ್ನು ಸರಿಯಾಗಿ ಬಳಸಿಕೊಂಡಲ್ಲಿ ಇಂದಿಗೂ ತೈಲ ಕ್ಷೇತ್ರದಲ್ಲಿ ನಾವು ಸ್ವಾವಲಂಬಿಯಾಗಬಹುದಾಗಿದೆ. ಅಷ್ಟೇ ಯಾಕೆ ಸುಮಾರು 200ಕ್ಕೂ ಹೆಚ್ಚು ಗೋವುಗಳಿರುವ ಯಾವುದೇ ಒಂದು ಡೇರಿಯಲ್ಲಿ ಮಿಥೇನ್ ಉತ್ಪಾದನ ಘಟಕ ಸ್ಥಾಪಿಸಬಹುದಾಗಿದೆ. ಮಿಥೇನ್‌ಪಡೆದ ಮೇಲೆ ಸಾವಯವ ಗೊಬ್ಬರವಾಗಿ ಸಗಣಿಯನ್ನು ಪರಿವರ್ತಿಸಿಯೂ ಮಾರಾಟ ಮಾಡಬಹುದಾಗಿದೆ. ಇದರಿಂದ ಗೊಬ್ಬರ ಕ್ಷೇತ್ರದಲ್ಲೂ ಸ್ವಾವಲಂಬಿಯಾಗಬಹುದಾಗಿದೆ. ಮುಖ್ಯವಾಗಿ ನಮ್ಮ ದೇಹ ಹಾಗೂ ದೇಶ ಸ್ವಸ್ಥವಾಗಿಯೇ ಉಳಿಯಲಿದೆ.

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ವಾಯುದಾಳಿ: 25ಕ್ಕೂ ಹೆಚ್ಚು ಮಂದಿ ಸಾವು

ಟೆಹ್ರಾನ್ ಸ್ಫೋಟ, ದಟ್ಟ ಹೊಗೆ

ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ಸೋಮವಾರ ಜಂಟಿಯಾಗಿ ನಡೆಸಿದ ವಾಯುದಾಳಿಗಳಲ್ಲಿ 25ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಇದಕ್ಕೆ ಪ್ರತಿಯಾಗಿ ಇರಾನ್ ಇಸ್ರೇಲ್ ಹಾಗೂ ಅದರ ಗಲ್ಫ್ ಅರಬ್ ನೆರೆಯ ರಾಷ್ಟ್ರಗಳತ್ತ ಕ್ಷಿಪಣಿ ದಾಳಿ ನಡೆಸಿದೆ. ಈ ನಡುವೆ ಹಾರ್ಮುಜ್ ಕಣಿವೆಯನ್ನು ಮರುತೆರೆಯಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ ಗಡುವು ಸಮೀಪಿಸುತ್ತಿದ್ದು, ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚಳವಾಗಿದೆ.

ಟೆಹ್ರಾನ್ ನಗರದಲ್ಲಿ ಹಲವು ಸ್ಫೋಟಗಳು ಕೇಳಿಬಂದಿದ್ದು, ಕಡಿಮೆ ಎತ್ತರದಲ್ಲಿ ಹಾರಿದ ಯುದ್ಧ ವಿಮಾನಗಳ ಶಬ್ದ ಗಂಟೆಗಳ ಕಾಲ ಮುಂದುವರಿದಿತ್ತು. ನಗರದ ಆಜಾದಿ ಚೌಕದ ಬಳಿ ಗಾಢ ಕಪ್ಪು ಹೊಗೆ ಏರಿದ ದೃಶ್ಯ ಕಂಡುಬಂತು. ಶರೀಫ್ ತಾಂತ್ರಿಕ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ದಾಳಿಯಲ್ಲಿ ಕಟ್ಟಡಗಳಿಗೆ ಹಾನಿಯಾಗಿದೆ. ಈ ದಾಳಿಯಲ್ಲಿ ಇರಾನ್ ರೆವಲ್ಯೂಷನರಿ ಗಾರ್ಡ್‌ನ ಗುಪ್ತಚರ ಮುಖ್ಯಸ್ಥ ಮೇಜರ್ ಜನರಲ್ ಮಜೀದ್ ಖದಮಿ ಮೃತಪಟ್ಟಿದ್ದಾರೆ ಎಂದು ಇರಾನ್ ಮಾಧ್ಯಮಗಳು ಹಾಗೂ ಇಸ್ರೇಲ್ ರಕ್ಷಣಾ ಸಚಿವರು ತಿಳಿಸಿದ್ದಾರೆ.



ಉದ್ವಿಗ್ನತೆ ಮುಂದುವರಿಕೆ: ಇರಾನ್ ಹಾರ್ಮುಜ್ ಕಣಿವೆಯ ನಿಯಂತ್ರಣವನ್ನು ಸಡಿಲಗೊಳಿಸುವ ಯಾವುದೇ ಲಕ್ಷಣ ತೋರಿಸುತ್ತಿಲ್ಲ. ಯುದ್ಧ ಆರಂಭವಾದ ನಂತರ ಸಾಗರ ಸಾರಿಗೆ 90% ಕ್ಕಿಂತ ಹೆಚ್ಚು ಕುಸಿದಿದೆ. ಕೆಲವು ಹಡಗುಗಳಿಗೆ ಮಾತ್ರ ಅನುಮತಿ ನೀಡಲಾಗುತ್ತಿದೆ.

ಇರಾನ್, ಇಸ್ರೇಲ್ ಮತ್ತು ಅಮೆರಿಕ ನಡುವಿನ ಈ ಸಂಘರ್ಷವು ವೇಗವಾಗಿ ಉಲ್ಬಣಗೊಳ್ಳುತ್ತಿದೆ. ಜಾಗತಿಕ ಇಂಧನ ಸರಬರಾಜು, ಭದ್ರತೆ ಮತ್ತು ರಾಜತಾಂತ್ರಿಕ ಸಂಬಂಧಗಳ ಮೇಲೆ ಇದರ ಪರಿಣಾಮ ಗಂಭೀರವಾಗಿದೆ. ಯುದ್ಧ ವಿರಾಮ ಪ್ರಸ್ತಾವನೆ ಯಶಸ್ವಿಯಾಗುತ್ತದೆಯೇ ಎಂಬುದು ಮುಂದಿನ ದಿನಗಳಲ್ಲಿ ಸ್ಪಷ್ಟವಾಗಲಿದೆ.



ಇಸ್ರೇಲ್, ಗಲ್ಫ್ ರಾಷ್ಟ್ರಗಳ ಮೇಲೆ ಪ್ರತಿದಾಳಿ

ಇರಾನ್‌ನ ಕ್ಷಿಪಣಿಗಳು ಇಸ್ರೇಲ್‌ನ ಹೈಫಾ ನಗರವನ್ನು ತಾಕಿ, ನಾಲ್ವರು ನಾಗರಿಕರು ಮೃತಪಟ್ಟಿದ್ದಾರೆ. ಕುವೈತ್, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಸೌದಿ ಅರೇಬಿಯಾ ತಮ್ಮ ವಾಯು ರಕ್ಷಣಾ ವ್ಯವಸ್ಥೆಗಳನ್ನು ಸಕ್ರಿಯಗೊಳಿಸಿ, ಇರಾನ್‌ನ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ತಡೆಯಲು ಪ್ರಯತ್ನಿಸಿವೆ. ಹಾರ್ಮುಜ್ ಕಣಿವೆಯ ಮೇಲಿನ ನಿಯಂತ್ರಣದಿಂದ ಇರಾನ್ ಜಾಗತಿಕ ತೈಲ ಸರಬರಾಜಿನ ಮೇಲೆ ಒತ್ತಡ ತರುತ್ತಿದ್ದು, ಇದರ ಪರಿಣಾಮವಾಗಿ ಇಂಧನ ಬೆಲೆಗಳು ಏರಿಕೆಯಾಗಿವೆ.

ವಾಯುದಾಳಿಗಳಲ್ಲಿ ಹೆಚ್ಚುತ್ತಿರುವ ಸಾವು

ಟೆಹ್ರಾನ್ ಹೊರವಲಯದ ಎಸ್ಲಾಮ್‌ಶಹರ್ ಪ್ರದೇಶದಲ್ಲಿ ನಡೆದ ದಾಳಿಯಲ್ಲಿ ಕನಿಷ್ಠ 15 ಜನರು ಮೃತಪಟ್ಟಿದ್ದಾರೆ. ಕೋಮ್ ನಗರದಲ್ಲಿ ಐದು ಜನ ಬಲಿಯಾದ್ದು, ಇತರ ನಗರಗಳಲ್ಲಿ ನಡೆದ ದಾಳಿಗಳಲ್ಲಿ ಇನ್ನೂ ಆರು ಜನರು ಮೃತಪಟ್ಟಿದ್ದಾರೆ. ಟೆಹ್ರಾನ್‌ನಲ್ಲೇ ಮನೆ ಮೇಲೆ ಬಿದ್ದ ಬಾಂಬ್ ದಾಳಿಯಲ್ಲಿ ಮೂವರು ಮೃತಪಟ್ಟಿದ್ದಾರೆ.

ಸಾವು- ನೋವುಗಳು

ಯುದ್ಧ ಆರಂಭವಾದ ನಂತರ ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಅಂದಾಜಿಸಲಾಗಿದೆ. ಲೆಬನಾನ್‌ನಲ್ಲಿ 1,400ಕ್ಕೂ ಹೆಚ್ಚು ಜನರು ಬಲಿಯಾಗಿದ್ದು, ಲಕ್ಷಾಂತರ ಜನರು ಸ್ಥಳಾಂತರಗೊಂಡಿದ್ದಾರೆ. ಇಸ್ರೇಲ್‌ನಲ್ಲಿ 23 ಜನರು, ಗಲ್ಫ್ ಪ್ರದೇಶಗಳಲ್ಲಿ ಎರಡು ದಶಕಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಅಮೆರಿಕದ 13 ಸೈನಿಕರೂ ಮೃತಪಟ್ಟಿದ್ದಾರೆ.

ಅಮೆರಿಕ ದುಬಾರಿ ಕಾರ್ಯಾಚರಣೆ



ಇಸ್ಫಾಹಾನ್: ನೈರುತ್ಯ ಇರಾನ್‌ನ ಪರ್ವತ ಪ್ರದೇಶದಲ್ಲಿ ಶುಕ್ರವಾರ ಹೊಡೆದುರುಳಿಸಲಾದ ಅಮೆರಿಕ ವಾಯುಪಡೆಯ ಎಫ್-15ಇ ಸ್ಟ್ರೈಕ್ ಈಗಲ್ ವಿಮಾನದ ಇಬ್ಬರು ಸಿಬ್ಬಂದಿಯನ್ನು ರಕ್ಷಿಸಲು ಬೃಹತ್ ಮಟ್ಟದ ಯುದ್ಧಕಾಲದ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಸಿದೆ.

ಇಸ್ಫಾಹಾನ್ ಸಮೀಪದ ಬೆಟ್ಟಗುಡ್ಡಗಳಲ್ಲಿ 494ನೇ ಫೈಟರ್ ಸ್ಕ್ವಾಡ್ರನ್‌ಗೆ ಸೇರಿದ ಅಮೆರಿಕಾದ ವಿಮಾನ ಪತನಗೊಂಡಿತ್ತು. ನೂರಾರು ಸಿಬ್ಬಂದಿ, ಹಲವಾರು ವಿಮಾನಗಳು ಮತ್ತು ಸಿಐಎ ನೇತೃತ್ವದ ಕಾರ್ಯಾಚರಣೆಯನ್ನೂ ಒಳಗೊಂಡಿದ್ದ ಎರಡು ದಿನಗಳ ಈ ರಕ್ಷಣಾ ಕಾರ್ಯದಲ್ಲಿ ಇಬ್ಬರೂ ಸಿಬ್ಬಂದಿಯನ್ನು ಯಶಸ್ವಿಯಾಗಿ ರಕ್ಷಿಸಲಾಗಿದೆ.

ಉಪಕರಣಗಳ ನಷ್ಟ ಮತ್ತು ವೆಚ್ಚ: ಈ ಕಾರ್ಯಾಚರಣೆಯ ವೇಳೆ ಅಮೆರಿಕದ ಕನಿಷ್ಠ ಮೂರು ವಿಮಾನಗಳು ನಾಶವಾಗಿವೆ. ತಲಾ 100 ಮಿಲಿಯನ್ ಡಾಲರ್ ಮೌಲ್ಯದ ಎರಡು ಸಿ-130 ಹರ್ಕ್ಯುಲಸ್(ಅಂದಾಜಿನ ಪ್ರಕಾರ ಎಂಸಿ-130ಜೆ ಕಮಾಂಡೋ) ಮತ್ತು 7.5 ಮಿಲಿಯನ್ ಡಾಲರ್ ಮೌಲ್ಯದ ಎಂಹೆಚ್-6 ಲಿಟಲ್ ಬರ್ಡ್ ಹೆಲಿಕಾಪ್ಟರ್‌ನ ಅವಶೇಷಗಳನ್ನು ಗುರುತಿಸಲಾಗಿದೆ. ಇವು ಇರಾನ್ ಕೈಗೆ ಸಿಗದಂತೆ ನೆಲದ ಮೇಲೆಯೇ ನಾಶಪಡಿಸಲಾಗಿದೆ ಎಂದು ಅಮೆರಿಕ ಹೇಳಿದ್ದರೆ, ಇರಾನ್ ಎರಡು ಸಿ-130 ಮತ್ತು ಎರಡು ಬ್ಲಾಕ್‌ಹಾಕ್ ಹೆಲಿಕಾಪ್ಟರ್‌ಗಳನ್ನು ಹೊಡೆದುರುಳಿಸಿರುವುದಾಗಿ ಪ್ರತಿಪಾದಿಸಿದೆ.

» ಇಸ್ಫಾಹಾನ್‌ನಲ್ಲಿ ಎಫ್-15ಇ ಪೈಲಟ್‌ಗಳ ರಕ್ಷಣೆ



ಹಣಕಾಸು ಮತ್ತು ಕಾರ್ಯತಂತ್ರ: ಎಫ್-15ಇ ವಿಮಾನದ ಮೌಲ್ಯವನ್ನೂ ಒಳಗೊಂಡಂತೆ ಈ ಕಾರ್ಯಾಚರಣೆಯ ಒಟ್ಟು ವೆಚ್ಚ 210 ಮಿಲಿಯನ್‌ನಿಂದ 310 ಮಿಲಿಯನ್ ಡಾಲರ್ 1972ರಲ್ಲಿ ಲೆಫ್ಟಿನೆಂಟ್ ಕರ್ನಲ್ ಐಸಿಯಲ್ ಹ್ಯಾಂಬಲ್ಟನ್ ಅವರ ರಕ್ಷಣಾ ಕಾರ್ಯಾಚರಣೆಯ ಮಾದರಿಯಲ್ಲೇ, ಯಾವುದೇ ಸೈನಿಕನನ್ನು ಶತ್ರುಪಾಳಯದಲ್ಲಿ ಬಿಡಬಾರದು ಎಂಬ ಮಿಲಿಟರಿ ತತ್ವವನ್ನು ಇಲ್ಲಿ ಅನುಸರಿಸಲಾಗಿದೆ.

ಐಆರ್‌ಜಿಸಿ ಗುಪ್ತಚರ ಮುಖ್ಯಸ್ಥನ ಹತ್ಯೆ

ಟೆಹ್ರಾನ್: ಇರಾನ್ ರಾಜಧಾನಿ ಬಳಿಯ ವಸತಿ ಪ್ರದೇಶಗಳನ್ನು ಗುರಿಯಾಗಿಸಿ ಸೋಮವಾರ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ತನ್ನ ಗುಪ್ತಚರ ಮುಖ್ಯಸ್ಥ ಮಜೀದ್ ಖಾಡೆಮಿ ಮೃತಪಟ್ಟಿರುವುದನ್ನು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಖಚಿತಪಡಿಸಿದೆ.



ಭಯೋತ್ಪಾದಕ ದಾಳಿ ಎಂದು ಬಣ್ಣಿಸಲಾದ ಈ ದಾಳಿಯಲ್ಲಿ ಮೇಜರ್ ಜನರಲ್ ಮಜೀದ್ ಖಾಡೆಮಿ ಮುಂಜಾನೆ ಮೃತಪಟ್ಟಿದ್ದಾರೆ ಎಂದು ಮಿಲಿಟರಿ ಸಂಸ್ಥೆ ವರದಿ ಮಾಡಿದೆ. ಸಾವಿನ ನಿಖರ ಸ್ಥಳವನ್ನು ಉಲ್ಲೇಖಿಸದಿದ್ದರೂ, ಈ ಘಟನೆ ಟೆಹ್ರಾನ್ ಸುತ್ತಮುತ್ತ ನಡೆದ ಸರಣಿ ವೈಮಾನಿಕ ಬಾಂಬ್ ದಾಳಿಗಳ ಸಮಯದಲ್ಲಿ ಸಂಭವಿಸಿದೆ ಎನ್ನಲಾಗಿದೆ. ಜೂನ್‌ನಲ್ಲಿ ಹತರಾದ ಜನರಲ್ ಮೊಹಮ್ಮದ್ ಕಜೆಮಿ ಅವರ ಸ್ಥಾನಕ್ಕೆ ಖಾದೆಮಿ ನೇಮಕಗೊಂಡಿದ್ದರು.

ಖಾಡೆಮಿ ನೇರವಾಗಿ ಇರಾನ್‌ನ ಸರ್ವೋಚ್ಚ ನಾಯಕನಿಗೆ ಉತ್ತರಿಸುವ ಮತ್ತು ದೇಶೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸರ್ವೋಚ್ಚ ಅಧಿಕಾರ ಹೊಂದಿರುವ ಸಂಸ್ಥೆಯನ್ನು ಮುನ್ನಡೆಸುತ್ತಿದ್ದರು. ಕಳೆದ ಒಂದು ತಿಂಗಳ ಸಂಘರ್ಷದಲ್ಲಿ ದಿವಂಗತ ಸರ್ವೋಚ್ಚ ನಾಯಕ ಅಲಿ ಖಮೇನಿ ಮತ್ತು ಉನ್ನತ ಅಧಿಕಾರಿ ಅಲಿ ಲಾರಿಜಾನಿ ಸೇರಿದಂತೆ ಹಲವು ಉನ್ನತ ಮಟ್ಟದ ವ್ಯಕ್ತಿಗಳ ಸಾವಿನ ಬೆನ್ನಲ್ಲೇ ಇವರ ಸಾವು ಸಂಭವಿಸಿದೆ.

ಮಾ.17ರಂದು ನಡೆದ ದಾಳಿಯಲ್ಲಿ ರಾಷ್ಟ್ರೀಯ ಭದ್ರತಾ ಮಂಡಳಿ ಮುಖ್ಯಸ್ಥ ಮತ್ತು ಅವರ ಕುಟುಂಬ ಸದಸ್ಯರು ಹತರಾಗಿದ್ದರು. ಸರಣಿ ದಾಳಿಗಳಲ್ಲಿ ಬಸಿಜ್ ಕಮಾಂಡರ್ ಘೋಲಮ್ರೆಜಾ ಸೊಲ್ಯೆಮಾನಿ ಮತ್ತು ರೆವಲ್ಯೂಷನರಿ ಗಾರ್ಡ್ಸ್ ವಕ್ತಾರ ಅಲಿ ಮೊಹಮ್ಮದ್ ನೈನಿ ಕೂಡ ಹತರಾಗಿದ್ದಾರೆ ಎಂದು ವರದಿಯಾಗಿದೆ.

ಭಾರತಕ್ಕೆ ಇನ್ನೆರಡು ಎಲ್‌ಪಿಜಿ ನೌಕೆಗಳು

ಹೊಸದಿಲ್ಲಿ: ಹಾರ್ಮುಜ್ ಜಲಸಂಧಿ ಮೂಲಕ ಭಾರತೀಯ ಧ್ವಜವಿರುವ ಇನ್ನೆರಡು ಎಲ್‌ಪಿಜಿ ನೌಕೆಗಳು ಭಾರತೀಯ ಬಂದರುಗಳ ಕಡೆಗೆ ಹೊರಟಿವೆ. ಇದೇ ವೇಳೆ 16 ಇತರ ನೌಕೆಗಳು ಪರ್ಶಿಯನ್ ಕೊಲ್ಲಿಯಲ್ಲೇ ಬಾಕಿಯಾಗಿವೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ. ಸುಮಾರು 46,650 ಟನ್‌ಗಳಷ್ಟು ಎಲ್‌ಪಿಜಿಯುಕ್ತ ನೌಕೆ ಗ್ರೀನ್ ಸಾನ್ವಿ ಮಂಗಳವಾರ ಭಾರತೀಯ ಬಂದರು ತಲುಪಲಿದೆ. 15,500 ಟನ್ ಎಲ್‌ಪಿಜಿ ಲೋಡ್‌ನ ಇನ್ನೊಂದು ನೌಕೆ ಗ್ರೀನ್ ಆಶಾ ಏ.9ರಂದು ಭಾರತೀಯ ಕರಾವಳಿ ತಲುಪಲಿದೆ ಎಂದು ಬಂದರು, ಶಿಪ್ಪಿಂಗ್ ಮತ್ತು ಜಲಮಾರ್ಗಗಳ ಖಾತೆ ಹೆಚ್ಚುವರಿ ಕಾರ್ಯದರ್ಶಿ ಮುಖೇಶ್ ಮಂಗಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.


ಎರಡು ಎಲ್‌ಪಿಜಿ ಟ್ಯಾಂಕರ್‌ಗಳು ಸುರಕ್ಷಿತವಾಗಿ ಹಾರ್ಮುಜ್ ಜಲಸಂಧಿ ದಾಟುವ ಮೂಲಕ, ಇರಾನ್ ವಿರುದ್ಧ ಅಮೆರಿಕ -ಇಸ್ರೇಲ್ ದಾಳಿ ಹಿನ್ನೆಲೆಯಲ್ಲಿ ಮುಚ್ಚಿರುವ ಹಾರ್ಮುಜ್ ಜಲಸಂಧಿಯಿಂದಾಗಿ ಭಾರತದ ಒಟ್ಟು 8 ಎಲ್‌ಪಿಜಿ ಟ್ಯಾಂಕರ್‌ಗಳು ಸುರಕ್ಷಿತವಾಗಿ ಭಾರತೀಯ ಕರಾವಳಿಗೆ ತಲುಪಿದಂತಾಗಿದೆ.

ಯಾವೆಲ್ಲ ನೌಕೆಗಳು?: ಪರ್ಶಿಯನ್ ಕೊಲ್ಲಿಯಲ್ಲಿ ಬಾಕಿಯಾಗಿರುವ ನೌಕೆಗಳ ಪೈಕಿ ಒಂದು ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಲೋಡ್‌ಯುಕ್ತ ನೌಕೆ. ಎರಡು ಎಲ್‌ಪಿಜಿ ಟ್ಯಾಂಕರ್‌ಗಳು (ಒಂದರಲ್ಲಿ ಲೋಡ್ ಇದೆ, ಇನ್ನೊಂದು ಖಾಲಿ), ಆರು ಕಚ್ಚಾತೈಲ ತುಂಬಿದ ನೌಕೆಗಳು (5ಲೋಡೆಡ್, ಒಂದು ಖಾಲಿ), ಮೂರು ಕಂಟೈನರ್ ಹಡಗುಗಳು, ಒಂದು ಡ್ರೆಡ್ಜರ್, ಒಂದು ಕೆಮಿಕಲ್ ಸರಕು ತುಂಬಿರುವ ನೌಕೆ, ಮತ್ತೆರಡು ಬೃಹತ್ ಸರಕು ಸಾಗಣೆ ಹಡಗುಗಳು ಎಂದು ಅಧಿಕಾರಿ ಮಾಹಿತಿ ನೀಡಿದರು.

ರಸಗೊಬ್ಬರ ಘಟಕಗಳಿಗೆ ಶೇ.90 ಅನಿಲ ಪೂರೈಕೆ

ಹೊಸದಿಲ್ಲಿ: ಇಂಧನ ವ್ಯತ್ಯಯವನ್ನು ಸರಿದೂಗಿಸಲು ತೈಲ ಕಂಪನಿಗಳು ಮುಕ್ತ ಮಾರುಕಟ್ಟೆಯಿಂದ ಅನಿಲ ಖರೀದಿ ಮಾಡಿದ ಹಿನ್ನೆಲೆಯಲ್ಲಿ, ರಸಗೊಬ್ಬರ ಘಟಕಗಳಿಗೆ ನೈಸರ್ಗಿಕ ಅನಿಲ ಪೂರೈಕೆಯನ್ನು ಅವುಗಳ ಅಗತ್ಯದ ಶೇ.90ರಷ್ಟು ಹೆಚ್ಚಿಸಲಾಗಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಮಾತನಾಡಿ, ಏಪ್ರಿಲ್ 6 ರಿಂದ ಅನಿಲ ಪೂರೈಕೆಯನ್ನು ಶೇ. 60 ರಿಂದ ಶೇ. 90 ಕ್ಕೆ ಏರಿಸಲಾಗಿದೆ ಎಂದು ತಿಳಿಸಿದ್ದಾರೆ. ಹಾರ್ಮುಜ್ ಜಲಸಂಧಿಯ ಬಿಕ್ಕಟ್ಟಿನಿಂದಾಗಿ ಕತಾರ್‌ನಿಂದ ಪೂರೈಕೆ ಸ್ಥಗಿತಗೊಂಡಿದ್ದರೂ, ಭಾರತೀಯ ಕಂಪನಿಗಳು ಅಮೆರಿಕ, ಆಸ್ಟ್ರೇಲಿಯಾ ಮತ್ತು ರಷ್ಯಾದಿಂದ ದ್ರವೀಕೃತ



ನೈಸರ್ಗಿಕ ಅನಿಲವನ್ನು (ಎಲ್‌ಎನ್‌ಜಿ) ಪಡೆಯುತ್ತಿವೆ.

ವಿವಿಧ ವಲಯಗಳ ಪೂರೈಕೆ ಸ್ಥಿತಿ: ನಗರ ಅನಿಲ ವಿತರಣಾ ಜಾಲಗಳು ಮತ್ತು ಇತರ ಕೈಗಾರಿಕಾ ವಲಯಗಳಿಗೆ ಸೋಮವಾರದಿಂದ ಪೂರೈಕೆಯಲ್ಲಿ ಶೇ.10ರಷ್ಟು ಹೆಚ್ಚಳವಾಗಿದೆ. ಮನೆಗಳಿಗೆ ಪೂರೈಸುವ ಪೈಪ್ಡ್ ಅಡುಗೆ ಅನಿಲ ಮತ್ತು ಸಾರಿಗೆ ಸಿಎನ್‌ಜಿ ಪೂರೈಕೆ ಶೇ.100ರಷ್ಟು ಮುಂದುವರಿಯಲಿದೆ. ಹೋಟೆಲ್‌ಗಳಿಗೆ ಬಳಸುವ ವಾಣಿಜ್ಯ ಎಲ್‌ಪಿಜಿ ಹಂಚಿಕೆಯನ್ನು ಬಿಕ್ಕಟ್ಟಿನ ಮುನ್ನಾ ಅವಧಿಯ ಶೇ.70ಕ್ಕೆ ಏರಿಸಲಾಗಿದೆ. ಮಾ.1ರಿಂದ ಇದುವರೆಗೆ 18 ಕೋಟಿಗೂ ಹೆಚ್ಚು ಗೃಹಬಳಕೆಯ ಸಿಲಿಂಡರ್‌ಗಳನ್ನು ವಿತರಿಸಲಾಗಿದೆ.

ತೈಲ ಸಂಸ್ಕರಣಾಗಾರಗಳ ಉತ್ಪಾದನೆ ಹೆಚ್ಚಿಸಲಾಗಿದ್ದು, ಸಿಲಿಂಡರ್ ಬುಕಿಂಗ್ ಅವಧಿಯನ್ನು ನಗರ ಪ್ರದೇಶಗಳಲ್ಲಿ 25 ದಿನ ಹಾಗೂ ಗ್ರಾಮೀಣ ಭಾಗದಲ್ಲಿ 45 ದಿನಗಳಿಗೆ ನಿಗದಿಪಡಿಸಲಾಗಿದೆ. ಕಾಳಸಂತೆಯಲ್ಲಿ ಮಾರಾಟ ತಡೆಯಲು ಅಧಿಕಾರಿಗಳು 1,00,000ಕ್ಕೂ ಹೆಚ್ಚು ಕಡೆ ದಾಳಿ ನಡೆಸಿದ್ದು, 52,000 ಸಿಲಿಂಡರ್‌ಗಳನ್ನು ವಶಪಡಿಸಿಕೊಂಡು 220 ಜನರನ್ನು ಬಂಧಿಸಿದ್ದಾರೆ.

ಕಿರುಸುದ್ದಿ

ಐಎಸ್‌ಐ ನಂಟು: ಮೂವರ ಬಂಧನ

ಚಂಡೀಗಢ: ಪಂಜಾಬ್ ಪೊಲೀಸರ ಕೌಂಟರ್ ಇಂಟೆಲಿಜೆನ್ಸ್ ವಿಭಾಗವು ಪಾಕಿಸ್ತಾನದ ಐಎಸ್‌ಐ ಬೆಂಬಲಿತ ಭಯೋತ್ಪಾದಕ ಘಟಕವನ್ನು ಭೇದಿಸಿ, ಮೂವರನ್ನು ಬಂಧಿಸಿದೆ. ಬಂಧಿತರಿಂದ ಗ್ಲಾಕ್ ಪಿಸ್ತೂಲ್ ಜತೆಗೆ ಎರಡು ಹ್ಯಾಂಡ್ ಗ್ರೆನೇಡ್‌ಗಳನ್ನು ವಶಪಡಿಸಿಕೊಂಡಿದೆ. ಈ ಗ್ರೆನೇಡ್‌ಗಳು ಪಿಒಎಫ್ (ಪಾಕಿಸ್ತಾನ ಆರ್ಡನೆನ್ಸ್ ಫ್ಯಾಕ್ಟರಿ) ಗುರುತುಗಳನ್ನು ಹೊಂದಿದ್ದು, ಇದು ಗಡಿಯಾಚೆಗಿನ ಸಂಪರ್ಕವನ್ನು ಬಹಿರಂಗಪಡಿಸುತ್ತಿದೆ ಎಂದು ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ಹೇಳಿದ್ದಾರೆ. ಬಂಧಿತರನ್ನು ತರ್ನ್ ತರಾನ್‌ನ ಅಮ್ಮಿಶಾ ಗ್ರಾಮದ ನಿವಾಸಿ ಸರಬ್‌ಜಿತ್ ಸಿಂಗ್, ಅಮೃತಸರದ ನಂಗಲ್ ಪನ್ನುವಾನ್ ಗ್ರಾಮದ ನಿವಾಸಿ ಬಿಕ್ರಮ್ಜಿತ್ ಸಿಂಗ್ ಮತ್ತು ಅಮೃತಸರದ ಇಂದ್ರ ಕಾಲೋನಿಯ ನಿವಾಸಿ ಅಮನ್ದೀಪ್ ಸಿಂಗ್ ಎಂದು ಗುರುತಿಸಲಾಗಿದೆ. ಪ್ರಾಥಮಿಕ ವರದಿ ಪ್ರಕಾರ, ಬಂಧಿತ ದೇಶದ್ರೋಹಿಗಳು, ಅನೇಕ ರಾಜ್ಯಗಳಾದ್ಯಂತ ಪೊಲೀಸ್ ಸಂಸ್ಥೆಗಳನ್ನು ಗುರಿಯಾಗಿಸಲು ಸಂಚು ರೂಪಿಸಿತ್ತು. ಇದೀಗ ಪೊಲೀಸರು ಇದನ್ನು ಯಶಸ್ವಿಯಾಗಿ ತಪ್ಪಿಸಿದ್ದಾರೆ.

ಹೈಕೋರ್ಟ್‌ಗೆ ಖುದ್ದು ಹಾಜರಾದ ಕೇಜ್ರಿವಾಲ್

ಹೊಸದಿಲ್ಲಿ: ಅಬಕಾರಿ ಹಗರಣ ಪ್ರಕರಣದಲ್ಲಿ ಸಿಬಿಐ ಸಲ್ಲಿಸಿದ್ದ ಅರ್ಜಿ ವಿಚಾರಣೆಯಿಂದ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರನ್ನು ಹೊರಗಿಡಬೇಕೆಂದು ಕೋರಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ದಿಲ್ಲಿ ಹೈಕೋರ್ಟ್ ಮುಂದೆ ಖುದ್ದು ಹಾಜರಾಗಿ ವಾದಿಸಿದ್ದಾರೆ. ಈ ಪ್ರಕರಣದ ಮುಂದಿನ ವಿಚಾರಣೆಯನ್ನು ಏ.13ಕ್ಕೆ ನಿಗದಿಪಡಿಸಲಾಗಿದೆ. ಅರವಿಂದ್ ಕೇಜ್ರಿವಾಲ್ ಮತ್ತು ಇತರ ಎಲ್ಲ ಆರೋಪಿಗಳನ್ನು ಖುಲಾಸೆಗೊಳಿಸಿರುವುದನ್ನು ಪ್ರಶ್ನಿಸಿ ಸಿಬಿಐ ಹೈಕೋರ್ಟ್ ಮೊರೆ ಹೋಗಿದೆ. ಸಿಬಿಐ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ನ್ಯಾಯಾಲಯವು ನಾಟಕಗಳಿಗೆ ವೇದಿಕೆಯಲ್ಲ. ಕೇಜ್ರಿವಾಲ್ ಅವರು ಈ ಪ್ರಕರಣದಲ್ಲಿ ವೈಯಕ್ತಿಕವಾಗಿ ಹಾಜರಾಗಲು ಬಯಸಿದರೆ ತಮ್ಮ ವಕೀಲರನ್ನು ಬಿಡಬೇಕು ಎಂದು ವಾದಿಸಿದರು. ಅವರು ಅರ್ಜಿಯನ್ನು ಹಿಂತೆಗೆದುಕೊಳ್ಳುವುದನ್ನು ತೀವ್ರವಾಗಿ ವಿರೋಧಿಸಿದರು. ಕೇಜ್ರಿವಾಲ್ ಅವರ ಆರೋಪಗಳು ಕ್ಷುಲ್ಲಕ ಮತ್ತು ತಿರಸ್ಕಾರದಿಂದ ಕೂಡಿವೆ ಎಂದು ಹೇಳಿದರು.ಈ ಹಿಂದೆ ಪಶ್ಚಿಮಬಂಗಾಳದಲ್ಲಿ ಎಸ್‌ಐಆರ್ ಪ್ರಕ್ರಿಯೆ ವಿರೋಧಿಸಿ ಸುಪ್ರೀಂಕೋರ್ಟ್‌ನಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ವಾದ ಮಂಡಿಸಿದ್ದರು.



ಸೈಕಲ್‌ನಲ್ಲೇ ಎವರೆಸ್ಟ್ ಬೇಸ್ ಕ್ಯಾಂಪ್ ತಲುಪಿದ ಮಹಿಳೆ

ಲಖನೌ: ಉತ್ತರಪ್ರದೇಶದ ಗೋರಖ್‌ಪುರ ಯುವತಿ ದಿವ್ಯಾ ಸಿಂಗ್ ಸೈಕಲ್‌ನಲ್ಲಿ ಯಶಸ್ವಿಯಾಗಿ ಎವರೆಸ್ಟ್ ಶಿಖರದ ಬೇಸ್ ಕ್ಯಾಂಪ್ ತಲುಪುವ ಮೂಲಕ ಇತಿಹಾಸ ಬರೆದಿದ್ದಾರೆ. ಈ ಮೂಲಕ ದಿವ್ಯಾ ಸಿಂಗ್, ಎವರೆಸ್ಟ್ ಬೇಸ್ ಕ್ಯಾಂಪ್‌ಗೆ ಸೈಕಲ್‌ನಲ್ಲಿ ತಲುಪಿದ ಮೊದಲ ಮಹಿಳೆಯಾಗಿದ್ದು, ವಿಶ್ವದಲ್ಲೇ ಇಷ್ಟು ಎತ್ತರವನ್ನು ಸೈಕಲ್‌ನಲ್ಲಿ ತಲುಪಿ ಸಾಧನೆಗೈದ ದ್ವಿತೀಯ ಮಹಿಳೆಯಾಗಿದ್ದಾರೆ. ದಿವ್ಯಾ ಸಿಂಗ್ ಎವರೆಸ್ಟ್ ಬೇಸ್ ಕ್ಯಾಂಪ್‌ನಲ್ಲಿ ತಮ್ಮ ಸೈಕಲ್ ಮತ್ತು ಕೈಯಲ್ಲಿ ಭಾರತೀಯ ಧ್ವಜದೊಂದಿಗೆ ನಿಂತಿರುವ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದ್ದು, ಹಲವರಿಗೆ ಸ್ಫೂರ್ತಿ ತುಂಬಿದೆ. ಅವರು ನೇಪಾಳದ ಕಠ್ಮಂಡುವಿನಿಂದ ಎವರೆಸ್ಟ್ ಬೇಸ್ ಕ್ಯಾಂಪ್‌ಗೆ 14 ದಿನಗಳ ಕಾಲ ಸೈಕಲ್ ಸವಾರಿ ಮಾಡಿದ್ದಾರೆ. ವಿಪರೀತ ಚಳಿ ಮತ್ತು ಮಂಜಿನಿಂದ ಆವೃತವಾದ ಈ ಪ್ರದೇಶದಲ್ಲಿ ಅವರ ಸೈಕಲ್ ಪ್ರವಾಸ ಸುಗಮವಾಗಿರಲಿಲ್ಲ. ಪ್ರತಿನಿತ್ಯ 10-12 ಗಂಟೆ ಸೈಕಲ್‌ನಲ್ಲಿ ಪ್ರಯಾಣಿಸುತ್ತಿದ್ದರು. ಈ ವೇಳೆ ಪ್ರತಿಕೂಲ ಹವಾಮಾನ ಕೂಡ ಸುಗಮ ಪ್ರಯಾಣಕ್ಕೆ ಅಡ್ಡಿಪಡಿಸುತ್ತಿತ್ತು. ಈ ಸಾಧನೆಗೆ ಭಾರೀ ಪ್ರಶಂಸೆಗೆ ಪಾತ್ರವಾಗಿರುವ ದಿವ್ಯಾ ಸಿಂಗ್ ಅವರ ಧೈರ್ಯಕ್ಕೆ ಉತ್ತಮ ಪ್ರತಿಕ್ರಿಯೆಗಳು ದೊರಕುತ್ತಿದೆ.



ಹೈವೇಗಳಲ್ಲಿ ಜಾನುವಾರು: ರಾಜ್ಯ, ಕೇಂದ್ರಕ್ಕೆ ಸೂಚನೆ

ಹೊಸದಿಲ್ಲಿ: ಹೆದ್ದಾರಿಗಳಿಗೆ ಅಲೆಮಾರಿ ಜಾನುವಾರುಗಳು ನುಗ್ಗುವುದು ಮತ್ತು ಅಪಘಾತಗಳನ್ನು ತಡೆಯುವಂತೆ ಕೋರಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯ, ಕೇಂದ್ರ ಸರ್ಕಾರ ಮತ್ತು ಇತರರಿಂದ ಪ್ರತಿಕ್ರಿಯೆ ಕೇಳಿದೆ. ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠ, ಕೇಂದ್ರ, ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಭಾರತೀಯ ಜಾನುವಾರು ಕಲ್ಯಾಣ ಮಂಡಳಿಗೆ ನೋಟಿಸ್ ಜಾರಿ ಮಾಡಿದ್ದು, ನಾಲ್ಕು ವಾರಗಳೊಳಗೆ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ. ಈ ಅವಧಿಯ ನಂತರ ಪ್ರಕರಣದ ಮುಂದಿನ ವಿಚಾರಣೆ ನಡೆಯಲಿದೆ. ಲಾಯರ್ಸ್ ಫಾರ್ ಹ್ಯೂಮನ್ ರೈಟ್ ಇಂಟರ್ನ್ಯಾಷನಲ್ ಸಲ್ಲಿಸಿದ ಈ ಅರ್ಜಿ, ಜಾನುವಾರುಗಳ ರಸ್ತೆಗೆ ನುಗ್ಗುವಿಕೆಯನ್ನು ತಡೆಯಲು ಏಕರೂಪದ ರಾಷ್ಟ್ರೀಯ ಮಾರ್ಗಸೂಚಿಗಳು, ಹೆದ್ದಾರಿಗಳಿಗೆ ಕಡ್ಡಾಯ ಬೇಲಿ, ಜಾನುವಾರು ಆಶ್ರಯ ತಾಣಗಳ ಸ್ಥಾಪನೆ ಮತ್ತು ಪ್ರಾಣಿಗಳನ್ನು ಕಾನೂನುಬಾಹಿರವಾಗಿ ಬೀದಿಗೆ ಬಿಡುವವರ ಮೇಲೆ ದಂಡ ವಿಧಿಸುವಂತೆ ಕೋರಿದೆ. ಅಲ್ಲದೆ, ಅಪಘಾತಕ್ಕೊಳಗಾದ ಸಂತ್ರಸ್ತರಿಗೆ(ಯಾರೇ ಆಗಿದ್ದರೂ) ನೋ-ಫಾಲ್ಟ್ ಪರಿಹಾರ ರೂಪಿಸಲು ಒತ್ತಾಯಿಸಿದೆ.

ಹಲವು ರಾಜ್ಯಗಳು ಶೇ.10ರಷ್ಟು ಗೋ ಸಂರಕ್ಷಣಾ ಸೆಸ್ ವಿಧಿಸುತ್ತಿವೆಯಾದರೂ, ಅದನ್ನು ಜಾರಿಗೊಳಿಸುವ ಕ್ರಮಗಳ ಕೊರತೆಯಿದೆ ಎಂದು ನ್ಯಾಯಾಲಯ ಗಮನಿಸಿದೆ. ಇದಕ್ಕೆ ಸಂಬಂಧಿಸಿದ ವಿಷಯಗಳು ಈಗಾಗಲೇ ಬಾಕಿ ಇರುವ ಅಲೆಮಾರಿ ನಾಯಿಗಳ ಪ್ರಕರಣದಲ್ಲಿ ಚರ್ಚೆಯಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಪೀಠಕ್ಕೆ ತಿಳಿಸಿದೆ.

ಸಿಇಸಿ ಪದಚ್ಯುತಿ ಕೋರಿದ್ದ ನೋಟಿಸ್ ತಿರಸ್ಕರಿಸಿದ ವಿಪಿ

ಹೊಸದಿಲ್ಲಿ: ಭಾರತದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ವಿರೋಧ ಪಕ್ಷಗಳು ಸಲ್ಲಿಸಿದ್ದ ಮಹಾಭಿಯೋಗ ನೋಟಿಸ್ ಅನ್ನು ಉಪರಾಷ್ಟ್ರಪತಿ ಮತ್ತು ರಾಜ್ಯಸಭಾ ಸಭಾಪತಿಗಳೂ ಆಗಿರುವ ಸಿ.ಪಿ.ರಾಧಾಕೃಷ್ಣನ್ ಅವರು ತಿರಸ್ಕರಿಸಿದ್ದಾರೆ. ಚುನಾವಣಾ ಆಯೋಗದ ಕಾರ್ಯಪದ್ಧತಿಯಲ್ಲಿ ಪಕ್ಷಪಾತ ನಡೆದಿದೆ ಎಂಬ ಆರೋಪದ ಮೇಲೆ ವಿರೋಧ ಪಕ್ಷಗಳು ಈ ಮಹಾಭಿಯೋಗ ಪ್ರಕ್ರಿಯೆ ಆರಂಭಿಸಲು ಮುಂದಾಗಿದ್ದವು. ಸುಮಾರು 190ಕ್ಕೂ ಹೆಚ್ಚು ಸಂಸದರು ಸಹಿ ಹಾಕಿದ ಈ ನೋಟಿಸ್ ಅನ್ನು ರಾಜ್ಯಸಭೆಗೆ ಸಲ್ಲಿಸಲಾಗಿತ್ತು. ಆದರೆ, ಪ್ರಕ್ರಿಯಾತ್ಮಕ ಮಾನದಂಡಗಳನ್ನು ಪೂರೈಸಿಲ್ಲ ಎಂಬ ಕಾರಣ ನೀಡಿ ಅದನ್ನು ಅಂಗೀಕರಿಸಲು ಅಧ್ಯಕ್ಷರು ನಿರಾಕರಿಸಿದ್ದಾರೆ ಎಂದು ತಿಳಿದುಬಂದಿದೆ. ವಿರೋಧ ಪಕ್ಷಗಳು ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಚುನಾವಣಾ ಪ್ರಕ್ರಿಯೆಯಲ್ಲಿ ಪಕ್ಷಪಾತ, ಮತದಾರರ ಪಟ್ಟಿಯಲ್ಲಿ ಅಕ್ರಮಗಳು ಹಾಗೂ ವಿಶೇಷ ತೀವ್ರ ಪರಿಷ್ಕರಣೆ (ಎಸ್ ಐಆರ್) ವೇಳೆ ನಿಯಮ ಉಲ್ಲಂಘನೆ ನಡೆದಿರುವುದಾಗಿ ಗಂಭೀರ ಆರೋಪಗಳನ್ನು ಮಾಡಿದ್ದವು. ಕೆಲವು ರಾಜ್ಯಗಳಲ್ಲಿ ನಿರ್ದಿಷ್ಟ ರಾಜಕೀಯ ಪಕ್ಷಗಳಿಗೆ ಅನುಕೂಲವಾಗುವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನೂ ಅವರು ಉಲ್ಲೇಖಿಸಿದ್ದರು. ಇನ್ನೊಂದೆಡೆ, ಆಡಳಿತ ಪಕ್ಷ ಈ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದು, ಸಂವಿಧಾನಾತ್ಮಕ ಪ್ರಕ್ರಿಯೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿದೆ ಎಂದು ಹೇಳಿದೆ. ಭಾರತ ಸಂವಿಧಾನದ ಪ್ರಕಾರ ಮುಖ್ಯ ಚುನಾವಣಾ ಆಯುಕ್ತರನ್ನು ತೆಗೆದುಹಾಕಲು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಂತೆಯೇ ಕಠಿಣ ಮಹಾಭಿಯೋಗ ಪ್ರಕ್ರಿಯೆ ಅನಿವಾರ್ಯವಾಗಿದ್ದು, ಎರಡೂ ಸದನಗಳಲ್ಲಿ ವಿಶೇಷ ಬಹುಮತದ ಅನುಮೋದನೆ ಅಗತ್ಯವಿದೆ.

ಬುಡಕಟ್ಟು ಜನರು ಕೈ ಮತ ಬ್ಯಾಂಕ್

ತಿನ್ಸುಕಿಯಾ: ಅಸ್ಸಾಂ ಚಹಾ ಬುಡಕಟ್ಟು ಜನಾಂಗದವರ ಕಲ್ಯಾಣಕ್ಕಾಗಿ ಕೆಲಸ ಮಾಡದೆ ಪ್ರತಿ ಐದು ವರ್ಷಗಳಿಗೊಮ್ಮೆ ಕೊಯ್ಲು ಮಾಡುವ ಮತ ಬ್ಯಾಂಕ್ ಎಂದು ಕಾಂಗ್ರೆಸ್ ಪರಿಗಣಿಸುತ್ತಿದೆ ಎಂದು ಕೇಂದ್ರ ಸಚಿವ ಜೆ.ಪಿ. ನಡ್ಡಾ ಸೋಮವಾರ ಆರೋಪಿಸಿದ್ದಾರೆ. ಬಿಜೆಪಿಯ ಡೂಮ್ಡೂಮಾ ಅಭ್ಯರ್ಥಿ ರೂಪೇಶ್ ಗೋವಾಲಾ ಅವರನ್ನು ಬೆಂಬಲಿಸುವ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ನಡ್ಡಾ, ಈ ಈಶಾನ್ಯ ರಾಜ್ಯದಲ್ಲಿ ಕಾಂಗ್ರೆಸ್ ತನ್ನ ಆಡಳಿತದ ಅವಧಿಯಲ್ಲಿ ಒಳನುಸುಳುವವರಿಗಾಗಿ ರೆಡ್ ಕಾರ್ಪೆಟ್ ಅನ್ನು ಹೊರತಂದಿದೆ ಎಂದು ಹೇಳಿದ್ದಾರೆ. ಕಾಂಗ್ರೆಸ್ ಚಹಾ ಬುಡಕಟ್ಟುಗಳನ್ನು ಪ್ರತಿ ಐದು ವರ್ಷಗಳಿಗೊಮ್ಮೆ ಕೊಯ್ಲು ಮಾಡಬೇಕಾದ ಮತ ಬ್ಯಾಂಕ್ ಎಂದು ಪರಿಗಣಿಸಿತು. ಇದು ಸಮುದಾಯದ ಭವಿಷ್ಯವನ್ನು ಕತ್ತಲೆಗೆ ತಳ್ಳಿತು ಎಂದು ಅವರು ಹೇಳಿದರು. ಕಾಂಗ್ರೆಸ್ ಅಸ್ಸಾಂಗೆ ನುಸುಳುಕೋರರನ್ನು ಆಹ್ವಾನಿಸಿತು. ಅವರಿಗೆ ಇಲ್ಲಿ ಆಶ್ರಯ ನೀಡಿತು, ತುಷ್ಟೀಕರಣದ ರಾಜಕೀಯಕ್ಕಾಗಿ ಅವರಿಗೆ ಆಧಾರ ಮತ್ತು ಆಯುಷ್ಮಾನ್ ಭಾರತ್ ಕಾರ್ಡ್‌ಗಳನ್ನು ಒದಗಿಸಿತು ಎಂದು ಆರೋಪಿಸಿದ್ದಾರೆ.

ಕಸ್ಟೋಡಿಯಲ್ ಹಿಂಸೆ ಪ್ರಕರಣದಲ್ಲಿ ಸತ್ರ ನ್ಯಾಯಾಲಯ ಐತಿಹಾಸಿಕ ತೀರ್ಪು

ತಮಿಳುನಾಡಿನ 9 ಪೊಲೀಸರಿಗೆ ಮರಣದಂಡನೆ

ಚೆನ್ನೈ: ದೇಶವನ್ನೇ ನಡುಗಿಸಿದ್ದ ತಮಿಳುನಾಡಿನ ಸಾಥಾಂಕುಳಂ ಕಸ್ಟೋಡಿಯಲ್ ಸಾವು ಪ್ರಕರಣದಲ್ಲಿ ಮಹತ್ವದ ತೀರ್ಪು ಹೊರಬಿದ್ದಿದ್ದು, ಒಂಬತ್ತು ಪೊಲೀಸ್ ಸಿಬ್ಬಂದಿಗೆ ಮರಣದಂಡನೆ ವಿಧಿಸಲಾಗಿದೆ. ಮದುರೈ ಪ್ರಥಮ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು 2020ರಲ್ಲಿ ನಡೆದ ತಂದೆ-ಮಗ ಪಿ. ಜಯರಾಜ್ ಮತ್ತು ಜೆ.ಬೆನಿಕ್ಸ್ ಅವರ ಸಾವಿಗೆ ಸಂಬಂಧಿಸಿದ ಪ್ರಕರಣದಲ್ಲಿ ಈ ಕಠಿಣ ತೀರ್ಪು ಪ್ರಕಟಿಸಿದೆ.

2020ರ ಜೂನ್‌ನಲ್ಲಿ ಕೋವಿಡ್ ಲಾಕ್‌ಡೌನ್ ನಿಯಮ ಉಲ್ಲಂಘನೆ ಆರೋಪದ ಮೇಲೆ ಜಯರಾಜ್ ಮತ್ತು ಅವರ ಪುತ್ರ ಬೆನಿಕ್ಸ್ ಅವರನ್ನು ಸಾಥಾಂಕುಳಂ ಪೊಲೀಸರು ಬಂಧಿಸಿದ್ದರು. ಬಂಧನದ ನಂತರ ಪೊಲೀಸ್ ಠಾಣೆಯಲ್ಲಿ ನಡೆದ ಅಮಾನವೀಯ ಹಿಂಸೆ ಪರಿಣಾಮವಾಗಿ ಇಬ್ಬರೂ ಮೃತಪಟ್ಟಿದ್ದರು. ಈ ಘಟನೆ ದೇಶಾದ್ಯಂತ ಭಾರೀ ಆಕ್ರೋಶಕ್ಕೆ ಕಾರಣವಾಗಿ, ಪೊಲೀಸ್ ದೌರ್ಜನ್ಯ ಮತ್ತು ಕಸ್ಟೋಡಿಯಲ್ ಹಿಂಸೆ ವಿರುದ್ಧ ತೀವ್ರ ಚರ್ಚೆ ಹುಟ್ಟಿಸಿತ್ತು. ಪ್ರಕರಣದ ತೀವ್ರತೆಯನ್ನು ಗಮನಿಸಿ, ತನಿಖೆಯನ್ನು ನಂತರ ಕೇಂದ್ರ ತನಿಖಾ ದಳಕ್ಕೆ(ಸಿಬಿಐ) ಹಸ್ತಾಂತರಿಸಲಾಗಿತ್ತು. ವಿಚಾರಣೆ ವೇಳೆ ಸಾಕ್ಷ್ಯಾಧಾರಗಳು, ವೈದ್ಯಕೀಯ ವರದಿಗಳು ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಪರಿಗಣಿಸಿದ ನ್ಯಾಯಾಲಯ, ಆರೋಪಿಗಳನ್ನು ದೋಷಿಗಳೆಂದು ಘೋಷಿಸಿ, ಪ್ರಕರಣವನ್ನು 'ಅಪರೂಪದ ಅತ್ಯಂತ ಕ್ರೂರ ಪ್ರಕರಣ'ಎಂದು ಪರಿಗಣಿಸಿದೆ.

ನ್ಯಾಯಾಲಯವು ತನ್ನ ತೀರ್ಪಿನಲ್ಲಿ, ಕಾನೂನು ಜಾರಿಗೊಳಿಸುವವರಿಂದಲೇ ಇಂತಹ ಅಮಾನವೀಯ ಕೃತ್ಯಗಳು ನಡೆದಿರುವುದು ಸಮಾಜದ ವಿಶ್ವಾಸಕ್ಕೆ ದೊಡ್ಡ ಧಕ್ಕೆಯಾಗಿದೆ ಎಂದು ಹೇಳಿ, ಕಠಿಣ ಶಿಕ್ಷೆ ಅನಿವಾರ್ಯವೆಂದು ಅಭಿಪ್ರಾಯಪಟ್ಟಿದೆ. ಸುಮಾರು ಆರು ವರ್ಷಗಳ ವಿಚಾರಣೆಯ ನಂತರ ಹೊರಬಂದ ಈ ತೀರ್ಪು, ಕಸ್ಟೋಡಿಯಲ್ ಹಿಂಸೆ ವಿರುದ್ಧ ಕಠಿಣ ಸಂದೇಶ ನೀಡುವಂತೆ ಪರಿಣಮಿಸಿದೆ.

ಈ ಪ್ರಕರಣವು ದೇಶದಲ್ಲಿ ಮಾನವ ಹಕ್ಕುಗಳ ರಕ್ಷಣೆಯ ಅಗತ್ಯವನ್ನು ಮತ್ತೊಮ್ಮೆ ಒತ್ತಿಹೇಳಿದಂತಾಗಿದ್ದು, ಪೊಲೀಸ್ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯದ ಕುರಿತು ಚರ್ಚೆಯನ್ನು ಪುನರುಜ್ಜೀವನಗೊಳಿಸಿದೆ.

» ಸಾಥಾಂಕುಳಂ ಕಸ್ಟೋಡಿಯಲ್ ಸಾವು ಪ್ರಕರಣದಲ್ಲಿ 9 ಪೊಲೀಸರಿಗೆ ಮರಣದಂಡನೆ

» 2020ರಲ್ಲಿ ತಂದೆ-ಮಗ ಮೇಲೆ ಪೊಲೀಸ್ ಹಿಂಸೆ; ಇಬ್ಬರೂ ಮೃತಪಟ್ಟರು

» ಅತ್ಯಂತ ಅಪರೂಪದ ಕ್ರೂರ ಪ್ರಕರಣ' ಎಂದು ನ್ಯಾಯಾಲಯದ ಅಭಿಪ್ರಾಯ


» ಸಿಬಿಐ ತನಿಖೆ ಬಳಿಕ ದೋಷಿಗಳೆಂದು ಘೋಷಣೆ

» ಕಸ್ಟೋಡಿಯಲ್ ಹಿಂಸೆ ವಿರುದ್ಧ ಕಠಿಣ ಸಂದೇಶ ನೀಡಿದ ತೀರ್ಪು

ಜಾಗತಿಕ ಇಂಧನಕ್ಕಾಗಿ ಚಂದ್ರನ ಸುತ್ತ 6,800 ಮೈಲಿ ಉದ್ದ ಸೌರಫಲಕ ಪಟ್ಟಿ

ಟೋಕಿಯೋ: ಭೂಮಿಗೆ ನಿರಂತರವಾಗಿ ಶುದ್ಧ ಇಂಧನ ಪೂರೈಸುವ ಸಲುವಾಗಿ ಚಂದಿರನ ಸಮಭಾಜಕ ವೃತ್ತದ ಸುತ್ತ 6,800 ಮೈಲಿ ಉದ್ದದ ಸೌರ ಫಲಕಗಳ ಪಟ್ಟಿಯೊಂದನ್ನು ನಿರ್ಮಿಸುವ ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಜಪಾನಿನ ಶಿಮಿಜು ಕಾರ್ಪೊರೇಷನ್ ಅನಾವರಣಗೊಳಿಸಿದೆ.

ಲೂನಾ ರಿಂಗ್ ಎಂದು ಹೆಸರಿಸಲಾದ ಈ ಯೋಜನೆ, ಭೂಮಿಯ ಮೇಲಿನ ಸಮಸ್ಯೆಗಳನ್ನು ಮೆಟ್ಟಿ ನಿಂತು ನಿರಂತರ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಿದೆ. ಚಂದಿರನ ಮೇಲಿನ ಸೌರ ಕೋಶಗಳು ಸೂರ್ಯನ ಬೆಳಕನ್ನು ವಿದ್ಯುತ್ ಆಗಿ ಪರಿವರ್ತಿಸುತ್ತವೆ ಮತ್ತು ಕೇಬಲ್‌ಗಳ ಮೂಲಕ ಈ ಶಕ್ತಿಯನ್ನು ಭೂಮಿಗೆ ಮುಖ ಮಾಡಿರುವ ಚಂದಿರನ ಮುಂಭಾಗಕ್ಕೆ ಸಾಗಿಸಲಾಗುತ್ತದೆ. ಅಲ್ಲಿಂದ ಮೈಕ್ರೋವೇವ್ ಕಿರಣಗಳು ಮತ್ತು ಅಧಿಕ ಶಕ್ತಿಯ ಲೇಸರ್‌ಗಳ ಮೂಲಕ ಭೂಮಿಗೆ ಇಂಧನವನ್ನು ರವಾನಿಸಲಾಗುತ್ತದೆ. ಭೂಮಿಯ ಮೇಲಿರುವ ವಿಶೇಷ ಆಂಟೆನಾಗಳು ಈ ಕಿರಣಗಳನ್ನು ಸ್ವೀಕರಿಸಿ ಪುನಃ ವಿದ್ಯುತ್ ಆಗಿ ಪರಿವರ್ತಿಸಿ ಗ್ರಿಡ್‌ಗೆ ಪೂರೈಸಲಿವೆ.



ಈ ಬೃಹತ್ ನಿರ್ಮಾಣ ಕಾರ್ಯ ಸಂಪೂರ್ಣವಾಗಿ ಭೂಮಿಯಿಂದಲೇ ನಿಯಂತ್ರಿಸಲ್ಪಡುವ ರೋಬೋಟ್‌ಗಳ ಮೇಲೆ ಅವಲಂಬಿತವಾಗಿರುತ್ತದೆ. ಈ ಯಂತ್ರಗಳು ಚಂದ್ರನ ಮೇಲ್ಮೈಯನ್ನು ಅಗೆಯುವುದಲ್ಲದೆ, ಅಲ್ಲಿನ ಮಣ್ಣನ್ನು ಬಳಸಿಯೇ ಸೌರ ಕೋಶಗಳು, ಕಾಂಕ್ರೀಟ್ ಮತ್ತು ಗಾಜನ್ನು ತಯಾರಿಸಲಿವೆ. ಸ್ವಯಂಚಾಲಿತ ಉತ್ಪಾದನಾ ಘಟಕಗಳು 400 ಕಿಮೀ ಅಗಲದವರೆಗಿನ ಈ ಸೌರ ಪಟ್ಟಿಯನ್ನು ಚಂದಿರನ ಸುತ್ತ ಅಳವಡಿಸಲಿವೆ.

ಈ ಯೋಜನೆಯ ಬಗ್ಗೆ ಆಸಕ್ತಿ ಹೆಚ್ಚಾಗಿದ್ದರೂ, ಇದರ ವೆಚ್ಚದ ಬಗ್ಗೆ ನಿಖರ ಅಂದಾಜು ಇಲ್ಲ ಮತ್ತು ಯಾವುದೇ ಬಾಹ್ಯಾಕಾಶ ಸಂಸ್ಥೆಗಳಿಂದ ಅಧಿಕೃತ ಅನುಮೋದನೆ ದೊರೆತಿಲ್ಲ. ಜಿಯೋಥರ್ಮಲ್ ಪವರ್‌ನಂತಹ ಪರ್ಯಾಯಗಳಿಗೆ ಹೋಲಿಸಿದರೆ ಈ ಯೋಜನೆ ಅತ್ಯಂತ ದುಬಾರಿ, ತಂತ್ರಜ್ಞಾನವೂ ಸಿದ್ಧವಾಗಿಲ್ಲ ಎಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ.

ಇಂದಿನ ಉತ್ಪನ್ನವಾರು ದರ (ಹುಬ್ಬಳ್ಳಿ)

ಉತ್ಪನ್ನಗಳು	₹ ಕನಿಷ್ಠ (ಕ್ವಿಂ)	₹ ಗರಿಷ್ಠ (ಕ್ವಿಂ)
ಅಲಸಂದೆ ಕಾಳು	1611	5505
ಕಡಲೆಕಾಳು	609	5585
ಉದ್ದಿನಕಾಳು	1818	7256
ಧನಿಯಾ	9616	9616
ಒಣ ಮೆಣಸಿನಕಾಯಿ	5600	54299
ಅವರೇಕಾಯಿ	1511	1511
ಹೆಸರುಕಾಳು	639	6100
ನೆಲಗಡಲೆ (ಶೇಂಗಾ)	5430	6400
ಹುರುಳಿ ಕಾಳು	2911	2911
ಜೋಳ	1755	4152
ಮೆಕ್ಕೆಜೋಳ	1510	1751
ಮಡಿಕೆ (ಮಟಕಿ)	5511	13135
ಸಾಸುವೆ	2625	5009
ಈರುಳ್ಳಿ	500	2100
ಆಲೂಗಡ್ಡೆ	1300	1900
ಕುಸುಬೆ	5333	5351
ತೊಗರಿ	4052	4129
ಗೋಧಿ	1689	2510

CHANGE OF NAME

I, SALEEM (Old Name) R/o Maqbooliya Nagar, Hangal Sub Dist : Hangal, Dist : Haveri-581104 have changed my name to **SALEEM ANGADI (New Name)** Vide Affidavit Sworn Before Notary M.K. Kagadagar on 04-04-2026

CHANGE OF NAME

I, **MOHAMMED YASSEN MUSHTAQ AHMED KARNOOL** (Old Name) Resident of H No: 582 Mukkeri Galli Ganesh Peth Hubli 580020 (address), have changed my name as **MOHAMMED YASEEN KARNOOL** (New Name) henceforth I will be called and recognized by new name for all future purposes, dated: 06/04/2026.

CHANGE OF NAME

I, **ZAHEDABEGAUM (Old Name)** R/o Maqbooliya Nagar, Hangal Sub Dist : Hangal, Dist : Haveri-581104 have changed my name to **ZAHEDABEGAUM MOULAALISAHEB NASIIPUDI (New Name)** Vide Affidavit Sworn Before Notary M.K. Kagadagar on 02-04-2026

CHANGE OF NAME

I, **HASINA BEGUM RAICHUR (Old Name)**, have changed my name and henceforth be known and called as **HASINABEGUM MOHAMED KHASIM RAICHUR (New Name)** for all purposes. R/o Azad Mohalla, behind Venkatesh Colony, Gadag, Tq:Dist: Gadag, State: Karnataka. Submitted an affidavit dtd: 31.03.2026 through M.M. Hiremath, Notary, Gadag.

CHANGE OF NAME

I, **PARASHURAM LAMANI (Old Name)**, have changed my name and henceforth be known and called as **PARASHURAM RAMAPPA LAMANI (New Name)** for all purposes. R/o H.No.323, Pandurangapur, Kalasapur Tanda, Kalasapur, Gadag, Tq:Dist: Gadag, State: Karnataka. Submitted an affidavit dtd: 06.04.2026 through M.M. Hiremath, Notary, Gadag.

ಸಾರ್ವಜನಿಕ ನೋಟಿಸು

ನಮ್ಮ ಪಕ್ಷಗಾರರಾದ ಶ್ರೀ ಶಿವಲಿಂಗಪ್ಪ ತಂದೆ ಕಲ್ಲಪ್ಪ ದೊಡ್ಡಮನಿ ಸಾ : ಟೀಚರ ಕಾಲೋನಿ ಗೋಪನಕೊಪ್ಪ ಹುಬ್ಬಳ್ಳಿ ಜಿ : ಧಾರವಾಡ ಇವರು ಗದಗ ಜಿಲ್ಲಾ ಲಕ್ಷ್ಮೇಶ್ವರ ತಾಲೂಕ ರಾಮಗೇರಿ ಗ್ರಾಮದ ರಿ.ಸ.ನಂ 36/ಇ/62 ನೇದ್ದರಲ್ಲಿ ತಯ್ಯಾರಿಸಿದ ಗ್ರಾಮ ಪಂಚಾಯತ ರಾಮಗೇರಿ ಇವರ ವ್ಯಾಪ್ತಿಯಲ್ಲಿ ಬರುವ ಪ್ಲಾಟ ನಂ 62 ಕ್ಷೇತ್ರ 2 ಗುಂಟೆ ಪ್ಲಾಟನ್ನು ಅದರ ಮಾಲೀಕರಾದ ನಿಜಗುಣೆಪ್ಪ ತಂದೆ ಕಲ್ಲಪ್ಪ ದೊಡ್ಡಮನಿ ಇವರಿಂದ ದಿನಾಂಕ : 15-09-2006 ರಂದು ಖರೀದಿಸಿದ್ದು ಇರುತ್ತದೆ. ಸದರಿಯವರು ಬಸವರಾಜ ತಂದೆ ಮಲ್ಲಪ್ಪ ಉಮಚಗಿ ಇವರಿಂದ ಸದರ ಪ್ಲಾಟನ್ನು ದಿನಾಂಕ : 29-01-2001 ರಂದು ಖರೀದಿಸಿದ್ದು ಇರುತ್ತದೆ. ಸದರೀ ಪ್ಲಾಟಿನ ಹಳೆ ನಂ. 52 ಅಂತಾ ಇದ್ದು, ಖರೀದಿ ದಸ್ತಾವೇಜು ಸಬ್-ರಜಿಸ್ಟಾರ ಶಿರಹಟ್ಟಿ ಇವರಲ್ಲಿ ದಸ್ತಾವೇಜು ನಂ 1/782 ನೇ ನಂಬರಿನ ಬುಕ್ಕಿನಲ್ಲಿ 232 ರಿಂದ 234 ರಲ್ಲಿ ದಿನಾಂಕ : 29-01-2001 ರಂದು ನೋಂದಾಯಿಸಿದ್ದು ಇರುತ್ತದೆ. ಸದರ ಖರೀದಿಯ ಮೂಲ ಖರೀದಿ ಕಾಗದ ನಮ್ಮ ಪಕ್ಷಗಾರರು ತಮ್ಮ ಮನೆಯಿಂದ ದಿನಾಂಕ : 12-03-2026 ರಂದು ಹೊರಗಡೆ ಗಾಡಿ ಮೇಲೆ ಹೋಗುವಾಗ ವಿಜಯನಗರ ವಿಜಯ ಹೋಟೇಲ ಹತ್ತಿರ ಹುಬ್ಬಳ್ಳಿಯಲ್ಲಿ ಕಳೆದುಕೊಂಡಿದ್ದು ಸದರೀ ದಾಖಲೆ ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿದಲ್ಲಿ ಅದನ್ನು ಪಡೆದುಕೊಳ್ಳುತ್ತೇವೆ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು,

ದಿನಾಂಕ : 01-04-2026

ಸಹಿ/- (ಎಮ್.ಬಿ. ಬೂದಿಹಾಳ)
ವಕೀಲರು, ಕುಂದಗೋಳ.
ಮೊ: 9448560038

CHANGE OF NAME

I, **NAZNEEN MOHAMMED ABZAL HUNGUNDI** (Old Name) Resident of H No: 32, Chaitanya Colony, Near R N Shetty Road, Hubli, Udyamnagar, Dharwad, Karnataka, 580030, have changed my name as **NAZNEEN HUNGUNDI** (New Name) henceforth I will be called and recognized by new name for all future purposes, dated: 06/04/2026.

CHANGE OF NAME

I, **MUBEENA TOTAD** (Old Name) Resident of Mrutyunjay Nagar 5th Cross Ranebennur, Dist: Haveri - 581115, have changed my name as **MUBEENA BANU DAVANAGERE** (New Name) henceforth I will be called and recognized by new name for all future purposes, dated: 06/04/2026.

ಕರ್ನಾಟಕ ಸರ್ಕಾರ

ಜಂಟಿ ನಿರ್ದೇಶಕರು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕರ್ನಾಟಕ ಅರಣ್ಯ ಅಕಾಡೆಮಿ, ಗುಂಗರಗಟ್ಟಿ ಧಾರವಾಡ, ಪೋಸ್ಟ್ : ಮುಮ್ಮಿಗಟ್ಟಿ-580011

ಎ2/ಆಯವ್ಯಯ/ಹೊ.ಗು/ಅ.ಇ-ಟೆಂಡರ್/ಸಿಆರ್-/2026-27

ದಿನಾಂಕ : 06-04-2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2026-27ನೇ ಸಾಲಿನಲ್ಲಿ ಕರ್ನಾಟಕ ಅರಣ್ಯ ಅಕಾಡೆಮಿ, ಗುಂಗರಗಟ್ಟಿ, ಧಾರವಾಡದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ವೃಂದದ ನೌಕರರನ್ನು ಪೂರೈಸುವ ಕುರಿತು ಎಕ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ-ಟೆಂಡರ್‌ನ್ನು ಕರೆಯಲಾಗಿದೆ. ಹಾಗೂ ಸದರಿ ಅಲ್ಪಾವಧಿ ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **16-04-2026**ರ ಬೆಳಿಗ್ಗೆ 10.30 ಗಂಟೆಯವರೆಗೆ ಮಾತ್ರ ಇರುತ್ತದೆ. ಹಾಗೂ ದಿನಾಂಕ : **17-04-2026** ರಂದು ಬೆಳಿಗ್ಗೆ 11.00 ಗಂಟೆಯ ನಂತರ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ಒಂದು ವೇಳೆ ಸದರಿ ದಿನದಂದು ಅನಿವಾರ್ಯ ಕಾರಣದಿಂದ ಅಲ್ಪಾವಧಿ ಇ-ಟೆಂಡರ ರದ್ದುಪಡಿಸಿದ್ದಲ್ಲಿ ಅಥವಾ ಟೆಂಡರದಾರರು ಯಾರು ಭಾಗವಹಿಸದೇ ಇದ್ದ ಪಕ್ಷದಲ್ಲಿ ಅಟೋಎಕ್ಸ್‌ಟೇನಶನ್ ಅವಧಿಯು 07 ದಿವಸಗಳ ಅವಧಿಗೆ ಮಾತ್ರ ಇರುತ್ತದೆ. ಟೆಂಡರ್ ಮೊತ್ತ ಯುನಿಟ್ ನಂ. (I) ರೂ. **47,91,167.00** ಇ.ಎಮ್.ಡಿ **2%** ಮೊತ್ತ ರೂ. **96,000.00** ಹಾಗೂ ಯುನಿಟ್ ನಂ. (II) ರೂ. **45,31,613.00** ಇ.ಎಮ್.ಡಿ **2%** ಮೊತ್ತ ರೂ. **91,000.00** ಭದ್ರತಾ ಠೇವಣಿ ಟೆಂಡರ ಮೊತ್ತದ ಶೇಕಡಾ **5%** ರಷ್ಟು ಇರುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ KPPP:Karnataka.gov.in ಅಂತರ್ಜಾಲವನ್ನು ಅಥವಾ ಕಚೇರಿಯ ವೇಳೆಯಲ್ಲಿ ಈ ಕಚೇರಿಗೆ ಹಾಗೂ ದೂರವಾಣಿ ಮುಖಾಂತರ ಮೊಬೈಲ ಸಂಖ್ಯೆ : **8762271466** ಕ್ಕೆ ಸಂಪರ್ಕಿಸಬಹುದಾಗಿದೆ.

INDENT NO: KFD/2026-27/SE1787
INDENT NO: KFD/2026-27/SE1788

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಕರ್ನಾಟಕ ಅರಣ್ಯ ಅಕಾಡೆಮಿ, ಧಾರವಾಡ

ವಾಸಾಸಂಇ/ಧಾ/ಕೆಎಸ್‌ಎಂಸಿಎ/20/2026-27

CHANGE OF NAME

I, **MAHABOOB BADASHA KAZI (Old Name)**, have changed my name and henceforth be known and called as **MAHABOOB BADASHA AMEER SAHEB KAZI (New Name)** for all purposes. R/o #3838/1 A/13B/3, Channamma Circle, Dasar Oni, Kazi Challa division No.32, Gadag, Tq:Dist: Gadag, State: Karnataka. Submitted an affidavit dtd: 04.04.2026 through M.M. Hiremath, Notary, Gadag.

CHANGE OF NAME

I, **UDAYAKUMR NALAWADE** (Old Name) Resident of Near Raghavendra Temple, Mahantesh Nagar, Muddebihal - 586212, Tq: Muddebihal Dist: Vijayapur, have changed my name as **UDAYAKUMAR YASHWANT NALAWADE** (New Name), and my father name from **YASHAVANTA to YASHWANT** for all purposes, vide affidavit dated: 06/04/2026 before notary **M. A. MUDDEBIHAL** of Muddebihal.

CHANGE OF NAME

I, **PARVEEN** (Old Name) Resident of H No: 3 Raghavendra Nagar Barakotri Road Darwad Pin - 580001, have changed my name as **PARVEEN BEGUM** (New Name) for all purposes, vide affidavit dated: 06/04/2026 before notary **Bidaralli N. B.**

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392-200293

ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ-2/2026-27/04 ದಿ:01.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ-4 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 ಎ ನೀ ಯೋ -ಪ್ರಧಾನ ಕಾಮಗಾರಿಯಡಿ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ 01 ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 105.27 ಲಕ್ಷಗಳಿರುತ್ತದೆ. ಟೆಂಡರ್‌ನ್ನು ದಿನಾಂಕ: 01.04.2026 ರಿಂದ ದಿನಾಂಕ: 09.04.2026 ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 13.04.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು ದಿನಾಂಕ: 15.04.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು "KPPP" ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/22

O.S. No. 4/2026

IN THE COURT PRINCIPAL CIVIL JUDGE & JMFC BAGALKOT AT: BAGALKOT

1. **Gangadhar** S/o **Gangayya Muranal** ...**Plaintiff**

V/s

1. Shri **Pramod** S/o **Hanamappa Mutalik** ...**Defendants**

DRAFT SUMMONS U/O V RULE 20 r/w Sec. 151 C.P.C.

To, Defendants 2, 3 and **5**

1. Shri **Pramod** S/o **Hanamappa Mutalik** Age: 54 years, Occ: Social worker, R/o: R.R.Govekar, Plot No.59 Shriraksha Nilay datta Mandir near, Guruprasad colony **Belagavi** Tq and Dist: Belagavi **Defendants No. 1**
2. **Basavaraj** S/o **Bhimappa Sidlingappanavara** Age: 54 years, Occ: Contractor, R/o: Bagalkot Tq and Dist: Bagalkot **Defendants No. 2**

Whereas the Plaintiffs above named has filed this suit for declaration and injunction against the defendant in **O.S No. 04/2026** on the file of the Principal Civil Judge Court Bagalkot.

Therefore, all are hereby summoned to appear before the Principal Civil Judge Court Bagalkot. Dist: Bagalkot, in Karnataka **On 28/04/2026** at **10.45 A.M** on either in person or through the advocate and answer the claim of the Plaintiff, failing which the suit will be heard and decided in your absence and decided on merits of the case, plase note.

Give under my hand and seal of the court on this **02/04/2026**.

(seal)

By order of the court
Sd/- Shiristedar Principal Civil judge and JMFC Court Bagalkot

Sd/- **(P. B. Moharir)** Advocate for Plaintiff

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ

ಕ್ರಸಂ: ಪಿಬಿ/4059CMIDP/ಅಧಿಸೂಚನೆ: 2025-26/4016 ದಿನಾಂಕ: 31.03.2026

ಇ-ಟೆಂಡರ್ ಅಧಿಸೂಚನೆ IFT-KW-4
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)(ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ-ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ-ಪ್ರೋಕ್‌ನಲ್ಲಿ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. ಒಟ್ಟು 1 ಕಾಮಗಾರಿ

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 08-04-2026 (16.00 ಗಂಟೆವರೆಗೆ) (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 09-04-2026 (16.00 ಗಂಟೆವರೆಗೆ) (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10-04-2026 (16.30 ಗಂಟೆಗೆ) (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 13-04-2026 (16.00 ಗಂಟೆಗೆ)

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ
ಶಿರಸಿ (ಉತ್ತರ ಕನ್ನಡ ಜಿಲ್ಲೆ)

DIPR/KWR/KSMCA/17/25-27 dt. 04.04.2026

ಕರ್ನಾಟಕ ಸರಕಾರ

ನಗರಸಭೆ ಕಾರ್ಯಾಲಯ, ಕೊಪ್ಪಳ.
City Municipal Council, Koppal.

E-mail: itstaff_ulb_koppal@yahoo.com www.koppalcity.gov.in

ಸಂಖ್ಯೆ/ಕೊನಸ/ಮ.ಹರಾಜು/2026-2027/103 ದಿನಾಂಕ : 02-04-2026.

ಮಳಿಗೆ ಬಾಡಿಗೆ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಕೊಪ್ಪಳ ನಗರದ ಸಾರ್ವಜನಿಕರಿಗೆ ಹಾಗೂ ವ್ಯಾಪಾರಸ್ಥರಿಗೆ ತಿಳಿಯಪಡಿಸುವುದೇನೆಂದರೆ, ಕೊಪ್ಪಳ ನಗರಸಭೆಗೆ ಸಂಬಂಧಿಸಿದಂತೆ ನಗರದ ಜೆ.ಪಿ ಮಾರುಕಟ್ಟೆಯಲ್ಲಿ ಕಲಬುರ್ಗಿ ಕ್ಯಾಬಿನೆಟ್ ಯೋಜನೆಯಡಿಯಲ್ಲಿ ನಿರ್ಮಿಸಿರುವ ಮಳಿಗೆಗಳಲ್ಲಿ ಖಾಲಿ ಇರುವ ಮಳಿಗೆ ಸಂ:15,16,17,18,19,20,21 ಹಾಗೂ 23,24,25,26. ಒಟ್ಟು 11 ವಾಣಿಜ್ಯ ಮಳಿಗೆಗಳು ಹಾಗೂ ಸಾಹಿತ್ಯಭವನದ ಹತ್ತಿರ ಇರುವ ನಗರಸಭೆಯ ಮಳಿಗೆಗಳಲ್ಲಿ ಮಳಿಗೆ ಸಂ:06,07,11 ಒಟು 3 ವಾಣಿಜ್ಯ ಮಳಿಗೆಗಳು, ದಿವಟರ್ ಸರ್ಕಲ್ ಹತ್ತಿರ ಇರುವ ಮಳಿಗೆ ಸಂ: 02,04 ಒಟ್ಟು 2 ವಾಣಿಜ್ಯಮಳಿಗೆ, ಸಾಲಾರ ಜಂಗ್ ರಸ್ತೆ ಜೆ.ಪಿ ಮಾರುಕಟ್ಟೆ ಐ.ಡಿ.ಎಸ್.ಎಂ.ಟಿ. ಯೋಜನೆಯ ಮಳಿಗೆಗಳಲ್ಲಿ ಮಳಿಗೆ ಸಂ: 18 ಹಾಗೂ 19, ನಗರಸಭೆ ಕಚೇರಿ ಪಕ್ಕದಲ್ಲಿರುವ ಐ.ಡಿ.ಎಸ್.ಎಂ.ಟಿ ಯೋಜನೆಯಡಿಯಲ್ಲಿ ಮಳಿಗೆ ಸಂ: 08, ಹಾಗೂ 19, ಹೊಸ ಬಸ್ ನಿಲ್ದಾಣದ ಎದುರುಗಡೆ ಇರುವ ಮಳಿಗೆಗಳಲ್ಲಿ ಮಳಿಗೆ ಸಂ:06 ಹೀಗೆ ಒಟ್ಟು 21 ಮಳಿಗೆಗಳು ಬಾಡಿಗೆಗೆ ನೀಡುವ ಸಂಬಂಧ **ದಿನಾಂಕ : 16-04-2026 ರಂದು ಬೆಳಿಗ್ಗೆ 11:00 ಗಂಟೆಗೆ** ನಗರಸಭೆ ಕಚೇರಿ ಸಭಾಭವನದಲ್ಲಿ ಬಾಡಿಗೆ ಬಹಿರಂಗ ಹರಾಜು ಮಾಡಲಾಗುವುದು ಕಾರಣ ಆಸಕ್ತ ಬಿಡ್‌ದಾರರು ಆಯಾ ಮಳಿಗೆಗಳಿಗೆ ನಿಗಧಿಪಡಿಸಿದ ಠೇವಣಿಯ ಮೊತ್ತದ ಮೂಲ ಡಿ.ಡಿಯನ್ನು ಈ ಕಾರ್ಯಾಲಯಕ್ಕೆ **ದಿನಾಂಕ : 15-04-2026ರ ಮಧ್ಯಾಹ್ನ 1:30 ಗಂಟೆಯ** ಒಳಗಾಗಿ ಡಿ.ಡಿ ಸಲ್ಲಿಸಲು ತಿಳಿಸಿದೆ. ಅವಧಿ ಮೀರಿಬಂದ ಡಿ.ಡಿ ಸ್ವೀಕರಿಸಲಾಗುವುದಿಲ್ಲ ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ಕಂದಾಯ ಶಾಖೆಯಲ್ಲಿ ಸಂಪರ್ಕಿಸಲು ಕೋರಿದೆ.

ವಿವರಣೆ : (1) ಜೆ.ಪಿ ಮಾರುಕಟ್ಟೆಯಲ್ಲಿ ಕಲುಬುರ್ಗಿ ಕ್ಯಾಬಿನೆಟ್ ಯೋಜನೆಯ ಮಳಿಗೆಗಳು : **ಒಟ್ಟು 11 ಮಳಿಗೆಗಳು** (2) ಸಾಹಿತ್ಯಭವನದ ಹತ್ತಿರ ಇರುವ ನಗರಸಭೆಯ ಮಳಿಗೆಗಳು : **ಒಟ್ಟು 03 ಮಳಿಗೆಗಳು** (3) ದಿವಟರ್ ಸರ್ಕಲ್ ಹತ್ತಿರ ಇರುವ ನಗರಸಭೆಯ ಮಳಿಗೆಗಳು : **ಒಟ್ಟು 02 ಮಳಿಗೆಗಳು** (4) ಸಾಲಾರಜಂಗ ರಸ್ತೆಯ ಜೆ.ಪಿ ಮಾರುಕಟ್ಟೆಯಲ್ಲಿರುವ ಐ.ಡಿ.ಎಸ್.ಎಂ.ಟಿ ಮಳಿಗೆ : **ಒಟ್ಟು 02 ಮಳಿಗೆಗಳು** (5) ನಗರಸಭೆ ಕಚೇರಿ ಪಕ್ಕದಲ್ಲಿರುವ ಐ.ಡಿ.ಎಸ್.ಎಂ.ಟಿ ಯೋಜನೆಯ ಮಳಿಗೆಗಳು : **ಒಟ್ಟು 02 ಮಳಿಗೆಗಳು** (6) ಹೊಸ ಬಸ್ ನಿಲ್ದಾಣದ ಎದುರುಗಡೆ ಇರುವ ನಗರಸಭೆಯ ಮಳಿಗೆ : **ಮಳಿಗೆ ಸಂ:06**

ಸಹಿ/- ಪೌರಾಯುಕ್ತರು,
ನಗರಸಭೆ ಕೊಪ್ಪಳ

ವಾ.ಸಾ.ಇ/ಕೊಪ್ಪಳ/06/ದೇಶಪಾಂಡೆಪಬ್ಲಿಸಿಟಿ/2026-27

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ಕೇಂದ್ರ ಕಛೇರಿ, ಹುಬ್ಬಳ್ಳಿ.

ಸಂಖ್ಯೆ: ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.01/2026-27 ದಿನಾಂಕ: 06-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆಪಿಪಿಪಿ) ಯ ಮೂಲಕ

ಆಸಕ್ತ ಬಿಡ್‌ದಾರರಿಂದ ಈ ಕೆಳಗೆ ತೋರಿಸಿದಂತೆ ಸಾಮಗ್ರಿಗಳ ಸರಬರಾಜಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ವಿವರಣೆ	ಅಂದಾಜು ಮೌಲ್ಯ
01	ಟಾಟಾ ಬಿಎಸ್-VI ವಾಹನಗಳಿಗೆ ಅಟೋಮೊಟಿವ್ ಲ್ಯೂಬ್ರಿಕಂಟ್ಸ್, ಕೂಲಂಟ್ ಮತ್ತು ಆಡ್‌ಬ್ಲೂ (ಲಿಕ್ವಿಡ್ ಯೂರಿಯಾ) (ಅಲ್ಪಾವಧಿ ಟೆಂಡರ್).	ರೂ. 438 ಲಕ್ಷ
02	ಕ್ಲಚ್ ಮತ್ತು ಕ್ಲಚ್ ಬಿಡಿಭಾಗಗಳು.	ರೂ. 342 ಲಕ್ಷ
03	ರೇಡಿಯೇಟರ್ ಅಸೆಂಬ್ಲಿ ಮತ್ತು ರೇಡಿಯೇಟರ್ ಬಿಡಿಭಾಗಗಳು.	ರೂ. 177 ಲಕ್ಷ
04	ಬಸ್ ಸೀಟ್ ಅಸೆಂಬ್ಲಿಗಳು.	ರೂ. 165 ಲಕ್ಷ
05	ಲೇಲ್ಯಾಂಡ್ ಬಿಎಸ್-VI ವಾಹನಗಳಿಗೆ ಅಟೋಮೊಟಿವ್ ಲ್ಯೂಬ್ರಿಕಂಟ್ಸ್ ಮತ್ತು ಕೂಲಂಟ್.	ರೂ. 86 ಲಕ್ಷ
06	ಎಲ್‌ಇಡಿ ರೂಫ್ ಲ್ಯಾಂಪ್ ಅಸೆಂಬ್ಲಿಗಳು.	ರೂ. 81 ಲಕ್ಷ
07	ಕ್ಯೂರಿಂಗ್ ಬ್ಯಾಗ್ ಮತ್ತು ಕ್ಯೂರಿಂಗ್ ಎನ್ವೇಲೋಪ್‌ಗಳು.	ರೂ. 56 ಲಕ್ಷ

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಸಮಯ : ಟೆಂಡರ್ ಕ್ರ. ಸಂ. 1, 4, 5, 6 ಮತ್ತು 7 ರ ಟೆಂಡರ್‌ಗಳಿಗೆ 21-04-2026 ಮತ್ತು ಕ್ರ. ಸಂ. 2 ಮತ್ತು 3 ರ ಟೆಂಡರ್‌ಗಳಿಗೆ ದಿನಾಂಕ : 21-05-2026 ಘಂಟೆ, 17:30 ವರೆಗೆ.

ವಿವರಗಳಿಗಾಗಿ ವೆಬ್‌ಸೈಟ್ : **http://kppp.karnataka.gov.in** ಅಥವಾ ಮೊಬೈಲ್ ಫೋನ್ ಸಂಖ್ಯೆ : 70220 09113 ಗೆ ಸಂಪರ್ಕಿಸಿ.

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು,
(ಟೆಂಡರ್ ಕರೆಯುವ ಪ್ರಾಧಿಕಾರ).

ಡಿಐಪಿಆರ್/ಧಾರವಾಡ/21/ಮಣಿಪಾಲ್/2026-27

ಕ್ರಿಮಿನಲ್ ಮಿಸಲೇನಿಯಸ್ ನಂ : 227/2026

ಮೆ: ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ಸವಣೂರ ಇವರ ನ್ಯಾಯಾಲಯದಲ್ಲಿ

ಅರ್ಜಿದಾರಳು : ಪುಷ್ಪಾ ಕೋಂ ಶಿವಾನಂದ ಹುಕ್ಕೇರಿ ಹಾಗೂ ಇತರರು

ವಿರುದ್ಧ

ಎದುರುಗಾರರು : ಜನನ ಮರಣಗಳ ನೋಂದಣಿ ಅಧಿಕಾರಿಗಳು, ಸವಣೂರ ಇವರ ಪರವಾಗಿ ಪುರಸಭೆ ಕಾರ್ಯಾಲಯ ಸವಣೂರ

ಸಾರ್ವಜನಿಕ ನೋಟೀಸು

ಇವರಲ್ಲಿ ಅರ್ಜಿದಾರ ನಂ.6 ನೇದವನಾದ ನಾನು ಚನ್ನಪ್ಪ ತಂದೆ ಬಸವಣ್ಣೆಪ್ಪ ಕುನ್ನೂರ ನನ್ನ ತಾಯಿಯಾದ ಆದ ಸುಶೀಲಾ ಕೋಂ ಬಸವಣ್ಣೆಪ್ಪ ಕುನ್ನೂರ ಇವರು ಸವಣೂರ ತಾಲೂಕಾ ಪೈಕಿ ದಂಡಿನಪೇಟೆ ಓಣಿ ಸವಣೂರ ಪಟ್ಟಣದ ನನ್ನ ತಂದೆ ಮನೆಯಲ್ಲಿ ದಿನಾಂಕ:17-03-2019 ರಂದು ಮರಣ ಹೊಂದಿರುತ್ತಾರೆಂದು ಎದುರುಗಾರರ ಮರಣಗಳ ನೋಂದಣಿ ಪುಸ್ತಕದಲ್ಲಿ ಮರಣದ ದಿನಾಂಕವನ್ನು ನೋಂದಾಯಿಸಿಕೊಳ್ಳಲು ಮೇಲ್ಕಾಣಿಸಿದ ಮಾನ್ಯ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದ್ದು ಇರುತ್ತದೆ.ಕಾರಣ ಸದರ ಅರ್ಜಿಗೆ ಯಾರಾದರೂ ಸಂಬಂಧಪಟ್ಟವರು ತಕರಾರು ವಗೈರೆ ಮಾಡುವವರಿದ್ದಲ್ಲಿ ಅಂತವರು ದಿನಾಂಕ: 18-05-2026 ರಂದು ಮುಂಜಾನೆ 11=00 ಘಂಟೆಗೆ ಮೇಲ್ಕಾಣಿಸಿದ ಕೋರ್ಟಿನ ಪ್ರಕರಣದಲ್ಲಿ ತಾವಾಗಲಿ ಅಥವಾ ತಮ್ಮ ಪರ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸಬೇಕು. ಇಲ್ಲದೆ ಇದ್ದಲ್ಲಿ ಕಾನೂನು ಪ್ರಕಾರ ಮುಂದಿನ ಆದೇಶ ಮಾಡಲಾಗುತ್ತದೆ ಈ ದಿನ ದಿನಾಂಕ : 01-04-2026 ರಂದು ಮೋಹರಿನೊಂದಿಗೆ ಕೊಡಲ್ಪಟ್ಟಿರುತ್ತದೆ.

ಸಹಿ/- ಶಿರಸ್ತೆದಾರರು
ದಿವಾಣಿ ನ್ಯಾಯಾಧೀಶರು ಪ 1ನೇ ವರ್ಗದ ನ್ಯಾಯಿಕ ದಂಡಾಧಿಕಾರಿಗಳು ಸವಣೂರ ನ್ಯಾಯಾಲಯ
ಸಹಿ/- (ಯು.ಎಸ್. ಕಟಗಿ)
ಅರ್ಜಿದಾರರ ಪರ ವಕೀಲರು, ಸವಣೂರ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ

ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ, ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ ಬಾಗಲಕೋಟ - 587104.

ಸಂ : ಆ.ಅ./ತೋವಿವಿಬಾ/ಸಖಿಕ/ಟೆ.ನಂ-218/2026-27 ದಿನಾಂಕ : 06-04-2026

ಮರುಟೆಂಡರ ಪ್ರಕಟಣೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಡಿಯಲ್ಲಿ ಬರುವ ತೋ.ಮ.ವಿ., ಬೀದರಗೆ Establishment of Common Incubation Centre for processing of fruits, vegetables at:COH, Bidar (including of Construction Works) ಕೆ.ಕೆ.ಆರ್.ಡಿ.ಬಿ. ಯೋಜನೆಯಡಿಯಲ್ಲಿ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮರುಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಟೆಂಡರ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಂಡು ಟೆಂಡರನ್ನು ಸಲ್ಲಿಸುವುದು.

ಟೆಂಡರನ ಘಟಣಾವಳಿಗಳು (ವೇಳಾಪಟ್ಟಿ)

1	ಟೆಂಡರ ಅಂಶಗಳ ಸ್ಪಷ್ಟಿಕರಣಕ್ಕಾಗಿ ಕೊನೆಯ ದಿನಾಂಕ	16-04-2026	@	14.00 ಘಂ
2	ಪೂರ್ವ ಬಿಡ್ ಸಭೆಯ ದಿನಾಂಕ	17-04-2026	@	11.00 ಘಂ
3	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ	06-05-2026	@	16.00 ಘಂ
4	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	08-05-2026	@	11.00 ಘಂ
5	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ)	12-05-2026	@	12.00 ಘಂ

ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ corrigendum/addendum ಬಗ್ಗೆ ಮಾಹಿತಿ ಪಡೆಯಬೇಕು.. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಫೋ : 08354-230258.

ಸಹಿ/-ಆಸ್ತಿ ಅಧಿಕಾರಿಗಳು
ತೋ.ವಿ.ವಿ. ಬಾಗಲಕೋಟ

DIPR/BGK/RO-NO-02/KSMCA/2026-27

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur

(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು -584102
Phone /Fax-08532-238488/89
www.rims-raichur.karnataka.gov.in info@rims-raichur.com

ಸಂ. ರಿಮ್ಸ್/ಸರಬರಾಜು/ಟೆಂಡರ್/2025-26 ದಿನಾಂಕ:04.04.2026

ಟೆಂಡರ್ ಪ್ರಕಟಣೆ

2024-25ನೇ ಸಾಲಿನ ಕ.ಕ.ಪ್ರ.ಅ. ಮಂಡಳಿಯ ಮೈಕ್ರೋ ಯೋಜನೆಯಡಿ ದೇವದುರ್ಗ ತಾಲೂಕಿನ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳ ಅನುಷ್ಠಾನ ಮಾಡಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ದೇವದುರ್ಗ ಸಾರ್ವಜನಿಕ ತಾಲೂಕು ಆಸ್ಪತ್ರೆಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಸರಬರಾಜು ಮಾಡಿಸುವುದು ಹಾಗೂ ಅಳವಡಿಕೆ ಮಾಡಿಸುವ ಕುರಿತು	ರಿಮ್ಸ್/ಡಿಹೆಚ್‌ಓ/ ಸರಬರಾಜು/ ಟೆಂಡರ್/ ಉಪಕರಣ/15/2025-26/ಕಾಲ್-2 DME/2025-26/IND2213	125.00
2	ದೇವದುರ್ಗ ತಾಲೂಕಿನ ಸಮುದಾಯ ಆರೋಗ್ಯ ಕೇಂದ್ರ ಜಾಲಹಳ್ಳಿಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು, ಸರಬರಾಜು ಮಾಡಿಸುವುದು ಮತ್ತು ಅಳವಡಿಸಿಕೆ ಮಾಡಿಸುವ ಕುರಿತು	ರಿಮ್ಸ್/ಡಿಹೆಚ್‌ಓ/ ಸರಬರಾಜು/ ಟೆಂಡರ್/ ಉಪಕರಣ/16/2025-26/ಕಾಲ್-2 DME/2025-26/IND2214	30.00
3	ದೇವದುರ್ಗ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ, ಗಾಣದಾಳ ಮತ್ತು ರಾಮದುರ್ಗ ಗಳಿಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಪೀಠೋಪಕರಣಗಳನ್ನು, ಸರಬರಾಜು ಮಾಡಿಸುವುದು ಮತ್ತು ಅಳವಡಿಸಿಕೆ ಮಾಡಿಸುವ ಕುರಿತು	ರಿಮ್ಸ್/ಡಿಹೆಚ್‌ಓ/ ಸರಬರಾಜು/ ಟೆಂಡರ್/ ಉಪಕರಣ/17/2025-26/ಕಾಲ್-2 DME/2025-26/IND2215	40.00

1) ಟೆಂಡರ್‌ಗಳನ್ನು ದಿನಾಂಕ : 06.04.2026 ರಿಂದ ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು.2) ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21.04.2026 ರ ಸಾಯಂಕಾಲ 5.00 ಗಂಟೆಯ ವರೆಗೆ 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.04.2026 ರ ಬೆಳಿಗ್ಗೆ 11.30 ಗಂಟೆಗೆ

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾ ಕೋಶದ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ರಾಯಚೂರು

DIP/RCR/06/KSMC&A/08/2025-26

ಕರ್ನಾಟಕ ಸರಕಾರ

ತಾಲೂಕಾ ಆಸ್ಪತ್ರೆ, ಅಂಕೋಲಾ ಉತ್ತರ ಕನ್ನಡ (ಕಾರವಾರ)ಜಿಲ್ಲೆ

Email: thankola314@gmail.com Phone: 08388-230249

ಸಂಖ್ಯೆ : ತಾಆಅಂ/ಇ-ಟೆಂಡರ್/956/2025-26 ದಿನಾಂಕ : 06/04/2026

ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತ -kppp.karnataka.gov.in)

ವಿಷಯ :- ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ತಾಲೂಕಾ ಆಸ್ಪತ್ರೆಗೆ ಜನರಿಕ್ ಔಷಧಿಗಳ ಸರಬರಾಜುಗಾಗಿ ಅಲ್ಪಾವಧಿ ಇ- ಟೆಂಡರ್ ಕರೆಯುವ ಬಗ್ಗೆ.

******

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರಂತೆ ನೊಂದಾಯಿತ ಸಂಸ್ಥೆಗಳಿಂದ 2026-27 ನೇ ಸಾಲಿಗೆ (31/03/2027 ರವರೆಗೆ) ಅಂಕೋಲಾ ತಾಲೂಕಾ ಆಸ್ಪತ್ರೆಗೆ ಜನರಿಕ್ ಔಷಧಿಗಳ ಸರಬರಾಜಿಗಾಗಿ ದ್ವಿ-ಬಿಡ್ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ-ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ವಿವರಗಳು ಈ ಕೆಳ ಕಂಡಂತಿರುತ್ತವೆ.

ಕ್ರ.ಸಂ	ಸಂಸ್ಥೆಗಳ ಹೆಸರು	ಜನರಿಕ್ ಔಷಧಿಗಳ ಖರೀದಿ ಮೊತ್ತ (ಅಂದಾಜು)	ಇ.ಎಂ.ಡಿ. ಮೊತ್ತ (ಶೇ. 2.5%)	ಷರಾ
1	ತಾಲೂಕಾ ಆಸ್ಪತ್ರೆ, ಅಂಕೋಲಾ	10 ಲಕ್ಷ	25,000.00	

ಕ್ರ.ಸಂ	ವಿವರ	ದಿನಾಂಕ
1	ಟೆಂಡರ್ ಪ್ರಕಟಣೆಯ ಸಂಖ್ಯೆ & ದಿನಾಂಕ	ತಾಆಅಂ/ಇ-ಟೆಂಡರ್/956/2025-26 ದಿನಾಂಕ : 06/04/2026
2	e-portal ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	ದಿನಾಂಕ : 06/04/2026
3	e-portal ಟೆಂಡರ್ ಫಾರಂ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ & ಸಮಯ	ದಿನಾಂಕ: 21/04/2026 ರ ಅಪರಾಹ್ನ 4.00 ಗಂಟೆಯವರೆಗೆ
4	e-portal ಟೆಂಡರ್ ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ & ಸಮಯ	ದಿನಾಂಕ: 22/04/2026 ರ ಅಪರಾಹ್ನ4.30 ಗಂಟೆಗೆ
5	e-portal ನಲ್ಲಿ ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ & ಸಮಯ	ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯ ನಂತರ

ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ (Website:https://kppp.karnataka.gov.in) ಸಂಪರ್ಕಿಸುವುದು.

ಕ್ರಮ ಸಂಖ್ಯೆ: 04 ಮತ್ತು 05 ರಲ್ಲಿ ನಮೂದಿಸಿದ ದಿನಾಂಕಗಳಂದು ಸಾರ್ವಜನಿಕ ರಜೆಯೆಂದು ಘೋಷಣೆ ಆದಲ್ಲಿ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು.

ಸಹಿ/-
ಆಡಳಿತ ವೈದ್ಯಾಧಿಕಾರಿಗಳು
ತಾಲೂಕಾ ಆಸ್ಪತ್ರೆ, ಅಂಕೋಲಾ

ಮಾನ್ಯ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಮುಧೋಳ ಇವರ ನ್ಯಾಯಾಲಯದಲ್ಲಿ

ಅಪರಾಧಿಕ ಸಂಕೀರ್ಣ ಸಂಖ್ಯೆ, 688/2025

1. ಶ್ರೀಮತಿ ಪ್ರೇಮಾ ಗಂಡ ಪುಂಡಲೀಕ ಮುಂಡಗನೂರ, ವಯಾ: 29 ವರ್ಷ, ಉದ್ಯೋಗ: ಮನೆಗೆಲಸ, ಸಾಕೀನ: ಶಿರೋಳ, ತಾ: ಮುಧೋಳ, ಜಿ: ಬಾಗಲಕೋಟೆ.
2. ಲಕ್ಷ್ಮೀ ತಾಯಿ, ಇಂದ್ರವ್ವ ತಳಗೇರಿ, ವಯಾ: 25 ವರ್ಷ, ಉದ್ಯೋಗ: ಮನೆಗೆಲಸ, ಸಾಕೀನ: ಮುಗಳಖೋಡ, ತಾ: ಮುಧೋಳ, ಜಿ: ಬಾಗಲಕೋಟೆ. .....ಅರ್ಜಿದಾರರು

ವಿರುದ್ಧ:

1. ತಹಸೀಲ್ದಾರ, ಮುಧೋಳ, ಜಿ: ಬಾಗಲಕೋಟೆ.
2. ಗ್ರಾಮ ಆಡಳಿತ ಅಧಿಕಾರಿ, ಮುಗಳಖೋಡ, ತಾ: ಮುಧೋಳ, ಜಿ: ಬಾಗಲಕೋಟೆ. .....ಎದುರುದಾರರು

ಜಾಹಿರನಾಮೆ

ಪ್ರಸ್ತುತ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿದಾರರ ತಾಯಿ-ಇಂದ್ರವ್ವ ತಂದೆ ಸದಾಶಿವ ತಳಗೇರಿ, ಇವಳು ದಿನಾಂಕ: 25-02-2003 ರಂದು ಮುಧೋಳ ತಾಲೂಕಿನ ಮುಗಳಖೋಡ ಗ್ರಾಮದಲ್ಲಿ ಮರಣ ಹೊಂದಿದ್ದು, ಆ ಬಗ್ಗೆ ಎದುರುದಾರರು ತಮ್ಮ ಕಾರ್ಯಾಲಯದ ಮರಣ ರಜಿಸ್ಟರದಲ್ಲಿ ದಾಖಲ ಮಾಡಿಕೊಳ್ಳಬೇಕೆಂದು ಆದೇಶ ಕೋರಿ ಈ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಇರುತ್ತದೆ.

ಕಾರಣ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಪ್ರಸ್ತುತ ಕೇಸಿನಲ್ಲಿ ಯಾರದಾದರೂ ಹಕ್ಕು ವ ಹಿತಾಸಕ್ತಿ ಇದ್ದಲ್ಲಿ ಪ್ರಸ್ತುತ ಕೇಸಿನಲ್ಲಿ ದಿನಾಂಕ: 04/06/2026 ರಂದು ಮುಂಜಾನೆ 10-30 ಘಂಟೆಗೆ ನ್ಯಾಯಾಲಯದಲ್ಲಿ ಹಾಜರ ಇದ್ದು, ತಮ್ಮ ತಕರಾರ ವಗೈರೆ ಸಲ್ಲಿಸಬಹುದು. ಒಂದು ವೇಳೆ ಯಾವುದೇ ತಕರಾರ ಬಾರದಿದ್ದಲ್ಲಿ ಅರ್ಜಿದಾರರ ಮಾಂಗಣೆ ಪ್ರಕಾರ ಆದೇಶ ಮಾಡಲಾಗುವುದು ತಿಳಿಯಿರಿ ಅಂತಾ ಕೊಟ್ಟ ಜಾಹೀರನಾಮೆ.

ಮುಧೋಳ
ತಾ-28-03-2026

ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/- ಶಿರಸ್ತೆದಾರರು
ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಮುಧೋಳ ಇವರ ನ್ಯಾಯಾಲಯ
ಸಹಿ/- (ಬಿ.ಪಿ. ದೊಡ್ಡಟ್ಟಿ)
ವಾದಿಯರ ಪರ ವಕೀಲರು

ಕರ್ನಾಟಕ ಸರ್ಕಾರ

ಯೋಜನಾ ವ್ಯವಸ್ಥಾಪಕರು, ಜಿಲ್ಲಾ ನಿರ್ಮಿತಿ ಕೇಂದ್ರ ಗದಗ

ಜಿ.ಡಿ.ಜಿ/ಎನ್.ಕೆ.ಜಿ./2026-27/ ದಿನಾಂಕ : 06.04.2026

ಪ್ರಕಟಣೆ

ನಿರ್ಮಿತಿ ಕೇಂದ್ರ ಗದಗ ಇವರಿಂದ ಶಿರಹಟ್ಟಿ ತಾಲೂಕ ಬೆಳ್ಳಟ್ಟಿ ಗ್ರಾಮದಲ್ಲಿ ವಸ್ತು ಪುನರ್ ಸಂಪಾದನಾ ಸೌಲಭ್ಯ ಘಟಕದ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗಾಗಿ ಬೇಕಾಗುವ ಈ ಕೆಳಗೆ ನಮೂದಿಸಿದ ಯಂತ್ರೋಪಕರಣಗಳನ್ನು ಪೂರೈಕೆ ಹಾಗೂ ಅಳವಡಿಸುವದಕ್ಕಾಗಿ ದರಗಳನ್ನು ಸಲ್ಲಿಸಲು ಆಸಕ್ತ ಪೂರೈಕೆದಾರರು ಈ ಕೆಳಗಿನ ಯಂತ್ರೋಪಕರಣಗಳ ದರಗಳನ್ನು ಈ ಕಾರ್ಯಾಲಯಕ್ಕೆ ದಿನಾಂಕ : **16.04.2026** ರಂದು ಸಂಜೆ 5.30 ಗಂಟೆಯ ಒಳಗಾಗಿ ಈ ಕೆಳಗೆ ಸಹಿ ಮಾಡಿದ ಯೋಜನಾ ವ್ಯವಸ್ಥಾಪಕರು ನಿರ್ಮಿತಿ ಕೇಂದ್ರ ಗದಗ ಇವರ ಹೆಸರಿನಲ್ಲಿ ಸಲ್ಲಿಸಲು ಪ್ರಕಟಣೆ ನೀಡಿದೆ. ದಿನಾಂಕ : **18.04.2026** ರಂದು ಬೆಳಿಗ್ಗೆ 11.00 ಘಂಟೆಗೆ ಕೋಟೇಶನ್ ಬಿಡ್‌ಗಳನ್ನು ಜಿಲ್ಲಾ ನಿರ್ಮಿತಿ ಕೇಂದ್ರ ಗದಗ ಕಛೇರಿಯಲ್ಲಿ ತೆರೆಯಲಾಗುವದು. ಕಾರಣ ನೀಡದೇ ಯಾವುದೇ ಅಥವಾ ಎಲ್ಲಾ ಕೋಟೇಶನ್ ಬಿಡ್‌ಗಳನ್ನು ತಿರಸ್ಕರಿಸುವ ಮತ್ತು ಅಂಗೀಕರಿಸುವ ಅಧಿಕಾರವನ್ನು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ನಿರ್ಮಿತಿ ಕೇಂದ್ರ ಗದಗ ಇವರಿಗೆ ಕಾಯ್ದಿರಿಸಲಾಗಿದೆ.

ಷರತ್ತುಗಳನ್ನು ಅಳವಡಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : **9632396473** ಹಾಗೂ ಕೆಳಗೆ ಸಹಿ ಮಾಡಿದ ಕಛೇರಿ ಸಂಪರ್ಕಿಸಬಹುದು.

SL.NO	Machines	Quantity
1	Vertical Single Box Bailing Machine-50MT	1
2	PVC Flat Belt Conveyor	2
3	Pallet Truck	2
4	Semi-Electric Stacker	1
5	Shredding Machine	1
6	Professional Blower	1
7	Weighing Scale	2
8	E-kart Vechicle	1

ಸಹಿ/- ಯೋಜನಾ ವ್ಯವಸ್ಥಾಪಕರು
ನಿರ್ಮಿತಿ ಕೇಂದ್ರ ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/08/2026-27

CHANGE OF NAME
I, **MITHUN TAMMANNA GONDALI** (Old Name) Resident of Bharam Khodi, Athani, Belgaum, Karnataka, Pin Code: 591304, have changed my name as **MITHUN GONDALI** (New Name) henceforth I will be called and recognized by new name for all future purposes, dated: 06/04/2026.

CHANGE OF NAME
I, **KAJAL CHOUGULE** (Old Name) Resident of # 168, Shree Krupa Building, Tashildar Galli, Hukeri Belgaum, Kamataka 590001, have changed my name as **KAJAL UMESH CHOUGULE** (New Name) henceforth I will be called and recognized by new name for all future purposes, dated: 06/04/2026.

CHANGE OF NAME
I, **BIBI SUGRA ODEKAR** (Old Name) Resident of Near Madarasa Naregal Tq: Hangal, Dist: Haveri - 581148, have changed my name as **BIBI SUGRA PATHAN** (New Name) henceforth I will be called and recognized by new name for all future purposes, dated: 06/04/2026.

CHANGE OF NAME
I, **AQEEBAHAMED** (Old Name) Resident of H No: 1041/1, Islam Galli Yellapur Dist: Uttar Kannada 581359 Pin - 581359, have changed my name as **AQEEBAHAMED SHAIKH** (New Name) for all purposes, vide affidavit dated: 06/04/2026 before notary **Bidaralli N. B.**

CHANGE OF NAME
I, **MOHAMMED ABZAL HUNGUNDI** have changed my minor daughter name from **ALEENA MOHAMMED ABZAL HUNGUNDI** (Old Name) To **ALEENA HUNGUNDI** (New Name) Resident of H No: 32, Chaitanya Colony, Near R N Shetty Road, Hubli, Udyamnagar, Dharwad, Karnataka, 580030, henceforth I will be called and recognized by new name for all future purposes, dated: 06/04/2026.

CHANGE OF NAME
I, **ABDUL RAHMAN HASAN SAHEB** (Old Name) R/o. Gangavali post Nadumaskeri Kumta 581319, have changed my name as **ABDUL REHAMAN HASAN SAB HONNAVARKAR** (New Name) henceforth I will be called and recognized by new name for all future purposes, dated: 06/04/2026.



ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು

ಟೆಂಡರ್ ಅಧಿಸೂಚನೆ ಸಂಖ್ಯೆ:01/2026-27, ದಿನಾಂಕ: 04.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು-570010 ರವರು ಕೆ.ಡಬ್ಲ್ಯು-4ರ ರೀತ್ಯ ಒಟ್ಟು 2 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಕನಿಷ್ಠ ಮೊತ್ತ ರೂ 300.00 ಲಕ್ಷಗಳು, ಮತ್ತು ಗರಿಷ್ಠ ಮೊತ್ತ ರೂ 310.00 ಲಕ್ಷಗಳು, ಇ.ಎಂ.ಡಿ ಕನಿಷ್ಠ ರೂ 3.59 ಲಕ್ಷಗಳು ಮತ್ತ ಗರಿಷ್ಠ ರೂ 3.69 ಲಕ್ಷಗಳಾಗಿರುತ್ತದೆ. ಈ ಕಾಮಗಾರಿಗಳಿಗೆ ಐಟಂವಾರು ಅಲ್ಪಾವದಿ ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್"ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕೆ.ಪಿ.ಪಿ. ಪೋರ್ಟಲ್" ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂದಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ.

ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿರುತ್ತದೆ. : **17.04.2026 ಸಂಜೆ 5.30 ಗಂಟೆ**
ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ **ದಿನಾಂಕ :18.04.2026 ಸಂಜೆ 5.30 ಗಂಟೆ**
ಬಿಡ್ ತೆರೆಯುವ **ದಿನಾಂಕ :21.04.2026** ರ **ಬೆಳಿಗ್ಗೆ 11.00 ಗಂಟೆ** ನಂತರ
ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ **"https://kppp.karnataka.gov.in"** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ವಿ.ಸೂ : ಸದರಿ ಕಾಮಗಾರಿಯ ಟೆಂಡರ್‌ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡ್‌ನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಸನೀ ಮತ್ತು ಅಂ.ಅ. ವಿಭಾಗ, ಮೈಸೂರು.

DIPR/DDMYS/008/KSMCA/007/2025-26

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ಕಾಳಿ ಹುಲಿ ಸಂರಕ್ಷಿತ ಪ್ರದೇಶ,
ದಾಂಡೇಲಿ-581325 PHONE : 08284 - 231585 Email: directordatr@gmail.com
ಕ್ರ.ಸಂ:ಎ1/DATCF/ಹೊರಗುತ್ತಿಗೆ/ಸಿಆರ್-/2026-27 ದಿನಾಂಕ: 04-04-2026

ಅಧಿಸೂಚನೆ

ವಿಷಯ: 2026-27 ನೇ ಸಾಲಿನಲ್ಲಿ ಕಾಳಿ ಹುಲಿ ಸಂರಕ್ಷಿತ ಪ್ರದೇಶ ವಿಭಾಗದ ವ್ಯಾಪ್ತಿಯಲ್ಲಿ ಹೊರಗುತ್ತಿಗೆಯ ಆಧಾರದ ಮೇಲೆ ನೇಮಿಸಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾಳಿ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿಯ ವನ್ಯಜೀವಿ ಸಂಶೋಧನಾ ಹಾಗೂ ತರಬೇತಿ ಕೇಂದ್ರ (WRTC) ದಲ್ಲಿ ವನ್ಯ ಪ್ರಾಣಿಗಳ ಸ್ವಾಭಾವಿಕ ಅಥವಾ ಅಪಘಾತದಿಂದ ಉಂಟಾದ ಸಾವು ಹಾಗೂ ವನ್ಯಪ್ರಾಣಿಯ ಹತ್ಯೆ, ಮಾನವ ಮತ್ತು ವನ್ಯಜೀವಿ ಘರ್ಷಣೆಯ ಸಂದರ್ಭಗಳಲ್ಲಿ ವನ್ಯ ಪ್ರಾಣಿಗಳ ಕಳೆಬರದ ಮರಣೋತ್ತರ ಪರೀಕ್ಷೆಗಾಗಿ ಹಾಗೂ ಇತರೆ ಅಧ್ಯಯನದ ಕೆಲಸಗಳಿಗಾಗಿ ಕಾಳಿ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಗೆ ಈ ಕೆಳಕಂಡ ಹುದ್ದೆಗಳನ್ನು ಹೊರಗುತ್ತಿಗೆಯ ಆಧಾರದ ಮೇಲೆ ತಾತ್ಕಾಲಿಕವಾಗಿ ದಿನಾಂಕ: 01-04-2026 ರಿಂದ 31-03-2027 ರ ವರೆಗೆ ಮಾತ್ರ ನೇಮಿಸಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರ.ಸಂ	ಹುದ್ದೆ	ಒಟ್ಟು ಹುದ್ದೆಗಳು	ವಿದ್ಯಾರ್ಹತೆ	ಒಟ್ಟು ಸಂಬಳ
1	Veterinary Officer	01	Bachelor of Veterinary Science and Animal Husbandry (BVSc & AH)	70000.00
2	Forensic science Research Associate	01	Master/Bachelor Degree in Forensic science degree (courses include B.Sc. in forensic science and criminology,) with 1 year experience in Forensic science involved Profession/Field	50000.00
3	Field Biologist	01	Degree in Biological Sciences Agriculture/ Forestry with minimum 3 years work Experience	42000.00
4	Research Assistant/ Eco-development and Media Management	01	Degree in Biological Sciences Agriculture/ Forestry with minimum 3 years work Experience	30000.00

ಮೇಲಿನ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಸಂಪೂರ್ಣ ಭರ್ತಿ ಮಾಡಿದ ಅರ್ಜಿಯೊಂದಿಗೆ ಮೂಲ ದಾಖಲೆಗಳು ಹಾಗೂ ಸ್ವಯಂ ದೃಢೀಕೃತ ನಕಲು ಪ್ರತಿಗಳೊಂದಿಗೆ ದಿನಾಂಕ: 13-04-2026 ರಂದು ಬೆಳಿಗ್ಗೆ 11.00 ಗಂಟೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ನಿರ್ದೇಶಕರು, ಕಾಳಿ ಹುಲಿ ಸಂರಕ್ಷಿತ ಪ್ರದೇಶ, ಉತ್ತರ ಕನ್ನಡ, ದಾಂಡೇಲಿ ರವರ ಕೊಠಡಿಯಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಸದರಿ ಹುದ್ದೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿ ಹಾಗೂ ನಿಬಂಧನೆಗಳಿಗಾಗಿ ಈ ಕೆಳ ಸಹಿದಾರರ ಕಚೇರಿಯನ್ನು ಕಚೇರಿ ಅವಧಿಯಲ್ಲಿ ಸಂಪರ್ಕಿಸಲು ಸೂಚಿಸಿದೆ.

ಸಹಿ/-, ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು
ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ

DIPR/KWR/KSMCA/22/26-27 dt. 06.04.2026

ನಗರಸಭಾ ಕಾರ್ಯಾಲಯ, ಉಡುಪಿ
ಸಂಖ್ಯೆ:ಉನಸ ಬಿ2.ಸಿಆರ್:2026-27 ದಿನಾಂಕ: 06.04.2026

ಟೆಂಡರು ಪ್ರಕಟಣೆ

2022-23ನೇ & 2023-24ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ ಅನುದಾನ (ಉಳಿಕೆ ಮೊತ್ತ), 2022-23ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ, ಶೇ. 7.25ರ ಇತರೆ ಹಿಂದುಳಿದ ಬಡ ವರ್ಗದವರ ಕಲ್ಯಾಣ ಕಾರ್ಯಕ್ರಮದಡಿ (ಉಳಿಕೆ ಮೊತ್ತ), 2025-26ನೇ ಸಾಲಿನ ನಗರಸಭಾ ನಿಧಿ (ಮರು ಟೆಂಡರು) ಮತ್ತು 2025-26ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ನಿಧಿಯಡಿ (ಮರು ಟೆಂಡರು) ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standart Bid Document K.W.-1 ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 21.04.2026 ಸಂಜೆ 5.00 ಗಂಟೆಗೆ
2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: 22.04.2026 ಸಂಜೆ 5.01 ಗಂಟೆಗೆ

ಕ್ರ.ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ	ಕಾಮಗಾರಿ ಪೂರ್ತಿಗೊಳಿಸುವ ಅವಧಿ
	2022-23ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ ಅನುದಾನ (ಉಳಿಕೆ ಮೊತ್ತ)			
1.	DMA/2026-27/RD/WORK_ INDENT57101	250000.00	6250.00	1 ತಿಂಗಳು
	2022-23ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ ಶೇ. 7.25ರ ಇತರೆ ಹಿಂದುಳಿದ ಬಡ ವರ್ಗದವರ ಕಲ್ಯಾಣ ಕಾರ್ಯಕ್ರಮದಡಿ (ಉಳಿಕೆ ಮೊತ್ತ)			
2.	DMA/2026-27/RD/WORK_ INDENT57105	400000.00	10000.00	1 ತಿಂಗಳು
	2023-24ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ (ಉಳಿಕೆ ಮೊತ್ತ)			
3.	DMA/2026-27/RD/WORK_ INDENT57107	150000.00	3750.00	1 ತಿಂಗಳು
	2025-26ನೇ ಸಾಲಿನ ನಗರಸಭಾ ನಿಧಿ (ಮರು ಟೆಂಡರು)			
4.	DMA/2025-26/OW/WORK_ INDENT56308/CALL-2	1600000.00	40000.00	2 ತಿಂಗಳು
	2025-26ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ನಿಧಿಯಡಿ (ಮರು ಟೆಂಡರು)			
	DMA/2025-26/OW/WORK_ INDENT56423/CALL-2	480000.00	12000.00	2 ತಿಂಗಳು

ಸಹಿ/- ಪೌರಾಯುಕ್ತರು, ಉಡುಪಿ ನಗರಸಭೆ

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 474/2026

ಅರ್ಜಿದಾರರು :
ರಂಗಪ್ಪ ತಂದೆ ಲೇಟ್ ಹನುಮಂತಪ್ಪ, ವಯಸ್ಸು: 46 ವರ್ಷ, ವಾಸ: 6ನೇ ವಾರ್ಡ್, ಮೇದಾರ ಓಣಿ, ವಿರಕ್ತಮಠದ ಹತ್ತಿರ, ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ಮತ್ತು ಇತರರು

ವಿರುದ್ಧ

ಎದುರುದಾರರು:
ಮಾನ್ಯ ಮುಖ್ಯಾಧಿಕಾರಿಗಳು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಪುರಸಭೆ, ಸಂಡೂರು.

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರ 1 ರಿಂದ 6ರವರ ಅಜ್ಜಿಯಾದ ನಾಗಮ್ಮ ಗಂಡ ಲೇಟ್ ನಾಯಕರ ಚಿನ್ನಪ್ಪ ಇವರು ದಿನಾಂಕ: 01-06-1977 ರಂದು ಮಾಳಾಪುರ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ್ದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರದರು ಯಾವುದೇ ರೀತಿಯ ತಂಟೆ ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 02-05-2026 ಬೆಳಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು.

ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 18-03-2026 ರಂದು ನೀಡಲಾಯಿತು.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರರು,
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಸಹಿ/- ವೆಂಕಟೇಶಲು
ಅರ್ಜಿದಾರರ ಪರ ವಕೀಲರು ಸಂಡೂರು

ಆರ್.ಎ. ನಂ. 21/2023
ಮೆ|| ಹಿರಿಯ ಸಿವ್ಹಿಲ್ ಜಡ್ಜ್ ಹಾಗೂ ಜೆ.ಎಮ್.ಎಫ್.ಸಿ ಶಿಗ್ಗಾಂವ, ಸಂಚಾರಿ ನ್ಯಾಯಾಲಯ, ಸವಣೂರ ಇವರ ನ್ಯಾಯಾಲಯದಲ್ಲಿ

ಮೇಲ್ಮನವಿದಾರರು : ಮಾನಪ್ಪ ತಂ. ಲಿಂಬಪ್ಪ ಲಮಾಣಿ ಸಾ|| ಬೇವಿನಹಳ್ಳಿ, ತಾ: ಸವಣೂರ, ಜಿ|| ಹಾವೇರಿ.

ವಿರುದ್ಧ

ಎದುರುಗಾರರು: 1) ಶ್ರೀ ಹನುಮಂತಪ್ಪ ತಂ. ಕುಬೇರಪ್ಪ ಲಮಾಣಿ ಸಾ|| ಜೇಕಿನಕಟ್ಟಿ, ತಾ|| ಸವಣೂರ ಹಾಗೂ ಇತರರು

ಸಿ ಪಿ ಸಿ ಆದೇಶ 5 ನಿಯಮ 20(1ಎ) ನೇದ್ದರಡಿಯಲ್ಲಿ ನೋಟೀಸು

ಗೆ,
ಎದುರುಗಾರ ನಂ. 12: ಶ್ರೀ. ಕೇಶಪ್ಪ ತಂ. ರಾಮಣ್ಣ ಉರ್ಫ್ ಲಚ್ಚಪ್ಪ ಲಮಾಣಿ
ವಯಾ: 58 ವರ್ಷ, ಉದ್ಯೋಗ: ಕೃಷಿ ಕೆಲಸ, ಸಾ|| ಬೇವಿನಹಳ್ಳಿ, ತಾ: ಸವಣೂರ, ಜಿ|| ಹಾವೇರಿ. ಹಾಲಿ ವಸ್ತಿ, ಸಾ|| ಜಕ್ಕನಕಟ್ಟಿ, ತಾ|| ಶಿಗ್ಗಾಂವ

ಮೇಲ್ಕಂಡ ಮೇಲ್ಮನವಿಯಲ್ಲಿ ಮೇಲ್ಮನವಿದಾರರು ಸವಣೂರ ಸಿವ್ಹಿಲ್ ಜಡ್ಜ್ ಹಾಗೂ ಜೆ.ಎಮ್.ಎಫ್.ಸಿ ಸವಣೂರ ಇವರ ನ್ಯಾಯಾಲಯದಲ್ಲಿಯ ಅಸಲ ದಾವಾ ನಂ. 133/2012 ನೇದ್ದರಲ್ಲಿ ದಿನಾಂಕ: 03-11-2014 ರಂದು ದಾವಾ ಆಸ್ತಿಗಳ ಬಗ್ಗೆ ಹೊರಡಿಸಿದ ತೀರ್ಪು ಹಾಗೂ ಡಿಕ್ರಿಯು ವಿರುದ್ಧ ಈ ಮೇಲ್ಮನವಿಯನ್ನು ನಿಮ್ಮ ವಿರುದ್ಧ ದಾಖಲಿಸಿದ್ದು ಇರುತ್ತದೆ. ನೀವು ಈ ಮೇಲ್ಮನವಿಯಲ್ಲಿ ಎದುರುಗಾರ ನಂ. 12 ಅಂತಾ ಇರುತ್ತೀರಿ. ನೀವು ಇಲ್ಲಿಯವರೆಗೂ ಮೇಲ್ಕಂಡ ಮೇಲ್ಮನವಿ ನ್ಯಾಯಾಲಯದಿಂದ ಕಳಿಸಿರುವ ಮೇಲ್ಮನವಿಯ ನೋಟಿಸು ವ. ಸಮನ್‌ಗಳನ್ನು ಉದ್ದೇಶ ಪೂರ್ವಕವಾಗಿ ಸ್ವೀಕೃತಿ ಮಾಡಿಕೊಂಡಿರುವುದಿಲ್ಲಾ. ಕಾರಣ ಈ ಪತ್ರಿಕಾ ಪ್ರಕಟಣೆಯ ಮೂಲಕ ನಿಮಗೆ ಮೇಲ್ಕಂಡ ಮೇಲ್ಮನವಿಯ ನೋಟಿಸನ್ನು ಜಾರಿ ಮಾಡಲಾಗಿದೆ. ಆದ್ದರಿಂದ ನೀವು ಮೇಲ್ಕಂಡ ನ್ಯಾಯಾಲಯಕ್ಕೆ ಖುದ್ದು ನೀವಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲಿ ದಿನಾಂಕ: 05-06-2026 ರಂದು ಬೆಳಿಗ್ಗೆ 10:30 ಗಂಟೆಗೆ ಮೇಲ್ಕಂಡ ಮೇಲ್ಮನವಿ ನ್ಯಾಯಾಲಯಕ್ಕೆ ಹಾಜರಾಗಿ ಮೇಲ್ಕಂಡ ಮೇಲ್ಮನವಿಗೆ ನಿಮ್ಮ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು. ಒಂದು ವೇಳೆ ನೀವು ಮೇಲ್ಕಂಡ ದಿನಾಂಕ ಹಾಗೂ ಸಮಯಕ್ಕೆ ಹಾಜರಾಗದಿದ್ದರೆ, ನಿಮ್ಮ ಗೈರು ಹಾಜರಾತಿಯಲ್ಲಿ ಮಾನ್ಯ ನ್ಯಾಯಾಲಯದವರು ಮುಂದಿನ ಆದೇಶ ಹೊರಡಿಸುತ್ತಾರೆ ತಿಳಿಯಿರಿ.

ಈ ನೋಟಿಸನ್ನು ದಿನಾಂಕ: 06-04-2026 ರಂದು ಮಾನ್ಯ ನ್ಯಾಯಾಲಯದ ಆದೇಶ ವ. ಮೊಹರಿನೊಂದಿಗೆ ಹೊರಡಿಸಲಾಗಿದೆ.
ಸ್ಥಳ: ಸವಣೂರ
ದಿನಾಂಕ: 06-04-2026
"ನ್ಯಾಯಾಲಯದ ಆದೇಶದೊಂದಿಗೆ"
ಸಹಿ/- ಶಿರಸ್ತೇದಾರರು,
ಹಿರಿಯ ಸಿವ್ಹಿಲ್ ಜಡ್ಜ್ ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಶಿಗ್ಗಾಂವ ಸಂಚಾರಿ ನ್ಯಾಯಾಲಯ, ಸವಣೂರ, ಜಿ|| ಹಾವೇರಿ
ಸಹಿ/- ಶ್ರೀ ಎನ್.ಎಸ್. ಪಾಟೀಲ
ಮೇಲ್ಮನವಿದಾರ ಪರ ವಕೀಲರು.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2025-26 ದಿನಾಂಕ: 06-04-2026

ಅಲ್ಪಾವಧಿ / ಇ-ಟೆಂಡರ್ ಅಧಿಸೂಚನೆ

ಉಲ್ಲೇಖ : ಜಾಹಿರಾತು ನಂ: 1267 ದಿನಾಂಕ: 20-02-2026

ಹುಬ್ಬಳ್ಳಿ-ಧಾರವಾಡ ಮಹಾನಗರ ಸನ್ 2026-27ನೇ ಸಾಲಿನ ವಾರ್ಡ್‌ವಾರು ಅನುದಾನ ಹಾಗೂ ಸನ್-2026-27ನೇ ಅಮೃತ 2.0 ಅನುದಾನ ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000ರ ಪ್ರಕಾರ ಆಕ್ಟ್ 2000 ನಿಯಮದನ್ವಯ ಪಿಡಬ್ಲ್ಯೂಡಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
1) ಇಂಡೆಂಟ್ ನಂ. 57113 ರೂ. 2.00 ಲಕ್ಷ 2) ಇಂಡೆಂಟ್ ನಂ. 57126 ರೂ. 5.00 ಲಕ್ಷ 3) ಇಂಡೆಂಟ್ ನಂ. 57114 ರೂ. 5.00 ಲಕ್ಷ 4) ಇಂಡೆಂಟ್ ನಂ. 57071 ರೂ. 7.00 ಲಕ್ಷ 5) ಇಂಡೆಂಟ್ ನಂ. 57068 ರೂ. 8.00 ಲಕ್ಷ 6) ಇಂಡೆಂಟ್ ನಂ. 57099 ರೂ. 20.00 ಲಕ್ಷ 7) ಇಂಡೆಂಟ್ ನಂ- 57149 ರೂ. 6.60 ಲಕ್ಷ

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
8) ಇಂಡೆಂಟ್ ನಂ. 56993 ರೂ. 3.36 ಲಕ್ಷ 9) ಇಂಡೆಂಟ್ ನಂ. 57124 ರೂ. 3.00 ಲಕ್ಷ 10) ಇಂಡೆಂಟ್ ನಂ. 57130 ರೂ. 2.00 ಲಕ್ಷ

(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ 11) ಇಂಡೆಂಟ್ ನಂ. 57095 ರೂ. 6.20 ಲಕ್ಷ

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
12) ಇಂಡೆಂಟ್ ನಂ. 57123 ರೂ. 5.00 ಲಕ್ಷ 13) ಇಂಡೆಂಟ್ ನಂ. 57112 ರೂ. 10.00 ಲಕ್ಷ 14) ಇಂಡೆಂಟ್ ನಂ. 57116 ರೂ. 5.00 ಲಕ್ಷ 15) ಇಂಡೆಂಟ್ ನಂ. 56533 ರೂ. 10.00 ಲಕ್ಷ 16) ಇಂಡೆಂಟ್ ನಂ. 57117 ರೂ. 5.00 ಲಕ್ಷ 17) ಇಂಡೆಂಟ್ ನಂ. 57150 ರೂ. 7.00 ಲಕ್ಷ 18) ಇಂಡೆಂಟ್ ನಂ. 57147 ರೂ. 15.00 ಲಕ್ಷ

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
19) ಇಂಡೆಂಟ್ ನಂ. 57115 ರೂ. 5.00 ಲಕ್ಷ 20) ಇಂಡೆಂಟ್ ನಂ. 57109 ರೂ. 3.00 ಲಕ್ಷ 21) ಇಂಡೆಂಟ್ ನಂ. 57072 ರೂ. 3.00 ಲಕ್ಷ 22) ಇಂಡೆಂಟ್ ನಂ. 57137 ರೂ. 7.50 ಲಕ್ಷ 23) ಇಂಡೆಂಟ್ ನಂ. 57125 ರೂ. 6.50 ಲಕ್ಷ 24) ಇಂಡೆಂಟ್ ನಂ. 57121 ರೂ. 8.00 ಲಕ್ಷ 25) ಇಂಡೆಂಟ್ ನಂ. 57122 ರೂ. 5.00 ಲಕ್ಷ 26) ಇಂಡೆಂಟ್ ನಂ. 57129 ರೂ. 3.00 ಲಕ್ಷ 27) ಇಂಡೆಂಟ್ ನಂ. 57128 ರೂ. 5.00 ಲಕ್ಷ 28) ಇಂಡೆಂಟ್ ನಂ. 57127 ರೂ. 5.00 ಲಕ್ಷ 29) ಇಂಡೆಂಟ್ ನಂ. 57096 ರೂ. 7.73 ಲಕ್ಷ 30) ಇಂಡೆಂಟ್ ನಂ. 57069 ರೂ. 5.00 ಲಕ್ಷ 31) ಇಂಡೆಂಟ್ ನಂ. 57070 ರೂ. 8.00 ಲಕ್ಷ 32) ಇಂಡೆಂಟ್ ನಂ. 57066 ರೂ. 7.50 ಲಕ್ಷ 33) ಇಂಡೆಂಟ್ ನಂ. 57093 ರೂ. 5.07 ಲಕ್ಷ 34) ಇಂಡೆಂಟ್ ನಂ. 56802 ರೂ. 30.00 ಲಕ್ಷ 35) ಇಂಡೆಂಟ್ ನಂ. 57153 ರೂ. 10.00 ಲಕ್ಷ 36) ಇಂಡೆಂಟ್ ನಂ. 55682 ರೂ. 35.64 ಲಕ್ಷ 37) ಇಂಡೆಂಟ್ ನಂ. 56803 ರೂ. 38.23 ಲಕ್ಷ 38) ಇಂಡೆಂಟ್ ನಂ. 57148 ರೂ. 3.50 ಲಕ್ಷ 39) ಇಂಡೆಂಟ್ ನಂ. 57151 ರೂ. 3.93 ಲಕ್ಷ 40) ಇಂಡೆಂಟ್ ನಂ. 55557 ರೂ. 28.00 ಲಕ್ಷ 41) ಇಂಡೆಂಟ್ ನಂ. 57142 ರೂ. 363.00 ಲಕ್ಷ 42) ಇಂಡೆಂಟ್ ನಂ. 57140 ರೂ. 313.00 ಲಕ್ಷ 43) ಇಂಡೆಂಟ್ ನಂ. 57120 ರೂ. 309.00 ಲಕ್ಷ

ಮರು ಕರೆ ಕಾಮಗಾರಿಗಳು

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
44) ಇಂಡೆಂಟ್ ನಂ. 55552 ರೂ. 6.10 ಲಕ್ಷ (2ನೇ ಕರೆ) 45) ಇಂಡೆಂಟ್ ನಂ. 56542 ರೂ. 35.00 ಲಕ್ಷ (2ನೇ ಕರೆ)
46) ಇಂಡೆಂಟ್ ನಂ. 53181 ರೂ. 11.09 ಲಕ್ಷ (2ನೇ ಕರೆ) 47) ಇಂಡೆಂಟ್ ನಂ. 55465 ರೂ. 5.75 ಲಕ್ಷ (2ನೇ ಕರೆ)

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
48) ಇಂಡೆಂಟ್ ನಂ. 55562 ರೂ. 30.00 ಲಕ್ಷ (2ನೇ ಕರೆ) 49) ಇಂಡೆಂಟ್ ನಂ. 55548 ರೂ. 4.00 ಲಕ್ಷ (2ನೇ ಕರೆ)

(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ 50) ಇಂಡೆಂಟ್ ನಂ. 55546 ರೂ. 25.00 ಲಕ್ಷ (2ನೇ ಕರೆ)

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
51) ಇಂಡೆಂಟ್ ನಂ. 53182 ರೂ. 4.00 ಲಕ್ಷ (2ನೇ ಕರೆ) 52) ಇಂಡೆಂಟ್ ನಂ. 53629 ರೂ. 39.00 ಲಕ್ಷ (2ನೇ ಕರೆ)

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
53) ಇಂಡೆಂಟ್ ನಂ. 55394 ರೂ. 20.00ಲಕ್ಷ (3ನೇ ಕರೆ) 54) ಇಂಡೆಂಟ್ ನಂ. 51420 ರೂ. 10.00 ಲಕ್ಷ (3ನೇ ಕರೆ)
55) ಇಂಡೆಂಟ್ ನಂ. 49898 ರೂ. 26.10ಲಕ್ಷ (4ನೇ ಕರೆ) 56) ಇಂಡೆಂಟ್ ನಂ. 44547 ರೂ. 11.00 ಲಕ್ಷ (5ನೇ ಕರೆ)
57) ಇಂಡೆಂಟ್ ನಂ. 54368 ರೂ. 21.00ಲಕ್ಷ (2ನೇ ಕರೆ) 58) ಇಂಡೆಂಟ್ ನಂ. 55559 ರೂ. 19.00 ಲಕ್ಷ (2ನೇ ಕರೆ)
59) ಇಂಡೆಂಟ್ ನಂ. 55403 ರೂ. 10.00ಲಕ್ಷ (2ನೇ ಕರೆ) 60) ಇಂಡೆಂಟ್ ನಂ. 55932 ರೂ. 19.80 ಲಕ್ಷ (2ನೇ ಕರೆ)
61) ಇಂಡೆಂಟ್ ನಂ. 53402 ರೂ. 10.00ಲಕ್ಷ (3ನೇ ಕರೆ) 62) ಇಂಡೆಂಟ್ ನಂ. 54130 ರೂ. 8.20 ಲಕ್ಷ (3ನೇ ಕರೆ)
63) ಇಂಡೆಂಟ್ ನಂ. 54128 ರೂ. 11.80ಲಕ್ಷ (3ನೇ ಕರೆ) 64) ಇಂಡೆಂಟ್ ನಂ. 53711 ರೂ. 20.00 ಲಕ್ಷ (3ನೇ ಕರೆ)
65) ಇಂಡೆಂಟ್ ನಂ. 53263 ರೂ. 16.00ಲಕ್ಷ (3ನೇ ಕರೆ) 66) ಇಂಡೆಂಟ್ ನಂ. 52222 ರೂ. 10.15 ಲಕ್ಷ (4ನೇ ಕರೆ)
67) ಇಂಡೆಂಟ್ ನಂ. 51425 ರೂ. 4.90ಲಕ್ಷ (4ನೇ ಕರೆ) 68) ಇಂಡೆಂಟ್ ನಂ. 52224 ರೂ. 10.00 ಲಕ್ಷ (4ನೇ ಕರೆ)
69) ಇಂಡೆಂಟ್ ನಂ. 44165 ರೂ. 5.00ಲಕ್ಷ (6ನೇ ಕರೆ) 70) ಇಂಡೆಂಟ್ ನಂ. 39194 ರೂ. 6.00 ಲಕ್ಷ (6ನೇ ಕರೆ)
71) ಇಂಡೆಂಟ್ ನಂ. 43491 ರೂ. 5.40ಲಕ್ಷ (6ನೇ ಕರೆ) 72) ಇಂಡೆಂಟ್ ನಂ. 44540 ರೂ. 6.45 ಲಕ್ಷ (8ನೇ ಕರೆ)
73) ಇಂಡೆಂಟ್ ನಂ. 44538 ರೂ. 6.45ಲಕ್ಷ (8ನೇ ಕರೆ) 74) ಇಂಡೆಂಟ್ ನಂ. 3920 ರೂ. 17.00 ಲಕ್ಷ (4ನೇ ಕರೆ)
75) ಇಂಡೆಂಟ್ ನಂ. 41453 ರೂ. 18.03 ಲಕ್ಷ (5ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು **ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)** ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ **ದೂರವಾಣಿ ಸಂಖ್ಯೆ: 0836:2213834**ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ **kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ **ದಿನಾಂಕ: 08-04-2026 ಪಡೆಯಬಹುದಾಗಿದೆ.**

ಕ್ರ. ಸಂ 01 ರಿಂದ 06, 09 ರಿಂದ 15 19 ರಿಂದ 35, 44 ರಿಂದ 46 49, 51 ರಿಂದ 56ರ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 18-04-2026 ರಂದು ಸಾಯಂಕಾಲ 4.00 ಗಂಟೆಯವರೆಗೆ**
ಕ್ರ. ಸಂ 01 ರಿಂದ 06, 09 ರಿಂದ 15 19 ರಿಂದ 35, 44 ರಿಂದ 46 49, 51 ರಿಂದ 56ರ ಟೆಂಡರ್ ತೆರೆಯುವ **ದಿನಾಂಕ: 21-04-2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು**
ಕ್ರ. ಸಂ 07, 16 ರಿಂದ 18, 36 ರಿಂದ 40 47 ರಿಂದ 48 50, 57 ರಿಂದ 75ರ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ:23-04-2026 ರಂದು ಸಾಯಂಕಾಲ 4.00 ಗಂಟೆಯವರೆಗೆ**
ಕ್ರ. ಸಂ 07, 16 ರಿಂದ 18, 36 ರಿಂದ 40 47 ರಿಂದ 48 50, 57 ರಿಂದ 75ರ ಟೆಂಡರ್ ತೆರೆಯುವ **ದಿನಾಂಕ:24-04-2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು**
ಕ್ರ. ಸಂ 41 ರಿಂದ 43ರ ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ: 09-05-2026 ರಂದು ಸಾಯಂಕಾಲ 4.00 ಗಂಟೆಯವರೆಗೆ**
ಕ್ರ. ಸಂ 41 ರಿಂದ 43ರ ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 11-05-2026 ರಂದು ತೆರೆಯಲಾಗುವುದು.**
ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು. ಕ್ರ. ಸಂ 41 ರಿಂದ 43ರ ಪೂರ್ವಬಾವಿ ಸಭೆಯ **ದಿನಾಂಕ: 13-04-2025**

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ

ಡಿಐಪಿಆರ್/ಧಾರವಾಡ/25/ಮಣಿಪಾಲ್/2026-27

ರ. ನಂ. : ಡಿ.ಆರ್.ಬಿ.ಜಿ.ಕೆ.ಆರ್.ಎಸ್.ಆರ್.25727 / 2001-02 ದಿ. 10-4-2001

ಶ್ರೀ ಕುಮಾರೇಶ್ವರ ಪತ್ತಿನ ಸಹಕಾರ ಸಂಘ ನಿ., ಬಾದಾಮಿ
ತಾ|| ಬಾದಾಮಿ) (ಜಿ|| ಬಾಗಲಕೋಟೆ

ಸ್ಥಿರ ಆಸ್ತಿಗಳ ಬಹಿರಂಗ ಹರಾಜು ಪ್ರಕಟಣೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು ನಿ., 441 ಬಾಗಲಕೋಟೆ ಜಿಲ್ಲಾ ಕೃಷಿಯೇತರ ಪತ್ತಿನ ಸಹಕಾರಿ ಸಂಘಗಳ /ಸಹಕಾರಿಗಳ ಸಹಕಾರ ಒಕ್ಕೂಟ ನಿ., ಬಾಗಲಕೋಟೆ ಇವರ ನ್ಯಾಯಾಲಯದ ಆದೇಶದ ಮೇರೆಗೆ **ಶ್ರೀ ಕುಮಾರೇಶ್ವರ ಪತ್ತಿನ ಸಹಕಾರ ಸಂಘ ನಿ., ಬಾದಾಮಿ** ಇದರ ಸುಸ್ತಿ ಸಾಲಗಾರರ ಅಮಲಬಜಾವಣೆ ಪ್ರಕರಣಗಳಲ್ಲಿಯ ಸಾಲ ವಸೂಲಾತಿ ಕುರಿತಂತೆ ಕರ್ನಾಟಕ ಸಹಕಾರಿ ಸಂಘಗಳ ಕಾನೂನು 1959 ರ ನಿಯಮಗಳ ಹಾಗೂ 1960 ರ ಅನ್ವಯ ಈ ಕೆಳಗೆ ನಮೂದಿಸಿದ ಸಾಲಗಾರರ ಸ್ಥಿರ ಆಸ್ತಿಗಳನ್ನು ಬಹಿರಂಗ ಹರಾಜಿಗೆ ನಿಗದಿಪಡಿಸಿದ್ದು ಇರುತ್ತದೆ. ಕಾರಣ ಬಿಡ್‌ದಾರರು ಸ್ಥಿರಾಸ್ತಿಗಳ ಲಿಲಾವು ಕಾಲಕ್ಕೆ ಹಾಜರಿದ್ದು ಬಿಡ್‌ಮಾಡಲು ಈ ಜಾಹೀರಾತು ಪ್ರಕಟಣೆಯ ಮೂಲಕ ಕೋರಲಾಗಿದೆ. **ಸದರ ಸಾಲಗಳೆಲ್ಲವೂ ಕೃಷಿಯೇತರ ಸಾಲಗಳಾಗಿರುತ್ತವೆ.**

ಅ. ನಂ.	ಸಾಲಗಾರರ ಹೆಸರು ಮತ್ತು ವಿಳಾಸ	ಇ.ಪಿ. ಸಂಖ್ಯೆ ಮತ್ತು ದಿನಾಂಕ	ಲಿಲಾವಿಗೆ ಗೊತ್ತುಪಡಿಸಿದ ಆಸ್ತಿಯ ವಿವರ: ಆಸ್ತಿ ನಂ.	ಗ್ರಾಮ	ಕ್ಷೇತ್ರ	ಅಮಲ ಬಜಾವಣೆ ರಕಮು	ಲಿಲಾವು ದಿನಾಂಕ	ಲಿಲಾವು ವೇಳೆ	ಲಿಲಾವು ಮಾಡುವ ಸ್ಥಳ
1	ಶ್ರೀ ಮಹೇಶಗೌಡ ವೀರನಗೌಡ ಪಾಟೀಲ ಸಾ|| ಬದಾಮಿ	534 / 2025-26	ಹೊಲ ರಿ.ಸ. ನಂ. 35*/3 ಹೊಲ ರಿ.ಸ. ನಂ. 36*/4	ಚಿಕ್ಕ-ಮುಚ್ಚಳಗುಡ್ಡ ಹಂಸನೂರ	ಎ. ಗುಂ. 1-31 ಎ. ಗುಂ. 7-06	73,04,711/- + ಬಡ್ಡಿ +ಇತರೆ	13 / 4 / 2026	ಮುಂಜಾನೆ 12-00 ಕ್ಕೆ	ಪಿ. ಕೆ. ಪಿ. ಎಸ್. ಹಂಸನೂರ ಕಾರ್ಯಾಲಯದಲ್ಲಿ
2	ಶ್ರೀ ಆಶೋಕ ಈರಪ್ಪ ಕಡಕೋಳ ಸಾ|| ಮಲ್ಲಾಪೂರ ಎಸ್. ಎಲ್. ತಾ|| ಬದಾಮಿ	23 / 2025-26	ಹೊಲ ರಿ.ಸ. ನಂ. 31*/9	ಮಲ್ಲಾಪೂರ ಎಸ್. ಎಲ್.	ಎ. ಗುಂ. 0-26	1,02,326/- + ಬಡ್ಡಿ + ಇತರೆ	15 /4 / 2026	ಮುಂಜಾನೆ 12-00 ಕ್ಕೆ	ಮಲ್ಲಾಪೂರ ಎಸ್.ಎಲ್. ಗ್ರಾಮದ ಚಾವಡಿಯ ಮುಂದೆ
3	ಶ್ರೀಮತಿ ರೇಣವ್ವ ತಿಪ್ಪಣ್ಣ ಕಡಕೋಳ ಸಾ|| ಮಲ್ಲಾಪೂರ ಎಸ್. ಎಲ್. ತಾ|| ಬದಾಮಿ	126 / 2023-24	ಹೊಲ ರಿ.ಸ. ನಂ. 57*/5	ಮಲ್ಲಾಪೂರ ಎಸ್. ಎಲ್.	ಎ. ಗುಂ. 2-06	26,729/- + ಬಡ್ಡಿ + ಇತರೆ	15 /4 / 2026	ಮಧ್ಯಾಹ್ನ 3-00 ಕ್ಕೆ	ಪಿ. ಕೆ. ಪಿ. ಎಸ್. ಮುಷ್ಟಿಗೇರಿ ಕಾರ್ಯಾಲಯದಲ್ಲಿ
4	ಶ್ರೀ ದ್ಯಾಮಣ್ಣ ಕೆಂಚಪ್ಪ ಕುರಿ ಸಾ|| ಮುಷ್ಟಿಗೇರಿ ತಾ|| ಬದಾಮಿ	119 / 2023-24	ಹೊಲ ರಿ.ಸ. ನಂ. 145*/2	ಮುಷ್ಟಿಗೇರಿ	ಎ. ಗುಂ. 1-04	42,998/- + ಬಡ್ಡಿ + ಇತರೆ	16 / 4 / 2026	ಮುಂಜಾನೆ 12-00 ಕ್ಕೆ	ಪಿ. ಕೆ. ಪಿ. ಎಸ್. ಮುಷ್ಟಿಗೇರಿ ಕಾರ್ಯಾಲಯದಲ್ಲಿ
5	ಶ್ರೀ ಈರಣ್ಣ ಶಿವಪುತ್ರಪ್ಪ ಮರಶೆಟ್ಟಿ ಸಾ|| ನೀಲಗುಂದ ತಾ|| ಬದಾಮಿ	506/ 2024-25	ಮನೆ ನಂ. 411	ನೀಲಗುಂದ	------	2,34,295/- + ಬಡ್ಡಿ + ಇತರೆ	16 /4 / 2026	ಮಧ್ಯಾಹ್ನ 1-30 ಕ್ಕೆ	ಗ್ರಾಮ ಪಂಚಾಯತ ನೀಲಗುಂದ ಕಾರ್ಯಾಲಯದಲ್ಲಿ
6	ಶ್ರೀ ಮಲ್ಲಪ್ಪ ಮರಿಸಂಗಪ್ಪ ಯಂಡಿಗೇರಿ ಸಾ|| ನೀಲಗುಂದ ತಾ|| ಬದಾಮಿ	413/ 2022-23	ಮನೆ ನಂ. 40	ನೀಲಗುಂದ	------	2,38,975/- + ಬಡ್ಡಿ + ಇತರೆ	16 /4 / 2026	ಮಧ್ಯಾಹ್ನ 3-00 ಕ್ಕೆ	ಗ್ರಾಮ ಪಂಚಾಯತ ನೀಲಗುಂದ ಕಾರ್ಯಾಲಯದಲ್ಲಿ
7	ಶ್ರೀ ಸುರೇಶ ಹಣಮಂತ ಲಮಾಣಿ ಸಾ|| ಜಲಗೇರಿ ಎಲ್.ಟಿ -2 ತಾ|| ಬದಾಮಿ	508/ 2024-25	ಮನೆ ನಂ. 731	ಜಲಗೇರಿ ಎಲ್.ಟಿ - 2	------	2,43,988/- + ಬಡ್ಡಿ + ಇತರೆ	17 /4 / 2026	ಮಧ್ಯಾಹ್ನ 2-00 ಕ್ಕೆ	ಶ್ರೀ ಕುಮಾರೇಶ್ವರ ಪತ್ತಿನ ಸ. ಸಂಘ ನಿ., ಬದಾಮಿ ಶಾಖೆ : ನೀರಬೂದಿಹಾಳ ಕಾರ್ಯಾಲಯದಲ್ಲಿ
8	ಶ್ರೀ ಶರಣಯ್ಯ ಶಿದ್ಲಿಂಗಯ್ಯ ವಿರಕ್ತಿಮಠ ಸಾ|| ಶಿರಗುಪ್ಪಿ ತಾ|| ಬೀಳಗಿ	876 / 2024-25	ಹೊಲ ರಿ.ಸ. ನಂ. 6*/5	ಶಿರಗುಪ್ಪಿ	ಎ. ಗುಂ. 0-37	2,01,475/- + ಬಡ್ಡಿ + ಇತರೆ	18 /4 / 2026	ಮುಂಜಾನೆ 12-00 ಕ್ಕೆ	ಶಿರಗುಪ್ಪಿ ಗ್ರಾಮದ ಚಾವಡಿಯ ಮುಂದೆ
9	ಶ್ರೀ ರಮೇಶ ಬಸಪ್ಪ ಜಂಗವಾಡ ಸಾ|| ಕೆರಕಲಮಟ್ಟಿ ತಾ|| ಬದಾಮಿ	20 / 2025-26	ಹೊಲ ರಿ.ಸ. ನಂ. 80*/1	ಕೆರಕಲಮಟ್ಟಿ	ಎ. ಗುಂ. 0-32	93,621/- + ಬಡ್ಡಿ + ಇತರೆ	18 /4 / 2026	ಮಧ್ಯಾಹ್ನ 2-00 ಕ್ಕೆ	ಶ್ರೀ ಕುಮಾರೇಶ್ವರ ಪತ್ತಿನ ಸ. ಸಂಘ ನಿ., ಬದಾಮಿ ಶಾಖೆ : ನೀರಬೂದಿಹಾಳ ಕಾರ್ಯಾಲಯದಲ್ಲಿ

ಅಲಾವಿನ ಷರತ್ತುಗಳು : ● ಲಿಲಾವಿನ ಷರತ್ತುಗಳನ್ನು ಲಿಲಾವಿನ ಕಾಲಕ್ಕೆ ಓದಿ ಹೇಳಲಾಗುವುದು. ● ಸದರ ಹರಾಜು ಮಾನ್ಯ ಸಹಕಾರಿ ಸಂಘಗಳ ಸಹಾಯಕ ನಿಭಂದಕರು ಹಾಗೂ ವಸೂಲಾಧಿಕಾರಿಗಳು ನಿಯಮ 441 ಬಾಗಲಕೋಟೆ ಜಿಲ್ಲಾ ಕೃಷಿಯೇತರ ಪತ್ತಿನ ಸಹಕಾರಿ ಸಂಘಗಳ / ಸಹಕಾರಿಗಳ ಸಹಕಾರ ಒಕ್ಕೂಟ ನಿ., ಬಾಗಲಕೋಟೆ ಇವರ ಮಂಜೂರಾತಿಗಾಗಿ ಒಳಪಟ್ಟಿರುತ್ತದೆ. ● ಹರಾಜನ್ನು ಒಪ್ಪಿಕೊಳ್ಳುವ / ಬಿಡುವ / ಮುಂದೂಡುವ ಅಧಿಕಾರವನ್ನು ಮಾರಾಟಾಧಿಕಾರಿಗಳು (ನಿ. 441) ಹೊಂದಿರುತ್ತಾರೆ. ● ಬಹಿರಂಗ ಹರಾಜು ದಿನಾಂಕಕ್ಕಿಂತ 3 ದಿವಸ ಮೊದಲು ಸಂಘದ ಸಂಪೂರ್ಣ ಸಾಲ ಬಾಕಿ ಮರುಪಾವತಿ ಮಾಡಿದಲ್ಲಿ ಡಂಗುರ ಸಾರುವುದನ್ನು ನಿಲ್ಲಿಸಲಾಗುವುದು. ● ಜಾಹೀರ ಲಿಲಾವದಲ್ಲಿ ಯಾರೂ ಬೇಡದಿದ್ದರೆ ಸದರ ಆಸ್ತಿಗಳನ್ನು ಡಿಕ್ರಿ ಹೋಲ್ಡರ ಸಂಘದ ಹೆಸರಿನಲ್ಲಿ ಬದಲಾಯಿಸಲಾಗುವುದು. ● ಲಿಲಾವು ಅವರ ಹೆಸರಿನಲ್ಲಿ ಖಾಯಂ ಆದ ಕೂಡಲೇ ಲಿಲಾವಿನಲ್ಲಿ ಬೇಡಿದ ಹಣದ ಪೈಕಿ ಶೇ. 15 ರಷ್ಟು ತಕ್ಷಣ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಲಿಲಾವಿನ ದಿನಾಂಕದಿಂದ 45 ದಿವಸಗಳಲ್ಲಿ ಪೂರ್ತಿ ಭರಣಾ ಮಾಡತಕ್ಕದ್ದು. ● ಹರಾಜಿನಲ್ಲಿ ಭಾಗವಹಿಸುವವರು ರೂ. 2000/- ಹರಾಜು ಠೇವಣಿಯಾಗಿ ಭರಣಾಮಾಡಿ ಲಿಲಾವಿನಲ್ಲಿ ಭಾಗವಹಿಸತಕ್ಕದ್ದು. ● ಹೆಚಿನ ಮಾಹಿತಿಗಾಗಿ ಮಾರಾಟಾಧಿಕಾರಿಗಳನ್ನು ಅಥವಾ ಸಂಘದ ಮುಖ್ಯ ಕಾರ್ಯನಿರ್ವಾಹಕರನ್ನು ಭೇಟಿಯಾಗಬಹುದಾಗಿದೆ. ● ಲಿಲಾವು ಮಾಡಲ್ಪಡುವ ಆಸ್ತಿಯು ಯಾವ ಪರಿಸ್ಥಿತಿಯಲ್ಲಿ ಹೇಗೆ ಕಟ್ಟಿಸಿದ್ದಾರೆ / ಹೇಗೆ ಇದೆಯೋ ಹಾಗೇ ಮಾರಾಟ ಮಾಡಲಾಗುವುದು. ಮತ್ತು ಸರಕಾರಕ್ಕೆ ಭರಣಾ ಮಾಡಬೇಕಾದ ದರಪಟ್ಟಿ ಇತರೆ ಕರ, ವಿದ್ಯುತ್ತ ಬಾಕಿ ಇವುಗಳನ್ನು ಖರೀದಿದಾರರು ನಿಭಾಯಿಸಿಕೊಳ್ಳಬೇಕು. ● ಸದರ ಸ್ಥಿರಾಸ್ತಿಯು ಹರಾಜು ತೀರ್ಪು ಸಾಲಗಾರರಿಂದ ಸಂಘಕ್ಕೆ ಬರಬೇಕಾದ ಎಲ್ಲಾ ಬಾಕಿಗಳಿಗೆ ಒಳಪಟ್ಟಿರುತ್ತದೆ ಮತ್ತು ಬದ್ಧವಾಗಿರುತ್ತದೆ.

ಶ್ರೀಮಾನ್ಯ ಎಮ್.ಬಿ. ಹಂಗರಗಿ
ಅಧ್ಯಕ್ಷರು, ಶ್ರೀ ಕುಮಾರೇಶ್ವರ ಪತ್ತಿನ ಸಹಕಾರ ಸಂಘ ನಿ, ಬಾದಾಮಿ

ಶ್ರೀಮತಿ ಎಮ್. ಕೆ. ವಸ್ತ್ರದ
ಮುಖ್ಯ ಕಾರ್ಯನಿರ್ವಾಹಕರು ಶ್ರೀ ಕುಮಾರೇಶ್ವರ ಪತ್ತಿನ ಸಹಕಾರ ಸಂಘ ನಿ, ಬಾದಾಮಿ

ಶ್ರೀ ಎ. ಬಿ. ತೊಗರಿ
ಮಾರಾಟಾಧಿಕಾರಿಗಳು ಬಾಗಲಕೋಟೆ ಜಿಲ್ಲಾ ಕೃಷಿಯೇತರ ಪತ್ತಿನ ಬಾಗಲಕೋಟೆ ಸಹಕಾರ ಸಂಘ / ಸಹಕಾರಿಗಳ ಸಹಕಾರ ಒಕ್ಕೂಟ ನಿ., ಬಾಗಲಕೋಟೆ

ಶ್ರೀ ಡಾ. ಮಲ್ಲಪ್ಪ ಶಿ. ರಾಹುತನ್ನವರ
ಸ. ಸಂ. ಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು ನಿ., 441 ಬಾಗಲಕೋಟೆ ಜಿಲ್ಲಾ ಕೃಷಿಯೇತರ ಪತ್ತಿನ ಸಹಕಾರಿಗಳ / ಸಹಕಾರಿ ಸಂಘಗಳ ಒಕ್ಕೂಟ ನಿ., ಬಾಗಲಕೋಟೆ

ಡೇವಿಡ್ ಆರ್ಭಟಕ್ಕೆ ಸಿಎಸ್‌ಕೆ ಧೂಳಿಪಟ

- ಆರ್‌ಸಿಬಿಗೆ 43 ರನ್ ಭರ್ಜರಿ ಜಯ
- ಚೆನ್ನೈ ವಿರುದ್ಧ ತವರಿನಲ್ಲಿ ಸತತ 3ನೇ ಜಯ
- ಒಟ್ಟಾರೆ ಸಿಎಸ್‌ಕೆ ವಿರುದ್ಧ ಸತತ 4ನೇ ಜಯ
- ಭುವಿಗೆ 3 ವಿಕೆಟ್



•ಬೆಂಗಳೂರು: ಟಿಮ್ ಡೇವಿಡ್ ಆರ್ಭಟಕ್ಕೆ ಬೆಚ್ಚಿಬಿದ್ದ ಐದು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್(ಸಿಎಸ್‌ಕೆ) ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ತವರಿನಲ್ಲಿ ಮಂಡಿಯೂರಿ ಸೋಲೊಪ್ಪಿದೆ. ಪಾಟಿದಾರ್ ಪಡೆ ನೀಡಿದ 251 ರನ್‌ಗಳ ಬೃಹತ್ ಸವಾಲನ್ನು ನೋಡಿ ದಂಗಾದ ಸಿಎಸ್‌ಕೆ 207ಕ್ಕೆ ಆಲೌಟಾಗಿ ಶರಣಾಯಿತು. ಚಿನ್ನಸ್ವಾಮಿಗೆ ಬಂದು ಆರ್‌ಸಿಬಿ ಮಣಿಸುವ ಕನಸು ಕಾಣುತ್ತಿದ್ದ ಚೆನ್ನೈ 43 ರನ್‌ಗಳ ಸೋಲುಂಡಿತು. ಈ ಆವೃತ್ತಿಯ ಮೊದಲೆರಡೂ ಪಂದ್ಯಗಳನ್ನು ಗೆದ್ದಿರುವ ಆರ್‌ಸಿಬಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಹಾಲಿ ಚಾಂಪಿಯನ್ ಆರ್‌ಸಿಬಿ ಭಾನುವಾರ ರಾತ್ರಿ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನೆಚ್ಚಿನ ಅಭಿಮಾನಿಗಳೆದುರು ಸಿಎಸ್‌ಕೆ ಬೌಲಿಂಗ್ ದಾಳಿಯನ್ನು ಪುಡಿಗಟ್ಟಿ ಹಲವು ದಾಖಲೆಗಳನ್ನು ಧ್ವಂಸಗೊಳಿಸಿದೆ. ಆರ್‌ಸಿಬಿ ಪರ ದೇವದತ್ ಪಡಿಕ್ಕಲ್, ನಾಯಕ ರಜತ್ ಪಾಟಿದಾರ್ ಮತ್ತು ಡೇವಿಡ್ ಸ್ಫೋಟಕ ಪ್ರದರ್ಶನ ನೀಡಿದ್ದರು. ಅದರಲ್ಲೂ ಪಡಿಕ್ಕಲ್-ಪಾಟಿದಾರ್, ಪಾಟಿದಾರ್-ಡೇವಿಡ್ ನಡುವಿನ ಜತೆಯಾಟಗಳು ಪಂದ್ಯ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿತ್ತು.

ನಿಧಾನಗತಿ ಔಟ್‌ಫೀಲ್ಡ್

ಆರಂಭದಲ್ಲಿ ಎಂ.ಚಿನ್ನಸ್ವಾಮಿ ಪಿಚ್ ಸ್ವಲ್ಪ ಅಂಟಿಕೊಳ್ಳುವಂತಿತ್ತು ಎಂದು 29 ಬಾಲ್‌ಗಳಲ್ಲಿ 50 ರನ್ ಗಳಿಸಿದ ಬೆಂಗಳೂರು ಹುಡುಗ ದೇವದತ್ ಪಡಿಕ್ಕಲ್ ಹೇಳಿದ್ದಾರೆ. ಔಟ್‌ಫೀಲ್ಡ್ ಸಹ ಅಸಾಮಾನ್ಯವಾಗಿ ನಿಧಾನವಾಗಿತ್ತು, ಹಲವಾರು ಬಲವಾದ ಹೊಡೆತಗಳು ಬೌಂಡರಿಯತ್ತ ಹೋಗದೆ ಔಟ್‌ಫೀಲ್ಡ್‌ನಲ್ಲೇ ನಿಂತವು. ಇನಿಂಗ್ಸ್ ಮುಂದುವರಿದಂತೆ ಪಿಚ್ ಸುಧಾರಿಸಿದರೂ, ಔಟ್‌ಫೀಲ್ಡ್ ನಿಧಾನವೇ ಉಳಿಯಿತು. ಟಿಮ್ ಡೇವಿಡ್ ಮತ್ತು ರಜತ್ ಪಾಟಿದಾರ್ ಔಟ್‌ಫೀಲ್ಡ್‌ಗೆ ಚೆಂಡನ್ನು ಹೊಡೆಯುವ ಅಗತ್ಯವೇ ಕಂಡುಕೊಳ್ಳಲಿಲ್ಲ. ಬದಲಿಗೆ ಅವರು ಚೆಂಡನ್ನು ಆಕಾಶಕ್ಕೆತ್ತಿ ಬೌಂಡರಿಗಳಾಚೆಗೆ ಕಳುಹಿಸುತ್ತಿದ್ದರು. ಆರಂಭದಲ್ಲಿ ಔಟ್‌ಫೀಲ್ಡ್ ನಿಧಾನವಾಗಿದ್ದರೂ ಫಿಲ್ ಸಾಲ್ಟ್ ಮತ್ತು ವಿರಾಟ್ ಕೊಹ್ಲಿ ಉತ್ತಮ ಅಡಿಪಾಯ ಹಾಕಿಕೊಟ್ಟಿದ್ದರು.

ಸಿಎಸ್‌ಕೆಗೆ ಸತತ 3ನೇ ಸೋಲು

ಆರ್‌ಸಿಬಿ ನೀಡಿದ 251 ರನ್ ಬೃಹತ್ ಸವಾಲನ್ನು ಬೆನ್ನತ್ತಲು ಆರಂಭಿಸಿದ ಸಿಎಸ್‌ಕೆ ಮೊದಲ 3 ಓವರ್‌ಗಳಲ್ಲೇ ಮೊದಲ 3 ವಿಕೆಟ್ ಕಳೆದುಕೊಂಡಿದ್ದು, ಕೊನೆಯಲ್ಲಿ ಈ ಆವೃತ್ತಿಯ ಸತತ 3ನೇ ಸೋಲುಂಡಿತು.

ಅವಕಾಶ ಚೆನ್ನಾಗಿ ಬಳಸಿದ ಟಿಮ್!

18ನೇ ಓವರ್‌ನಲ್ಲಿ ವೇಗಿ ಅಂಶುಲ್ ಕಂಬೋಜ್ ಎಸೆದಿದ್ದ ಯಾರ್ಕರ್ ಟಿಮ್ ಡೇವಿಡ್ ಅವರ ಲೆಗ್ ಸ್ಟಂಪ್ ಉರುಳಿಸಿತ್ತು. ರೋಷಾವೇಷದಿಂದ ಸಂಭ್ರಮಿಸಿದ ಕಂಬೋಜ್ ಡೇವಿಡ್ ಸಮೀಪದಲ್ಲಿ ತೆರಳಿದ್ದರು. ಈ ವೇಳೆ ತಾಳ್ಮೆಯಲ್ಲಿದ್ದ ಟಿಮ್ ಕಂಬೋಜ್ ಅವರಿಗೆ ಸ್ನೇಹದಿಂದ ಫಿಸ್ಟ್ ಬಂಪ್ ನೀಡಿದ್ದರು. ಇದಾದ ನಂತರ ನೋಬಾಲ್ ಸೈರನ್ ಮೊಳಗಿದ್ದು, ಅಂಪೈರ್ ಫ್ರೀಹಿಟ್ ಸನ್ನೆ ಮಾಡಿದ್ದರು. ಆಡಲು ಸಿಕ್ಕ ಇನ್ನೊಂದು ಅವಕಾಶ ಮತ್ತು ಫ್ರೀಹಿಟ್‌ನ ಸಂಪೂರ್ಣ ಬಳಸಿಕೊಂಡ ಡೇವಿಡ್ ಮಿಡ್ ಆನ್ ಮೇಲೆ ಸಿಕ್ಸರ್ ಹೊಡೆದಿದ್ದರು. ಇಲ್ಲಿಂದಲೇ ಡೇವಿಡ್ ಆಕ್ರಮಣಕಾರಿ ಅವತಾರ ಅನ್‌ಲಾಕ್ ಆಗಿದ್ದು, ಮುಂದಿನ ಓವರ್‌ಟನ್ ಓವರ್‌ನಲ್ಲಿ 6, 2, 4, 6, 6, 6 ಸೇರಿ ಒಟ್ಟು 30 ರನ್ ಹೊಡೆದಿದ್ದರು. 25 ಎಸೆತಗಳಲ್ಲಿ ಔಟಾಗದೆ 70 ರನ್ ಚಚ್ಚಿದ್ದ ಡೇವಿಡ್ ಪಂದ್ಯಶ್ರೇಷ್ಠರಾದರು.

44 ಎಸೆತಗಳಲ್ಲಿ 14 ಸಿಕ್ಸರ್!

ಡೇವಿಡ್ ಮತ್ತು ಪಾಟಿದಾರ್ ಇಬ್ಬರೂ ಸೇರಿ ಒಟ್ಟು 44 ಬಾಲ್‌ಗಳನ್ನು ಎದುರಿಸಿ, ಅವುಗಳಲ್ಲಿ 14 ಎಸೆತಗಳನ್ನು ಸಿಕ್ಸರ್‌ಗಳನ್ನಾಗಿ ಪರಿವರ್ತಿಸಿದರು. ಇದರಲ್ಲಿ ಡೇವಿಡ್ 8 ಸಿಕ್ಸರ್ ಮತ್ತು ಪಾಟಿದಾರ್ 6 ಸಿಕ್ಸರ್ ಹೊಡೆದಿದ್ದರು. ಆದರೆ ಸಿಎಸ್‌ಕೆ ಬ್ಯಾಟಿಂಗ್ ಲೈನ್ ಅಪ್ ಒಟ್ಟು 11 ಸಿಕ್ಸರ್‌ಗಳಷ್ಟೇ ಹೊಡೆದಿತ್ತು. ಇವರಿಬ್ಬರ ಜೋಡಿ ಮುರಿಯದ ನಾಲ್ಕನೇ ವಿಕೆಟ್‌ಗೆ 35 ಎಸೆತಗಳಲ್ಲಿ 99 ರನ್ ಕಲೆಹಾಕಿದ್ದರು.

ಚೆನ್ನೈ 207ಕ್ಕೆ ಸರ್ವಪತನ

ಆರ್‌ಸಿಬಿ ಬ್ಯಾಟಿಂಗ್ ವೇಳೆ ಸಹ ಆಟಗಾರ ಟಿಮ್ ಡೇವಿಡ್ ನಿರಂತರ ಸಿಕ್ಸರ್‌ಗಳನ್ನು ಹೊಡೆಯುತ್ತಿದ್ದನ್ನು ನೋಡಿ, ನಾನು ಸಂತೋಷ ಪಡುವುದೋ, ದುಃಖ ಪಡಬೇಕೋ ಗೊತ್ತಾಗಲಿಲ್ಲ, ಯಾಕೆಂದರೆ ನಾನು ಬೌಲಿಂಗ್ ಮಾಡುವವನಿದ್ದೆ ಎಂದು ಆರ್‌ಸಿಬಿ ಅನುಭವಿ ವೇಗಿ ಭುವನೇಶ್ವರ ಕುಮಾರ್ ಪ್ರತಿಕ್ರಿಯಿಸಿದ್ದಾರೆ. ಜೋಶ್ ಹೇಜಲ್‌ವುಡ್ ಅನುಪಸ್ಥಿತಿಯ ಕೊರತೆ ಮತ್ತೊಮ್ಮೆ ಕಾಡದಂತೆ ಜವಾಬ್ದಾರಿ ವಹಿಸಿಕೊಂಡ ಜೇಕಬ್ ಡಫಿ, ಸಂಜು ಸ್ಯಾಮ್ಸನ್ ಮತ್ತು ಋತುರಾಜ್ ಗಾಯಕ್ವಾಡ್ ಅವರನ್ನು ವಿಕೆಟ್‌ಗಳನ್ನು ಕಬಳಿಸಿದರು. ಆರಂಭದ ಹಂತದಲ್ಲಿಯೇ 30ಕ್ಕೆ 3 ವಿಕೆಟ್ ಕಳೆದುಕೊಂಡ ಸಿಎಸ್‌ಕೆ ಕೊನೆಯವರೆಗೆ ಹೋರಾಡಿದರೂ, 19.4 ಓವರ್‌ಗಳಲ್ಲಿ ತನ್ನ ಹೋರಾಟವನ್ನು 207 ರನ್‌ಗಳಿಗೆ ನಿಲ್ಲಿಸಬೇಕಾಯಿತು.

ಸರ್ಫರಾಜ್ ಅರ್ಧ ಶತಕ ವ್ಯರ್ಥ

ಪವರ್‌ಪ್ಲೇ ಓವರ್‌ಗಳ ಮುಕ್ತಾಯದ ವೇಳೆ 77 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ಸಿಎಸ್‌ಕೆಗೆ ನೆರವಾಗಿದ್ದು 75 ಲಕ್ಷ ರೂ. ಬೆಲೆಗೆ ಖರೀದಿಸಲ್ಪಟ್ಟ ಬ್ಯಾಟರ್ ಸರ್ಫರಾಜ್ ಖಾನ್, ಅವರು 24 ಎಸೆತಗಳಲ್ಲಿ 50 ರನ್ ಪೇರಿಸಿದ್ದ ಸರ್ಫರಾಜ್ ಮುಂದಿನ ಎಸೆತದಲ್ಲಿ ಮುನ್ನುಗ್ಗಿ ಬಾರಿಸುವ ಯತ್ನದಲ್ಲಿ ಸ್ಟಂಪ್ ಆಗಿ ಕೃಣಾಲ್ ಪಾಂಡ್ಯರಿಗೆ ವಿಕೆಟ್ ಒಪ್ಪಿಸಿದರು. ಸರ್ಫರಾಜ್ ಬಿರುಸಿನ ಆಟದಲ್ಲಿ 8 ಬೌಂಡರಿ ಮತ್ತು 2 ಸಿಕ್ಸರ್ ಒಳಗೊಂಡಿದ್ದವು. ಪ್ರಶಾಂತ್ ವೀರ್ 29 ಬಾಲ್‌ಗಳಲ್ಲಿ 43 ರನ್ ಬಾರಿಸಿ ಗಮನಸೆಳೆದರು. ಕೃಣಾಲ್ ಬೌಲಿಂಗ್‌ಗೆ ಡೀಪ್ ಮಿಡ್‌ವಿಕೆಟ್ ಮತ್ತು ವೈಡ್ ಲಾಂಗ್-ಆನ್ ನಡುವೆ ಹೊಡೆದ ಫೋರ್ ಅವರ ಪ್ರತಿಭೆಯನ್ನು ತೋರಿಸಿತು. ಓವರ್‌ಟನ್ ಮತ್ತು ಅಂಶುಲ್ ಕಂಬೋಜ್ ಸಹ ಬ್ಯಾಟ್ ಬೀಸುವ ಮೂಲಕ ವೇಗದ ರನ್ ಗಳಿಸಿದರೂ, ಟಿಮ್ ಡೇವಿಡ್‌ಗೆ ನೀಡಿದ ಸಿಕ್ಸರ್‌ಗಳಿಂದ ಉಂಟಾದ ಹಾನಿಯನ್ನು ಅವರ ಬ್ಯಾಟಿಂಗ್ ಮೂಲಕ ಸರಿಪಡಿಸಲು ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರ್

•ಆರ್‌ಸಿಬಿ 250/3 (20): ಡೇವಿಡ್ 70★, ಪಡಿಕ್ಕಲ್ 50, ಪಾಟಿದಾರ್ 48★, ಸಾಲ್ಟ್ 46, ಕೊಹ್ಲಿ 28 (ದುಬೆ 30ಕ್ಕೆ 1)

•ಸಿಎಸ್‌ಕೆ 207/10 (19.4): ಸರ್ಫರಾಜ್ 50, ಪ್ರಶಾಂತ್ 43, ಓವರ್‌ಟನ್ 37 (ಭುವಿ 41ಕ್ಕೆ 3, ಅಭಿನಂದನ್ 30ಕ್ಕೆ 2, ಕುನಾಲ್ 36ಕ್ಕೆ 2, ಡಫಿ 58ಕ್ಕೆ 2)

- 457 ರನ್ - ಆರ್‌ಸಿಬಿ ಮತ್ತು ಸಿಎಸ್‌ಕೆ ನಡುವಿನ ಐಪಿಎಲ್ ಪಂದ್ಯವೊಂದರಲ್ಲಿ ದಾಖಲಾದ ಅತ್ಯಧಿಕ ರನ್
- ಐಪಿಎಲ್‌ನಲ್ಲಿ ಆರ್‌ಸಿಬಿಯ ತೃತೀಯ ಅತ್ಯಧಿಕ ಮೊತ್ತ 250/3
- ಸಿಎಸ್‌ಕೆ ವಿರುದ್ಧ ಯಾವುದೇ ತಂಡ ಹೊಡೆದ ಅತ್ಯಧಿಕ ಸ್ಕೋರ್
- ಪಂದ್ಯವೊಂದರಲ್ಲೇ ಅತ್ಯಧಿಕ 19 ಸಿಕ್ಸರ್

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ನೆ.ರ.ರೇ.
ಆರ್‌ಸಿಬಿ	2	2	0	4	2.501
ಆರ್‌ಆರ್	2	2	0	4	2.233
ದಿಲ್ಲಿ	2	2	0	4	1.170
ಪಂಜಾಬ್	2	2	0	4	0.637
ಸನ್‌ರೈಸರ್ಸ್	3	1	2	2	0.275
ಮುಂಬೈ	2	1	1	2	-0.206
ಲಖನೌ	2	1	1	2	-0.542
ಗುಜರಾತ್	2	0	2	0	-0.424
ಕೆಕೆಆರ್	2	0	2	0	-1.964
ಸಿಎಸ್‌ಕೆ	3	0	3	0	-2.517

ಆರೆಂಜ್ ಕ್ಯಾಪ್



ರಿಜ್ವಿ (ದಿಲ್ಲಿ ಕ್ಯಾಪಿಟಲ್)
160 ರನ್

ಪರ್ಪಲ್ ಕ್ಯಾಪ್



ರವಿ ಬಿಷ್ಣೋಯ್ (ರಾಜಸ್ಥಾನ್)
5 ವಿಕೆಟ್

ಕಿರುಸುದ್ದಿ

ಇದು ಆರ್‌ಸಿಬಿ ಫ್ಯಾನ್ಸ್‌ಗಳು ಸಂಭ್ರಮಿಸುವ ಕಾಲ: ಶಾಸ್ತ್ರಿ

•ಬೆಂಗಳೂರು: ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಆರ್‌ಸಿಬಿ 43 ರನ್‌ಗಳ ಜಯ ಸಾಧಿಸಿದ ವೇಳೆ ಕಾಮೆಂಟ್ರಿ ಬಾಕ್ಸ್‌ನಲ್ಲಿದ್ದ ವೀಕ್ಷಕ ವಿವರಣೆಕಾರ ಮತ್ತು ಮಾಜಿ ಕ್ರಿಕೆಟಿಗರಾದ ರವಿ ಶಾಸ್ತ್ರಿ, ಇದು ಆರ್‌ಸಿಬಿ ಅಭಿಮಾನಿಗಳ ಸಮಯ, ಇಂತಹ ಕ್ಷಣಗಳಿಗಾಗಿ ಕಳೆದ 17 ವರ್ಷಗಳಿಂದ ಕಾಯುತ್ತಿದ್ದರು ಎಂಬ ಹೇಳಿಕೆಯನ್ನು ನೀಡಿದ್ದಾರೆ. ಕಳೆದ 17 ವರ್ಷಗಳಿಂದ ಆರ್‌ಸಿಬಿ ಅಭಿಮಾನಿಗಳನ್ನು ಎಲ್ಲರೂ ಗೇಲಿ ಮಾಡುತ್ತಿದ್ದರು. ಆರ್‌ಸಿಬಿ ಫ್ಯಾನ್ಸ್ ಶಾಲಾ-ಕಾಲೇಜುಗಳಿಗೆ ಹೋದಾಗ ಸಹಪಾಠಿಗಳಿಂದ ಅಥವಾ ಕುಟುಂಬದ ಸದಸ್ಯರಿಂದ ಆರ್‌ಸಿಬಿ ಬೆಂಬಲಿಸುವ ಕಾರಣಕ್ಕಾಗಿ ಟ್ರೋಲ್‌ಗಳಿಗೆ ಆಹಾರವಾಗಿದ್ದರು. ಆದರೆ ಕಳೆದ ಆವೃತ್ತಿಯಿಂದ ಆರ್‌ಸಿಬಿ ಫ್ರಾಂಚೈಸಿಯ ಆಟ ಬದಲಾಗಿದೆ. ಇದು ಆರ್‌ಸಿಬಿಯ ಸಮಯ ಮತ್ತು ಅಭಿಮಾನಿಗಳು ಸಂಭ್ರಮಿಸುವ ಸಮಯ ಎಂದು ರವಿಶಾಸ್ತ್ರಿ ಹೇಳಿದ್ದಾರೆ.

ಸಿಎಸ್‌ಕೆಯಲ್ಲಿ ಮನ ನೊಂದು ಐಪಿಎಲ್‌ನಿಂದ ನಿವೃತ್ತಿ: ಅಶ್ವಿನ್!

•ಬೆಂಗಳೂರು: ಚೆನ್ನೈ ಸೂಪರ್ ಕಿಂಗ್ಸ್ ಪರ 2025ರಲ್ಲಿ ಕೊನೆಯದಾಗಿ ಕಾಣಿಸಿಕೊಂಡಿದ್ದ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರು, ನನಗಿನ್ನೂ ಹೆಚ್ಚು ಆಡಬಹುದೆಂಬ ಮನಸ್ಥಿತಿಯಿತ್ತು. ಆದರೆ ಸಿಎಸ್‌ಕೆ ತಂಡದಲ್ಲಿನ ತಮ್ಮ ಪಾತ್ರವೇನೆಂಬ ಸ್ಪಷ್ಟತೆಯಿಲ್ಲದ ಕಾರಣ ಮನ ನೊಂದು ಐಪಿಎಲ್ ನಿವೃತ್ತಿ ನೀಡಿರುವುದಾಗಿ ಅಶ್ವಿನ್ ಬಹಿರಂಗಗೊಳಿಸಿದ್ದಾರೆ. ತಮ್ಮಲ್ಲಿನ್ನೂ ಆಟವಾಡುವ ಸಾಮರ್ಥ್ಯವಿದ್ದರೂ 2025ರ ಆವೃತ್ತಿಯಲ್ಲಿ ಅಶ್ವಿನ್‌ರನ್ನು ಸಿಎಸ್‌ಕೆ ಸರಿಯಾಗಿ ಬಳಸಿಕೊಂಡಿರಲಿಲ್ಲ. ಅವರೇ ಹೇಳಿದಂತೆ ಒಟ್ಟು 14 ಪಂದ್ಯಗಳಲ್ಲಿ 9 ಪಂದ್ಯಗಳಲ್ಲಷ್ಟೇ ಅಶ್ವಿನ್‌ರನ್ನು ಆಡಿಸಿ ಉಳಿದ ಕಾಲ ಬೆಂಚ್‌ನಲ್ಲಿ ಕಳೆದಿದ್ದರು. ಋತುರಾಜ್ ಗಾಯಕ್ವಾಡ್ ನಾಯಕರಾದ ಬಳಿಕ ಚೆನ್ನೈನಲ್ಲಿ ಅಶ್ವಿನ್‌ಗೆ ಅವಕಾಶ ಕಡಿಮೆಯಾಗಿತ್ತು. ಸಿಎಸ್‌ಕೆ ಟೀಮ್ ಮ್ಯಾನೇಜ್‌ಮೆಂಟ್ ಜತೆ ಚರ್ಚಿಸಿದ ಬಳಿಕ ಅಶ್ವಿನ್ ನಿವೃತ್ತಿ ಘೋಷಿಸಿದ್ದಾಗಿ ತಮ್ಮ ಯೂಟ್ಯೂಬ್ ಚಾನೆಲ್‌ನ ಆ್ಯಶ್ ಕಿ ಬಾತ್ ಶೋನಲ್ಲಿ ಹೇಳಿಕೊಂಡಿದ್ದಾರೆ.

ಟಿಸಿಎಸ್ ವರ್ಲ್ಡ್ 10ಕೆ ಓಟಕ್ಕೆ ಬ್ಲಾಂಕಾ ವ್ಲಾಸಿಕ್ ರಾಯಭಾರಿ

•ಬೆಂಗಳೂರು: ಕ್ರೊವೇಶಿಯಾದ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಮತ್ತು ಎರಡು ಬಾರಿಯ ವಿಶ್ವ ಚಾಂಪಿಯನ್ ಹೈಜಂಪ್‌ಪಟು ಬ್ಲಾಂಕಾ ವ್ಲಾಸಿಕ್ ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು ಮ್ಯಾರಥಾನ್‌ನ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ. ಕ್ರೀಡೆಯು ಕಂಡ ಅತ್ಯುತ್ತಮ ಹೈ ಜಂಪರ್‌ಗಳಲ್ಲಿ ಒಬ್ಬರಾದ ವ್ಲಾಸಿಕ್ ತನ್ನೊಂದಿಗೆ ದೀರ್ಘಾಯುಷ್ಯ ಮತ್ತು ಯಶಸ್ಸಿನ ಮೇಲೆ ಅತ್ಯುನ್ನತ ಮಟ್ಟದ ವೃತ್ತಿಜೀವನವನ್ನು ಹೊಂದಿದ್ದರು. ಕ್ರೊವೇಶಿಯನ್ ತಾರೆ ಬೀಜಿಂಗ್ 2008ರಲ್ಲಿ ಒಲಿಂಪಿಕ್ ರಜತ ಗೆದ್ದಿದ್ದರು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದಿದ್ದಲ್ಲದೆ, ಅನೇಕ ವಿಶ್ವ ಚಾಂಪಿಯನ್‌ಶಿಪ್ ಮತ್ತು ವಿಶ್ವ ಒಳಾಂಗಣ ಪ್ರಶಸ್ತಿಗಳನ್ನು ಬಾಚಿಕೊಂಡಿದ್ದರು.



ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರಿನ 18ನೇ ಆವೃತ್ತಿಯ ಭಾಗವಾಗಲು ನನಗೆ ಹೆಮ್ಮೆ ಇದೆ. ಓಟದ ಮೂಲಕ ಸಾವಿರಾರು ಜನರನ್ನು ಒಟ್ಟುಗೂಡಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ನಿಜವಾಗಿಯೂ ಸ್ಫೂರ್ತಿದಾಯಕ. ಓಟವು ನಮ್ಮನ್ನು ದೈಹಿಕವಾಗಿ ಸಕ್ರಿಯವಾಗಿರಿಸುವ ಮತ್ತು ಮಾನಸಿಕವಾಗಿ ಬಲವಾಗಿರಿಸುವ ಕ್ರೀಡೆಯಾಗಿದೆ. ಇದು ಅಥ್ಲೆಟಿಕ್ಸ್ ಸಮುದಾಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಪ್ರತಿಯೊಬ್ಬ ಸ್ಪರ್ಧಿಯೂ ನಿಮ್ಮ ಅತ್ಯುತ್ತಮ ಪ್ರದರ್ಶನ ನೀಡಿ, ಚೆನ್ನಾಗಿ ತಯಾರಿ ಮಾಡಿ ಎಂದು ಸಂದೇಶ ನೀಡಿದ್ದಾರೆ. ವರ್ಲ್ಡ್ 10ಕೆ ಬೆಂಗಳೂರಿನ ಅಂತಾರಾಷ್ಟ್ರೀಯ ಕೂಟದ ಅಂಬಾಸಿಡರ್ ಆಗಿ ಬ್ಲಾಂಕಾ ವ್ಲಾಸಿಕ್ ಅವರನ್ನು ಸ್ವಾಗತಿಸಲು ನಾವು ಖುಷಿಪಡುತ್ತೇವೆ. ಅವರ ಅಸಾಧಾರಣ ಸಾಧನೆಗಳು, ಜಾಗತಿಕ ಕ್ರೀಡಾ ಸಮುದಾಯಕ್ಕೆ ಅವರ ನಿರಂತರ ಕೊಡುಗೆ ಅವರನ್ನು ಸ್ಫೂರ್ತಿದಾಯಕ ವ್ಯಕ್ತಿಯನ್ನಾಗಿ ಮಾಡಿದೆ ಎಂದು ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್ ಹೇಳಿದರು.

ಐಪಿಎಲ್‌ನಲ್ಲಿ 200 ವಿಕೆಟ್ ಪಡೆದ ಮೊದಲ ವೇಗಿ ಭುವಿ


•ಬೆಂಗಳೂರು: ಐಪಿಎಲ್‌ನಲ್ಲಿ 200 ವಿಕೆಟ್‌ಗಳನ್ನು ಕಬಳಿಸಿದ ಮೊದಲ ವೇಗಿಯೆಂಬ ಮೈಲಿಗಲ್ಲನ್ನು ಭುವನೇಶ್ವರ್ ಕುಮಾರ್ ಬರೆದಿದ್ದಾರೆ. ಎಲ್ಲಿ ಐಪಿಎಲ್ ಪಯಣವನ್ನು ಆರಂಭಿಸಿದ್ದರೋ ಅದೇ ಮೈದಾನದಲ್ಲಿ ಭುವನೇಶ್ವರ್ ಈ ಮೈಲಿಗಲ್ಲನ್ನು ಬರೆದಿದ್ದು, ತಮ್ಮ ಕ್ರಿಕೆಟ್ ವೃತ್ತಿಜೀವನದ ವಿಶೇಷ ಕ್ಷಣವನ್ನು ಆನಂದಿಸಿದರು. 2009ರಲ್ಲಿ ಅವರು ಆರ್‌ಸಿಬಿ ತಂಡದ ಮೂಲಕವೇ ಐಪಿಎಲ್ ಪದಾರ್ಪಣೆ ಮಾಡಿದ್ದ ಭುವನೇಶ್ವರ್, 2026ರಲ್ಲಿ ಮತ್ತದೇ ಆರ್‌ಸಿಬಿಯಲ್ಲಿದ್ದೇ ಈ ಮೈಲಿಗಲ್ಲು ಬರೆದಿದ್ದಾರೆ. 2025ರಲ್ಲೂ ಆರ್‌ಸಿಬಿ ಪರ ಭುವಿ 17 ವಿಕೆಟ್‌ಗಳನ್ನು ಕಬಳಿಸಿದ್ದರು.

ಮಹತ್ವದ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಭುವಿ 41ಕ್ಕೆ 3 ವಿಕೆಟ್ ಕಬಳಿಸಿ ಆರ್‌ಸಿಬಿ ತಂಡದ 41 ರನ್‌ಗಳ ಜಯದಲ್ಲಿ ಕೊಡುಗೆ ನೀಡಿದ್ದಾರೆ. ಈ ಮೂಲಕ ಭುವಿ ತಮ್ಮ ಬೌಲಿಂಗ್ ಪ್ರಭಾವವನ್ನು ಮತ್ತೆ ಸಾಬೀತುಪಡಿಸಿದರು.

ಇಲ್ಲಿಯವರೆಗೆ ಒಟ್ಟು 192 ಇನ್ನಿಂಗ್ಸ್‌ಗಳಲ್ಲಿ 7.7ರ ಆರೋಗ್ಯಕರ ಇಕಾನಮಿ ರೇಟ್‌ನೊಂದಿಗೆ 202 ವಿಕೆಟ್‌ಗಳನ್ನು ಕಬಳಿಸಿರುವ ಭುವನೇಶ್ವರ್, ಐಪಿಎಲ್‌ನ ಸಾರ್ವಕಾಲಿಕ ಅತ್ಯಧಿಕ ವಿಕೆಟ್ ಕಬಳಿಸಿದ ಬೌಲರ್‌ಗಳ ಪಟ್ಟಿಯಲ್ಲಿ ಎರಡನೇ ಸ್ಥಾನ ಅಲಂಕರಿಸಿದ್ದಾರೆ. ಅವರು ಯುಜ್ವೇಂದ್ರ ಚಹಲ್ (205) ನಂತರದ ಸ್ಥಾನ ಪಡೆದಿದ್ದಾರೆ. ತಮ್ಮ ಸುದೀರ್ಘ ಐಪಿಎಲ್ ವೃತ್ತಿಜೀವನದಲ್ಲಿ, 2016 ಮತ್ತು 2017ರಲ್ಲಿ ಸತತ ಎರಡು ಬಾರಿ ಪರ್ಪಲ್ ಕ್ಯಾಪ್ ಗೆದ್ದ ಏಕೈಕ ಬೌಲರ್ ಎಂಬ ಹೆಗ್ಗಳಿಕೆಯನ್ನು ಕೂಡ ಹೊಂದಿದ್ದಾರೆ. ಇದು ಬೌಲರ್‌ಗಳಿಗೆ ಕಠಿಣವಾಗಿರುವ ಟಿ20 ಫ್ರಾಂಚೈಸಿ ಕ್ರಿಕೆಟ್‌ನಲ್ಲಿ ಅವರ ಸ್ಥಿರತೆಯನ್ನು ತೋರಿಸುತ್ತದೆ.

ತಮ್ಮ ಸಾಧನೆಯ ಬಗ್ಗೆ ಮಾತನಾಡಿದ ಭುವನೇಶ್ವರ್, ವರ್ಷಗಳಿಂದ ಮಾಡುತ್ತಿರುವ ಪರಿಶ್ರಮಕ್ಕೆ ಪ್ರತಿಫಲ ಸಿಗುವುದು ಸಂತೋಷದ ಸಂಗತಿ. ಐಪಿಎಲ್ ನನ್ನ ವೃತ್ತಿಜೀವನದ ಮಹತ್ವದ ಭಾಗವಾಗಿದೆ, ಮತ್ತು 200 ವಿಕೆಟ್‌ಗಳನ್ನು ತಲುಪುವುದು ವಿಶೇಷ ಮೈಲುಗಲ್ಲು, ನನ್ನ ಐಪಿಎಲ್ ಪಯಣವೇ ಆರ್‌ಸಿಬಿಯೊಂದಿಗೆ ಆರಂಭವಾಗಿದ್ದು, ಇಲ್ಲಿಗೆ ಮತ್ತೆ ಬಂದು ಸಾಧನೆ ಮಾಡುವುದು ಫುಲ್-ಸರ್ಕಲ್ ಅನುಭವ ನೀಡಿದೆ ಎಂದು ಹೇಳಿದರು.

- 2009ರಲ್ಲಿ ಆರ್‌ಸಿಬಿಯಿಂದಲೇ ಸ್ವಿಂಗ್ ಕಿಂಗ್ ಪದಾರ್ಪಣೆ



ಇಂದು ರಾಜಸ್ಥಾನ- ಮುಂಬೈ ಫೈಟ್

•ಗುವಾಹಟಿ: ಐಪಿಎಲ್ 2026ರಲ್ಲಿ ಮಂಗಳವಾರ ರಾಜಸ್ಥಾನ ರಾಯಲ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳು ಎದುರಾಗಲಿವೆ. ಪಂದ್ಯದಲ್ಲಿ ರಾಜಸ್ಥಾನ ತಂಡದ ಯುವ ಎಡಗೈ ಬ್ಯಾಟರ್ ವೈಭವ್ ಸೂರ್ಯವಂಶಿ ಮತ್ತು ಮುಂಬೈ ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ನಡುವಿನ ಸ್ಪರ್ಧೆ ಪ್ರಮುಖ ಆಕರ್ಷಣೆಯಾಗುವ ಸಾಧ್ಯತೆಯಿದೆ. ನಾಯಕ ಹಾರ್ದಿಕ್ ಪಾಂಡ್ಯ ಗಾಯದಿಂದ ಗುಣಮುಖರಾಗಿ ಆಡುವ ಸಾಧ್ಯತೆಯಿದೆ. ಅವರು ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ಆಡಿರಲಿಲ್ಲ, ಸೂರ್ಯ ತಂಡವನ್ನು ಮುನ್ನಡೆಸಿದ್ದರು.

ರಾಯಲ್ಸ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಅವರ ಹಿಟ್ ಆರಂಭಿಕ ಜೋಡಿಯನ್ನು ಹೊಂದಿದ್ದು, ಗೆಲುವಿನ ಲಯದಲ್ಲಿ ಕಾಣಿಸಿಕೊಂಡಿದೆ. ಈಗಾಗಲೇ ಎರಡು ಪಂದ್ಯಗಳನ್ನು ಗೆದ್ದ ರಾಯಲ್ಸ್ ಅಂಕಪಟ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿದೆ. ಗುಜರಾತ್ ವಿರುದ್ಧ ರಾಯಲ್ಸ್ 210 ರನ್ ಪೇರಿಸಿತ್ತು. ಮುಂಬೈ ಗೆಲ್ಲಬೇಕಾದರೆ ತಮ್ಮ ಬೌಲಿಂಗ್ ಪ್ರದರ್ಶನ ಸುಧಾರಿಸುವ ಅಗತ್ಯವಿದೆ. ಗುವಾಹಟಿ ವೇಗಿಗಳಿಗೆ ನೆರವಾಗುವ ಪಿಚ್ ಇರಲಿದೆ. ಹಿಂದಿನ ಪಂದ್ಯದಲ್ಲಿ ಇಲ್ಲಿ ಸಿಎಸ್‌ಕೆ 127 ರನ್‌ಗಳಿಗೆ ಆಲೌಟಾಗಿತ್ತು. ರಾಜಸ್ಥಾನದಲ್ಲಿ ಸುಲಭವಾಗಿ ಚೇಸ್ ಮಾಡಿ ಗೆದ್ದಿತ್ತು.



ಕೆಕೆಆರ್-ಪಂಜಾಬ್ ಪಂದ್ಯಕ್ಕೆ ಮಳೆ ಅಡ್ಡಿ

•ಕೋಲ್ಕತ್ತಾ: ಈಡನ್ ಗಾರ್ಡನ್ಸ್‌ನಲ್ಲಿ ಸೋಮವಾರ ನಡೆಯುತ್ತಿದ್ದ ಕೋಲ್ಕತ್ತಾ ನೈಟ್‌ರೈಡರ್ಸ್ (ಕೆಕೆಆರ್) ಹಾಗೂ ಪಂಜಾಬ್ ಕಿಂಗ್ಸ್ ನಡುವಿನ ಐಪಿಎಲ್ ಪಂದ್ಯಕ್ಕೆ ಮಳೆ ಅಡ್ಡಿಪಡಿಸಿದೆ. ಟಾಸ್ ಗೆದ್ದು ಮೊದಲ ಬ್ಯಾಟಿಂಗ್ ಆಯ್ದುಕೊಂಡ ಕೆಕೆಆರ್ 3.4 ಓವರ್‌ಗಳಲ್ಲಿ 2 ವಿಕೆಟ್‌ಗಳನ್ನು ಕಳೆದುಕೊಂಡು 25 ರನ್ ಗಳಿಸಿ ಸಂಕಷ್ಟದ ಸ್ಥಿತಿಯಲ್ಲಿ ಇದ್ದಾಗ ಮಳೆ ಸುರಿಯಲು ಆರಂಭಿಸಿತು. ಕೆಕೆಆರ್‌ನ ಮೊದಲೆರಡು ವಿಕೆಟ್‌ಗಳನ್ನೂ ವೇಗಿ ಸೇವಿಯರ್ ಬಾರ್ಟ್‌ಲೆಟ್ ಅವರ ಕಬಳಿಸಿದ್ದು, ಸ್ಫೋಟಕ ಆರಂಭಿಕ ಫಿನ್ ಅಲೆನ್ (6) ಹಾಗೂ ದುಬಾರಿ ಬ್ಯಾಟಿಂಗ್ ಆಲ್‌ರೌಂಡರ್ ಕ್ಯಾಮರೂನ್ ಗ್ರೀನ್ (4) ವಿಕೆಟ್‌ಗಳನ್ನು ಕೆಕೆಆರ್ ಕಳೆದುಕೊಂಡಿದೆ.



ಕೆಕೆಆರ್ ಪರ ನಾಯಕ ಅಜಿಂಕ್ಯಾ ರಹಾನೆ (8) ಮತ್ತು ಅಂಗ್‌ಕ್ರಿಶ್ ರಘುವಂಶಿ (7) ಅಜೇಯರಾಗಿದ್ದು, ಮಳೆ ನಿಂತರೆ ಕ್ರೀಸ್‌ಗಿಳಿಯಲು ಕಾಯುತ್ತಿದ್ದಾರೆ. ವೇಗಿ ಅರ್ಷದೀಪ್ 2 ಓವರ್ ಎಸೆದಿದ್ದರು. ಮಳೆ ಸುರಿಯುತ್ತಿರುವ ಕಾರಣ ಮೈದಾನದಲ್ಲಿ ಕವರ್ಸ್ ಹಾಕಲಾಗಿದ್ದು, ಪಿಚ್ ಒದ್ದೆಯಾಗದಂತೆ ನೋಡಿಕೊಳ್ಳಲಾಗಿದೆ. ಪಂದ್ಯ ಮುಕ್ತಾಯಗೊಳ್ಳುವ ಸಮಯ ರಾತ್ರಿ 11.40 ಆಗಿರುವುದರಿಂದ ಮಳೆ ನಿಂತರೆ 5 ಓವರ್‌ಗಳ ಪಂದ್ಯ ಆಡಲಾಗುವುದು ಅಥವಾ ಪಂದ್ಯ ರದ್ದು ಆಗಲಿದೆ.

ವಿಶ್ವ ನಂ.1 ಮಣಿಸಿದ ಪಾಯಲ್‌ಗೆ ಸ್ವರ್ಣ



•ಬ್ಯಾಂಕಾಕ್: ವಿಶ್ವ ಆರ್ಚರಿ ಪ್ಯಾರಾ ಸರಣಿಯಲ್ಲಿ ಭಾರತೀಯ ಆರ್ಚರಿಪಟು ಪಾಯಲ್ ನಾಗ್ ವಿಶ್ವ ನಂ.1 ಭಾರತದವರೇ ಆದ ಶೀತಲ್ ದೇವಿ ಅವರನ್ನು 139-136 ಅಂಕಗಳ ಅಂತರದಿಂದ ಸೋಲಿಸಿ ಕಂಪೌಂಡ್ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಸ್ವರ್ಣ ಪದಕವನ್ನು ಗೆದ್ದುಕೊಂಡಿದ್ದಾರೆ. ಉಳಿದಂತೆ ಪುರುಷರ ವಿಭಾಗದಲ್ಲಿ ತೋಮನ್ ಕುಮಾರ್ ಸ್ವರ್ಣ ಮತ್ತು ಮಹಿಳೆಯರ ರಿಕರ್ವ್‌ನಲ್ಲಿ ಭಾವನಾ ಸ್ವರ್ಣ ಗೆದ್ದಿದ್ದಾರೆ.

ಇದರೊಂದಿಗೆ ವಿಶ್ವ ಆರ್ಚರಿ ಪ್ಯಾರಾ ಕೂಟದಲ್ಲಿ ಭಾರತ 7 ಸ್ವರ್ಣ, 5 ರಜತ ಮತ್ತು 4 ಕಂಚಿನ ಪದಕಗಳೊಂದಿಗೆ ಒಟ್ಟು 16 ಪದಕಗಳನ್ನು ಗೆದ್ದುಕೊಂಡಿದೆ. ಕೇವಲ 18ರ ಹರೆಯದ ಪಾಯಲ್ ಅವರಿಗೆ ಇದು ಟೂರ್ನಿಯಲ್ಲಿ ಎರಡನೇ ಪ್ರಶಸ್ತಿಯಾಗಿದೆ. ಅವರು ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಶೀತಲ್ ದೇವಿ ಅವರ ಜತೆಗೂಡಿಯೇ ಪದಾರ್ಪಣಾ ಸ್ವರ್ಣ ಪದಕವನ್ನು ಗೆದ್ದಿದ್ದರು. ತಮ್ಮ 7ನೇ ವಯಸ್ಸಿನಲ್ಲಿ ಸಂಭವಿಸಿದ್ದ ವಿದ್ಯುತ್ ಅಪಘಾತದಲ್ಲಿ ಪಾಯಲ್ ಎರಡೂ ಕೈಗಳನ್ನು ಕಳೆದುಕೊಂಡಿದ್ದರು. ತಮ್ಮ ಎರಡೂ ಕೈಗಳನ್ನು ಕಳೆದುಕೊಂಡರೂ ಪಾಯಲ್ ಕ್ರೀಡಾಸ್ಫೂರ್ತಿ ಎಂತಹವರಿಗೂ ಪ್ರೇರಣಾದಾಯಿ ಉದಾಹರಣೆಯಾಗಿದೆ.

ಹವ್ಯಕ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿ 2026
ಟೀಮ್ ಜಿ ಹವ್ಯಕರ ಚಾಂಪಿಯನ್



•ಬೆಂಗಳೂರು: ನಗರದ ಕಿಣಿ ಸ್ಪೋರ್ಟ್ಸ್ ಅರೇನಾದಲ್ಲಿ ಧಾರ್ಮಿಕ್ ಸಂಸ್ಥೆ ಮತ್ತು ಹವ್ಯಕ ಕ್ರಿಕೆಟ್ ಅಸೋಸಿಯೇಷನ್ ಸಹಯೋಗದಲ್ಲಿ ಏ.3, 4 ಮತ್ತು 5ರಂದು ಯಶಸ್ವಿಯಾಗಿ ಆಯೋಜಿಸಲಾಯಿತು. ಟೂರ್ನಿಯ ಅದ್ಭುತ ಸಮಾರೋಪದಲ್ಲಿ ಟೀಮ್ ಜಿ ತಂಡವು ವಿಜೇತರಾಗಿ ಹೊರಹೊಮ್ಮಿದ್ದು, ಗೋರೆ ರಾಕರ್ಸ್ ತಂಡವು ರನ್ನರ್ ಅಪ್ ಸ್ಥಾನವನ್ನು ಪಡೆದುಕೊಂಡಿದೆ.

ಟೀಮ್ ಜಿ ತಂಡದ ಮಾಲೀಕರಾದ ಸಿ.ಎ. ಗಿರಿಧರ್ ಅವರ ಮಾರ್ಗದರ್ಶನದಲ್ಲಿ ತಂಡವು ಶ್ರೇಷ್ಠ ಪ್ರದರ್ಶನ ನೀಡಿತು. ಅದೇ ರೀತಿ, ಗೋರೆ ರಾಕರ್ಸ್ ತಂಡದ ಮಾಲೀಕರಾದ ಗೌತಮ್ ಜಿ ಅವರ ಮಾರ್ಗದರ್ಶನದಲ್ಲಿ ತಂಡವು ಕಠಿಣ ಸ್ಪರ್ಧೆಯನ್ನು ನೀಡಿತು. ಈ ಟೂರ್ನಿಯಲ್ಲಿನ ತಮ್ಮ ಅದ್ಭುತ ಆಟದ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾದ ಆದಿತ್ಯ ಎಸ್ ಅವರು ಸರಣಿ ಶ್ರೇಷ್ಠ ಪ್ರಶಸ್ತಿಯನ್ನು ಪಡೆದರು. ಹವ್ಯಕ ಕ್ರಿಕೆಟ್ ಪಂದ್ಯಾವಳಿಯ ಗೌರವಾನ್ವಿತ ಪ್ರಾಯೋಜಕರಿಗೆ, ಅತಿಥಿಗಳಿಗೆ ಮತ್ತು ಎಲ್ಲಾ ತಂಡಗಳ ಆಟಗಾರರಿಗೆ ಹಾಗೂ ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು.


ಹೊಸಪೇಟೆ ಹುಡುಗರ ಕೈಗೆ ಸಿಕ್ಕ ಐಪಿಎಲ್ ಚೆಂಡು

•ಬೆಂಗಳೂರು: ಆರ್‌ಸಿಬಿ ಬ್ಯಾಟರ್ ಟಿಮ್ ಡೇವಿಡ್ 106 ಮೀ. ಸಿಕ್ಸರ್ ಹೊಡೆದಿದ್ದಾಗ ಚೆಂಡು ಸ್ಟೇಡಿಯಂ ಹೊರಗಡೆ ಬಿದ್ದಿತ್ತು. ಚೆಂಡು ಕಬ್ಬನ್ ಪಾರ್ಕ್ ತಲುಪಿತೆಂದು ರವಿ ಶಾಸ್ತ್ರಿ ವೀಕ್ಷಕ ವಿವರಣೆಯಲ್ಲಿ ಬಣ್ಣಿಸಿದ್ದರು. ಇದೇ ವೇಳೆ ಪಂದ್ಯದ ಟಿಕೆಟ್ ಸಿಗದ ಕಾರಣ ಸ್ಟೇಡಿಯಂ ಹೊರಗಡೆ ರಸ್ತೆಯಲ್ಲಿದ್ದ ಹೊಸಪೇಟೆ ಜಿಲ್ಲೆಯ ಆರ್‌ಸಿಬಿ ಅಭಿಮಾನಿಗಳಿಗೆ ಸಿಕ್ಕಿದೆ. ಪಂದ್ಯದ ಟಿಕೆಟ್ ಸಿಗದೆ ನಿರಾಶರಾಗಿದ್ದ ಅಭಿಮಾನಿಗಳಿಗೆ ಚೆಂಡು ಸಿಕ್ಕಿದ್ದು, ಇದು ಕೊಕೊಬುರಾ ಕಂಪನಿಯ ಅಂದಾಜು 24 ಸಾವಿರ ರೂ. ಮೌಲ್ಯದ ಐಪಿಎಲ್ ಮ್ಯಾಚ್ ಬಾಲ್ ಎಂಬುದು ತಿಳಿದುಬಂದಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ

5946



ಎಡದಿಂದ ಬಲಕ್ಕೆ
1.ಸಾಲದ ನಡುವೆ ಸಂಚೆಯಡಗಿದೆ (4)
3.ಹಾಲಿನಿಂದ ಮಾಡುವ ಸಿಹಿತಿಂಡಿ (4)
5.ವೇಷ ಧರಿಸಿ ಉದ್ವೇಗಕ್ಕೊಳಗಾಗು (3)
7.ಆಸೆ ಈಡೇರಿಸುತ್ತೇನೆಂದು ನೀಡಿದ ಆಶ್ವಾಸನೆ (4)
9.ದೇಹ ದಂಡಿಸಿ ಮಾಡುವ ವ್ಯಾಯಾಮ (4)
11.ಗಾಂಧಾರಿಯ ಹುಟ್ಟೂರು ತಿರುಗಿದೆ (4)
14.ಸೆಣಬಿನಿಂದಾದ ಚಾಳುಬಟ್ಟೆ (4)
16.ಸರ ಮೊದಲಿರುವ ಲೋಹದ ಕಂಬಿ (3)
17.ಸೌಖ್ಯ-ನೆಮ್ಮದಿಯ ಸಮಾನಪದ (4)
18.ಇದು ನಮ್ಮ ಕರುನಾಡು (4)

ಮೇಲಿನಿಂದ ಕೆಳಕ್ಕೆ
2.ಕಾರ್ಖಾನೆಯನ್ನು ಹೀಗೂ ಕರೆಯಬಹುದು (4)
4.ಪಾಕಿಸ್ತಾನದ ಪ್ರಾಚೀನ ಐತಿಹಾಸಿಕ ನಗರ (4)
5.ಕಾಮನೆಯ ಸಮಾನಪದ (2)
6.ಶತಕದೊಳಗಡಗಿದ ಕಾಲಗಣನೆಯ ಹೆಸರು (2)
8.ದರವನ್ನು ಕೇಳಿ ಅನುಗ್ರಹಿಸುವವನು (3)
10.ಕ್ರಮಾನುಗತವನ್ನು ಹೀಗೂ ಹೇಳುತ್ತೇವೆ (3)
12.ಹಾವಿನ ಆಟ ತೋರಿಸುವವನು (4)
13.ಆವರಣದೊಳಗಿರುವ ಕೃಷ್ಣನ ಮಾವ (2)
14.ಅಳು-ಸಂಕಟ ಎಂಬರ್ಥದ ಶಬ್ದ (2)
15.ಕಲಾ ನಡುವೆ ಇರುವ ಒಳಸಂಘರ್ಷ (4)

5945 ಉತ್ತರ

ಎಡದಿಂದ ಬಲಕ್ಕೆ:
2.ತೇಲಿಸು 5.ಮಹಜರು
6.ಕಸರತ್ತು 7.ದೇಶ
8.ತಿದಿ 10.ಬಕ 12.ರತಿ
13.ಹವಾಲ್ದಾರ
15.ಗೊತ್ತುಗುರಿ
16.ನೆನಸು

ಮೇಲಿನಿಂದ ಕೆಳಕ್ಕೆ :
1.ಮೋಹಪಾಶ
2.ತೇರು 3.ಸುತ್ತು
4.ಮೋಸಗಾತಿ 7.ದೇಶಿಕ
9.ದಿಕ್ಪತಿ 11.ಬನವಾಸಿ
12.ರಜೋಗುಣ 14.ಸುರ
15.ಗೊನೆ

ಕಿರುಸುದ್ದಿ

ದೇಶದ ಒತಿಳಿಗೆ ಕೆಲಸ ಮಾಡಿ

◆**ಲಕ್ಷ್ಮೇಶ್ವರ:** ನೂತನವಾಗಿ ಮುಂಡರಗಿ ತಾಲೂಕಿನ ಬಿಜೆಪಿ ಮಂಡಳದ ಅಧ್ಯಕ್ಷರಾಗಿ ಆಯ್ಕೆಯಾದ ಕುಮಾರಸ್ವಾಮಿ ಹಿರೇಮಠ ಹಾಗೂ ಲಕ್ಷ್ಮೇಶ್ವರ ನಗರ ಘಟಕದ ಅಧ್ಯಕ್ಷ ವಿಜಯಕುಮಾರ ಕುಂಬಾರ ಮತ್ತು ಪ್ರಧಾನ ಕಾರ್ಯದರ್ಶಿ ಪ್ರವೀಣ ಬೋಮಲೆ ಬಂಜಾರ ಸಮಾಜದ ಯುವಕರ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಮಾತನಾಡಿದ ಬಿಜೆಪಿ ಮುಂಡರಗಿ ಮಂಡಳದ ಅಧ್ಯಕ್ಷ ಕುಮಾರಸ್ವಾಮಿ ಹಿರೇಮಠ, ಈ ದೇಶದ ಪ್ರಮುಖ ಆಸ್ತಿ ಎಂದರೆ ಯುವಕರು, ಯುವಕರು ಮನಸ್ಸು ಮಾಡಿದರೆ ಎಲ್ಲವನ್ನು ಸಾಧಿಸಬಹುದು. ನೀವು ಸಮಾಜವನ್ನು ಕಟ್ಟಿ ಬೆಳಸಬೇಕು. ಬಿಜೆಪಿ ಪಕ್ಷದಲ್ಲಿ ನನಗೆ ಪಕ್ಷ ಮತ್ತು ಕಾರ್ಯಕರ್ತರನ್ನು ಸಂಘಟಿಸಿ ಬೆಳೆಸುವ ಜವಾಬ್ದಾರಿ ನೀಡಿದ್ದು ನಿಮ್ಮ ಪ್ರೀತಿಯಿಂದ ಆಗಿದೆ. ದೇಶದ ಒಳಿತಿಗಾಗಿ ಕೆಲಸ ಮಾಡುತ್ತಿರುವ ಬಿಜೆಪಿ ಪಕ್ಷಕ್ಕಾಗಿ ದುಡಿಯೋಣ ದೇಶ ಕಟ್ಟೋಣ ಎಂದರು. ನಂತರ ಬಂಜಾರ ಯುವ ಮುಖಂಡರಾದ ತುಕ್ಕಪ್ಪ ಪೂಜಾರ ಹಾಗೂ ಸಂತೋಷ ರಾಠೋಡ ಮಾತನಾಡಿದರು.ಈ ಸಂದರ್ಭದಲ್ಲಿ ಗಂಗಾಧರ ಮೆಣಸಿನಕಾಯಿ, ರುದ್ರಪ್ಪ ಲಮಾಣಿ, ತಿಪ್ಪಣ್ಣ ಲಮಾಣಿ, ದುಂಡೇಶ ಲಮಾಣಿ, ಕಿರಣ ಲಮಾಣಿ, ಗಣೇಶ ಲಮಾಣಿ, ಆನಂದ ಲಮಾಣಿ, ಮಲ್ಲೇಶ ವಡ್ಡರ, ನೂರಪ್ಪ ಲಮಾಣಿ, ಬಸವರಾಜ ಲಮಾಣಿ, ವಿನೋದ ಪೂಜಾರ, ಮಹೇಶ ರಾಠೋಡ, ಸುಭಾಸ ಲಮಾಣಿ, ಸುರೇಶ ಮಾಳಗಿಮನಿ, ಯಂಕಪ್ಪ ಲಮಾಣಿ, ಚಂದ್ರು ಲಮಾಣಿ, ಕಿರಣ ಆಕ್ಕಿಗುಂದ, ಸಂತೋಷ ಚಾವೂರ, ವಿಶಾಲ ಮತ್ತಿತರಿದ್ದರು.

ಚುಟುಕು ಸಾಹಿತ್ಯ ಸಂಭ್ರಮ



◆**ರೋಣ:** ಸಾಹಿತ್ಯದ ಅಳಿವು ಉಳಿವಿನ ಜೊತೆಗೆ ಇಂದಿನ ಪಳಿಗೆಗೆ ಸಂಸ್ಕಾರದ ತಿಳುವಳಿಕೆ ಅಗತ್ಯವಾಗಿದ್ದು,ಈ ಹಿನ್ನಲೆಯಲ್ಲಿ ಏ. 10 ರಂದು ರೋಣದಲ್ಲಿ ತಾಲೂಕಾ ಮಟ್ಟದ ಚುಟುಕು ಸಾಹಿತ್ಯ ಸಂಭ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಚುಟುಕು ಸಾಹಿತ್ಯ ಪರಿಷತ್‌ನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವ್ಹಿ.ಬಿ.ಸೋಮನಕಟ್ಟಿಮಠ ಹೇಳಿದರು. ಅವರು ಸೋಮವಾರ ಪಟ್ಟಣದ ಕನ್ನಡ ಸಾಹಿತ್ಯ ಭವನದಲ್ಲಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಚುಟುಕು ಸಾಹಿತ್ಯ ಎನ್ನುವುದು ತನ್ನದೆ ಆಗಿರುವ ಅಮೋಘ ಶಕ್ತಿಯನ್ನು ಹೊಂದಿದೆ. ಕೆಲ ಪದಗಳಲ್ಲಿ ಜೀವನದ ಲಕ್ಷಣಗಳನ್ನು ತಿಳಿಸುವ ಶಕ್ತಿಯನ್ನು ಹೊಂದಿರುವ ಚುಟುಕು ಸಾಹಿತ್ಯವನ್ನು ಬೆಳೆಸುವುದು ನಮ್ಮೆಲ್ಲರ ಕರ್ತವ್ಯವಾಗಬೇಕು ಎಂದರು. ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಕವನ ಸಂಕಲನ ಲೋಕಾರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಮುಖಿನ ಗೌರವ ಸನ್ಮಾನ, ಕವಿಗೋಷ್ಠಿ, ಗಾನಸುಧೆ, ಜಾನಪದ ಸೊಗಡನ್ನು ಬಿಂಬಿಸುವ ಸಾಹಿತ್ಯದ ಚಟುವಟಿಕೆ ಜೊತೆಗೆ ಇಂದಿನ ಪಿಳಿಗೆಗೆ ಸಂಸ್ಕಾರದ ಉಪನ್ಯಾಸ ಎಂಬ ಮಹತ್ತರ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದರು. ತಾಲೂಕಾಧ್ಯಕ್ಷೆ ವೀರುಪಮ್ಮಾ ಹಿರೇಮಠ ಮಾತನಾಡಿದರು. ಸಭೆಯಲ್ಲಿ ನೌಕರ ಸಂಘದ ಅಧ್ಯಕ್ಷ ವಾಯ್.ಡಿ.ಗಾಣಿಗೇರ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಶಂಕರ ಕುಲಕರ್ಣಿ ನಿಧನ

◆**ನರಗುಂದ:** ಪಟ್ಟಣದ ಶಂಕರಲಿಂಗ ಓಣಿಯ ನಿವಾಸಿ, ಬಿಎಸ್‌ಎನ್‌ಎಲ್ ಇಲಾಖೆಯ ನಿವೃತ್ತ ನೌಕರ ಶಂಕರ ಎಲ್. ಕುಲಕರ್ಣಿ (69) ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	3006-7297
ಅಜವಾನ	8269-8870
ಅಲಸಂದಿ	3609-8312
ಅವರೆ	2417-6056
ಕಡಲೆ	2319-5489
ಉದ್ದು	5712-5712
ಹವೀಜ	6412-9569
ಹೆಸರು	507-9400
ಹುರಳಿ	3244-4195
ಜೋಳ	1789-4765
ಗೋವಿನಜೋಳ	1239-1715
ಸಾಸವಿ	4489-4489
ಸಬ್ಬಸಗಿ	7869-7869
ಕುಸಬಿ	4400-5536
ಸೂರ್ಯಕಾಂತಿ	5469-6672
ತೊಗರಿ	4444-5314
ಗೋಧಿ	1767-5357



ಲಕ್ಷ್ಮೇಶ್ವರ : ನೂತನವಾಗಿ ಮುಂಡರಗಿ ತಾಲೂಕಿನ ಬಿಜೆಪಿ ಮಂಡಳದ ಅಧ್ಯಕ್ಷರಾಗಿ ಆಯ್ಕೆಯಾದ ಕುಮಾರಸ್ವಾಮಿ ಹಿರೇಮಠ ಹಾಗೂ ಲಕ್ಷ್ಮೇಶ್ವರ ನಗರ ಘಟಕದ ಅಧ್ಯಕ್ಷ ವಿಜಯಕುಮಾರ ಕುಂಬಾರ ಮತ್ತು ಪ್ರಧಾನ ಕಾರ್ಯದರ್ಶಿ ಪ್ರವೀಣ ಬೋಮಲೆ ಬಂಜಾರ ಸಮಾಜದ ಯುವಕರ ವತಿಯಿಂದ ಸನ್ಮಾನಿಸಲಾಯಿತು.

ಪಕ್ಷದಲ್ಲಿ ಒಗ್ಗಟ್ಟು ಅತ್ಯಂತ ಮುಖ್ಯ: ಚಂಬಣ್ಣ

◆**ಲಕ್ಷ್ಮೇಶ್ವರ:** ಬಿಜೆಪಿ ಕಾರ್ಯಕರ್ತರು ಒಗ್ಗಟ್ಟಾಗಿ ಪಕ್ಷದಲ್ಲಿನ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಪಕ್ಷದ ಸಂಘಟನೆಯಲ್ಲಿ ತೊಡಗಬೇಕು ಎಂದು ಪಕ್ಷದ ಹಿರಿಯ ಮುಖಂಡ ಚಂಬಣ್ಣ ಬಾಳಿಕಾಯಿ ಹಾಗೂ ಗಿರೀಶ ಅಗಡಿ ಹೇಳಿದರು. ಪಟ್ಟಣದ ಬಸ್ತಿಕೇರಿಯಲ್ಲಿ ಬಿಜೆಪಿ ಸಂಸ್ಥಾಪನ ದಿನಾಚರಣೆಯ ನಿಮಿತ್ಯ ಮಾತನಾಡಿ, ಬಿಜೆಪಿಯಲ್ಲಿ ಒಗ್ಗಟ್ಟು ಅತ್ಯಂತ ಮುಖ್ಯ. ಪಕ್ಷದ ಹಿರಿಯ ಕಾರ್ಯಕರ್ತರನ್ನು ಮರೆಯದೆ, ಅವರ ಆಶ್ರಯದಲ್ಲಿ ಎಲ್ಲರೂ ಒಂದಾಗಿ ಕಾರ್ಯನಿರ್ವಹಿಸಬೇಕು ಎಂದರು. ಮುಖಂಡ ಹಾಗೂ ವಕೀಲ ರವಿಕಾಂತ ಅಂಗಡಿ ಮಾತನಾಡಿ, ಬಿಜೆಪಿ ನಿರ್ಮಾಣಕ್ಕೆ ಅನೇಕ ಕಾರ್ಯಕರ್ತರು ತ್ಯಾಗ ಮಾಡಿದ್ದಾರೆ. ಅವರ ಪರಿಶ್ರಮದಿಂದಲೇ ಪಕ್ಷ ಬೆಳವಣಿಗೆ ಕಂಡಿದೆ. ಮುಂಬರುವ ಪುರಸಭೆ, ಜಿಪಂ ಹಾಗೂ ತಾಪಂ ಚುನಾವಣೆಗಳಲ್ಲಿ ಹಳೆಯ ಕಾರ್ಯಕರ್ತರನ್ನು ಒಗ್ಗೂಡಿಸಿಕೊಂಡು ಒಮ್ಮತದಿಂದ ಬಿಜೆಪಿ ಪಕ್ಷವನ್ನು ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ತರುವಂತೆ ಎಲ್ಲರೂ ಶ್ರಮಿಸಬೇಕು ಎಂದರು. ಮುಖಂಡ ಮಂಜುನಾಥ ಮಾಗಡಿ, ಮುಖಂಡ ವೀರಯ್ಯ ಕಳ್ಳಿಮಠ ನಾಗರಾಜ ಚಿಂಚಲಿ ಮಾತನಾಡಿದರು. ಈ ಸಂದರ್ಭದಲ್ಲಿ ಆಶೋಕ ನೀರಲೋಟಿ, ಗುರಪ್ಪ ಮುಳಗುಂದ, ರಾಘವೇಂದ್ರ ಪೂಜಾರ, ಪ್ರಕಾಶ ಮೇವುಂಡಿ, ಶಿವಣ್ಣ ಬಸ್ನಿಮಟ್ಟಿ, ವಿನಯ ಪಾಟೀಲ, ಪಾರಮ್ಮ ಧರಣಿ, ನಿರ್ಮಲಾ ಧರಣಿ, ರಾಜು ಬೆಲ್ಲದ, ಪವನ್ ಬಂಕಾಪೂರ, ಚಂದ್ರು ಮಾಗಡಿ, ಮಲ್ಲಿಕಾರ್ಜುನ ನೀರಲೋಟಿ, ರವಿ ನೀರಲೋಟಿ, ಮಹಾಂತೇಶ ಹರಪನಹಳ್ಳಿ, ಸೂಗಿರಪ್ಪ ವಾಲೀಶೆಟ್ಟರ ಚಂದ್ರು ಧರಣಿ, ಶಂಕ್ರಣ್ಣ ಬ್ಯಾಡಗಿ, ಮಂಜುನಾಥ ಮಂಟಗಣಿ, ಗಂಗಾಧರ ಗಡೇಣ್ಣವರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಲಕ್ಷ್ಮೇಶ್ವರ: ಪಟ್ಟಣದ ಬಸ್ತಿಕೇರಿಯಲ್ಲಿ ಬಿಜೆಪಿ ಸಂಸ್ಥಾಪನ ದಿನಾಚರಣೆ ಆಚರಿಸಲಾಯಿತು. ಪಕ್ಷದ ಹಿರಿಯ ಮುಖಂಡ ಚಂಬಣ್ಣ ಬಾಳಿಕಾಯಿ, ಗಿರೀಶ ಅಗಡಿ, ವಕೀಲ ರವಿಕಾಂತ ಅಂಗಡಿ, ಮುಖಂಡ ಮಂಜುನಾಥ ಮಾಗಡಿ, ಮುಖಂಡ ವೀರಯ್ಯ ಕಳ್ಳಿಮಠ ನಾಗರಾಜ ಚಿಂಚಲಿ ಸೇರಿದಂತೆ ಇತರರಿದ್ದರು.

ಶಿಥಿಲಾವಸ್ಥೆಯಲ್ಲಿದ್ದ ನಾಗಕುಂಡ ಮೆಟ್ಟಿಲು ಬಾವಿಗೆ ಆಧುನಿಕ ಸ್ಪರ್ಶ

₹3 ಕೋ.ವೆಚ್ಚದಲ್ಲಿ ಬಾವಿ ಪುನಃಸ್ಥಾಪನೆ

▶ರುದ್ರಗೌಡ ಪಾಟೀಲ

ದಿಗಂತ ವಿಶೇಷ

◆**ಗದಗ:** ವಿವಿಧ ದೇವಾಲಯಗಳು, ಸ್ಮಾರಕಗಳು ಹಾಗೂ ಪುಷ್ಕರಣಿಗಳಿಗೆ ಆಧುನಿಕ ಸ್ಪರ್ಶ ಇಲಾಖೆ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ನೀಡುವುದರ ಜತೆಗೆ ಆದರ ಮಹತ್ವ ಸಾರುತ್ತಿರುವ ಪ್ರವಾಸೋದ್ಯಮ ಮತ್ತೊಂದು ಹೆಜ್ಜೆ ಇಟ್ಟಿದ್ದು, ಇತಿಹಾಸ ಪ್ರಿಯರನ್ನು ಆಕರ್ಷಿಸುವಂತೆ ಮಾಡಿದೆ.

ಗಜೇಂದ್ರಗಡ ತಾಲೂಕಿನ ಸೂಡಿ ಗ್ರಾಮದಲ್ಲಿ ಕ್ರಿ.ಶ.1060ರ ಕಲ್ಯಾಣ ಚಾಲುಕ್ಯರ ಅವಧಿಯಲ್ಲಿ ನಿರ್ಮಾಣಗೊಂಡು ಶಿಥಿಲಾವಸ್ಥೆಯಲ್ಲಿದ್ದ ನಾಗಕುಂಡ ಮೆಟ್ಟಿಲು ಬಾವಿಗೆ ಆಧುನಿಕ ಸ್ಪರ್ಶ ನೀಡಲಾಗಿದ್ದು, ಇತಿಹಾಸದ ದಿನಗಳನ್ನು ಪುನಃಸ್ಥಾಪನೆ ಮಾಡಲಾಗಿದೆ.

ಶಿಥಿಲಾವಸ್ಥೆಯಲ್ಲಿದ್ದ ಸೂಡಿಯ ನಾಗಕುಂಡ ಮೆಟ್ಟಿಲು ಬಾವಿ ಅಭಿವೃದ್ಧಿಪಡಿಸಲು ದತ್ತು ಸ್ಮಾರಕ ಯೋಜನೆಯಡಿ ಡೆಕ್ಕನ್ ಹೆರಿಟೇಜ್ ಫೌಂಡೇಶನ್ ಮುಂದೆ ಬಂದಿತ್ತು. ಕಳೆದೊಂದು ವರ್ಷಗಳ ನಿರಂತರ ಪರಿಶ್ರಮದ ಫಲವಾಗಿ 3 ಕೋಟಿ ರೂ.ವೆಚ್ಚದಲ್ಲಿ ನಾಗಕುಂಡ ಮೆಟ್ಟಿಲು ಬಾವಿ ಪುನಃಸ್ಥಾಪನೆ(ಅಭಿವೃದ್ಧಿ) ಮಾಡಲಾಗಿದ್ದು, ಸಾರ್ವಜನಿಕರ ವೀಕ್ಷಣೆಗೆ ಮುಕ್ತಗೊಳಿಸಲಾಗಿದೆ.

ಕಳೆದ ವರ್ಷ ಡೆಕ್ಕನ್ ಹೆರಿಟೇಜ್ ಫೌಂಡೇಶನ್ ದತ್ತು ಸ್ಮಾರಕ ಯೋಜನೆಯಡಿಯಲ್ಲಿ ಕರ್ನಾಟಕ ಸರ್ಕಾರದೊಂದಿಗೆ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಹಾಗೂ ರೋಣ ಶಾಸಕ ಜಿ.ಎಸ್. ಪಾಟೀಲ ಸಮ್ಮುಖದಲ್ಲಿ ಸೂಡಿಯಲ್ಲಿರುವ ನಾಗಕುಂಡ ಮೆಟ್ಟಿಲು ಬಾವಿ, 10ನೇ ಶತಮಾನದ ಇತರ ಸ್ಮಾರಕಗಳನ್ನು ಪುನಃಸ್ಥಾಪಿಸಲು ಒಪ್ಪಂದಕ್ಕೆ ಸಹಿ ಹಾಕಿತ್ತು. ರಾಜಶ್ರೀ ಪಿನ್ನಮನೇನಿ ಅವರ ದಿ.ತಂದೆ ಡಾ. ಸುಬ್ಬಾರಾವ್ ದೇವಿನೇನಿ ಅವರ ಸ್ಮರಣಾರ್ಥ ಹೆರಿಟೇಜ್ ಮ್ಯಾಟರ್ಸ್ ಮತ್ತು ಜಲ ಸಾಕ್ಷರತಾ ಪ್ರತಿಷ್ಠಾನ ಅಭಿವೃದ್ಧಿ ಪಡಿಸಿದೆ.

ಕಲ್ಯಾಣ ಚಾಲುಕ್ಯ ಚಕ್ರವರ್ತಿ ಒಂದನೇ ಸೋಮೇಶ್ವರನ ಸೇನಾಧಿಪತಿ ನಾಗದೇವನು ಕ್ರಿ.ಶ. 1060ರಲ್ಲಿ ನಾಗಕುಂಡ ನಿರ್ಮಿಸಿದನು. ನೂರಾರು ವರ್ಷಗಳ ಹಿಂದೆ ನೀರಿನ ಸಂರಕ್ಷಣೆ ಮತ್ತು ಬಳಕೆಗೆ ನೀಡಲಾದ ಪ್ರಾಮುಖ್ಯತೆಗೆ ಈ ಕೆರೆ ಸಾಕ್ಷಿಯಾಗಿದೆ.



ಇಂದಿನ ಸೂಡಿಯ ಇತಿಹಾಸ ಮರುಸೃಷ್ಟಿಸಲು ಮತ್ತು ಭವಿಷ್ಯದ ಪೀಳಿಗೆಗಳು ಪ್ರಾಚೀನ ನೀರಿನ ವ್ಯವಸ್ಥೆಯ ಬಗ್ಗೆ ಕಲಿಯಲು ಅನುವು ಮಾಡಿಕೊಡಲು ರಾಜ್ಯ ಸರ್ಕಾರ ದತ್ತು ಯೋಜನೆಯಡಿಯಲ್ಲಿ ನಾಗಕುಂಡ ಬಾವಿಯ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಕೈಗೊಂಡಿರುವುದು ಶ್ಲಾಘನೀಯ.

■ **ಡಾ.ಶ್ವೇತಾ ಭಾಷ್ಮೆ, ಇತಿಹಾಸ ಸಂಶೋಧಕಿ**

ರಾಜ್ಯ ಸರಕಾರ ಆರಂಭಿಸಿರುವ ಸ್ಮಾರಕಗಳ ದತ್ತು ಯೋಜನೆಯಡಿ ಕಲಾತ್ಮಕ ಕೆತ್ತನೆಯ ಕುಸುರಿಗೆ ಖ್ಯಾತವಾಗಿರುವ ಸೂಡಿಯ ನಾಗಕುಂಡ ಬಾವಿ ದತ್ತು ಪಡೆದು ಅಭಿವೃದ್ಧಿಗೊಳಿಸಿರುವ ಡೆಕ್ಕನ್ ಹೆರಿಟೇಜ್ ಫೌಂಡೇಶನ್ ಕಾರ್ಯ ಶ್ಲಾಘನೀಯ. ಜಿಲ್ಲೆಯಲ್ಲಿರುವ ಅಮೂಲ್ಯವಾದ ಐತಿಹಾಸಿಕ ಸಂಪತ್ತು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆ.

■ **ಎಚ್.ಕೆ.ಪಾಟೀಲ, ಸಚಿವ,**

ಗಜೇಂದ್ರಗಡದಿಂದ 12ಕಿ.ಮೀ. ಮತ್ತು ಬಾದಾಮಿಯಿಂದ 30ಕಿಮೀ ದೂರದಲ್ಲಿರುವ ತಾಲೂಕಿನ ಸೂಡಿಯ ನಾಗಕುಂಡವು ದಕ್ಷಿಣ ಭಾರತದ ವಿಶಿಷ್ಟ ಮೆಟ್ಟಿಲು ಬಾವಿಗಳಲ್ಲಿ ಒಂದಾಗಿದೆ. ಶಿಥಿಲಾವಸ್ಥೆಯಲ್ಲಿದ್ದ ನಾಗಕುಂಡವನ್ನು ಡೆಕ್ಕನ್ ಹೆರಿಟೇಜ್ ಫೌಂಡೇಶನ್ ಆಸಕ್ತಿ ವಹಿಸಿ ದತ್ತು ಸ್ಮಾರಕ ಯೋಜನೆಯಡಿ ಅಭಿವೃದ್ಧಿಗೊಳಿಸಿ ಇತಿಹಾಸದ ಪುಟಗಳನ್ನು ಪುನಃ ಸ್ಥಾಪನೆಗೊಳಿಸಿರುವುದು ಅಭಿನಂದನಾರ್ಹ.

■ **ಜಿ.ಎಸ್.ಪಾಟೀಲ, ಶಾಸಕ**

10ನೇ ಶತಮಾನದಲ್ಲಿ ಬಾವಿಯ ನೀರನ್ನು ಇಲ್ಲಿರುವ ಮಲ್ಲಿಕಾರ್ಜುನ(ನಾಗೇಶ್ವರ) ದೇವಾಲಯದ ಧಾರ್ಮಿಕ ಕಾರ್ಯಗಳಿಗೆ ಬಳಸಲಾಗುತ್ತಿತ್ತು. ಇದಲ್ಲದೆ ಬೇಸಿಗೆಯಲ್ಲೂ ತಂಪಾದ ವಾತಾವರಣ ಕಾಪಾಡಿಕೊಳ್ಳಲು ಇದನ್ನು ನಿರ್ಮಿಸಲಾಗಿದೆ ಎಂದು ಇತಿಹಾಸಕಾರರು ತಿಳಿಸಿದ್ದಾರೆ.

ಬಿಜೆಪಿ ಇಂದು ಭಾರತೀಯರ ಭರವಸೆ: ರಾಜು ಕುರುಡಗಿ

◆**ಗದಗ:** ನಗರದ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಕಾರ್ಯಾಲಯದಲ್ಲಿ 46ನೇ ಸಂಸ್ಥಾಪನ ದಿನವನ್ನು ಧ್ವಜರೋಹಣ ಮಾಡುವುದರ ಮೂಲಕ ಆಚರಣೆ ಮಾಡಲಾಯಿತು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರುಡಗಿ ಮಾತನಾಡಿ, ಕಾರ್ಯಕರ್ತರ ಪರಿಶ್ರಮ, ಜನತೆಯ ಆಶೀರ್ವಾದ, ಶ್ರೇಷ್ಠ ನಾಯಕರ ನೇತೃತ್ವದಲ್ಲಿ 1980ರಲ್ಲಿ ಇಬ್ಬರು ಸದಸ್ಯರಿಂದ ಪ್ರಾರಂಭವಾದ ಪಕ್ಷದ ಪಯಣ, ಇಂದು ವಿಶ್ವದ ಬೃಹತ್ ರಾಜಕೀಯ ಶಕ್ತಿಯಾಗಿ ಪರಿವರ್ತನೆಗೊಂಡಿದೆ. ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಜೀ ರವರ ನಾಯಕತ್ವದಲ್ಲಿ ಸತತ 3 ಬಾರಿಯಿಂದ ಕೇಂದ್ರದಲ್ಲಿ ಸರ್ಕಾರ ರಚನೆ, ಇಂದಿಗೆ 21 ರಾಜ್ಯಗಳಲ್ಲಿ ಎನ್‌ಡಿಎ ಆಡಳಿತದ ಮೂಲಕ ಬಿಜೆಪಿ ಇಂದು ಭಾರತೀಯರ ಭರವಸೆಯಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಮಾತನಾಡಿ, ರಾಷ್ಟ್ರ ಸೇವೆಯ ಪವಿತ್ರ ಧ್ಯೇಯದೊಂದಿಗೆ ಸ್ಥಾಪನೆಯಾದ ಭಾರತೀಯ ಜನತಾ ಪಕ್ಷವು ಇಂದು ದೇಶದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಶಕ್ತಿಯಾಗಿ ಬೆಳೆಯುತ್ತಿರುವುದು ಹೆಮ್ಮೆಗೇ ಕಾರಣವಾಗಿದೆ. ನಿಸ್ವಾರ್ಥ ಪರಿಶ್ರಮದಿಂದ ಪಕ್ಷವನ್ನು ಕಟ್ಟಿದ ನಮ್ಮ ಎಲ್ಲ ಹಿರಿಯ ನಾಯಕರನ್ನು, ಕಾರ್ಯಕರ್ತರನ್ನು ಸ್ಮರಿಸೋಣ. ಪಕ್ಷವನ್ನು ಮತ್ತಷ್ಟು ಸಂಘಟಿಸಿ ದೇಶಕ್ಕಾಗಿ ದುಡಿಯೋಣ. ಪಕ್ಷದ ಲಕ್ಷಾಂತರ ಕಾರ್ಯಕರ್ತರ ತ್ಯಾಗ, ಸಮರ್ಪಣೆ ಮತ್ತು ಶ್ರಮವೇ ಬಿಜೆಪಿ ಬಲವಾಗಿದೆ ಎಂದರು.

ಎಂ.ಎಸ್.ಕರೀಗೌಡ್ರ ಶ್ರೀಪತಿ ಉಡುಪಿ, ಜಗನ್ನಾಥಸಾ ಭಾಂಡಗೆ, ಬಿ.ಎಚ್.ಲದ್ವಾ, ಎಂ.ಎಂ.ಹಿರೇಮಠ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜ ಪಾಟೀಲ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ನಿರ್ಮಲಾ ಕೊಳ್ಳಿ, ಪ್ರಮುಖರಾದ ಸಿದ್ದು ಪಲ್ಲೇದ, ರವಿ ದಂಡಿನ, ಗದಗ ನಗರ ಮಂಡಲ ಪ್ರಧಾನ ಕಾರ್ಯದರ್ಶಿ ಶಂಕರ ಕಾಕಿ, ಸುರೇಶ ಚಿತ್ತರಗಿ, ಅನಿಲ ಅಬ್ಬಿಗೇರಿ, ಶಶಿಧರ ದಿಂಡೂರ, ಸಂತೋಷ ಅಕ್ಕಿ, ರಮೇಶ ಸಜ್ಜಗಾರ, ನಾಗರಾಜತಳವಾರ, ದೇವೇಂದ್ರಪ್ಪ ಹೂಗಾರ, ರವಿ ಮಾನ್ವಿ, ವಿಶ್ವನಾಥ ಟೆಂಗಿನಕಾಯಿ, ಕೇಶವ ಕೊಟ್ಟಿಕಲ್, ವಿಜಯಲಕ್ಷ್ಮೀ ಮಾನ್ವಿ, ಪದ್ಮಿನಿ ಮುತ್ತಲದಿನ್ನಿ, ಪುಷ್ಪಾ ಪೂಜಾರ, ರೇಖಾ ಗವಳಿ, ಕಮಲಾಕ್ಷೀ ತಕ್ಕಲಕೋಟಿ, ಸುಮಂಗಲಾ ಕೊನೆವಾಲ, ಶಿವಲೀಲಾ ಉಮಚಗಿ, ಯೋಗೇಶ್ವರಿ ಭಾವಿಕಟ್ಟಿ, ಶ್ರೀದೇವಿ ಲಖಮಾಪೂರ, ನೇತ್ರಾವತಿ ಜೋಗಿನ್, ಸಂಕೇತಾ ಶಿದ್ಲಿಂಗ್, ಎಸ್.ಪಿ.ಹೊಂಬಳ, ಆರ್.ಬಿ.ಹಾದಿಮನಿ ಇದ್ದರು.



ಜನಗಣತಿಯಲ್ಲಿ ಎಲ್ಲರೂ ಭಾಗವಹಿಸಿ

◆**ನರೇಗಲ್ಲ:** ದೇಶದ ಜನಸಂಖ್ಯೆ ಮಾಹಿತಿ ಪಡೆದು ಅದಕ್ಕೆ ಅನುಗುಣವಾಗಿ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳ ಅನುಸಾರ ನೀತಿಗಳನ್ನು ರೂಪಿಸಲು ಜನಗಣತಿ ಅಂಕಿ ಅಂಶಗಳು ಮುಖ್ಯವಾಗಿದೆ ಅದಕ್ಕೆ ಸಾರ್ವಜನಿಕರು ಜನಗಣತಿಯಲ್ಲಿ ಭಾಗವಹಿಸುವುದು ಎಲ್ಲರ ಕರ್ತವ್ಯ. ಯಾವುದೇ ಆತಂಕಕ್ಕೆ ಒಳಗಾಗದೆ ಸಂಪೂರ್ಣ ಮಾಹಿತಿ ನೀಡಬೇಕು. ಏ.1ರಿಂದ ಗಣತಿದಾರರಿಗೆ ಆರಂಭವಾಗಿರುವ ಗಣತಿ'ಯಲ್ಲಿ ಜನಗಣತಿಗೆ 'ಸ್ವಯಂ ಭಾಗವಹಿಸಿ ಜನಗಣತಿಗೆ ಸಹಕರಿಸುವುದು ಎಲ್ಲರ ಕರ್ತವ್ಯ ಎಂದು ಗದಗ ಜಿಲ್ಲಾ ಭಾರತೀಯ ಜನಗಣತಿ ತರಬೇತಿದಾರ ಬಸವರಾಜ ಗಿರಿತಮ್ಮನವರ ತಿಳಿಸಿದರು.

ಸ್ಥಳೀಯ ರೋಟರಿ ಕ್ಲಬ್ ಸಭಾಭವನದಲ್ಲಿ 2026-27 ಸಾಲಿನ ಜನಗಣತಿಯ ಬಗ್ಗೆ ಪತ್ರಿಕಾಗೋಷ್ಠಿ ನಡೆಸಿದ ಅವರು, 2027ರ ಜನಗಣತಿ ಏ.1ರಿಂದ ಆರಂಭವಾಗಿದೆ. ದೇಶದ ಜನಸಂಖ್ಯೆಯ ಮಾಹಿತಿ ಪಡೆದು ಅದಕ್ಕೆ ಅನುಗುಣವಾಗಿ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳಿಗೆ ಅನುಸಾರ ನೀತಿ ರೂಪಿಸಲು ಗಣತಿ ಅಂಕಿ, ಅಂಶಗಳು ಮುಖ್ಯ. ರಾಜ್ಯ ಸೇರಿದಂತೆ ತಾಲೂಕಿನ ಎಲ್ಲ ಜನರು ಜನಗಣತಿಯಲ್ಲಿ ಕಡ್ಡಾಯವಾಗಿ ಎಲ್ಲರೂ ಪಾಲ್ಗೊಳಬೇಕಿದೆ ಎಂದರು.

ಏ.15ರವರೆಗೂ ಸ್ವಯಂ ಗಣತಿ ನಡೆಯಲಿದ್ದು ನಂತರ ಗಣತಿದಾರರು ಪ್ರತಿ ಮನೆಮನೆಗೆ ಭೇಟಿ ನೀಡಿ ಗಣತಿ ಕಾರ್ಯ ಮಾಡಲಿದ್ದಾರೆ. ಈ ಗಣತಿ ಕಾರ್ಯಕ್ಕಾಗಿ ಗ್ರಾಮೀಣ ಚಾರ್ಜ್ ಅಧಿಕಾರಿಯಾಗಿ ತಹಶೀಲ್ದಾರ ಹಾಗೂ ಪಟ್ಟಣದಲ್ಲಿ ಚಾರ್ಜ್ ಅಧಿಕಾರಿಯನ್ನಾಗಿ ಪ ಪಂ ಮುಖ್ಯ ಅಧಿಕಾರಿಯನ್ನು ನೇಮಿಸಿರುತ್ತಾರೆ ಎಂದರು.

ಈಸಂದರ್ಭದಲ್ಲಿ ಪಪಂ ಮುಖ್ಯಾಧಿಕಾರಿ ಮಲ್ಲೇಶ್ ಪಚ್ಚಿ, ತಾಲೂಕ ದೈಹಿಕ ಶಿಕ್ಷಣ ಪರವೀಕ್ಷಕ ಆರ್.ಎಸ್. ನರೇಗಲ, ಸಹಶಿಕ್ಷಕ ವಿ.ಎ. ಕುಂಬಾರ, ಉಪನ್ಯಾಸಕ ಶಿವಾನಂದ್ ಗೋಗೇರಿ, ಬಾಳಪ್ಪ ಕಳಕಣ್ಣವರ, ಪಪಂ ಸಿಬ್ಬಂದಿ ಆರೀಫಬೇಗ ಮಿರ್ಜಾ, ಎಂ.ಎಚ್. ಸೀತಿಮನಿ, ರಮೇಶ ವೈ. ಹಲಗಿಯವರ, ಎ.ಎಸ್. ಮೇಣಸಗಿ, ನಾಜೀಮಾ ಬೇಲೆರಿ, ಶಂಕ್ರಪ್ಪ ದೊಡ್ಡಣ್ಣವರ, ನೀಲಪ್ಪ ಚಳ್ಳಮರದ ಉದಯ ಮುದೇನಗುಡಿ ಮಣಿಕಂಠ ಹೂಗಾರ, ಕಾವ್ಯಾ ಅರವಟಗಿಮಠ, ಪೂರ್ಣಿಮಾ ಹೊಸಮನಿ, ರೇಣುಕಾ ಕಳಕಣ್ಣವರ ಚಿದಂಬರ ಹುಣಶಿಮರದ, ಮುಂತಾದವರು ಉಪಸ್ಥಿತರಿದ್ದರು.



ದೇಶದ ಅಭಿವೃದ್ಧಿಗೆ ಬಿಜೆಪಿ ಕೊಡುಗೆ ಅಪಾರ: ಬಂಡಿ

◆**ಗದಗ:** ಜಿಲ್ಲೆಯ ಗಜೇಂದ್ರಗಡ ಪಟ್ಟಣದ ಮಾಜಿ ಶಾಸಕ ಕಳಕಪ್ಪ ಬಂಡಿ ಗೃಹ ಕಚೇರಿಯಲ್ಲಿ ಭಾರತೀಯ ಜನತಾ ಪಕ್ಷದ ಸಂಸ್ಥಾಪನಾ ದಿನವನ್ನು ಸೋಮವಾರ ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಪಕ್ಷದ ಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಲಾಯಿತು.

ಬಳಿಕ ಮಾಜಿ ಶಾಸಕ ಕಳಕಪ್ಪ ಬಂಡಿ ಮಾತನಾಡಿ, ದೇಶದ ಅಭಿವೃದ್ಧಿಗೆ ಪಕ್ಷದ ಕೊಡುಗೆಗಳನ್ನು ಸ್ಮರಿಸಿದರು. ಪಕ್ಷದ ಸ್ಥಾಪನೆಯಿಂದ ಇಂದಿನವರೆಗೆ ನಡೆದ ಹೋರಾಟ, ಸಾಧನೆಗಳು ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶವು ಸಾಧಿಸಿರುವ ಪ್ರಗತಿಯನ್ನು ವಿವರಿಸಿದರು.



ಪಕ್ಷದ ತತ್ವಗಳು, ಸಂಘಟನೆ ಬಲವರ್ಧನೆ ಹಾಗೂ ಬೂತ್ ಮಟ್ಟದ ಕಾರ್ಯಕರ್ತರ ಪಾತ್ರ ಮಹತ್ವದಾಗಿದೆ ಎಂದು ಒತ್ತಿ ಹೇಳಿದರು.

ಬಿಜೆಪಿ ಮುಖಂಡ ಅಶೋಕ ವನ್ನಾಲ ಮಾತನಾಡಿ, ಯುವಜನತೆ ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಮುಂಬರುವ ಚುನಾವಣೆಯಲ್ಲಿ ಮತ್ತೇ ಬಿಜೆಪಿ ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದರು.

ಬಿಜೆಪಿ ಮುಖಂಡ ರಾಜೇಂದ್ರ ಘೋರ್ಪಡೆ ಮಾತನಾಡಿ, ಪಕ್ಷದ ಬಲವರ್ಧನೆಗೆ ಅನೇಕ ಮಹಾನ ನಾಯಕರು ತಮ್ಮ ತ್ಯಾಗ ಬಲಿದಾನದ ಮೂಲಕ ಪಕ್ಷವನ್ನು ಬಲಿಷ್ಠಗೊಳಿಸಿದ್ದಾರೆ. ಪ್ರಸ್ತುತ ಬಿಜೆಪಿ ಪಕ್ಷವು ಇಡೀ ದೇಶಾದ್ಯಂತ ಅಷ್ಟೇ ಅಲ್ಲದೆ ಜಾಗತಿಕ ಮಟ್ಟದಲ್ಲಿ ಕೂಡಾ ಹೆಸರುವಾಸಿಯಾಗಿದೆ. ನಿಷ್ಠಾವಂತ ಕಾರ್ಯಕರ್ತರು ಮಹಾನ್ ನಾಯಕರ ಆದರ್ಶಗಳನ್ನು ಪಾಲಿಸುವ ಮೂಲಕ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡುವುದು ಆದ್ಯ ಕರ್ತವ್ಯವಾಗಿದೆ ಎಂದರು. ಪಕ್ಷದ ಹಿರಿಯರಾದ ಶಿವಾನಂದ ಮಠದ, ಮುದಿಯಪ್ಪ ಕರಡಿ, ಬಾಳಾಜಿರಾವ್ ಭೋಸಲೆ, ರಮೇಶ್ ವಕ್ಕರ, ಮಾಂತೇಶಪೂಜಾರ, ಸೂಗೂರೇಶ ಕಾಜಗಾರ, ಹುಲ್ಲಪ್ಪ ಕೆಂಗಾರ, ಯಮನೂರಪ್ಪ ತಿರಕೋಜಿ, ಶಂಕರ ಇಂಜನಿ, ವಿನಾಯಕ ಜರತಾರಿ, ಲಕ್ಷ್ಮಣ ಬಂಕದ, ಅನುರಾಗ ಚಿನಿವಾಲರ, ಮಹೇಶ್ ಮಕ್ತಾಲಿ, ಪರಶು ಗುಡದೂರ ಸೇರಿದಂತೆ ಅನೇಕರು ಇದ್ದರು.

ಪುರಸಭೆ ಮುಖ್ಯಾಧಿಕಾರಿ ವರ್ಗಾವಣೆ ವಿರೋಧಿಸಿ ಮನವಿ

◆**ಮುಂಡರಗಿ:** ಮುಂಡರಗಿ ಪಟ್ಟಣಕ್ಕೆ ಕಳಸಪ್ರಾಯವಾಗಲಿರುವ ಇಲ್ಲಿಯ ಪುರಸಭೆಯ ಆವರಣದಲ್ಲಿ ಸ್ಥಾಪಿಸಲಾಗುತ್ತಿರುವ ಸಂವಿಧಾನಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರ 9 ಅಡಿ ಮೂರ್ತಿಯ ಉದ್ಘಾಟನಾ ಸಮಾರಂಭವು ಏ.15 ರಂದು ನಿಗದಿಯಾಗಿದ್ದು, ಈ ಎಲ್ಲ ಕಾರ್ಯಕ್ರಮಗಳಿಗೆ ಸಹಾಯ ಸಹಕಾರ ನೀಡಿ, ಪುರಸಭೆಯಲ್ಲಿ ಸ್ಥಳಾವಕಾಶ ನೀಡಿ, ಹಣವನ್ನು ಬಿಡುಗಡೆಗೊಳಿಸಿ ಕಾರ್ಯಾರಂಭ ಮಾಡಿಸಿದ ಪುರಸಭೆಯ ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ ಅವರನ್ನು ಏಕಾಏಕಿಯಾಗಿ ವರ್ಗಾವಣೆ ಮಾಡಿರುವುದು ಖಂಡನೀಯ. ಕೂಡಲೇ ಈ ವರ್ಗಾವಣೆ ರದ್ದುಗೊಳಿಸಬೇಕೆಂದು ದಲಿತ ಮುಖಂಡ ಎಚ್.ಡಿ.ಪೂಜಾರ ಆಗ್ರಹಿಸಿದ್ದಾರೆ.



ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ವಿಷಯ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲರಿಗೆ ಮನವಿಪತ್ರ ಸಲ್ಲಿಸಿ ಆಗ್ರಹಿಸಿದ್ದಾರೆ.

ಶಂಕರ ಹುಲ್ಲಮ್ಮನವರ ಅವರ ವರ್ಗಾವಣೆ ರದ್ದುಗೊಳಿಸದಿದ್ದರೆ ಡಾ.ಬಿ.ಆರ್.ಅಂಬೇಡ್ಕರ ಅಭಿಮಾನಿ ಬಳಗದವರಿಂದ ಕಪ್ಪು ಪಟ್ಟಿ ಧರಿಸಿ ಧರಣಿ ಮಾಡುವುದರೊಂದಿಗೆ ಮೂರ್ತಿ ಉದ್ಘಾಟನೆಗೆ ಅವಕಾಶ ನೀಡುವುದಿಲ್ಲ ಎಂದರು.

ದಲಿತ ಮುಖಂಡ ಲಿಂಗರಾಜ ಹಾಲಿನವರ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಹಿರಿಯರಾದ ಸತೀಶ ಪಾಸಿ, ಮಂಜುನಾಥ ಹೈತಾಪೂರ, ದಂಡೆಪ್ಪ ಹರಿಜನ, ಲಿಂಗರಾಜ ಮೇಗಳಮನಿ, ಸಂತೋಷ ಹಡಗಲಿ,ಅಭಿಷೇಕ ಹಾಲಿನವರ, ರಾಗೂ ತಂಬೂರಿ, ರಮೇಶ ಹಾಲಿನವರ, ಲಿಂಗಪ್ಪ ದೊಡ್ಡಮನಿ, ಮನೋಜ ವಡ್ಡರ ಮುಂತಾದವರಿದ್ದರು.

ಬಿಸಿಲಿಗೆ ಕಂಗಾಲಾದ ಜನತೆ: ಮಣ್ಣಿನ ಮಡಿಕೆಗೆ ಹೆಚ್ಚಿದ ಬೇಡಿಕೆ

▶ಸಿ.ಎಸ್.ಅರಸನಾಳ

ದಿಗಂತ ವಿಶೇಷ

◆**ಮುಂಡರಗಿ:** ಏಪ್ರೀಲ್ ಮೊದಲ ವಾರದಲ್ಲಿಯೇ ಉರಿ ಬಿಸಲು ಪ್ರಾರಂಭವಾಗಿದ್ದರಿಂದ ತಾಲೂಕಿನ ಜನತೆ ತತ್ತರಿಸಿಹೋಗಿದೆ. ಈ ಬಿಸಿಲಿನ ಝಳ ಹೆಚ್ಚುತ್ತಿದ್ದಂತೆ ಬಡವರ ಫ್ರಿಜ್ ಎಂದೇ ಕರೆಸಿಕೊಳ್ಳುವ ಮಣ್ಣಿನ ಮಡಿಕೆಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ರೆಫ್ರಿಜರೇಟರ್‌ನ ತಂಪಾದ ನೀರು ಆರೋಗ್ಯಕ್ಕೆ ಹಾನಿಕಾರಕ ಎಂದೆನ್ನುವಾಗ ಈ ಉರಿ ಬಿಸಿಲಿಗೆ ಕಂಗಾಲಾದ ಜನತೆ ದೇಹವನ್ನು ತಂಪಾಗಿಸಲು ಮಣ್ಣಿನ ಮಡಿಕೆಗೆ ಮೊರೆ ಹೋಗುತ್ತಿರುವುದು ಸಾಮಾನ್ಯವಾಗಿದೆ.

ಯಾವುದೇ ವಿದ್ಯುತ್ ಆವಶ್ಯಕತೆ ಇಲ್ಲದೆ ತಂಪಾದನೀರುಕೊಡುವಮಣ್ಣಿನಮಡಿಕೆಆರೋಗ್ಯಕ್ಕೂ ಒಳ್ಳೆಯದು. ಅದಕ್ಕೆ ಅದು ಬಡವರ ಫ್ರಿಜ್ ಎಂದೇ ಜನಜನಿತವಾಗಿದೆ. ಈ ಪ್ಲಾಸ್ಟಿಕ್ ಯುಗದಲ್ಲಿ ಮತ್ತು ಹಿತ್ತಾಳೆ, ತಾಮ್ರ ಹಾಗೂ ಸ್ಟೀಲ್‌ಗಳ ಭಾರೀ ಮಾರಾಟದ ಭರಾಟೆಯಲ್ಲಿ ವಿವಿಧ ವರ್ಣರಂಜಿತ ಮತ್ತು ವಿವಿಧ ನಮೂನೆಯ ಚಿತ್ತಾರಗಳನ್ನು ಹೊಂದಿರುವ ಮಣ್ಣಿನ ಮಡಿಕೆಗಳಿಗೆ ಬೇಸಿಗೆ ಬಂತೆಂದರೆ ಎಲ್ಲಿಲ್ಲದ ಬೇಡಿಕೆ ಶುರುವಾಗಿದೆ. ಈಗ ಏಪ್ರೀಲ್ ಮೊದಲ ವಾರದಲ್ಲಿಯೇ ಪಟ್ಟಣದ ಉಷ್ಣಾಂಶ 39 ರಿಂದ 40 ಡಿಗ್ರಿಸೆಲಿಸಿಯಸ್ ಮುಟ್ಟುತ್ತಿರುವುದರಿಂದ ಜನರು ಬಿಸಿಲಿನ ತಾಪಕ್ಕೆ ತತ್ತರಿಸಿ ಹೋಗಿದ್ದಾರೆ. ಮನೆಯಲ್ಲಿಯ ಫ್ರೀಜ್ ನೀರನ್ನು ಬಿಟ್ಟು ಮಡಿಕೆಯಲ್ಲಿನ ತಣ್ಣನ ನೀರು ಕುಡಿಯಲು ಪ್ರಾರಂಭಿಸಿದ್ದು ಮಣ್ಣಿನ ಮಡಿಕೆಗಳ ಬೇಡಿಕೆ ಹೆಚ್ಚಾಗಿದೆ. ಬಡವರ ಫ್ರೀಜ್ ಎಂದೇ ಖ್ಯಾತಿಯನ್ನು ಹೊಂದಿದ್ದರೂ ಮಣ್ಣಿನ ಹರವೆ, ಗಡಿಗೆ, ಮೊಸರು ಹಾಕುವ ಕುಡಿಕೆ, ನೀರು ತುಂಬಿಡುವ ಮಣ್ಣಿನ ಕೊಡ, ಬಿಂದಿಗೆಗಳನ್ನು ಎಲ್ಲರೂ ಖರೀದಿಸುತ್ತಿದ್ದಾರೆ.



ಪಟ್ಟಣದ ಅನ್ನದಾನೀಶ್ವರ ಮಠದ ಹತ್ತಿರವಿರುವ ಕುಂಬಾರ ಓಣಿಯಲ್ಲಿ ಹಾಗೂ ಭಜಂತ್ರಿ ಓಣಿಯಲ್ಲಿ, ಹೆಸರೂರ ರಸ್ತೆಯ ಆಶ್ರಯ ಕಾಲನಿಯಲ್ಲಿ, ಹೊಸ ಬಸ್ ನಿಲ್ದಾಣದ ಹತ್ತಿರ ಹೀಗೆ ಪಟ್ಟಣದ ಅನೇಕ ಕಡೆಗಳಲ್ಲಿ ಮಣ್ಣಿನ ಹರವೆ, ಮಡಿಕೆ, ಮಗಿಗಳು, ಮಣ್ಣಿನ ಕೊಡ ಮತ್ತು ನೀರಿನ ಬಾಟಲಿಗಳ ಮಾದರಿಯಲ್ಲಿ ತಯಾರಿಸಿದ ಮಣ್ಣಿನ ಬಾಟಲಿಗಳು ಮಾರಾಟಕ್ಕೆ ಇಟ್ಟಿದ್ದು, ಮಾರಾಟ ಜೋರಾಗಿದೆ. ರೂ 50 ರಿಂದ 650 ರವರೆಗೆ ಬೆಲೆಯನ್ನು ಹೊಂದಿದ್ದ ಈ ಮಡಿಕೆಗಳು ಮಾರ್ಚ ಮೊದಲು ವಾರದಿಂದಲೇ ಮಾರಾಟವಾಗುತ್ತಿರುವುದು ಕುಂಬಾರರಿಗೆ ಶುಕ್ರದೆಸೆ ಬಂದಂತಾಗಿದೆ.

ಈ ವರ್ಷ ಹೆಚ್ಚಿನ ಬಿಸಿಲು ಇದೆ. ಆದಕ್ಕಾಗಿ ಈ ವರ್ಷ ಮಾರ್ಚ್ ಮೊದಲನೇ ವಾರದಿಂದಲೇ ಮಡಿಕೆಗಳ ಮಾರಾಟ ಜೋರಾಗಿದೆ. ಮೊದಲು ನಮ್ಮ ಹಿರಿಯರು ಇಲ್ಲಿಯೇ ಮಡಿಕೆಗಳನ್ನು ಮಾಡಿ ಸುಡತ್ತಿದ್ದರು, ಆದರೆ ಈಗ ನಾವು ಸೊಲ್ಲಾಪೂರ ಹಾಗೂ ಕೊಡ್ಲಗಿ ಕಡೆಗಳಿಂದ ವಿವಿಧ ಚಿತ್ತಾರಗಳುಳ್ಳ ಮಡಿಕೆಗಳನ್ನು ತಂದು ಮಾರಾಟ ಮಾಡುತ್ತಿದ್ದೇವೆ. ಕೆಲಸ ಮಾಡುವ ಜನರು ತಮ್ಮ ಅನುಕೂಲಕ್ಕೆ ಬಳಸುವಂತೆ ಮಣ್ಣಿನ ಬಾಟಲಿಗಳು ಬಂದಿದ್ದು, ಅವುಗಳಿಗೆ ಬೇಡಿಕೆ ಬಹಳ ಇದೆ.

■ **ಪರಸಪ್ಪ ಕುಂಬಾರ, ಮಡಿಕೆ ಮಾರಾಟಗಾರರು ಮುಂಡರಗಿ.**

ವಾರಗಿ-ಪರಸಿ ಪೈಕಿ ಕುಸ್ತಿ ಪಂದ್ಯಾವಳಿಯಲ್ಲಿ ಪೈಲ್ವಾನ್ ಮುತ್ತು ಗೆಲುವು

◆**ಲಕ್ಷ್ಮೇಶ್ವರ:** ಪಟ್ಟಣದ ಕೋಡಿಯಲ್ಲಮ್ಮ ದೇವಿ ದೇವಸ್ಥಾನದ ಜಾತ್ರಾಮಹೋತ್ಸವ ಅಂಗವಾಗಿ ಕಳೆದ 3 ದಿನಗಳಿಂದ ದೇವಸ್ಥಾನದ ಬಯಲಿನಲ್ಲಿ ಮುಕ್ತ ಕುಸ್ತಿ ಪಂದ್ಯಾವಳಿಗಳು ನಡೆದವು.

ಸೋಮವಾರ ಫೈನಲ್ ಗೋಧೂಳಿ ಸಮಯದಲ್ಲಿ ನಡೆದ ವಾರಗಿ ಪೈಕಿ-ಪರಸಿ ಪೈಕಿ ಕುಸ್ತಿ ಅಂತಿಮ ಪಂದ್ಯಾವಳಿಯಲ್ಲಿ ಲಕ್ಕುಂಡಿಯ ಪೈಲ್ವಾನ್ ಮುತ್ತು ಭಾವಿ ಗೆಲುವಿನ ಖಡಗದೊಂದಿಗೆ ವಿಜಯ ಮಾಲೆ ಧರಿಸಿದರು.

ಮೊದಲು ವಾರಿಗಿ ಪೈಕಿ ಕುಸ್ತಿಯಲ್ಲಿ ಲಕ್ಕುಂಡಿಯ ಮುತ್ತು ಬಾವಿ ಪೈಲ್ವಾನ್ ಹಾಗೂ ಯಳವಟ್ಟಿಯ ಶಿದ್ದಲಿಂಗೇಶ ಈ ಇಬ್ಬರ ನಡುವೆ ನಡೆದ ಕಾದಾಟದಲ್ಲಿ ಲಕ್ಕುಂಡಿಯ ಮುತ್ತು ಬಾವಿ ಪೈಲ್ವಾನ್ ಜಯಶಾಲಿಯಾಗಿ ಬೆಳ್ಳಿ ಕಡಗ ಮತ್ತು ನಗದು ತಮ್ಮದಾಗಿಸಿಕೊಂಡರು. ನಂತರ ಪರಸಿ ಪೈಕಿ ಕುಸ್ತಿಯಲ್ಲಿ ಮುತ್ತು ಬಾವಿ ಹಾಗೂ ಬೊಮ್ಮನಹಳ್ಳಿಯ ನಿಂಗಪ್ಪ ಇಬ್ಬರು ಮದಗಜಗಳ ನಡುವೆ 40 ನಿಮಿಷಗಳ ಕಾಲ ನಡೆದ ರೋಚಕ ಕಾಳದಲ್ಲಿ ಮತ್ತೆ ಮುತ್ತು ಪೈಲ್ವಾನ್ ಕೈ ಮೇಲಾಯಿತು.

ಸೆಣಸಿದ ಕಲಿಗಳ ವಿವಿಧ ಭಂಗಿ, ಪಟ್ಟು, ಕರಾಮತ್ತುಗಳು ನೋಡುಗರ ಮೈನವಿರೇಳಿಸುವಂತೆ ಮಾಡಿದವು. ಸ್ಥಳೀಯ ಪೈಲ್ವಾನರು ಸೇರಿದಂತೆ ಲಕ್ಕುಂಡಿ ಹಾವೇರಿ ಬೊಮ್ಮನಹಳ್ಳಿ ಧಾರವಾಡ, ಹೂವಿನಗೋಳ ಹನುಮನಾಳ ಶಿರಹಟ್ಟಿ ಬಾಳೆಹೊಸೂರ ರಾಣೆಬೆನ್ನೂರ ಬ್ಯಾಡಗಿ, ಬಡಮಲ್ಲಿ, ಕಲಘಟಗಿ ಸೇರಿ ಅನೇಕ ಕಡೆಗಳಿಂದ 40 ಕ್ಕೂ ಹೆಚ್ಚು ಜೋಡಿಗಳು ಕುಸ್ತಿಯಲ್ಲಿ ಸೆಣಸಾಡಿಸಿದರು.



ಸಂಜೆ ಬಹುಮಾನ ಸ್ವೀಕರಿಸಿ ಮಾತನಾಡಿದ ಲಕ್ಕುಂಡಿಯ ಮುತ್ತು ಬಾವಿ ಪೈಲ್ವಾನ್, ಕುಸ್ತಿ ನಮ್ಮ ಹಿರಿಯರಿಂದ ಬಳುವಳಿಯಾಗಿ ಬಂದ ಜಾನಪದ ಶೈಲಿಯ ಗ್ರಾಮೀಣ ಕ್ರೀಡೆಯಾಗಿದೆ. ನಮ್ಮ ಸಂಸ್ಕೃತಿ, ಪರಂಪರೆಯ ಪ್ರತೀಕವಾದ ಗ್ರಾಮೀಣ ಕ್ರೀಡೆಗಳನ್ನು ಉಳಿಸಿ-ಬೆಳೆಸಿಕೊಂಡು ಹೋಗುವುದು ಎಲ್ಲರ ಜವಾಬ್ದಾರಿಯಾಗಿದೆ. ಜಾತ್ರಾ ಮಹೋತ್ಸವ ಅಂಗವಾಗಿ ಸಂಪ್ರದಾಯದಂತೆ ನಡೆಸಿಕೊಂಡು ಬರಲಾಗುತ್ತಿರುವ ಈ ಕುಸ್ತಿ ಪಂದ್ಯಾವಳಿಯನ್ನು ದೇವಸ್ಥಾನ ಸೇವಾ ಕಮೀಟಿ, ಭಕ್ತಮಂಡಳಿ, ಪಟ್ಟಣದ ಹಿರಿಯರು ಮುಂದುವರೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ ಮತ್ತು ನಮ್ಮಂತಹ ಗ್ರಾಮೀಣ ಕುಸ್ತಿ ಪಟುಗಳಿಗೆ ವೇದಿಕೆ ಕಲ್ಪಿಸಿದಂತಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಶ್ರೀ ಕೋಡಿಯಲ್ಲಮ್ಮ ದೇವಿ ದೇವಸ್ಥಾನದ ಕಮೀಟಿಯವರು, ಪಟ್ಟಣದ ಹಿರಿಯರು, ಪೈಲ್ವಾನರು, ಕುಸ್ತಿ ಪ್ರೇಮಿಗಳು ಇದ್ದರು.

ಹಾವೇರಿ ವಿವಿ ಘಟಿಕೋತ್ಸವ | ರಾಜ್ಯಪಾಲ ಗೆಹ್ಲೋಟ್ ಕರೆ

ಅವಕಾಶಗಳ ಸೃಷ್ಟಿಕರ್ತರಾಗಿ

ಹಾವೇರಿ: ನಿರಂತರವಾಗಿ ಬದಲಾಗುತ್ತಿರುವಮತ್ತುಸ್ಪರ್ಧಾತ್ಮಕಯುಗದಲ್ಲಿನಿರಂತರ ಕಲಿಕೆಯ ಮನೋಭಾವ, ನವೀನ ಮನಸ್ಥಿತಿ ಮತ್ತು ಸಮಾಜದ ಬಗ್ಗೆ ಜವಾಬ್ದಾರಿಯುತ ಪ್ರಜ್ಞೆ ಅತ್ಯಗತ್ಯ. ಆದ್ದರಿಂದ, ನೀವು ಉದ್ಯೋಗಾಕಾಂಕ್ಷಿಗಳು ಮಾತ್ರವಲ್ಲ, ಅವಕಾಶಗಳ ಸೃಷ್ಟಿಕರ್ತರಾಗಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಕರೆ ನೀಡಿದರು.

ಇಲ್ಲಿನ ಗುದ್ಲೆಪ್ಪ ಹಳ್ಳಿಕೇರಿ ಕಾಲೇಜಿನಲ್ಲಿ ಸೋಮವಾರ ಹಾವೇರಿ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಜಗತ್ತು ವೇಗವಾಗಿ ಬದಲಾಗುತ್ತಿದೆ. ತಂತ್ರಜ್ಞಾನ, ವಿಜ್ಞಾನ ಮತ್ತು ನಾವೀನ್ಯತೆಗಳಲ್ಲಿ ಅಭೂತಪೂರ್ವ ಪ್ರಗತಿ ಸಾಧಿಸಲಾಗುತ್ತಿದೆ. ಕೃತಕ ಬುದ್ಧಿಮತ್ತೆ, ದತ್ತಾಂಶ ವಿಜ್ಞಾನ ಮತ್ತು ಡಿಜಿಟಲ್ ಕ್ರಾಂತಿಯು ನಾವು ಬದುಕುವ ಮತ್ತು ಕೆಲಸ ಮಾಡುವ ವಿಧಾನವನ್ನು ಸಂಪೂರ್ಣವಾಗಿ ಪರಿವರ್ತಿಸಿದೆ. ಈ ಕಾಲಮಾನದಲ್ಲಿ ನಿಮ್ಮ ಕನಸುಗಳು ದೊಡ್ಡದಾಗಿರಲಿ, ಗುರಿಗಳು ಉನ್ನತವಾಗಿರಲಿ ಮತ್ತು ನಿಮ್ಮ ಪ್ರಯತ್ನಗಳು ನಿರಂತರವಾಗಿರಲಿ. ನಿಮ್ಮ ಜ್ಞಾನ ಮತ್ತು ಕೌಶಲ್ಯದಿಂದ, ನಮ್ಮ ದೇಶವನ್ನು ಸ್ವಾವಲಂಬಿ, ಆರ್ಥಿಕವಾಗಿ ಬಲಿಷ್ಠ ಮತ್ತು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಸಲಹೆ ನೀಡಿದರು.

ಪದವಿ ವಿದ್ಯಾರ್ಥಿ ಜೀವನದ ಅಂತ್ಯವಲ್ಲ, ಜೀವನದ ಹೊಸ ಅಧ್ಯಾಯದ ಆರಂಭ. ಇದು ಹಾವೇರಿ ವಿವಿಯ ಮೊದಲ ಘಟಿಕೋತ್ಸವವಾಗಿ ಮಹತ್ವ ಪಡೆದಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ನೀಡುವುದರ ಜತೆಗೆ ಈ ಪ್ರದೇಶದ ಜನರ ಬಹುಕಾಲದ ಕನಸು ನನಸಾಗಿರುವ ಸಾಫಲ್ಯವನ್ನೂ ಕಾಣುತ್ತಿದ್ದೇವೆ ಎಂದರು.

ರಾಜ್ಯ ಕಾನೂನು ಆಯೋಗದ ಅಧ್ಯಕ್ಷ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಡಾ.ಅಶೋಕಹಿಂಚಿಗೇರಿ ಮಾತನಾಡಿ, ಪದವಿ ಪಡೆದ ಮೇಲೆ ಅಹಂಕಾರ ಬೆಳೆಸಿಕೊಳ್ಳಬೇಡಿ. ಕಟುವಾದ ಮಾತುಗಳು ಗುಂಡುಗಳಿಗಿಂತ ಹೆಚ್ಚು ನೋವುಂಟು ಮಾಡುತ್ತವೆ. ನಿಮ್ಮ ಮಾತು ಮೃದುವಾಗಿರಲಿ, ಜೀವನದಲ್ಲಿ ಮೃಧುತ್ವ ಮತ್ತು ಹೊಂದಾಣಿಕೆ ಗುಣ ನಿಮ್ಮನ್ನು ಯಶಸ್ಸಿನ ಶಿಖರಕ್ಕೇರಿಸುತ್ತದೆ ಎಂದರು.

ಕುಲಪತಿ ಪ್ರೊ.ಸುರೇಶ ಜಂಗಮಶೆಟ್ಟಿ ಮಾತನಾಡಿ, ಹಾವೇರಿ ವಿದ್ಯಾವಿದ್ಯಾಲಯವು ಮಾರ್ಚ್-21, 2023ರಂದು ಅಧಿಕೃತವಾಗಿ ಕಾರ್ಯಾರಂಭ ಮಾಡಿದೆ. ಇದು ಜಿಲ್ಲೆಯ ಶೈಕ್ಷಣಿಕ ಚಿತ್ರಣವನ್ನು ಬದಲಿಸುವ ಮಹತ್ವಾಕಾಂಕ್ಷೆಯೊಂದಿಗೆ ಮುನ್ನಡೆಯುತ್ತಿದೆ. ಗ್ರಾಮೀಣ ಭಾಗದ ಯುವ ಜನತೆಯನ್ನು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿ, ಸಾಮಾಜಿಕ ಜವಾಬ್ದಾರಿಯುಳ್ಳವರಾಗಿ ಮತ್ತು ಡಿಜಿಟಲ್ ಸಾಕ್ಷರರನ್ನಾಗಿ ರೂಪಿಸುವ ಗುರಿ ಹೊಂದಿದೆ ಎಂದರು.

2023-24ರ ಶೈಕ್ಷಣಿಕ ವರ್ಷದಲ್ಲಿ 8,793 ವಿದ್ಯಾರ್ಥಿಗಳೊಂದಿಗೆ ಆರಂಭವಾದ ನಮ್ಮ ಪಯಣ, 2025-26ರ ಅವಧಿಯಲ್ಲಿ 22,549 ವಿದ್ಯಾರ್ಥಿಗಳ ಮೈಲಿಗಲ್ಲನ್ನು ತಲುಪಿದೆ. ನಮ್ಮ ಸಂಯೋಜಿತ ಕಾಲೇಜುಗಳ ಸಂಖ್ಯೆಯು 45ಕ್ಕೆ ಏರಿದೆ. ಎಲ್ಲರಿಗೂ ಗುಣಮಟ್ಟದ ಒಳ್ಳಗೊಳ್ಳುವಿಕೆಯ ಮತ್ತು ಕೈಗೆಟುಕುವ ಶಿಕ್ಷಣವನ್ನು ನೀಡುವ ಮೂಲಕ ನಮ್ಮ ಸಮುದಾಯದ ಅಭಿವೃದ್ಧಿಗೆ ಶ್ರಮಿಸುವುದಾಗಿ ಸಂಕಲ್ಪ ಮಾಡೋಣ ಎಂದರು.

ಕುಲಸಚಿವರಾದ ಪ್ರೊ.ಸಿದ್ದಪ್ಪ ಬಾಗಲಕೋಟಿ, ಪ್ರೊ.ರೇಣುಕಾ ಮೇಟಿ, ಸಿಂಡಿಕೇಟ್ ಸದಸ್ಯರು, ಚಾಮರಾಜ ನಗರ, ಬಾಗಲಕೋಟೆ ಹಾಗೂ ಗೋಟಗೋಡಿ ಜನಪದ ವಿವಿಯ ಉಪ ಕುಲಪತಿಗಳು, ವಿವಿಧ ಕಾಲೇಜುಗಳ ಪ್ರಾಚಾರ್ಯರು, ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ, ಸಿಇಒ ರುಚಿ ಬಿಂದಲ್, ಎಸ್ಪಿ ಯಶೋಧಾ ವಂಟಗೋಡಿ ಇತರರಿದ್ದರು.



ಪದವಿ ಪ್ರದಾನ

ಹುಕ್ಕೇರಿ ಮಠದ ಶ್ರೀ ಸದಾಶಿವ ಸ್ವಾಮೀಜಿ ಹಾಗೂ ಸಾಹಿತಿ ಸತೀಶ ಕುಲಕರ್ಣಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. 7 ವಿದ್ಯಾರ್ಥಿಗಳಿಗೆ ಚಿನ್ನದ ಪದಕ, ಹನ್ನೊಂದು ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಲಾಯಿತು. ಒಟ್ಟು 1063 ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳಲ್ಲಿ ಪದವಿ ಪ್ರದಾನ ಮಾಡಲಾಯಿತು.

ವಿಶ್ವ ಹಿಂದೂ ಪರಿಷತ್ತಿನ ಕೇಂದ್ರೀಯ ಸಂಘಟನಾ ಮಹಾಮಂತ್ರಿ ಮಿಲಿಂದ್ ಪರಾಂಡೆ ಆಗ್ರಹ

ದೇವಸ್ಥಾನ ಆಡಳಿತಕ್ಕೆ ಸ್ವಾಯತ್ತತೆ ನೀಡಿ

ಕಲಬುರಗಿ: ಹಿಂದುಗಳ ಅಸ್ಮಿತೆ, ಸಾಂಸ್ಕೃತಿಕ ಗುರುತು ಮತ್ತು ಪರಂಪರೆಯ ಮೌಲ್ಯಗಳನ್ನು ಕಾಪಾಡುವ ಹಿತದೃಷ್ಟಿಯಿಂದ ಹಿಂದು ದೇವಸ್ಥಾನಗಳ ಆಡಳಿತದಲ್ಲಿ ಸ್ವಾಯತ್ತತೆ ನೀಡಬೇಕು ಹಾಗೂ ಅತಿಯಾದ ಸರ್ಕಾರಿ ನಿಯಂತ್ರಣದಿಂದ ಮುಕ್ತಗೊಳಿಸಿ ಸಮುದಾಯದ ಮೂಲಕ ಪಾರದರ್ಶಕ ನಿರ್ವಹಣೆ ನಡೆಸಲು ಅವಕಾಶ ಕಲ್ಪಿಸಬೇಕು ಎಂದು ವಿಶ್ವ ಹಿಂದೂ ಪರಿಷತ್ತಿನ ಕೇಂದ್ರೀಯ ಸಂಘಟನಾ ಮಹಾಮಂತ್ರಿ ಮಿಲಿಂದ್ ಪರಾಂಡೆ ಆಗ್ರಹಿಸಿದರು.

ನಗರದ ಎಂಆರ್‌ಎಂಸಿಸ್ಯಾಕ್ ಹಾಸ್ಟೆಲ್ ಸಭಾಂಗಣದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಂಸ್ಕೃತಿಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಪ್ರತ್ಯೇಕ ಸಚಿವಾಲಯ ಸ್ಥಾಪನೆ ಅಗತ್ಯವಿದೆ ಎಂದು ಹೇಳಿದರು.

ಕೆಲವು ಪ್ರದೇಶಗಳಲ್ಲಿ ಬದಲಾಗುತ್ತಿರುವ ಜನಸಾಂಖ್ಯಿಕ ಸ್ಥಿತಿಗತಿಗಳ ಬಗ್ಗೆ ಆತಂಕ ವ್ಯಕ್ತಪಡಿಸಿದ ಅವರು, ಅದನ್ನು ತತ್ವಾಧಾರಿತ ಮತ್ತು ಸಮತೋಲನದ ದೃಷ್ಟಿಯಿಂದ ಪರಿಶೀಲಿಸುವ ಅಗತ್ಯವಿದೆ.

3 ತಿಂಗಳಲ್ಲಿ 6 ಸಾವಿರ ಜಾಗೃತಿ ಅಭಿಯಾನ: ವಿಶ್ವ ಹಿಂದೂ ಪರಿಷತ್ ವತಿಯಿಂದ ಕಳೆದ ಮೂರು ತಿಂಗಳಲ್ಲಿ ನಶಾಮುಕ್ತ ಭಾರತ ನಿರ್ಮಾಣದ ಉದ್ದೇಶದಿಂದ ರಾಜ್ಯಾದ್ಯಂತ ವ್ಯಾಪಕ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ವಿವಿಧ ಕಾಲೇಜುಗಳು ಮತ್ತು ಕೋಚಿಂಗ್ ಕೇಂದ್ರಗಳಲ್ಲಿ ಸುಮಾರು 6,000ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, ಸುಮಾರು 3.5 ಲಕ್ಷ ಯುವಕರಿಗೆ ಡ್ರಗ್ಸ್ ಮುಕ್ತ ಭಾರತದ ಶಪಥ ಬೋಧಿಸಲಾಗಿದೆ.

ಇದರೊಂದಿಗೆ ಸಂಘಟನೆಯ ಅಡಿಯಲ್ಲಿ 6,500ಕ್ಕೂ ಹೆಚ್ಚು ಸೇವಾ ಪ್ರಕಲ್ಪಗಳನ್ನು ಜಾರಿಗೆ ತಂದು, ಹಿಂದೂ ಸಂಸ್ಕಾರಗಳ ಬೋಧನೆಗೆ ಒತ್ತು ನೀಡಲಾಗಿದೆ. 34 ಲಕ್ಷ ಬಜರಂಗದಳ ಯುವಕರು ಹಾಗೂ 16 ಲಕ್ಷ ದುರ್ಗಾ ವಾಹಿನಿ ಯುವತಿಯರ ಮೂಲಕ ದೇಶಭಕ್ತಿ ಮತ್ತು ಸಂಸ್ಕಾರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ವಿಶ್ವ ಹಿಂದೂ ಪರಿಷತ್ತಿನ ಪ್ರಾಂತ ಗೌರವಾಧ್ಯಕ್ಷ ಲಿಂಗರಾಜ ಅಪ್ಪ, ಕಾರ್ಯದರ್ಶಿ ಶಿವಕುಮಾರ್ ಬೋಳಶೆಟ್ಟಿ, ಪುಂಡಲಿಕ ದಳವಾಯಿ ಹಾಗೂ ಪ್ರಾಂತ ಪ್ರಸಾರ್ ಪ್ರಮುಖ ದೀಪಕ್ ಬಿ ಉಪಸ್ಥಿತರಿದ್ದರು.



ಭಾಷಾ ಆಧಾರದಲ್ಲಿ ಸಂಘರ್ಷ ಹುಟ್ಟು ಹಾಕುವ ಶಕ್ತಿ ಹಿಂದು ವಿರೋಧಿ

ಕಲಬುರಗಿ: ದೇಶದಲ್ಲಿ ಅನಾದಿಕಾಲದಿಂದಲೂ ವಿವಿಧ ಭಾಷೆಗಳು ಸಹಜವಾಗಿ ಬೆಳೆಯುತ್ತಾ ಬಂದಿದ್ದು, ಅವೆಲ್ಲವೂ ರಾಷ್ಟ್ರದ ಅಸ್ಮಿತೆಯ ಭಾಗಗಳಾಗಿವೆ. ಭಾಷೆಗಳ ಆಧಾರದಲ್ಲಿ ಸಮಾಜವನ್ನು ವಿಭಜಿಸಲು ಪ್ರಯತ್ನಿಸುವ ಶಕ್ತಿಗಳು ಹಿಂದು ವಿರೋಧಿ ಶಕ್ತಿಗಳಾಗಿವೆ ಎಂದು ವಿಶ್ವ ಹಿಂದೂ ಪರಿಷತ್‌ನ ಕೇಂದ್ರೀಯ ಸಂಘಟನಾ ಮಹಾಮಂತ್ರಿ ಮಿಲಿಂದ್ ಪರಾಂಡೆ ತಿಳಿಸಿದರು.

ಭಾರತ ಭೂಮಿಯಲ್ಲೇ ಹುಟ್ಟಿ ಬೆಳೆದ ಕನ್ನಡ, ಹಿಂದಿ, ಬೆಂಗಾಲಿ ಸೇರಿದಂತೆ ದೇಶದ ಎಲ್ಲಾ ಭಾಷೆಗಳೂ ಸಮಾನವಾಗಿ ಗೌರವಕ್ಕೆ ಅರ್ಹವಾಗಿದ್ದು, ಇವೆಲ್ಲವೂ ನಮ್ಮ ರಾಷ್ಟ್ರೀಯ ಭಾಷೆಗಳಾಗಿವೆ. ಹಿಂದು ಸಮಾಜವು ಯಾವತ್ತೂ ಭಾಷೆಯ ಆಧಾರದ ಮೇಲೆ ವಿಭಜನೆಯಾಗಿಲ್ಲ. ಆದರೆ, ಇತ್ತೀಚಿನ ದಿನಗಳಲ್ಲಿ ಭಾಷಾ ಭೇದ ಉದ್ದೀಪನಗೊಳಿಸಿ ಸಮಾಜದಲ್ಲಿ ವೈಮನಸ್ಸು ಸೃಷ್ಟಿಸುವ ಪ್ರಯತ್ನಗಳು ರಾಜಕೀಯವಾಗಿ ನಡೆಯುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

> ದೇಶದ ಹಲವು ಕಡೆ ಹಾಗೂ ರಾಜ್ಯದ ಹುಬ್ಬಳ್ಳಿ, ಬೆಳಗಾವಿ ಸೇರಿದಂತೆ ನಾನಾ ಕಡೆ ಮತಾಂತರಗಳು, ಹಿಂದುಗಳ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ಆದರೆ, ಸ್ಥಳೀಯ ಸರ್ಕಾರ ಪ್ರಕರಣದ ಗಂಭೀರತೆ ಅರಿತು ದೂರು ದಾಖಲಿಸಿಕೊಳ್ಳುವಲ್ಲಿ ಮೀನಾಮೇಷ ಮಾಡುತ್ತಿರುವುದು ಖಂಡನೀಯ.
>
> ■ **ಮಿಲಿಂದ್ ಪರಾಂಡೆ,** ಕೇಂದ್ರೀಯ ಸಂಘಟನಾ ಮಹಾಮಂತ್ರಿ, ವಿಎಚ್‌ಪಿ

ಅಯೋಧ್ಯೆಯಂತೆ ಕಾಶಿ, ಮಥುರಾ ನಮ್ಮ ಸಂಕಲ್ಪ

1994ರಲ್ಲಿ ಹರಿದ್ವಾರದಲ್ಲಿ ನಡೆದ ಧರ್ಮ ಸಂಸದ ಸಭೆಯಲ್ಲಿ ಪ್ರಮುಖವಾಗಿ ಕೆಲವು ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳ ಬಗ್ಗೆ ನಿರ್ಣಯ ಕೈಗೊಂಡು ಸಂಕಲ್ಪ ಕೈಗೊಳ್ಳಲಾಗಿದ್ದು, ಹಿಂದು ಧಾರ್ಮಿಕ ಮೌಲ್ಯಗಳನ್ನು ರಕ್ಷಿಸುವ ಮತ್ತು ಪ್ರಚಾರ ಮಾಡುವ ಸಂಕಲ್ಪದೊಂದಿಗೆ ಅಯೋಧ್ಯೆಯ ರಾಮ ಮಂದಿರದ ಮಾದರಿಯಂತೆ ಕಾಶಿ ವಿಶ್ವನಾಥನ ಮಂದಿರ ಹಾಗೂ ಮಥುರಾದ ಕೃಷ್ಣ ಮಂದಿರ ಪೂರ್ಣ ಪ್ರಮಾಣದಲ್ಲಿ ಹಿಂದು ಸ್ವಾಯತ್ತತೆಗೆ ತೆಗೆದುಕೊಳ್ಳಲು ಸಂಕಲ್ಪ ತೊಡಲಾಗಿದೆ. ಇವುಗಳನ್ನು ನಾವು ಪ್ರಾಪ್ತಿ ಮಾಡುತ್ತೇವೆ ಎಂದು ತಿಳಿಸಿದರು.

ಕಿರುಸುದ್ದಿ

ಫಯಾಜ್‌ಗೂ ಸಮೀರಗೂ ಸಂಪರ್ಕವಿರುವ ಸಾಧ್ಯತೆ: ನಿರಂಜನ ಹಿರೇಮಠ

ಹುಬ್ಬಳ್ಳಿ: ನೇಹಾ ಹಿರೇಮಠ ಕೊಲೆ ಮಾಡಿ ಆರೋಪಿ ಫಯಾಜ್ ಸಮೀರ್ ಮುಲ್ಲಾ ಜಿಮ್‌ನಲ್ಲಿ ತರಬೇತಿ ಪಡೆಯುತ್ತಿದ್ದ. ಫಯಾಜಗೂ ಸಮೀರಗೂ ಸಂಪರ್ಕವಿರುವ ಸಾಧ್ಯತೆಯಿದ್ದು, ಇದರಲ್ಲಿ ಏನೋ ಷಡ್ಯಂತ್ರವಿದೆ. ಆದ್ದರಿಂದ ಪೊಲೀಸರು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ನೇಹಾ ತಂದೆ ಪಾಲಿಕೆ ಸದಸ್ಯ ನಿರಂಜನ ಹಿರೇಮಠ ಆಗ್ರಹಿಸಿದ್ದಾರೆ. ಈ ಕುರಿತು ವಿಡಿಯೊ ಹೇಳಿಕೆ ನೀಡಿರುವ ಅವರು, ಇವರ ಷಡ್ಯಂತ್ರದಿಂದ ನನ್ನ ಮಗಳು ಕೊಲೆಯಾಗಿದ್ದಾಳೆ. ಆದರೆ, ಎಸ್‌ಎಸ್‌ಕೆ ಸಮಾಜ ಎಚ್ಚೆತ್ತುಕೊಂಡು ತಮ್ಮ ಹೆಣ್ಣು ಮಗಳನ್ನು ರಕ್ಷಿಸಿಕೊಂಡಿದೆ. ಈ ಪ್ರಕರಣ ಗಮನಿಸಿದರೆ, ಇದರ ಹಿಂದೆ ದೊಡ್ಡ ಜಾಲವಿರುವ ಸಂಶಯವಿದೆ ಎಂದು ತಿಳಿಸಿದರು. ಸಮೀರ್ ಕುಟುಂಬದವರೆಲ್ಲರನ್ನೂ ತನಿಖೆಗೆ ಒಳಪಡಿಸಿ ಸತ್ಯ ಹೊರ ಹಾಕಬೇಕು. ಕೂಲಂಕುಷ ತನಿಖೆಗೆ ಎಸ್‌ಐಟಿಗೆ ವಹಿಸಬೇಕು. ರಾಜ್ಯ ಸರ್ಕಾರದಿಂದ ಪ್ರಾಮಾಣಿಕ ತನಿಖೆ ಸಾಧ್ಯವಿಲ್ಲ. ರಾಜಕಾರಣಿಗಳ ಸುಪಾರಿಯಿಂದಲೇ ನೇಹಾ ಕೊಲೆಯಾಗಿದ್ದು, ಕಾಂಗ್ರೆಸ್ ಮುಖಂಡರ ಕೈವಾಡವೂ ಅದರಲ್ಲಿದೆ ಎನ್ನುವ ಆರೋಪ ಕೇಳಿಬರುತ್ತಿದೆ. ಅಂತಹ ಜನಪ್ರತಿನಿಧಿಗಳನ್ನು, ಶಾಸಕರನ್ನು ಪಕ್ಷದಿಂದ ಉಚ್ಚಾಟನೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ದಿ.ಮೇಟಿ ಜನಪರ ಕಾರ್ಯಗಳೇ ಗೆಲುವಿಗೆ ಶ್ರೀರಕ್ಷೆ: ಪರಮೇಶ್ವರ



ಬಾಗಲಕೋಟೆ: ದಿ.ಎಚ್.ವೈ.ಮೇಟಿ ಅವರ ಅಭಿವೃದ್ಧಿ ಕಾರ್ಯಗಳೇ ಕಾಂಗ್ರೆಸ್ ಗೆಲುವಿಗೆ ಶ್ರೀರಕ್ಷೆಯಾಗಲಿವೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ನಗರದ ವಿದ್ಯಾಗಿರಿ, ನವನಗರ ಭಾಗಗಳಲ್ಲಿ ಸೋಮವಾರ ಪ್ರಚಾರ ನಡೆಸಿದ ಅವರು, ಜನಪರ ಕಾರ್ಯಗಳಿಂದ ಮೇಟಿ ಅವರು ಈ ಭಾಗದಲ್ಲಿ ಕಾಂಗ್ರೆಸ್ ಪಕ್ಷವನ್ನು ಗಟ್ಟಿಗೊಳಿಸಿದ್ದಾರೆ. ಅವರು ಕೈಗೊಂಡ ಕಾರ್ಯಗಳಿಗೆ ಅಪಾರ ಜನ ಬೆಂಬಲ ವ್ಯಕ್ತವಾಗುತ್ತಿದೆ. ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಗೆಲುವು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನವನಗರ ಮೂರನೇ ಯುನಿಟ್ ಯೋಜನೆ ಸೇರಿದಂತೆ ಸಮಗ್ರ ಅಭಿವೃದ್ಧಿಗೆ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರನ್ನು ಬೆಂಬಲಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ನಗರದ ಪದ್ಮನಯನನಗರದಲ್ಲಿ ಸೋಮವಾರ ಬೆಳಗ್ಗೆ ಕಾಂಗ್ರೆಸ್ ಮುಖಂಡರೊಂದಿಗೆ ಪ್ರಚಾರ ನಡೆಸಿ ಅವರು ಮಾತನಾಡಿದರು. ಈ ಭಾಗದ ಜನತೆ ಅನುಕೂಲಕ್ಕಾಗಿ ಎಚ್.ವೈ.ಮೇಟಿ ಅವರು ವೈದ್ಯಕೀಯ ಮಹಾವಿದ್ಯಾಲಯದ ಕನಸು ಕಂಡಿದ್ದರು. ಈ ಕಾರ್ಯ ಯಶಸ್ವಿಯಾಗಿ ಪೂರ್ಣವಾಗಲು ಅವರ ಪುತ್ರ ಉಮೇಶ ಮೇಟಿ ಅವರ ಕೈ ಬಲಪಡಿಸಬೇಕು ಎಂದರು.

ಸಚಿವ ಡಾ.ಎಸ್.ಸಿ.ಮಹಾದೇವಪ್ಪ, ಮಹೇಶ ತಮ್ಮಣ್ಣವರ, ಎಂ.ಎಚ್. ಚಲವಾದಿ, ಪರಶುರಾಮ ನೀಲನಾಯಕ, ಎ.ಡಿ.ಮೊಕಾಶಿ, ಅಂಬು ಚಲವಾದಿ, ಚಂದ್ರಶೇಖರ ಸನ್ನಿ ಇತರರು ಇದ್ದರು.

ಪೊಲೀಸ್ ಆಯುಕ್ತ ಎನ್.ಶಶಿಕುಮಾರ ಎಚ್ಚರಿಕೆ

ಸುರಕ್ಷತೆ ನಿಯಮ ಪಾಲಿಸದಿದ್ದರೆ ಜಿಮ್ ಲೈಸೆನ್ಸ್ ರದ್ದು

ಹುಬ್ಬಳ್ಳಿ: ಜಿಲ್ಲೆಯಲ್ಲಿ 150 ಜಿಮ್‌ಗಳಿವೆ. ಕೆಲವು ಜಿಮ್‌ಗಳಲ್ಲಿ ಸುರಕ್ಷತೆ ಪಾಲನೆಯಾಗುತ್ತಿಲ್ಲ ಎನ್ನುವ ಆರೋಪವಿದೆ. ಅನಧಿಕೃತ ವ್ಯಕ್ತಿಗಳನ್ನು ಕೂರಿಸಿಕೊಂಡು ಜಿಮ್‌ಗಳನ್ನು ಅಡ್ಡೆ ಮಾಡಿಕೊಂಡರೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಜೊತೆಗೆ ಜಿಮ್ ಲೈಸನ್ಸ್ ರದ್ದು ಮಾಡಲಾಗುವುದು ಎಂದು ಹು-ಧಾ ಮಹಾನಗರ ಪೊಲೀಸ್ ಆಯುಕ್ತ ಎನ್.ಶಶಿಕುಮಾರ ಎಚ್ಚರಿಕೆ ನೀಡಿದರು.

ಸೋಮವಾರ ಇಲ್ಲಿನ ಕೆಎಲ್‌ಇ ಬಿವಿಬಿ ತಾಂತ್ರಿಕ ಮಹಾವಿದ್ಯಾಲಯದ ಬಯೋಟೆಕ್ ಸಭಾಂಗಣದಲ್ಲಿ ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮೀಷನರೇಟ್ ವತಿಯಿಂದ ಧಾರವಾಡ ಜಿಲ್ಲೆಯ ಜಿಮ್‌ಗಳ ಮಾಲೀಕರ ಹಾಗೂ ತರಬೇತುದಾರರ ಸಭೆಯಲ್ಲಿ ಮಾತನಾಡಿದರು.

ಜಿಮ್‌ಗಳಲ್ಲಿ ಮಾಲೀಕರು ಹಾಗೂ ತರಬೇತುದಾರರು ಬಹಳಷ್ಟು ಶಿಸ್ತು ಪಾಲಿಸಿದರೂ ಯಾರೋ ಮಾಡಿದ ತಪ್ಪಿಗೆ ಇಡೀ ಜಿಮ್‌ಗಳ ಮೇಲೆ ಕೆಟ್ಟ ಹೆಸರು ಬರುತ್ತಿದೆ. ಇತ್ತಿಚೆಗೆ ಯುವತಿ ಮೇಲೆ ನಡೆದ ಘಟನೆಯಿಂದ ಜಿಮ್ ಮೇಲಿನ ಒಳ್ಳೆಯ ಅಭಿಪ್ರಾಯ ಇಲ್ಲವಾಗಿದೆ. ಹೀಗಾಗಿ ಜಿಮ್ ಮಾಲೀಕರು ಎಚ್ಚರ ವಹಿಸಬೇಕು ಎಂದರು.



ಜಿಮ್ ಮಾಲೀಕರು ಕಡ್ಡಾಯವಾಗಿ ನಿಯಮಗಳ ಪಾಲಿಸಬೇಕು. ವಿಡಿಯೋ ಮತ್ತು ಆಡಿಯೋ ಗುಣಮಟ್ಟವುಳ್ಳ ಸಿಸಿಟಿವಿ ಅಳವಡಿಸಬೇಕು. ವಿಡಿಯೋ ದೃಶ್ಯಗಳ ಪೂರ್ಣ ಸ್ಟೋರೇಜ್ ಇಟ್ಟುಕೊಳ್ಳಬೇಕು. ಪೂರ್ವಪರ ವಿಚಾರಣೆ ಮಾಡಿ ಜಿಮ್ ತರಬೇತುದಾರರ ನೇಮಕ ಮಾಡಿಕೊಳ್ಳಬೇಕು. ಅವರ ನೇಮಕದ ವೇಳೆ ಪೊಲೀಸರಿಂದ ಪರಿಶೀಲನೆ ಕಾರ್ಯ ನಡೆಯಬೇಕು. ಜಿಮ್ ಮಾಲೀಕರು ಸೇರಿ ಸಿಬ್ಬಂದಿಗಳ ಪೂರ್ಣ ವಿವರನ್ನು ಜಿಮ್‌ನಲ್ಲಿ ಹಾಕಬೇಕು ಎಂದು ಸೂಚಿಸಿದರು.

ಪೊಲೀಸರು ಇನ್ನು ಮೇಲೆ ವಿಶೇಷವಾಗಿ ಭೇಟಿ ಮಾಡಿ ತನಿಖೆ ನಡೆಸಲಾಗುವುದು. ಮಹಿಳಾ ಸದಸ್ಯರ ಸುರಕ್ಷತೆ ಕಾಪಾಡಬೇಕು. ಅನುಮತಿ ಇಲ್ಲದೇ ಮಹಿಳೆಯರ ಫೋಟೋ, ವಿಡಿಯೋ ತೆಗೆಯಬಾರದು. ಅಪರಾಧಿಕ ಚಟುವಟಿಕೆಯುಳ್ಳವರ ಬಗ್ಗೆ ಮಾಹಿತಿ ನೀಡಬೇಕು ಎಂದು ಸೂಚಿಸಿದರು.

ಹು-ಧಾ ಮಹಾನಗರ ಪಾಲಿಕೆ ಆಯುಕ್ತ ಡಾ.ರುದ್ರೇಶ ಘಾಳಿ ಮಾತನಾಡಿ, ಕಡ್ಡಾಯವಾಗಿ ಜಿಮ್ ನೋಂದಣಿ ಮಾಡಿಕೊಳ್ಳಬೇಕು. ಜಿಮ್‌ನಲ್ಲಿ ಕೊಡುವ ಪ್ರೋಟಿನ್‌ಗಳ ಪ್ರಮಾಣದಲ್ಲಿ ಹೆಚ್ಚಾದರೆ, ದೈಹಿಕ ಆರೋಗ್ಯಕ್ಕೆ ತೊಂದರೆಯಾಗಲಿದೆ. ಹೀಗಾಗಿ ಪ್ರೋಟಿನ್ ಕೊಡುವಲ್ಲಿ ನಿಯಮ ಮೀರಬಾರದು. ಒಂದು ವೇಳೆ ನಿಯಮ ಮೀರಿದ್ದು, ಕಂಡು ಬಂದರೆ ಲೈಸೆನ್ಸ್ ರದ್ದು ಮಾಡಲಾಗುವುದು. ಪ್ರತಿಯೊಬ್ಬರು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಎಂದರು.

ಡಿಸಿಪಿಗಳಾದ ರವೀಶ್ ಸಿ.ಆರ್., ಶೃತಿ ಎನ್., ಕೆಎಂಸಿಆರ್‌ಐ ಆಡಳಿತಾಧಿಕಾರಿ ಡಾ.ರಾಜಶೇಖರ್ ದ್ಯಾಬೇರಿ, ಧಾರವಾಡ ಜಿಲ್ಲಾ ಬಾಡಿ ಬಿಲ್ಡರ್ಸ್ ಅಸೋಸಿಯೇಷನ್ ಅಧ್ಯಕ್ಷ ಸಲೀಂ ಗೌರ್, ಕೃಷ್ಣ ಚಿಕ್ಕತುಂಬಳ ಸೇರಿದಂತೆ ನೂರಾರು ಜಿಮ್ ಮಾಲೀಕರು, ಟ್ರೈನರ್‌ಗಳು ಇದ್ದರು.

ಬೆದರಿಕೆ ಹಾಕಿ ನನ್ನಿಂದ ಹೇಳಿಕೆ ನೀಡಿಸಿದ್ದಾರೆ: ಸಂತ್ರಸ್ತೆ

ಹುಬ್ಬಳ್ಳಿ: ನನ್ನ ಮೇಲೆ ದೌರ್ಜನ್ಯ ನಡೆಸಿದ ಕೆಲವು ಫೋಟೋ ಹಾಗೂ ವಿಡಿಯೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದಾಗಿ ಬೆದರಿಕೆ ಹಾಕಿ ನನ್ನಿಂದ ಹೇಳಿಕೆ ನೀಡಿಸಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಮಾಡಿದ್ದಾರೆ. ಇದರ ಹಿಂದೆ ಕಾಂಗ್ರೆಸ್ ಯುವ ಮುಖಂಡರೊಬ್ಬರ ಕೈವಾಡವಿದೆ ಎಂದು ಸಂತ್ರಸ್ತೆ ಯುವತಿ ಆರೋಪಿಸಿದಳು.

ಮುಫೀಜ್ ವಿರುದ್ಧ ಪ್ರಕರಣ ದಾಖಲಿಸುಲು ನನ್ನ ಒಪ್ಪಿಗೆ ಇರಲಿಲ್ಲ, ಕೆಲವರು ಬಲವಂತವಾಗಿ ಪ್ರಕರಣ ದಾಖಲಿಸುವಂತೆ ಮಾಡಿದ್ದರು ಎಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ವಿಡಿಯೋ ಕುರಿತು ಸಂತ್ರಸ್ತ ಯುವತಿ ಸ್ಪಷ್ಟೀಕರಣ ನೀಡಿದ್ದಾಳೆ.

ಸೋಮವಾರ ಈ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಯುವತಿ, ಮುಫೀಜ್ ವಿರುದ್ಧ ಪ್ರಕರಣ ದಾಖಲಿಸುವಂತೆ ಯಾರು ಸಹ ನನಗೆ ಒತ್ತಡ ಹೇರಿಲ್ಲ, ಸ್ವತಃ ನಾನೇ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇನೆ. ನನಗೆ ಅನ್ಯಾಯವಾಗಿದ್ದು, ಪೊಲೀಸ್ ಇಲಾಖೆ ನ್ಯಾಯ ಕೊಡಿಸಬೇಕು ಎಂದು ಆಗ್ರಹಿಸಿದ್ದೇನೆ ಎಂದಳು.

ಕಳೆದ ಐದು ವರ್ಷದ ಹಿಂದೆ ಕಾಲೇಜ್‌ವೊಂದರ ಸಮಾರಂಭದಲ್ಲಿ ಪರಿಚಯವಾದ ಮುಫೀಜ್ ಪ್ರೀತಿಯ ನಾಟಕವಾಡಿ ನನ್ನ ಮೇಲೆ ದೌರ್ಜನ್ಯ ನಡೆಸಿದ್ದಾನೆ. ಕಳೆದ ಆರು ತಿಂಗಳ ಹಿಂದೆ ದೌರ್ಜನ್ಯ ವೆಸಗಿದ ಫೋಟೋ ಹಾಗೂ ವಿಡಿಯೋಗಳ ಸೋಶಿಯಲ್ ಮಿಡಿಯಾದಲ್ಲಿ ಹಾಕುವುದಾಗಿ ಹೆದರಿಸಿ ನಮ್ಮ ಕುಟುಂಬ ಹಾಗೂ ಹಿಂದು ಮುಖಂಡರ ವಿರುದ್ಧ ಹೇಳಿಕೆ ನೀಡಿದ ವಿಡಿಯೋ ಮಾಡಿಸಿಕೊಂಡಿದ್ದರು. ಈಗ ಅದೇ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುವ ಮೂಲಕ ಪ್ರಕರಣದ ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಯುವಕ ಮುಫೀಜ್ ಹಾಗೂ ಆತನ ಕುಟುಂಬಸ್ಥರು ನನಗೆ ಮದುವೆ ಆಗುವಂತೆ ಒತ್ತಾಯ ಮಾಡಿದ್ದರು. ಇನ್‌ಸ್ಟಾಗ್ರಾಂನಲ್ಲಿ ಮೆಸೇಜ್ ಮಾಡಿದ್ದ. ಯುವಕ ನನಗೆ ಪ್ರೀತಿ ಮಾಡುವಂತೆ ಪೀಡಿಸುತ್ತಿದ್ದ. ಅಷ್ಟೇ ಅಲ್ಲದೇ ಪ್ರೀತಿ ಮಾಡುವಂತೆ ತಲೆ ಕೆಡಿಸಿದ್ದ. ನನಗೆ ಜೀವ ಬೆದರಿಕೆ ಇದೆ. ಇದರಲ್ಲಿ ಅಲ್‌ತಾಜ್ ಹೋಟೆಲ್ ಮಾಲೀಕರ ಕೈವಾಡವಿದೆ ಎಂದು ತಿಳಿಸಿದರು.

ಲೋಕಾಯುಕ್ತ ಬಲೆಗೆ ಕುಮಸಿ ಬಿಲ್ ಕಲೆಕ್ಟರ್ ಮಲ್ಲಿಕಾರ್ಜುನ

ಕಲಬುರಗಿ: ಗ್ರಾಮ ಪಂಚಾಯತ್ ಕಚೇರಿಯಲ್ಲಿ ಕೆಲಸಕ್ಕೆ ಲಂಚ ಬೇಡಿಕೆ ಇಟ್ಟಿದ್ದ ಬಿಲ್ ಕಲೆಕ್ಟರ್‌ನನ್ನು ಕರ್ನಾಟಕ ಲೋಕಾಯುಕ್ತ ಪೊಲೀಸರು ಬಲೆ ಬೀಸಿ ಬಂಧಿಸಿರುವ ಘಟನೆ ಕಲಬುರಗಿ ಜಿಲ್ಲೆಯಲ್ಲಿ ನಡೆದಿದೆ.

ಕುಮಸಿ ಗ್ರಾಮ ಪಂಚಾಯತ್‌ನ ಬಿಲ್ ಕಲೆಕ್ಟರ್ ಮಲ್ಲಿಕಾರ್ಜುನ ವಿರುದ್ಧ ಈ ಪ್ರಕರಣ ದಾಖಲಾಗಿದೆ. ದೂರುದಾರರಾದ ಅನೀಲಕುಮಾರ ರಾಠೋಡ (ಗಣಜಲಖೇಡ ಗ್ರಾಮ) ನೀಡಿದ ದೂರಿನ ಪ್ರಕಾರ, ತಮ್ಮ ತಂದೆಯ ಹೆಸರಿನಲ್ಲಿದ್ದ ಜಾಗವನ್ನು ತಾಯಿಯ ಹೆಸರಿಗೆ ಮೊಟೇಶನ್ ಮಾಡಿ ಕೊಡಲು ಮಲ್ಲಿಕಾರ್ಜುನ ಅವರು 4 ಸಾವಿರ ಲಂಚ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ. ಈ ಪೈಕಿ ಪ್ರಾಥಮಿಕವಾಗಿ 2 ಸಾವಿರ ರೂಪಾಯಿ ಫೋನ್ ಪೇ ಮೂಲಕ ಪಡೆದಿರುವುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ. ಬಳಿಕ ಉಳಿದ ಹಣ ಪಡೆಯುವ ವೇಳೆ ಲೋಕಾಯುಕ್ತ ಅಧಿಕಾರಿಗಳು ಬಲೆ ಬೀಸಿ ಆರೋಪಿಯನ್ನು ಬಂಧಿಸಿದ್ದಾರೆ.

ಪೊಲೀಸ್ ಅಧೀಕ್ಷಕ ಸಿದ್ಧರಾಜು ಸಿ.ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದಿದ್ದು, ಲೋಕಾಯುಕ್ತ ತನಿಖಾಧಿಕಾರಿ ಪೊಲೀಸ್ ಇನ್‌ಸ್ಪೆಕ್ಟರ್ ರಾಜಶೇಖರ ಬಡದೇಸಾರ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ. ಪ್ರಕರಣ ಸಂಬಂಧ ಕುಮಸಿ ಗ್ರಾಮ ಪಂಚಾಯತ್ ಕಚೇರಿಯಲ್ಲಿ ಅಗತ್ಯ ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ಆರೋಪಿಯನ್ನು ಬಂಧಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಜ್ಯೋತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘಕ್ಕೆ

2.1 ಕೋಟಿ ರೂ. ನಿವ್ವಳ ಲಾಭ: ಜೊಲ್ಲೆ

ಚಿಕ್ಕೋಡಿ: ಯಕ್ಸಂಬಾ ಪಟ್ಟಣದಲ್ಲಿ ಮುಖ್ಯ ಶಾಖೆಯನ್ನು ಹೊಂದಿರುವ ಜ್ಯೋತಿವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ಸಂಘ 2025-26ನೇ ಆರ್ಥಿಕ ವರ್ಷದಲ್ಲಿ ರೂ. 2.1 ಕೋಟಿ ನಿವ್ವಳ ಲಾಭ ಗಳಿಸಿದೆ ಎಂದು ಜೊಲ್ಲೆ ಗ್ರೂಪ್ ಉಪಾಧ್ಯಕ್ಷ, ಸಂಘದ ನಿರ್ದೇಶಕ ಬಸವಪ್ರಸಾದ ಜೊಲ್ಲೆ ಹೇಳಿದರು.

ತಾಲೂಕಿನ ಯಕ್ಸಂಬಾ ಪಟ್ಟಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೊಲ್ಲೆ ಗ್ರೂಪ್‌ನ ಅಂಗ ಸಂಸ್ಥೆಗಳಲ್ಲೊಂದಾದ ಜ್ಯೋತಿ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ಸಂಘ 52426 ಸದಸ್ಯರನ್ನು ಹೊಂದಿದ್ದು, ರೂ. 2.79 ಕೋಟಿ ಶೇರು ಬಂಡವಾಳ ಹೊಂದಿದೆ. ರೂ. 13.21 ಕೋಟಿ ಕಾಯಿದ್ದಿಟ್ಟ ಹಾಗೂ ಇತರೆ ನಿಧಿಗಳಿದ್ದು, ರೂ. 424.67 ಕೋಟಿ ಠೇವಣಿ ಹೊಂದಿದ ಹೆಮ್ಮೆ ಇದೆ ಎಂದರು.

ರೂ. 254.25 ಕೋಟಿ ಸಾಲ ಮತ್ತು ಮುಂಗಡಗಳಿದ್ದು, ರೂ. 136.96 ಕೋಟಿ ಬ್ಯಾಂಕ್ ಬ್ಯಾಲೆನ್ಸ್ ಮತ್ತು ಹೂಡಿಕೆ ಹೊಂದಲಾಗಿದೆ. ರೂ. 440.68 ಕೋಟಿ ದುಡಿಯುವ ಬಂಡವಾಳ ಇದೆ. ರೂ. 726.44 ಕೋಟಿ ಬ್ಯುಸಿನೆಸ್ ಟರ್ನವೋವರ್ ಇದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 82 ಶಾಖೆಗಳನ್ನು ಹೊಂದಿದ್ದು, ಪ್ರಸಕ್ತ ಸಾಲಿನಲ್ಲಿ ಹಾರೂಗೇರಿ, ಅಥಣಿ, ಜಾಗನೂರ, ಚುಂಚನೂರ, ಎಲಿಮುನ್ನೋಳ್ಳಿ, ಖನದಾಳ ಸೇರಿದಂತೆ 6 ಹೊಸ ಶಾಖೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜೊಲ್ಲೆ ಗ್ರೂಪ್‌ನ ಪ್ರಮುಖ ಜ್ಯೋತಿಪ್ರಸಾದ ಜೊಲ್ಲೆ, ಸಂಘದ ಅಧ್ಯಕ್ಷ ಬಾಬುರಾವ ಮಾಳಿ, ಉಪಾಧ್ಯಕ್ಷ ವಿಶ್ವನಾಥ ಪೇಟಕರ, ನಿರ್ದೇಶಕರಾದ ಜಗದೀಶ ಹಿಂಗ್ಲಜೆ, ಜಗದೀಶ ಜಾಧವ, ರಾವಸಾಬ ಬಾಕಳೆ, ಕಲ್ಲಪ್ಪ ನಾಯಿಕ, ಬಾಳಸಾಬ ಶಿಂಧೆ, ಸವಿತಾ ಉಂದುರೆ, ಕೃಷ್ಣಪ್ಪ ಪೂಜಾರಿ, ಆನಂದ ಗಿಡ್ಡ, ಲಕ್ಷ್ಮಣ ಪ್ರಭಾತ, ಅಮೃತ ಖೋತ, ಪ್ರದಾನ ವ್ಯವಸ್ಥಾಪಕ ಸಂತೋಷ ಪಾಟೀಲ, ಸಹಾಯಕ ಪ್ರಧಾನ ವ್ಯವಸ್ಥಾಪಕ ಮಹಾಂತೇಶ ಶಿರೋಳ, ತಾನಾಜಿ ಶಿಂಧೆ, ಸಂತೋಷ ಪೂಜಾರಿ ಇದ್ದರು.



ಚರಂತಿಮಠ ಪರ ನಿರಾಣಿ, ರಾಮುಲು ಮತಯಾಚನೆ

ಬಾಗಲಕೋಟೆ: ವಿಧಾನಸಭಾ ಉಪಚುನಾವಣೆಯ ಹಿನ್ನೆಲೆಯಲ್ಲಿ ಬಿಜೆಪಿ ಅಭ್ಯರ್ಥಿಯಾದ ವೀರಣ್ಣ ಚರಂತಿಮಠ ಪರವಾಗಿ ಮನ್ನಿಕಟ್ಟಿ ಗ್ರಾಮದಲ್ಲಿ ಉತ್ಸಾಹ ಭರಿತವಾಗಿ ಮಾಜಿ ಸಚಿವರು ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷ ಡಾ.ಮುರುಗೇಶ ನಿರಾಣಿ ಮತ್ತು ಮಾಜಿ ಸಚಿವರಾದ ಶ್ರೀರಾಮುಲು ಅವರು ನೂರಾರು ಕಾರ್ಯಕರ್ತರೊಂದಿಗೆ ಬೈಕ್ ರ‍್ಯಾಲಿ ಮೂಲಕ ಗ್ರಾಮ ಪ್ರವೇಶಿಸಿ ಮತಯಾಚಿಸಿದರು. ನಂತರ ನಡೆದ ಪ್ರಚಾರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ನಾಯಕರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅಭಿವೃದ್ಧಿ ಪರ ಕೆಲಸಗಳನ್ನು ವಿವರಿಸಿ, ಬಾಗಲಕೋಟೆಯ ಸಮಗ್ರ ಅಭಿವೃದ್ಧಿಗೆ ಬಿಜೆಪಿ ಅಭ್ಯರ್ಥಿಗೆ ಆಶೀರ್ವಾದ ನೀಡುವಂತೆ ಮನವಿ ಮಾಡಿದರು. ಸಭೆಯ ನಂತರ ಮನೆ-ಮನೆಗೆ ಭೇಟಿ ನೀಡಿ ಮತಯಾಚನೆ ನಡೆಸಿ ಮತದಾರರೊಂದಿಗೆ ಆತ್ಮೀಯವಾಗಿ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಪಕ್ಷದ ಸ್ಥಳೀಯ ನಾಯಕರು, ಮುಖಂಡರು, ಗಣ್ಯರು ಹಾಗೂ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮಕ್ಕೆ ಮತ್ತಷ್ಟು ಚೈತನ್ಯ ಮತ್ತು ಬಲ ತುಂಬಿದರು.



ಮದುವೆಯಾಗುವುದಾಗಿ ಹೇಳಿ ವಂಚನೆ

19 ಲಕ್ಷ ನಗದು, ಚಿನ್ನಾಭರಣ ದೋಚಿದ ಯುವಕ

ಬೆಳಗಾವಿ: ಫೇಸ್‌ಬುಕ್‌ನಲ್ಲಿ ಪರಿಚಯನಾದ ಯುವಕನೊಬ್ಬ ಯುವತಿಗೆ ಪ್ರೀತಿಸುವುದಾಗಿ ಹೇಳಿ ಬಳಿಕ ಮದುವೆಯಾಗುವುದಾಗಿ ನಂಬಿಸಿ ಮೋಸ ಮಾಡಿದ್ದಲ್ಲದೇ, ಸುಮಾರು 19 ಲಕ್ಷ ನಗದು ಹಾಗೂ ಚಿನ್ನಾಭರಣ ದೋಚಿರುವ ಘಟನೆ ನಡೆದಿದೆ.



ಬೆಳಗಾವಿಯ ಶಹಾಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಸಂತ್ರಸ್ತ ಯುವತಿ ಕಮಿಷನರ್‌ಗೆ ದೂರು ನೀಡಿದ್ದಾಳೆ. ಈಶ್ವರಸಿಂಗ್ ಪ್ರೇಮಸಿಂಗ್ ಬಡಗೂಜರ್ ಎಂಬಾತ ಯುವತಿಗೆ ಫೇಸ್‌ಬುಕ್‌ನಲ್ಲಿ ಪರಿಚಯವಾಗಿದ್ದಾನೆ. ಬೆಳಗಾವಿಯ ಮಾಧವಾ ಕಾಲೋನಿ ನಿವಾಸಿ ಈತ ಎಂದು ತಿಳಿದುಬಂದಿದೆ.

ಇಬ್ಬರ ಪರಿಚಯದ ಬೆನ್ನಲ್ಲೇ ಈಶ್ವರ್ ಸಿಂಗ್ ಪ್ರೇಮ್ ಸಿಂಗ್ ಯುವತಿಗೆ ಪ್ರೇಮ ನಿವೇದನೆ ಮಾಡಿದ್ದಾನೆ. ಅಲ್ಲದೇ ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಪರ್ಕ ಬೆಳೆಸಿದ್ದಾನೆ. ಆಕೆಗೆ ಗೊತ್ತಾಗದಂತೆ ಖಾಸಗಿ ವಿಡಿಯೋಗಳನ್ನು ಮಾಡಿಕೊಂಡು ಬಳಿಕ ಬ್ಲ್ಯಾಕ್ ಮೇಲ್ ಮಾಡಲಾರಂಭಿಸಿದ್ದಾನೆ.

3 ಕೋಟಿ ರೂ. ಕೊಟ್ಟರೆ ಮಾತ್ರ ಮದುವೆ ಮಾಡಿಕೊಳ್ಳುವುದಾಗಿ ಬೇಡಿಕೆ

ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡುವುದಾಗಿ ಬೆದರಿಸಿ ಯುವತಿಯಿಂದ ಬರೋಬ್ಬರಿ 19 ಲಕ್ಷ ರೂ.ಹಣ ದೋಚಿದ್ದಾನೆ. ಸಂತ್ರಸ್ತೆಯ ತಾಯಿಯ ಚಿನ್ನ ಹಾಗೂ ತಂದೆಯ ಎಫ್‌ಡಿ ಹಣವನ್ನೂ ಈತ ಹಂತ ಹಂತವಾಗಿ ವಸೂಲಿ ಮಾಡಿದ್ದಾನಂತೆ.

ಸುಮಾರು 150 ಗ್ರಾಂ ಚಿನ್ನಾಭರಣ ಹಾಗೂ 19 ಲಕ್ಷ ರೂ.ಗಳನ್ನು ಗೂಗಲ್ ಪೇ ಮೂಲಕ ವರ್ಗಾಯಿಸಿಕೊಂಡಿದ್ದಾನೆ. ಇಷ್ಟೆಲ್ಲ ಆದ ಮೇಲೆ ಯುವಕನ ತಾಯಿ 3 ಕೋಟಿ ರೂ. ಕೊಟ್ಟರೆ ಮಾತ್ರ ಮದುವೆ ಮಾಡಿಕೊಳ್ಳುತ್ತೇನೆ ಎಂದು ಬೇಡಿಕೆ ಇಟ್ಟಿದ್ದ ಎಂದು ಸಂತ್ರಸ್ತೆಯ ತಾಯಿ ಹೇಳಿಕೊಂಡಿದ್ದಾಳೆ.

ಈ ವಿಚಾರದ ಬಗ್ಗೆ ಶಹಾಪುರ ಠಾಣೆಯಲ್ಲಿ ದೂರು ನೀಡಿದರೆ ಪೊಲೀಸರು ಆರೋಪಿ ಯುವಕ ಹಾಗೂ ಆತನ ಕುಟುಂಬದೊಂದಿಗೆ ಶಾಮೀಲಾಗಿದ್ದಾರೆ. ಬ್ಯಾಂಕ್‌ನಿಂದ ರಿಕವರಿ ಮಾಡಿದ್ದ ಚಿನ್ನವನ್ನು ಮರಳಿ ಯುವಕನಿಗೇ ಕೊಟ್ಟು ಕಳುಹಿಸಿದ್ದಾರೆ ಎಂದು ಯುವತಿ ದೂರುದ್ದಾಳೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ನಾಳೆ ವಾರ್ಷಿಕೋತ್ಸವ

ಗೋಕರ್ಣ: ಇಲ್ಲಿನ ಸ್ವರಶ್ರೀ ಸಂಗೀತ ವಿದ್ಯಾಲಯದ ವಾರ್ಷಿಕೋತ್ಸವ ಕಾರ್ಯಕ್ರಮ ಏ.8ರಂದು ಸಂಜೆ 4.30ಕ್ಕೆ ಕೋಟಿತೀರ್ಥಕಟ್ಟೆಯಲ್ಲಿರುವ ಶ್ರೀಮದಾಧ್ಯ ರಘೋತ್ತಮ(ಕೆಕ್ಕಾರ ಮಠ) ಮಠದಲ್ಲಿ ನಡೆಯಲಿದೆ. ಅತಿಥಿಗಳಾಗಿ ಹರಕಡೆ ಶಾಲೆಯ ಮುಖ್ಯ ಶಿಕ್ಷಕಿ ನಾಗಕುಮಾರಿ ಎನ್. ಉಪಾಧ್ಯಾಯ, ವಿಶೇಷ ಆಹ್ವಾನಿತರಾಗಿ ಪಂಡಿತ್ ವಿ. ಗೌರೀಶ ಯಾಜಿ, ಉದ್ಘಾಟಕರಾಗಿ ಶ್ರೀಲಕ್ಷ್ಮೀವೇಂಕಟೇಶ ಮಂದಿರದ ಅರ್ಚಕ ನಿಶಾಂತ ಜಠಾರ ಆಗಮಿಸಲಿದ್ದಾರೆ. ಶ್ರೀಭದ್ರಕಾಳಿ ಹಾಗೂ ಶ್ರೀಲಕ್ಷ್ಮೀವೇಂಕಟೇಶ ಮಂದಿರದ ಟ್ರಸ್ಟಿ ನಾರಾಯಣ ಉಪಾಧ್ಯಾಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಸಭಾ ಕಾರ್ಯಕ್ರಮದ ನಂತರ ಖ್ಯಾತ ಕಲಾವಿದರಿಂದ ಸಂಗೀತ ಕಾರ್ಯಕ್ರಮ ನಡೆಯಲಿದ್ದು,ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ನಾಳೆ ವಿದ್ಯುತ್ ವ್ಯತ್ಯಯ

ಕಾರವಾರ: ಕುಮಟಾ ಉಪವಿಭಾಗದ ಗೋಕರ್ಣ ಶಾಖೆಯ ಮಾದನಗೇರಿ 11ಕೆ.ವಿ ಕೇಬಲ್ ಬಿಚ್ಚಿ ಅಳವಡಿಸುವ ಕಾಮಗಾರಿಯು ಬಳಲೆ ಗ್ರಾಮದಲ್ಲಿ ಇರುವುದರಿಂದ ಅಂಕೋಲಾ ಉಪ-ವಿಭಾಗ ವ್ಯಾಪ್ತಿಯ ಬಳಲೆ, ದೇವಿಗದ್ದೆ, ಉಳವರೆ ವ್ಯಾಪ್ತಿಯ ಎಲ್ಲಾ ಭಾಗಗಳಲ್ಲಿ ಏ.8 ರ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕುಮಟಾ ಹೆಸ್ಕಾಂ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು(ವಿ) ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊನ್ನಾವರ: ವಿದ್ಯುತ್ ವ್ಯತ್ಯಯ

ಕಾರವಾರ: ಹೊನ್ನಾವರ ತಾಲೂಕಿನ ಗೇರುಸೊಪ್ಪ 33/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದ 33 ಕೆವಿ ಮಾರ್ಗ ನಿರ್ವಹಣಾ ಕೆಲಸ ಇರುವುದರಿಂದ ಮಾಗೋಡ, ಉಪ್ಪೋಣಿ ರೈಟ್, ಲೇಫ್ಟ್ ಹಾಗೂ ಕಾಲೋನಿ ಫೀಡರಗಳ ವ್ಯಾಪ್ತಿಗಳಲ್ಲಿ ಹಾಗೂ ಹೊನ್ನಾವರ ಉಪ ವಿಭಾಗದ ಗ್ರಾಮೀಣ ಶಾಖೆಯ ಸಾಲ್ಕೋಡ ಹಡಿನಬಾಳ, ಕಡ್ಲೆ ಮತ್ತು ಸುಬ್ರಮಣ್ಯ ಫೀಡರ್‌ನ 11 ಕೆ.ವಿ ವ್ಯಾಪ್ತಿಯಲ್ಲಿ ಏ.8 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೊನ್ನಾವರ ಹೆಸ್ಕಾಂ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು(ವಿ)ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಸಿದು ಬಿದ್ದು ಮಹಿಳೆ ಸಾವು

ಅಂಕೋಲಾ: ಶಾಲೆಯೊಂದರ ಅಮೃತ ಮಹೋತ್ಸವ ಸಮಾರಂಭದ ಪ್ರಯುಕ್ತ ಆಯೋಜಿಸಿದ್ದ ಸಂಗೀತ ಖುರ್ಚಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯೋರ್ವರು ಆಟ ಆಡುತ್ತಿರುವ ಸಂದರ್ಭದಲ್ಲಿ ಕುಸಿದು ಬಿದ್ದು ಮೃತಪಟ್ಟ ಘಟನೆ ತಾಲೂಕಿನ ಅಗ್ರಗೋಣ ಬೈಲಕೇರಿಯಲ್ಲಿ ನಡೆದಿದೆ.

ಬೈಲಕೇರಿ ನಿವಾಸಿ ಗೌರಿ ಕುಸ್ಲು ಗೌಡ(48) ಮೃತ ದುರ್ದೈವಿಯಾಗಿದ್ದು ಬೈಲಕೇರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆರಂಭವಾಗಿ 75 ವರ್ಷ ಪೂರ್ಣಗೊಂಡ ಪ್ರಯುಕ್ತ ಅಮೃತ ಮಹೋತ್ಸವ ಸಮಾರಂಭದ ಅಂಗವಾಗಿ ವಿವಿಧ ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.ಮಹಿಳೆಯರಿಗಾಗಿ ನಡೆದ ಸಂಗೀತ ಖುರ್ಚಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಗೌರಿ ಗೌಡ ಆಟವಾಡುತ್ತಿದ್ದ ಸಂದರ್ಭದಲ್ಲಿ ಏಕಾಏಕಿ ಕುಸಿದು ಬಿದ್ದಿದ್ದು ಗ್ರಾಮಸ್ಥರು ಸೇರಿ ಮಾತನಾಡಿಸಿದರೂ ಪ್ರತಿಕ್ರಿಯೆ ನೀಡದೇ ಇರುವುದರಿಂದ ತಕ್ಷಣ ಗೋಕರ್ಣ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದಾಗ ಪರೀಕ್ಷೆ ನಡೆಸಿದ ವೈದ್ಯರು ಆಕೆ ಮೃತಪಟ್ಟಿರುವುದಾಗಿ ದೃಢೀಕರಿಸಿರುವುದಾಗಿ ತಿಳಿದು ಬಂದಿದೆ ಈ ಕುರಿತಂತೆ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	55199	72119
ಬಿಳಿಗೋಟು	29019	42699
ಕೆಂಪುಗೋಟು	24019	35223
ಬೆಟ್ಟೆ	34896	49609
ರಾಶಿ	49699	53499
ಚಾಲಿ	45009	50001
ಬಿ.ಕಾಳುಮೆಣಸು	80809	83005

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	60179	60179
ರಾಶಿ	48800	57369
ಬೆಟ್ಟೆ	36969	50999
ಕೆಂಪುಗೋಟು	18099	38969
ಬಿಳಿಗೋಟು	13009	38499
ಚಾಲಿ	38899	50009
ಕೋಕಾ	16000	33410
ಕಾಳುಮೆಣಸು	50011	67211



ಕಾರವಾರ: ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ನಿವಾಸಕ್ಕೆ ಶಿರಸಿ ನಗರಸಭೆ ಪೌರಾಯುಕ್ತ ಪ್ರಕಾಶ ಎಂ ಚನ್ನಪ್ಪನವರ ಹಾಗೂ ಸಿಬ್ಬಂದಿಗಳು ಮತ್ತು ತಹಶೀಲ್ದಾರ ಕಚೇರಿ ಸಿಬ್ಬಂದಿಗಳು ಸೋಮವಾರ ಭೇಟಿ ನೀಡಿ ಸ್ವಯಂ ಮನೆ ಗಣತಿ ಮಾಡಲಾಯಿತು.

ವಿ.ಎಚ್. ನಾಯ್ಕಗೆ ಆತ್ಮೀಯ ಬೀಳ್ಕೊಡುಗೆ

ಹೊನ್ನಾವರ: ವೃತ್ತಿ ಜೀವನದ ಸಾರ್ಥಕತೆಯು ನಿವೃತ್ತಿಯ ಅಂಚಿನಲ್ಲಿ ತಿಳಿಯುತ್ತದೆ, ಶಿಕ್ಷಕ ವೃತ್ತಿಯು ಪವಿತ್ರ ಹಾಗೂ ಸುಮಧುರ ವೃತ್ತಿಯಾಗಿದೆ ಎಂದು ಎಂ.ಎಸ್. ಹೆಗಡೆ ಗುಣವಂತೆಯವರು ಹೇಳಿದರು.

ಗುಣವಂತೆಯ ಕರಾವಳಿ ಪ್ರೌಢಶಾಲೆಯಲ್ಲಿ ಜರುಗಿದ ನಿವೃತ್ತ ಮುಖ್ಯ ಶಿಕ್ಷಕ ವಿ.ಎಚ್. ನಾಯ್ಕ ರವರ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು, ಶಿಕ್ಷಕ ವೃತ್ತಿಯು ಜ್ಞಾನವನ್ನು ನೀಡುವ ಮತ್ತು ಪಡೆಯುವ ವೃತ್ತಿಯಾಗಿದೆ, ವಿದ್ಯಾರ್ಥಿಗಳ ಹಾಗೂ ಪಾಲಕರ ಮನೆಗೆದ್ದಾಗ ಶಿಕ್ಷಕರು ಪ್ರಜ್ವಲಿಸುತ್ತಾರೆ, ಕೀರ್ತಿವಂತರಾಗುತ್ತಾರೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನಿವೃತ್ತ ಮುಖ್ಯ ಶಿಕ್ಷಕ ವಿ.ಎಚ್. ನಾಯ್ಕ ಮಾತನಾಡಿ, ಶಿಕ್ಷಕ ವೃತ್ತಿಯು ನನಗೆ ಸಮಾಧಾನವನ್ನು ನೀಡಿದೆ, ಗೌರವ ಮತ್ತು ಜ್ಞಾನವನ್ನು ಹೆಚ್ಚಿಸಿದೆ,ಇಲ್ಲಿಯ ಅನುಭವವು ಸದಾ ಸ್ಮರಣೀಯವಾಗಿದೆ ಎಂದರು.

ಕೆಳಗನೂರು ಮಂಡಳ ಪಂಚಾಯತ್ ಮಾಜಿ ಅಧ್ಯಕ್ಷ ಶಿವಾನಂದ ಗೌಡ ಅಡಿಮನೆ, ನಿವೃತ್ತ ಮುಖ್ಯ ಶಿಕ್ಷಕರಾದ ಎಂ.ಹೆಚ್. ನಾಯ್ಕ, ಮಂಜುನಾಥ ಶೆಟ್ಟಿ, ಅನಿತಾ ನಾಯ್ಕ ಮೊದಲಾದವರು ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಮುಖ್ಯ ಶಿಕ್ಷಕ ಎಸ್.ವಿ. ಕಾಣೆಕರ್ ಪ್ರಾಸ್ತಾವಿಕವಾಗಿ ಮಾತನಾಡಿದರು, ಶಿಕ್ಷಕರಾದ ಪಿ.ಜಿ. ಲಿಂಗೋಜಿ ಸ್ವಾಗತಿಸಿದರು .ಜಿ.ಎಸ್. ಗೌಡ ವಂದಿಸಿದರು, ಎಸ್.ಆರ್. ಪೂಜಾರಿ ನಿರ್ವಹಿಸಿದರು. ನಾಗರಿಕರು,ವಿದ್ಯಾರ್ಥಿಗಳು, ಪಾಲಕರು ಉಪಸ್ಥಿತರಿದ್ದರು.



ಹೊನ್ನಾವರ: ಗುಣವಂತೆಯ ಕರಾವಳಿ ಪ್ರೌಢಶಾಲೆಯಲ್ಲಿ ಜರುಗಿದ ನಿವೃತ್ತ ಮುಖ್ಯ ಶಿಕ್ಷಕ ವಿ.ಹೆಚ್. ನಾಯ್ಕ ರವರ ಬೀಳ್ಕೊಡುಗೆ ಸಮಾರಂಭ ನಡೆಯಿತು. ಎಂ. ಎಸ್. ಹೆಗಡೆ ಗುಣವಂತೆ, ಕೆಳಗನೂರು ಮಂಡಳ ಪಂಚಾಯತ್ ಮಾಜಿ ಅಧ್ಯಕ್ಷ ಶಿವಾನಂದ ಗೌಡ ಅಡಿಮನೆ, ನಿವೃತ್ತ ಮುಖ್ಯ ಶಿಕ್ಷಕರಾದ ಎಂ.ಹೆಚ್. ನಾಯ್ಕ, ಮಂಜುನಾಥ ಶೆಟ್ಟಿ, ಅನಿತಾ ನಾಯ್ಕ ಮತ್ತಿತರರು ಇದ್ದರು.

ಬಿಜೆಪಿ ಸಂಸ್ಥಾಪನಾ ದಿನಾಚರಣೆ | ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಸಲಹೆ

ವಿಕಸಿತ ಭಾರತಕ್ಕಾಗಿ ಸಂಕಲ್ಪ ಮಾಡಿ

ಶಿರಸಿ: ಭಾರತೀಯ ಜನತಾ ಪಕ್ಷವು ಹುಟ್ಟಿನಿಂದಲೇ ಹತ್ತು ಹಲವು ಸವಾಲುಗಳನ್ನು ಎದುರಿಸಿ, ಇಂದು ಪ್ರಜಾಪ್ರಭುತ್ವವ್ಯವಸ್ಥೆಯಲ್ಲೇ ಅತಿ ದೊಡ್ಡ ರಾಜಕೀಯ ಪಕ್ಷವಾಗಿ ಹೊರಹೊಮ್ಮಿದೆ. ಹಿರಿಯರ ಆದರ್ಶದ ಹಾದಿಯಲ್ಲಿ ಕಾರ್ಯಕರ್ತರೆಲ್ಲರೂ ಪಕ್ಷವನ್ನು ಮತ್ತಷ್ಟು ಸಮರ್ಥವಾಗಿ ಮುನ್ನಡೆಸಬೇಕು ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಸಲಹೆ ನೀಡಿದರು.

ಸೋಮವಾರ ನಗರದ ದೀನದಯಾಳ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಬಿಜೆಪಿ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಕಳೆದ 12 ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಶಕ್ತಿಯನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಇಂದು ವಿಶ್ವವೇ ಭಾರತದ ನಾಯಕತ್ವವನ್ನು ಬಯಸುತ್ತಿದೆ. 1980ರಲ್ಲಿ ಸ್ಥಾಪನೆಯಾದ ಬಿಜೆಪಿ ಇಂದು 47ನೇ ವರ್ಷಕ್ಕೆ ಪದಾರ್ಪಣೆ ಮಾಡುತ್ತಿದೆ. ಮೋದಿ ಅವರ ಆಶಯದಂತೆ 2047ರ ವೇಳೆಗೆ ನಮ್ಮ ದೇಶವು 'ವಿಕಸಿತ ಭಾರತ'ವಾಗಿ ಬದಲಾಗಬೇಕು. ಇದಕ್ಕಾಗಿ ಪ್ರತಿಯೊಬ್ಬ ಕಾರ್ಯಕರ್ತನು ತನ್ನದೇ ಆದ ಕೊಡುಗೆ ನೀಡುವ ಸಂಕಲ್ಪ ಮಾಡಬೇಕು' ಎಂದು ಅವರು ತಿಳಿಸಿದರು.

ಜನಸಂಘ ಮತ್ತು ಬಿಜೆಪಿಯ ಬೆಳವಣಿಗೆಯನ್ನು ಸ್ಮರಿಸಿದ ಕಾಗೇರಿ, ಕಾಶ್ಮೀರದ ಪ್ರತ್ಯೇಕ ಸ್ಥಾನಮಾನದ ವಿರುದ್ಧ ಹೋರಾಡಿದ ಶ್ಯಾಮ ಪ್ರಸಾದ್ ಮುಖರ್ಜಿ ಹಾಗೂ ಪಂಡಿತ ದೀನದಯಾಳ ಉಪಾಧ್ಯಾಯ ಅವರ ಸಾವು ಇಂದಿಗೂ ನಿಗೂಢವಾಗಿದೆ. ಕಾಂಗ್ರೆಸ್ ಅಂದು ಸರ್ವಾಧಿಕಾರಿ ಧೋರಣೆ ಅನುಸರಿಸಿತ್ತು. ನಮಗೆ ಅಧಿಕಾರಕ್ಕಿಂತ ದೇಶದ ಸಂಸ್ಕೃತಿ, ಏಕತೆ ಮತ್ತು ಅಖಂಡತೆಯೇ ಮುಖ್ಯ ಎಂದರು.



- 1980ರಲ್ಲಿ ಸ್ಥಾಪನೆಯಾದ ಬಿಜೆಪಿ ಇಂದು 47ನೇ ವರ್ಷಕ್ಕೆ ಪದಾರ್ಪಣೆ
- ಜನಸಂಘ ಮತ್ತು ಬಿಜೆಪಿಯ ಬೆಳವಣಿಗೆಯನ್ನು ಸ್ಮರಿಸಿದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ

ವಕ್ತಾರ ಹರೀಶ ಪಾಲೇಕರ್ ಮಾತನಾಡಿ, ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದಲ್ಲಿ ಆರಂಭವಾದ ಈ ಪಕ್ಷ, ಇಂದು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ವ್ಯಾಪಿಸಿದೆ.

ಎಲ್.ಕೆ. ಅಡ್ವಾಣಿಯವರ ರಥಯಾತ್ರೆಯ ಫಲವಾಗಿ ಇಂದು ರಾಮಮಂದಿರದ ಕನಸು ನನಸಾಗಿದೆ. ಮೋದಿಯವರ 'ಮೇಕ್ ಇನ್ ಇಂಡಿಯಾ' ಯೋಜನೆಗಳು ದೇಶವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸುತ್ತಿವೆ ಎಂದರು.

> ಪಂಚ ನಿಷ್ಠೆಗಳಾದ ರಾಷ್ಟ್ರೀಯತೆ, ಸಮಗ್ರತೆ, ಪ್ರಜಾಪ್ರಭುತ್ವ, ಸಮಾಜವಾದ ಹಾಗೂ ಸಕಾರಾತ್ಮಕ ಜಾತ್ಯಾತೀತತೆಯೊಂದಿಗೆ ಮೌಲ್ಯಾಧಾರಿತ ರಾಜಕಾರಣಕ್ಕೆ ನಾವೆಲ್ಲರೂ ಒತ್ತು ನೀಡಬೇಕಿದೆ.
> ■ ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದರು.

ನಗರ ಮಂಡಲಾಧ್ಯಕ್ಷ ಆನಂದ ಸಾಲೇರ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಾಜಿ ನರಸಾನಿ, ರೈತ ಮೋರ್ಚಾ ಅಧ್ಯಕ್ಷ ಅನಂತಮೂರ್ತಿ ಹೆಗಡೆ ಹಾಗೂ ಪ್ರಮುಖರಾದ ರಿತೇಶ್, ಶರ್ಮಿಳಾ ಮಾದನಗೇರಿ, ನಾಗರಾಜ ನಾಯ್ಕ, ಮಾಲತೇಶ ಹಾದಿಮನಿ ಉಪಸ್ಥಿತರಿದ್ದರು.

ಸುಭದ್ರ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಿ

ಅಂಕೋಲಾ: ಸುಭದ್ರ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡುವ ಮೂಲಕ ರಾಷ್ಟ್ರವನ್ನು ವಿಶ್ವಗುರು ಸ್ಥಾನದಲ್ಲಿ ನಿಲ್ಲಿಸುವ ದೃಢಸಂಕಲ್ಪದೊಂದಿಗೆ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಕೆಲಸ ಮಾಡಬೇಕು. ಜನಸಂಘ, ರಾಷ್ಟ್ರೀಯ ಸ್ವಯಂ ಸೇವಕ ಸಂಘಗಳ ತತ್ವ ಸಿದ್ಧಾಂತ ಸೇವಾ ಮನೋಭಾವ ಪ್ರತಿಯೊಬ್ಬ ಕಾರ್ಯಕರ್ತರಲ್ಲಿ ಮೈಗೂಡಬೇಕು ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಭಾರತೀಯ ಜನತಾ ಪಕ್ಷ ಉತ್ತರ ಕನ್ನಡ ಜಿಲ್ಲಾ ಘಟಕ ಮತ್ತು ಅಂಕೋಲಾ ಮಂಡಲದ ವತಿಯಿಂದ ಅವರ್ಸಾದಲ್ಲಿ ಆಯೋಜಿಸಲಾಗಿದ್ದ ಪಂಡಿತ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನದ ಕಲಿಕಾ ಶಿಬಿರದ ಸಮಾರೋಪ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಆಶೆ,ಆಮಿಷಗಳಿಗೆ ಬಲಿಯಾಗಿ ನಮ್ಮತನ,ಅಸ್ತಿತ್ವಕಳೆದುಕೊಳ್ಳಬಾರದು ಪ್ರವಾಹದ ಜೊತೆಗೆ ಹೋಗುವ ಬದಲು ಪ್ರವಾಹದ ವಿರುದ್ಧ ಈಜಾಡಿ ಯಶಸ್ಸು ಪಡೆಯಬೇಕು ಎಂದರು.

ಸಿಂಹದಂತೆ ಗುರಿ ತಲುಪುವ ಆತ್ಮವಿಶ್ವಾಸ ಬಿಜೆಪಿ ಕಾರ್ಯಕರ್ತರಲ್ಲಿ ಇದ್ದರೆ 2047 ರ ವೇಳೆಗೆ ಭಾರತ ಖಂಡಿತ ವಿಶ್ವಗುರು ಸ್ಥಾನದಲ್ಲಿ ನಿಲ್ಲಲಿದೆ ಎಂದ ಅವರು ಪ್ರಶಿಕ್ಷಣ ಶಿಬಿರದಿಂದ ಕಾರ್ಯಕರ್ತರ ಜ್ಞಾನ,ಆತ್ಮವಿಶ್ವಾಸ ವೃದ್ಧಿಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ ಮಾತನಾಡಿ ಕಾರ್ಯಕರ್ತರಲ್ಲಿ ಸೈದ್ಧಾಂತಿಕ ಅರಿವು ಇದ್ದರೆ ಪಕ್ಷದ ಬೆಳವಣಿಗೆಗೆ ಬಲ ಸಿಗಲಿದ್ದು ಪ್ರಶಿಕ್ಷಣ ವರ್ಗದ ತರಬೇತಿ ಪಕ್ಷ ಸಂಘಟನೆಗೆ ಶಕ್ತಿ ನೀಡಲಿದೆ ಎಂದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಶಾಂತ ನಾಯ್ಕ, ಅಂಕೋಲಾ ಮಂಡಲದ ಮಾಜಿ ಅಧ್ಯಕ್ಷ ಸಂಜಯ ನಾಯ್ಕ, ಕಾರವಾರ ಗ್ರಾಮೀಣ ಮಂಡಲದ ಅಧ್ಯಕ್ಷ ಸುಭಾಷ ಗುನಗಿ,

ವಕ್ತಾರ ನಾಗರಾಜ ನಾಯಕ, ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷರಾಜೇಂದ್ರ ನಾಯ್ಕ, ಪ್ರಕೋಷ್ಟ ಸಂಚಾಲಕ ರಾಘವೇಂದ್ರ ಭಟ್ಟ, ಮಂಡಲ ಪ್ರಧಾನ ಕಾರ್ಯದರ್ಶಿ ಚಂದ್ರಕಾಂತ ನಾಯ್ಕ, ಶ್ರೀಧರ ನಾಯ್ಕ ಉಪಸ್ಥಿತರಿದ್ದರು.



ಏ. 11ರಿಂದ ಮಕ್ಕಳ ಬೇಸಿಗೆ ರಜಾ ಶಿಬಿರ

ಅಂಕೋಲಾ: ಸಂಗಾತಿ ರಂಗಭೂಮಿ ಅಂಕೋಲಾ ಅವರ ಆಶ್ರಯದಲ್ಲಿ ನೀನಾಸಂ ರಂಗತಜ್ಞರ ಸಹಯೋಗದಲ್ಲಿ ಹಾಡು ಹಕ್ಕಿಗಳೇ ಹಾರಿ ಬಾನಿಗೆ ಮಕ್ಕಳ ಬೇಸಿಗೆ ರಜಾ ಶಿಬಿರ ಏ. 11ರಿಂದ 22ರ ವರೆಗೆ ಪಟ್ಟಣದ ಕೆ.ಎಲ್.ಇ ಎಂಡೋಮೆಂಟ್ ಸಭಾಭವನದಲ್ಲಿ ನಡೆಯಲಿದ್ದು 18 ನೇ ವರ್ಷದ ಬೇಸಿಗೆ ಶಿಬಿರದ ಕರಪತ್ರವನ್ನು ಸಂಘಟನಾ ಸಮಿತಿಯ ಗೌರವಾಧ್ಯಕ್ಷ ವಿಶ್ರಾಂತ ಶಿಕ್ಷಕ ವಿ.ಡಿ.ನಾಯಕ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಕ್ಕಳು ಬೇಸಿಗೆ ರಜಾದಿನಗಳನ್ನು ಹಲವಾರು ರೀತಿಯ ಉಪಯುಕ್ತ ತರಬೇತಿಯ ಮೂಲಕ ಕಳೆಯಲು ಬೇಸಿಗೆ ಶಿಬಿರ ಉಪಯುಕ್ತವಾಗಿದ್ದು ಸುಮಾರು 12 ಜನ ವಿವಿಧ ರಂಗಗಳ ತರಬೇತುದಾರರಿಂದ ನಡೆಯುವ ಶಿಬಿರದ ಸದುಪಯೋಗ ಪಡೆಯಲಿ ಎಂದರು.

ಸಂಗಾತಿ ರಂಗಭೂಮಿ ಕಾರ್ಯಾಧ್ಯಕ್ಷ ಕೆ.ರಮೇಶ ಮಾತನಾಡಿ, ಸಂಗಾತಿ ರಂಗಭೂಮಿ ಕಳೆದ 17 ವರ್ಷಗಳ ಯಶಸ್ವಿ ಬೇಸಿಗೆ ಶಿಬಿರಗಳನ್ನು ಆಯೋಜಿಸಿ ಮಕ್ಕಳಲ್ಲಿ ಸೃಜನಶೀಲತೆ ಹೆಚ್ಚಿಸುವ ಕೆಲಸಮಾಡುತ್ತ ಬಂದಿದ್ದು ಈ ವರ್ಷದ ಶಿಬಿರದಲ್ಲಿ ನುರಿತ ರಂಗತಜ್ಞರು,ವಿವಿಧ ಕ್ಷೇತ್ರಗಳ ಪರಿಣಿತರು ತರಬೇತಿ ನೀಡಲಿದ್ದಾರೆ.

ರಾಷ್ಟ್ರೀಯ ಜಾನಪದ ಕಲಾವಿದೆ ಪುಷ್ಪಲತಾ ಎಸ್, ಖಗೋಳ ತಜ್ಞ ಮಂಜುನಾಥ ಜೇಡಿಕುಣಿ,ಯುವ ಪರಿವರ್ತಕಿ ಭಾರತಿ.ಎಸ್, ಜಾನಪದ ಕಲಾವಿದೆ ನಾಗವೇಣಿ,

ನೃತ್ಯ ಶಿಕ್ಷಕಿ ದೇವಿಕಾ ಮೊದಲಾದವರು ಪಾಲ್ಗೊಳ್ಳಲಿದ್ದು, ಪ್ರತಿದಿನ ಮುಂಜಾನೆ 9.30 ರಿಂದ ಸಂಜೆ 5 ಗಂಟೆವರೆಗೆ ನಡೆಯುವ ಶಿಬಿರದಲ್ಲಿ ರಂಗಚಟುವಟಿಕೆ, ನಾಟಕ, ಯಕ್ಷನೃತ್ಯ,ಥೇಟರ್ ಗೇಮ್ಸ್, ಕರಾಟೆ,ಚಿಟ್ಟೆಪ್ರಪಂಚ, ಖಗೋಳ ಜ್ಞಾನ, ಮುಖವಾಡ ತಯಾರಿಕೆ,ಪ್ರಸಾದನ,ಭಾಷಣಕಲೆ, ವಿಜ್ಞಾನ ವಿಸ್ಮಯ, ನೃತ್ಯ, ಸಂಗೀತ, ಚಿತ್ರಕಲೆ, ಶುದ್ಧ ಬರಹ ತರಬೇತಿ ಸೇರಿದಂತೆ ಹಲವಾರು ವಿಷಯಗಳ ಮಾಹಿತಿ ಮಕ್ಕಳ ಸಂತೆ ಹೀಗೆ ವೈವಿಧ್ಯಮಯ ಚಟುವಟಿಕೆಗಳು ನಡೆಯಲಿವೆ ಎಂದರು.

ಶಿಬಿರದ ನಿರ್ದೇಶಕ ಕರಾಟೆ ಪಟು ಲಕ್ಷ್ಮಣ ಹುಲಸ್ವಾರ, ಸಂಘಟಕರುಗಳಾದ ಮಂಜುನಾಥ ನಾಯ್ಕ, ಮಂಗಲಾ ಹರಿಕಂತ್ರ, ಪಾರ್ವತಿ ಕೇಣಿ,ಮೋಹನ ದುರ್ಗೇಕರ,ನಾಗರಾಜ ಶೆಟ್ಟಿ, ನಾಗರಾಜ ನಾಯಕ ಮೊದಲಾದವರು ಇದ್ದರು. ಶಿಬಿರದಲ್ಲಿ ಭಾಗವಹಿಸುವ ಮಕ್ಕಳಿಗೆ ಲಘು ಉಪಾಹಾರ ಮತ್ತು ಮಧ್ಯಾಹ್ನ ಊಟದ ವ್ಯವಸ್ಥೆ ಇದ್ದು ಹೆಚ್ಚಿನ ಮಾಹಿತಿಗಾಗಿ 9902043452 ದೂರವಾಣಿ ಸಂಖ್ಯೆಗೆ ಸಂಪರ್ಕಿಸಲು ಕೋರಲಾಗಿದೆ.



ಉಚಿತ ಸಿಇಟಿ ತರಬೇತಿ ಶಿಬಿರಕ್ಕೆ ಚಾಲನೆ



ಹಳಿಯಾಳ: ಕೆಎಲ್‌ಎಸ್ ವಿಡಿಐಟಿ ಹಳಿಯಾಳದಲ್ಲಿ, ವೃತ್ತಿಪರ ಕೋರ್ಸ್ ಪ್ರವೇಶ ಆಕಾಂಕ್ಷಿತರಿಗೆ ನಡೆಸುವ ಸಾಮಾನ್ಯ ಪ್ರವೇಶಾತಿ ಪರೀಕ್ಷೆ (ಸಿಇಟಿ)ಗೆ ಉಚಿತ ತರಬೇತಿ ನೀಡುವ ಶಿಬಿರಕ್ಕೆ ಏ. 6ರಂದು ಚಾಲನೆ ನೀಡಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಧಾರವಾಡದ ವಿ.ಪಿ. ಹಂಚಿನಮನಿ ಪಿಯು ವಿದ್ಯಾಲಯದ ಜಂಟಿ ಕಾರ್ಯದರ್ಶಿ ವರ್ಷಾ ಹಂಚಿನಮನಿ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಉತ್ತಮ ತಾಂತ್ರಿಕ ಕೋರ್ಸ್ ಹಾಗೂ ಮಹಾವಿದ್ಯಾಲಯದ ಆಯ್ಕೆಗೆ ಸಿ ಇ ಟಿ ಪರೀಕ್ಷೆಯಲ್ಲಿ ಉತ್ತಮ ರ‍್ಯಾಂಕಿಂಗ್ ಪಡೆಯುವುದು ಅವಶ್ಯ, ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಇಂತಹ ತರಬೇತಿ ಶಿಬಿರದ ಲಾಭ ಪಡೆದುಕೊಳ್ಳಬೇಕು ಎಂದರು. ವಿದ್ಯಾರ್ಥಿಗಳಿಗೆ ಉಚಿತ ವಾಗಿ ತರಬೇತಿ ನೀಡುತ್ತಿರುವ ವಿ ಡಿ ಐ ಟಿ ಕಾರ್ಯವನ್ನು ಶ್ಲಾಘಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ, ಮಹಾವಿದ್ಯಾಲಯವು ಇಂಜಿನಿಯರಿಂಗ್ ಪದವಿ ಆಕಾಂಕ್ಷಿತ ವಿದ್ಯಾರ್ಥಿಗಳಿಗೆ ಉಚಿತವಾಗಿ ತರಬೇತಿ, ವಸತಿ ವ್ಯವಸ್ಥೆಯನ್ನು ಕಲ್ಪಿಸಿದ್ದು, ಇದರ ಸದುಪಯೋಗ ಪಡಿಸಿಕೊಂಡು ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕೆಂದರು.

ಏ.6 ರಿಂದ 12ರ ವರೆಗೆ ಜರುಗಲಿರುವ ಈ ತರಬೇತಿ ಶಿಬಿರಕ್ಕೆ ಭೌತ ಶಾಸ್ತ್ರ, ರಸಾಯನ ಶಾಸ್ತ್ರ ಮತ್ತು ಗಣಿತ ವಿಷಯದ ತಜ್ಞರು ಮಾಹಿತಿ ನೀಡಲಿದ್ದಾರೆ. ಕುಮಟಾದ ಸರಸ್ವತಿ ಪಿ ಯು ವಿದ್ಯಾಲಯದ ಪ್ರೊ. ಪ್ರಸನ್ನ ಹೆಗಡೆ ವೇದಿಕೆ ಯಲ್ಲಿ ಉಪಸ್ಥಿತರಿದ್ದರು. ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಸ್ನೇಹಾ ಕುಲಕರ್ಣಿ ಸ್ವಾಗತಿಸಿದರು. ಡಾ. ಮಲ್ಲಿಕಾರ್ಜುನ ಪಿ ವಂದಿಸಿದರು. ಪ್ರೊ. ಎಸ್ ಡಿ ಕುಲಕರ್ಣಿ ನಿರೂಪಿಸಿದರು. ಬನವಾಸಿ, ಹುಬ್ಬಳ್ಳಿ, ದಾಂಡೇಲಿ, ವಿಜಯಪುರ, ಹಳಿಯಾಳ, ಕಲಘಟಗಿ, ಮುಂಡಗೋಡಿನ 125ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಿದ್ದಾರೆ.

ಅತಿಕ್ರಮಣದಾರರ ಮಹಜರ್ ಪ್ರಕ್ರಿಯೆ ನ್ಯೂನ್ಯತೆ ಸರಿಪಡಿಸಲು ಆಗ್ರಹ

ಭಟ್ಕಳ: ಅರಣ್ಯ ಭೂಮಿ ಹಕ್ಕಿಗೆ ಸಂಬಂಧಿಸಿ ನಿರ್ದಿಷ್ಟ ದಾಖಲೆ ಕೊರತೆಯಿಂದ, ದಾಖಲಾತಿಗಾಗಿ ಅಧಿಕಾರಿ ತಂಡದಿಂದ ಜರುಗುತ್ತಿರುವ ಮಹಜರ್ ಪ್ರಕ್ರಿಯೆ ನ್ಯೂನ್ಯತೆ ಸರಿಪಡಿಸುವ ಉದ್ದೇಶದಿಂದ ಹೋರಾಟಗಾರರ ವೇದಿಕೆಯು ಸಮಿತಿಯ ಕಾರ್ಯ ಚಟುವಟಿಕೆಗೆ ರಾಜ್ಯ ಉಸ್ತುವಾರಿ ಸಮಿತಿಗೆ ಆಕ್ಷೇಪ ಸಲ್ಲಿಸಲಾಗುವುದು ಎಂದು ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಹೇಳಿದರು.

ಅವರು ಸೋಮವಾರ ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ಮಹಜರ್ ಪ್ರಕ್ರಿಯೆ ಕುರಿತು ತಾಲೂಕಿನ ವಿವಿಧ ಅರಣ್ಯ ಅತಿಕ್ರಮಣದಾರರ ಸ್ಥಳಕ್ಕೆ ಭೇಟಿ ಕೊಟ್ಟ ನಂತರ ಬೆಳಕೆಯಲ್ಲಿ ಈ ಕುರಿತು ಮಾತನಾಡಿದರು.

ರಾಜ್ಯ ಮಟ್ಟದ ಉಸ್ತುವಾರಿ ಸಮಿತಿಯ ನಡವಳಿಕೆಗೆ ವ್ಯತಿರಿಕ್ತವಾಗಿ ಕಾನೂನು ನೀತಿ, ನಿಯಮ ಬಾಹಿರವಾಗಿ ಹಾಗೂ ಸಾಗುವಳಿ ಮಹಜರ್ ವರದಿಗೆ ಪ್ರಾತಿನಿಧ್ಯ ನೀಡದೇ ಅರ್ಜಿದಾರನ ಹಿಡುವಳಿ, ಆರ್ಥಿಕ ಉತ್ಪನ್ನ ಮುಂತಾದ ಷರತ್ತುಬದ್ಧ ಪರಿಗಣನೆ ಮೇರೆಗೆ ಮಾಹಿತಿ ಸಂಗ್ರಹಿಸುವುದು ಹಾಗೂ ಅರ್ಜಿ ಮೌಲ್ಯತೆಯನ್ನ ಪರಿಶೀಲಿಸುವ ಕಾರ್ಯ ಜಿಲ್ಲೆಯಲ್ಲಿ ನಿಯಮವನ್ನು ಉಲ್ಲಂಘಿಸಿರುವ ಕುರಿತು ರಾಜ್ಯ ಅರಣ್ಯ ಭೂಮಿ ಹಕ್ಕು ಉಸ್ತುವಾರಿ ಸಮಿತಿಗೆ ಆಕ್ಷೇಪ ಸಲ್ಲಿಸಲಾಗುತ್ತಿದೆ ಎಂದರು.

ಕಳೆದ ಮೂರು ದಶಕದಿಂದ ಅರಣ್ಯವಾಸಿಗಳ ಪರವಾಗಿ ಕಾರ್ಯ ನಿರ್ವಹಿಸುತ್ತಿರುವರವೀಂದ್ರನಾಯ್ಕ ಅವರನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಹೋರಾಟ ವೇದಿಕೆಯ ಪ್ರಮುಖರಾದ ಪಾಂಡುರಂಗ ನಾಯ್ಕ ಬೆಳಕೆ, ಚಂದ್ರ ನಾಯ್ಕ ಬೆಳಕೆ, ನಾರಾಯಣ ಶಿರಜ್ಜಿಮನೆ, ಪದ್ಮಾವತಿ ವೆಂಕಟೇಶ, ಮಾದೇವಿ ನಾಯ್ಕ, ಸುಬ್ರಾಯ ನಾಯ್ಕ ಬೈಲೂರು, ಮುಂತಾದವರಿದ್ದರು.



ಗರ್ವ, ಅಹಂಕಾರ ಮನುಷ್ಯನ ಅತಿದೊಡ್ಡ ರೋಗಗಳು: ಶಾಸಕ ಹೆಬ್ಬಾರ

ಯಲ್ಲಾಪುರ: ಮನುಷ್ಯನಿಗೆ ಬರುವ ಅತಿದೊಡ್ಡ ರೋಗ ಗರ್ವ ಮತ್ತು ಅಹಂಕಾರ. ಆದರಿಂದ ದೂರ ಇದ್ದಷ್ಟೂ ಉತ್ತಮ ವ್ಯಕ್ತಿಯಾಗಿ ಬದುಕಲು ಸಾಧ್ಯ. ನಾವು ಯಾವುದೇ ಸತ್ಕಾರ್ಯಗಳನ್ನು ಮಾಡುವಾಗ ಪ್ರತಿಫಲದ ನಿರೀಕ್ಷೆ ಇರಬಾರದು. ನಮ್ಮ ಕಾರ್ಯಗಳಿಗೆ ಫಲಾಫಲಗಳನ್ನು ನೀಡುವವನು ದೇವರು ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು.

ಅವರು ತಾಲೂಕಿನ ಚಂದಗುಳಿಯ ಶ್ರೀ ಸಿದ್ಧಿವಿನಾಯಕ (ಗಂಟೆ ಗಣಪತಿ)ದೇವಸ್ಥಾನದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಗೌರವಾರ್ಪಣೆ ಕಾರ್ಯಕ್ರಮದಲ್ಲಿ ಗೌರವ ಸ್ವೀಕರಿಸಿ ಮಾತನಾಡಿದ ಅವರು, ಪರಿಶ್ರಮ ಇಲ್ಲದೇ ಯಾರೂ ಸಾಧನೆ ಮಾಡಲು ಸಾಧ್ಯವಿಲ್ಲ, ಪರಿಶ್ರಮ ಇಲ್ಲದೇ ಮಾಡಬಹುದಾದ ಕಾರ್ಯ ಕೇವಲ ಟೀಕೆ ಮಾತ್ರ. ನಿಷ್ಕಾಮದಿಂದ ಮಾಡುವ ಕರ್ಮವೇ ನನ್ನನ್ನು ರಾಜಕೀಯವಾಗಿ,



ಸಾಮಾಜಿಕವಾಗಿ ಎತ್ತರಕ್ಕೇರುವಂತೆ ಮಾಡಿದೆ. ಬಡವರು, ಅಶಕ್ತರಿಗೆ ನೆರವಾಗುವುದು ನನಗೆ ನೆಮ್ಮದಿ ನೀಡುವ ಸಂಗತಿ. ನಮ್ಮಗಳಿಕೆಯಲ್ಲಿ ಕೆಲ ಭಾಗವನ್ನು ಸಮಾಜಕ್ಕೆ ನೀಡಬೇಕಾದದ್ದು ನನ್ನ ಕರ್ತವ್ಯ. ದೇವರ ಅನುಗ್ರಹ ಇರುವವರೆಗೆ ಈ ಕಾರ್ಯವನ್ನು ಮುಂದುವರಿಸುತ್ತೇನೆ ಎಂದರು.

ಆಡಳಿತ ಮಂಡಳಿಯ ಸದಸ್ಯ ಎಲ್.ಪಿ ಭಟ್ಟ ಗುಂಡ್ಕಲ್ ಪ್ರಾಸ್ತಾವಿಕವಾಗಿ ಮಾತನಾಡಿ, ಅನ್ನದಾನ, ಕಟ್ಟಡ ನಿರ್ಮಾಣ ಸೇರಿದಂತೆ ಹಲವು ನೆಲೆಯಲ್ಲಿ ದೇವಸ್ಥಾನದ ಅಭಿವೃದ್ಧಿಗೆ ಸಹಕರಿಸುತ್ತಿರುವ ಶಾಸಕರಿಗೆ ಗೌರವ ಸಲ್ಲಿಸುವುದು ನಮ್ಮ ಕಾರ್ಯಕ್ರಮದ ಉದ್ದೇಶ ಎಂದರು.

ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಲಕ್ಷ್ಮೀನಾರಾಯಣ ಭಟ್ಟ ತಾರೀಮಕ್ಕಿ ಅಧ್ಯಕ್ಷತೆವಹಿಸಿ ಮಾತನಾಡಿ, ಸಾಮೂಹಿಕ ಹಿತವನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಶಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರದ ಅನುದಾನಗಳನ್ನು ದೇವಸ್ಥಾನಕ್ಕೆ ಕೊಡಿಸುವ ಜತೆಯಲ್ಲಿ ವೈಯಕ್ತಿಕವಾಗಿಯೂ ದೇವಸ್ಥಾನದ ವಿವಿಧ ಸೇವೆಗಳಲ್ಲಿ ತೊಡಗಿಸಿಕೊಂಡು ಮಾದರಿಯಾಗಿದ್ದಾರೆ. ದೇವಸ್ಥಾನದ ಆವಾರದಲ್ಲಿ ಅನ್ನದ ಛತ್ರ ನಿರ್ಮಾಣ ಹಾಗೂ ಮುಂಭಾಗದಿಂದ ಪ್ರವೇಶಿಸುವ ರಸ್ತೆ ನಿರ್ಮಾಣಕ್ಕೆ ಅನುದಾನ ನೀಡುವಂತೆ ಮನವಿ ಮಾಡಿದರು.

ಸೀಮಾ ಪರಿಷತ್ ಅಧ್ಯಕ್ಷ ನಾಗೇಶ ಹೆಗಡೆ ಪಣತಗೇರಿ ಕಾರ್ಯಕ್ರಮ ವನ್ನು ಉದ್ಘಾಟಿಸಿದರು. ವೇದಿಕೆಯಲ್ಲಿ ವನಜಾಕ್ಷಿ ಶಿವರಾಮ ಹೆಬ್ಬಾರ, ವಿಕಾಸ ಬ್ಯಾಂಕ್ ಅಧ್ಯಕ್ಷ ಮುರಳಿ ಹೆಗಡೆ, ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷ ಆರ್.ಎಸ್. ಭಟ್ಟ, ಪ್ರಮುಖರಾದ ನರಸಿಂಹ ಭಟ್ಟ ಗುಂಡಗಲ್, ನಾಗೇಶ ಭಟ್ಟ ಮಳಲಗಾಂವ ಇತರರು ಉಪಸ್ಥಿತರಿದ್ದರು. ವೆಂಕಟರಮಣ ಭಟ್ಟ ಬೆಳಖಂಡ, ಗುರುನಂದನ ಭಟ್ಟ ವೇದಘೋಷ ಮಾಡಿದರು. ಅನ್ವಿತಾ ಭಟ್ಟ ಪ್ರಾರ್ಥಿಸಿದರು. ಆಡಳಿತ ಮಂಡಳಿಯ ಸದಸ್ಯ ವಿ.ಗೋಪಾಲಕೃಷ್ಣ ಭಟ್ಟ ಹಂಡ್ರಮನೆ ಸ್ವಾಗತಿಸಿದರು. ಸುಬ್ರಾಯ ಭಟ್ಟ ಗುಂಡ್ಕಲ್ ನಿರ್ವಹಿಸಿದರು.

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಮಾಡಲು ಬಿಡಲ್ಲ: ಅಶೀಸರ

ಭಟ್ಕಳ: ಜಿಲ್ಲೆಯಲ್ಲಿ ಅರಣ್ಯ, ವನ್ಯಜೀವಿ ಕಾಯ್ದೆಯನ್ನು ಉಲ್ಲಂಘಿಸುವ ನಿಟ್ಟಿನಲ್ಲಿ ಕರ್ನಾಟಕ ಪವರ್ ಕಾರ್ಪೋರೇಶನ್ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಮಾಡಲು ಹೊರಟಿರುವುದು ತೀವ್ರ ಖಂಡನೀಯ. ಈ ಯೋಜನೆ ನಿಲ್ಲುವ ತನಕ ನಮ್ಮ ಹೋರಾಟ ನಿಲ್ಲದು ಎಂದು ಶರಾವತಿ ಪಂಪ್ಡ್ ಸ್ಟೋರೇಜ್ ಹೋರಾಟದ ಕುರಿತು ಖ್ಯಾತ ಪರಿಸರವಾದಿ ಹಾಗೂ ಪಶ್ಚಿಮಘಟ್ಟಗಳ ಕಾರ್ಯಪಡೆಯ ಮಾಜಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಅವರು ಹೇಳಿದರು.



ಸುಬ್ರಹ್ಮಣ್ಯದ ಕುಮಾರದಾರಾ ಉಳಿಸಿ ಹೋರಾಟದಲ್ಲಿ ಭಾಗವಹಿಸಲು ಶಿರಸಿಯಿಂದ ಸುಬ್ರಹ್ಮಣ್ಯಕ್ಕೆತೆರಳುತ್ತಿರುವಸಂರ್ಭದಲ್ಲಿಭಟ್ಕಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂ ಕುಸಿತ ಉಂಟಾಗುತ್ತಿದೆ, ಈಗಾಗಲೇ ಅನೇಕ ಯೋಜನೆಗಳಿಗೆ ಭೂಮಿಯನ್ನು ಕಳೆದುಕೊಂಡಿದ್ದೇವೆ, ಅಭಯಾರಣ್ಯ ಇದೆ. ಇಂತಹ ಸಂದರ್ಭದಲ್ಲಿ ಮಾರಕ ಯೋಜನೆ ಅನುಷ್ಠಾನಕ್ಕೆ ತರಲು ಹೊರಟಿರುವುದು ಸರಿಯಲ್ಲ. ಇದೊಂದು ಪರಿಸರ ವಿರೋಧಿ ಯೋಜನೆಯಾಗಿದೆ. ಪಶ್ಚಿಮ ಘಟ್ಟ ಉಳಿಸಿ ಹೋರಾಟ ಬಹಳ ವರ್ಷಗಳಿಂದ ನಡೆಯುತ್ತಲೇ ಬಂದಿದೆ. ಈಗಾಗಲೇ ಜಿಲ್ಲೆಯಲ್ಲಿನ ಮಾರಕಯೋಜನೆಗಳವಿರುದ್ಧ20ನೇಶತಮಾನದಲ್ಲಿ ಅನೇಕ ಹೋರಾಟಗಳನ್ನು ಮಾಡಿದ್ದೇವೆ. ಅನೇಕ ಹೋರಾಟದಲ್ಲಿ ನಾವು ಜಯ ಗಳಿಸಿದ್ದೇವೆ. ಈಗ 21ನೇ ಶತಮಾನದಲ್ಲಿ ಶರಾವತಿ ಪಂಪ್ಡ್ ಸ್ಟೋರೇಜ್ ವಿರುದ್ಧ ನಮ್ಮ ಹೋರಾಟ ನಡೆಯುತ್ತಿದ್ದು ಈ ಯೋಜನೆ ನಿಲ್ಲುವ ತನಕ ನಮ್ಮ ಹೋರಾಟ ನಿಲ್ಲದು. ಇದು ಶರಾವತಿ ಅಭಯಾರಣ್ಯವನ್ನೇ ನುಂಗಿ ಹಾಕುವಂತಹ ಬೃಹತ್ ಜಲ ವಿದ್ಯುತ್ ಯೋನೆಯಾಗಿದ್ದು ನಮ್ಮ ಜಿಲ್ಲೆ ಅತ್ಯಂತ ಸೂಕ್ಷ್ಮ ಪ್ರದೇಶವಾಗಿದ್ದು ಇಲ್ಲಿ ಭೂ ಕುಸಿತ, ಅರಣ್ಯ ನಾಶ, ಅಭಯಾರಣ್ಯದ ಕಾಯಿದೆ ಉಲ್ಲಂಘನೆ ಎಲ್ಲವನ್ನು ಈ ಯೋಜನೆ ಒಳಗೊಂಡಿದೆ ಎಂದರು.

ಇಡೀ ಪಶ್ಚಿಮ ಘಟ್ಟದ ಶಾಸಕರು, ಸಂಸದರು ಎಲ್ಲಾ ಜನಪ್ರತಿನಿದಿಗಳು ಸೇರಿ ಒಕ್ಕೊರಲಿನಿಂದ ಯೋಜನೆಯನ್ನು ವಿರೋಧಿಸಬೇಕಾಗಿದೆ. ಬೇರೆ ಬೇರೆ ಪ್ರದೇಶದ ಜನಪ್ರತಿನಿದಿಗಳು ಸೇರಿ ತಮ್ಮ ಭಾಗದ ಕುರಿತು ಸಭೆ ಸೇರಿ ವಿರೋಧಿಸುವಂತೆ, ನಮ್ಮ ಪಶ್ಚಿಮಘಟ್ಟದ ಜನಪ್ರತಿನಿದಿಗಳು ಸಭೆ ಸೇರಿ ವಿರೋಧಿಸಬೇಕಾಗಿದೆ. ನಮ್ಮ ಜನಪ್ರತಿನಿದಿಗಳು, ವಿಜ್ಞಾನಿಗಳು, ಉತ್ತಮ ಬೆಂಬಲ ಕೊಟ್ಟಿದ್ದಾರೆ. ಆದರೆ ಬೆಂಗಳೂರಿನಲ್ಲಿ ಈ ಬಗ್ಗೆ ಒಂದು ಸಭೆಯನ್ನು ಆಯೋಜಿಸಿ ಬಹಳ ದೊಡ್ಡದಾದ ಧ್ವನಿಯನ್ನು ಎತ್ತಬೇಕಾಗಿದೆ ಎಂದೂ ಹೇಳಿದರು.

ನಾವು ಈ ಯೋಜನೆ ನಿಲ್ಲುವ ತನಕ ನಮ್ಮ ಹೋರಾಟವನ್ನ ಮುಂದುವರಿಸಬೇಕಾಗಿದೆ. ಪೂರ್ಣವಾಗಿ ಯೋಜನೆ ನಿಲ್ಲುವ ತನಕವೂ ನಮ್ಮ ಜಲಾಂದೋಲನ ನಿಲ್ಲುವುದಿಲ್ಲ ಎಂದೂ ಹೇಳಿದರು.

ನಮ್ಮ ಹೋರಾಟ ಎಲ್ಲಾ ಮುಖಗಳಲ್ಲಿಯೂ ನಡೆಯುತ್ತಿದೆ. ಈಗಾಗಲೇ ಸ್ವರ್ಣವಲ್ಲಿ ಸ್ವಾಮೀಜಿಯವರು ಜನಾಂದೋಲನದಲ್ಲಿ ತೊಡಗಿಸಿಕೊಂಡು ಮಹಾತ್ಮಾ ಗಾಂಧೀಜಿಯವರ ಮಾದರಿಯಲ್ಲಿ ಹೋರಾಟ ಮಾಡಿದ್ದಾರೆ. ಇಲ್ಲಿನ ರೈತರು, ಮೀನುಗಾರರು, ತೋಟಿಗರು ಎಲ್ಲರೂ ಕೂಡಾ ಕಷ್ಟದಲ್ಲಿದ್ದಾರೆ. ಇಲ್ಲಿ ಸಾವಯವ ಕೃಷಿ, ಜೇನು ಕೃಷಿ ಬೇಕು, ಜಿಲ್ಲೆಯಲ್ಲಿ ಬೇರೆ ಬೇರೆ ಯೋಜನೆಗಳಿಂದ ನಿರಾಶ್ರಿತರಾದವರಿಗೆ ಪುನರ್ ವಸತಿಬೇಕು, ಭಟ್ಕಳದ ಎಂಡೋಸಲ್ಫಾನ್ ಪೀಡಿತರಿಗೆ ಪುನರ್‌ವಸತಿ ಬೇಕಾಗಿದೆ ಎಂದ ಅವರು ಇವುಗಳನ್ನೆಲ್ಲ ಬಿಟ್ಟು ಮಾರಕ ಯೋಜನೆಯನ್ನು ಮಾಡಲು ಜಿಲ್ಲೆಯ ಪ್ರಜ್ಞಾವಂತ ನಾಗರೀಕರು ಎಂದೂ ಬಿಡುವುದಿಲ್ಲ ಎಂದೂ ಅವರು ಹೇಳಿದರು.

ಕಿರುಸುದ್ದಿ

ಜನಗಣತಿ ಕಾರ್ಯಾಗಾರಕ್ಕೆ ಜಿಲ್ಲಾಧಿಕಾರಿ ಚಾಲನೆ

ಹಾವೇರಿ: ಇಲ್ಲಿನ ಹುಕ್ಕೇರಿಮಠದ ಶಾಲಾ ಆವರಣದಲ್ಲಿ ಜಿಲ್ಲಾಡಳಿತ, ತಾಲೂಕು ಆಡಳಿತ ಹಾಗೂ ನಗರಸಭೆ ವತಿಯಿಂದ ಭಾರತ ಜನಗಣತಿ-2027ಕ್ಕೆ ಸಂಬಂಧಿಸಿದಂತೆ ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ಮೂರು ದಿನಗಳ ಕಾಲ ಹಮ್ಮಿಕೊಂಡಿರುವ ತರಬೇತಿ ಕಾರ್ಯಾಗಾರಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು. ಕಾರ್ಯಾಗಾರಕ್ಕೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಮಾತನಾಡಿ, ಮೊದಲ ಹಂತದ ಜನಗಣತಿ ಏ. 1ರಿಂದ ಮೇ15ರವರೆಗೆ ಜರುಗಲಿದೆ. ಸಾರ್ವಜನಿಕರು ನೀಡಿದ ಮಾಹಿತಿ ಗೌಪ್ಯವಾಗಿರುತ್ತದೆ ಹಾಗೂ ಯಾವುದೇ ಸೌಲಭ್ಯಗಳು ಕಡಿತವಾಗುವುದಿಲ್ಲ, ಹಾಗಾಗಿ ಸಾರ್ವಜನಿಕರು ಯಾವುದೇ ವದಂತಿಗಳಿಗೆ ಕಿವಿಗೊಡದೆ ನಿಖರ ಮಾಹಿತಿ ನೀಡಬೇಕು ಎಂದರು.

ಸರ್ಕಾರದ ವಿವಿಧ ಯೋಜನೆಗಳ ಜಾರಿಗೆ ಜನಸಂಖ್ಯೆ ಹಾಗೂ ಜನರ ಆರ್ಥಿಕ, ಸಾಮಾಜಿಕ ಸ್ಥಿತಿಗತಿ ಬಹಳ ಮುಖ್ಯವಾಗಿದೆ. ದೇಶದ ಅಭಿವೃದ್ಧಿ ಹಿತದೃಷ್ಟಿಯಿಂದ ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ಜನಗಣತಿಯಲ್ಲಿ ಭಾಗವಹಿಸಬೇಕು ಎಂದರು. ಈ ವೇಳೆ ತಹಶೀಲ್ದಾರ್ ಶರಣಮ್ಮ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್. ಪಾಟೀಲ, ಪೌರಾಯುಕ್ತ ಎಚ್. ಕಾಂತರಾಜ, ಗುತ್ತಲ ಪಪಂ ಮುಖ್ಯಾಧಿಕಾರಿ ದೇವಾನಂದ ನಾಯಕ ಇತರರಿದ್ದರು.

ಮನೋಹರ ನೇಮಕ



ರಾಣೇಬೆನ್ನೂರ: ನಗರದ ಹಿರಿಯ ಪತ್ರಕರ್ತ ಮನೋಹರ ಮಲ್ಲಾಡದ ಅವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹುತಾತ್ಮ ಮೈಲಾರ ಮಹಾದೇವಪ್ಪನವರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಸದಸ್ಯರನ್ನಾಗಿ ನೇಮಕ ಮಾಡಿ ಸರ್ಕಾರದ ಅಧೀನ ಕಾರ್ಯದರ್ಶಿ ಎಂ.ಶಾಂತಲಾ ಆದೇಶ ಹೊರಡಿಸಿದ್ದಾರೆ.

ಕಣ್ಣಿನ ಪೊರೆ ಉಚಿತ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ

ಹಾವೇರಿ: ಜಗದ್ಗುರು ಲಿಂ.ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ 77ನೇ ಜಯಂತಿ ಪ್ರಯುಕ್ತ ಇಲ್ಲಿಯ ಇಜಾರಿಲಕಮಾಪುರದ ಸಿಂದಗಿ ಶಾಂತವೀರೇಶ್ವರ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ-ಆಸ್ಪತ್ರೆಯಲ್ಲಿ ಏ.8ರಂದು ಬೆಳಗ್ಗೆ 11ಕ್ಕೆ ಉಚಿತ ಕಣ್ಣಿನ ಪೊರೆ ತಪಾಸಣೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರ ನಡೆಯಲಿದೆ.

ಹಾವೇರಿಯ ಸಿಂದಗಿ ಶಾಂತವೀರೇಶ್ವರ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಹುಬ್ಬಳ್ಳಿ ಎಂ.ಎಂ ಜೋಶಿ ನೇತ್ರ ವಿಜ್ಞಾನ ಸಂಸ್ಥೆ, ಎಸ್ ಜಿಎಂಐ ಬ್ಯಾಂಕ್ ಮತ್ತು ಸಂಶೋಧನಾ ಸಂಸ್ಥೆ ಹಾಗೂ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ಹಾವೇರಿ ಇವರ ಸಂಯುಕ್ತಾಶ್ರಯದಲ್ಲಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಕಣ್ಣಿನ ಪೊರೆ ಇರುವ ವ್ಯಕ್ತಿಗಳನ್ನು ಮಾತ್ರ ಶಸ್ತ್ರ ಚಿಕಿತ್ಸೆಗೆ ಆಯ್ದುಕೊಳ್ಳಲಾಗುವುದು. ಶಿಬಿರಕ್ಕೆ ಬರುವವರು ಆಧಾರಕಾರ್ಡ್, ಬಿಪಿಎಲ್ ಕಾರ್ಡ್, ಮತದಾರರ ಗುರುತಿನ ಚೀಟಿ ಜೆರಾಕ್ಸ್ ಪ್ರತಿಗಳನ್ನು ತಪ್ಪದೇ ತರಬೇಕೆಂದು ತಿಳಿಸಿದ್ದಾರೆ. ಶಿಬಿರದಲ್ಲಿ ಪಾಲ್ಗೊಳ್ಳುವವರು ಮೊದಲೇ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಜಿಲ್ಲೆಯ ಸಾರ್ವಜನಿಕರು ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗೆ ಡಾ.ಶ್ರೀಕಾಂತ ತಿಪ್ಪಣ್ಣವರ ಮೊ.9632660889, ಡಾ.ವಿನಾಯಕ ಪಾಟೀಲ ಮೊ.7406499657 ಈ ಸಂಖ್ಯೆಗಳನ್ನು ಸಂಪರ್ಕಿಸಹುದಾಗಿದೆ.

ಅಕ್ರಮ ಮರಳು ಸಾಗಾಟ: ಪ್ರಕರಣ ದಾಖಲು

ಹಾವೇರಿ: ಯಾವುದೇ ಪರವಾನಗಿ ಪಡೆದುಕೊಳ್ಳದೆ ಅಕ್ರಮವಾಗಿ ನದಿ ಪಾತ್ರದಿಂದ ಮರಳನ್ನು ತುಂಬಿಕೊಂಡು ಸಾಗಾಟ ಮಾಡುತ್ತಿದ್ದಾಗ ಗುತ್ತಲ ಠಾಣೆಯ ಪೊಲೀಸರು ಎರಡು ಕಡೆ ಪ್ರತ್ಯೇಕವಾಗಿ ದಾಳಿ ನಡೆಸಿ ಸ್ವಯಂ ಆಗಿ ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ.ಪ್ರಕರಣ ಒಂದರಲ್ಲಿ ಕೊಡಬಾಳ ಹತ್ತಿರದ ವರದಾ ನದಿ ಪಾತ್ರದಲ್ಲಿ ಅಕ್ರಮವಾಗಿ ಮರಳನ್ನು ಸಂಗ್ರಹಿಸಿಕೊಂಡು ಸಾಗಾಟ ಮಾಡುತ್ತಿದ್ದಾಗ ಮರೋಳ ಕಡೆಗೆ ಹೋಗುವ ರಸ್ತೆಯಲ್ಲಿ ದಾಳಿ ನಡೆಸಿದ್ದಾರೆ. 5 ಸಾವಿರ ಬೆಲೆ ಬಾಳುವ 3 ಮೆಟ್ರಿಕ್ ಟನ್‌ನಷ್ಟು ಮರಳು ಸಹಿತ ಟ್ರ್ಯಾಕ್ಟರ್‌ನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಟ್ರ್ಯಾಕ್ಟರ್ ಚಾಲಕ ಮಲ್ಲಯ್ಯ ಕುಮಾರಸ್ವಾಮಿ ಚರಂತಿಮಠ ಎಂಬುವವರ ವಿರುದ್ಧ ದೂರು ದಾಖಲಿಸಲಾಗಿದೆ.ಇನ್ನೊಂದು ಪ್ರಕರಣದಲ್ಲಿ ಆಕ್ಕೂರ ಗ್ರಾಮದ ಬಳಿಯ ವರದಾ ನದಿಯಲ್ಲಿ 5 ಸಾವಿರ ಕಿಮ್ಮತ್ತಿನ 3 ಮೆಟ್ರಿಕ್ ಟನ್‌ನಷ್ಟು ಮರಳನ್ನು ತುಂಬಿಕೊಂಡು ಹೊಸರಿತ್ತಿ ಕಡೆಗೆ ಹೋಗುತ್ತಿದ್ದ ಟ್ರ್ಯಾಕ್ಟರ್‌ನ್ನು ವಶಪಡಿಸಿಕೊಳ್ಳಲಾಗಿದೆ. ಟ್ರ್ಯಾಕ್ಟರ್‌ನ ಚಾಲಕ ವಾಹನ ಬಿಟ್ಟು ಪರಾರಿಯಾಗಿದ್ದು, ಚಾಲಕ ಮತ್ತು ಮಾಲೀಕನ ವಿರುದ್ಧ ಕೇಸ್ ದಾಖಲಿಸಲಾಗಿದೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕವಾಗಿ ಎಫ್‌ಐಆರ್ ದಾಖಲಾಗಿವೆ.



ಹಾವೇರಿ: ಇಲ್ಲಿನ ಹುಕ್ಕೇರಿಮಠದ ಶಾಲಾ ಆವರಣದಲ್ಲಿ ಜಿಲ್ಲಾಡಳಿತ, ತಾಲೂಕು ಆಡಳಿತ ಹಾಗೂ ನಗರಸಭೆ ವತಿಯಿಂದ ಭಾರತ ಜನಗಣತಿ-2027ಕ್ಕೆ ಸಂಬಂಧಿಸಿದಂತೆ ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ಮೂರು ದಿನಗಳ ಕಾಲ ಹಮ್ಮಿಕೊಂಡಿರುವ ತರಬೇತಿ ಕಾರ್ಯಾಗಾರಕ್ಕೆ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಚಾಲನೆ ನೀಡಿದರು. ಈ ವೇಳೆ ತಹಶೀಲ್ದಾರ್ ಶರಣಮ್ಮ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್. ಪಾಟೀಲ, ಪೌರಾಯುಕ್ತ ಎಚ್. ಕಾಂತರಾಜ, ಗುತ್ತಲ ಪಪಂ ಮುಖ್ಯಾಧಿಕಾರಿ ದೇವಾನಂದ ನಾಯಕ ಇತರರಿದ್ದರು.

ದೇವಸ್ಥಾನ ಜೀರ್ಣೋದ್ಧಾರಕ್ಕಾಗಿ ಧನ ಸಹಾಯ

ರಾಣೇಬೆನ್ನೂರ: ಯಾವ ಗ್ರಾಮಗಳಲ್ಲಿ ದೇವಾಲಯಗಳಿರುತ್ತವೋ ಅಂತಹ ಗ್ರಾಮಗಳು ಶಾಂತಿ ನೆಮ್ಮದಿ ಹಾಗೂ ಆಧ್ಯಾತ್ಮಿಕತೆ ಯಿಂದ ಕೂಡಿರುತ್ತವೆ ಈ ನಿಟ್ಟಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯೂ ಕೂಡ ದೇವಸ್ಥಾನಗಳ ಕಟ್ಟಡ ಹಾಗೂ ಜೀರ್ಣೋದ್ಧಾರಕ್ಕಾಗಿ ಧನ ಸಹಾಯ ಮಾಡುತ್ತಿದೆ. ಇದರ ಸದುಪಯೋಗ ಪಡೆದುಕೊಂಡು ಸುಂದರವಾದ ದೇವಾಲಯ ನಿರ್ಮಿಸಿ ಭಕ್ತಿಯ ವಾತಾವರಣ ಸೃಷ್ಟಿ ಮಾಡಬೇಕೆಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಶಿವರಾಯಪ್ರಭು ಹೇಳಿದರು.

ಸೋಮವಾರದಂದು ತಾಲೂಕಿನ ಚಿಕ್ಕಅರಳಿಹಳ್ಳಿ ಗ್ರಾಮದ ಶ್ರೀ ಗಾಳೆಮ್ಮದೇವಿ ದೇವಸ್ಥಾನದ ನಿರ್ಮಾಣಕ್ಕೆ ದೇವಸ್ಥಾನ ಸಮಿತಿಯವರಿಗೆ 1ಲಕ್ಷ ರೂ.ಗಳ ಮೊತ್ತದ ಚೆಕ್ ವಿತರಿಸಿ ಅವರು ಮಾತನಾಡಿದರು. ತಾಲೂಕು ಯೋಜನಾಧಿಕಾರಿ ಮಂಜುನಾಥಗೌಡ ಎಂ, ದೇವಸ್ಥಾನ ಸಮಿತಿ ಅಧ್ಯಕ್ಷ ಶಿವಪ್ಪ ಹೆಚ್, ಉಪಾಧ್ಯಕ್ಷ ಹನುಮಂತ ಬನ್ನಿಮಟ್ಟಿ, ಕಾರ್ಯದರ್ಶಿ ರಮೇಶ ದೊಡ್ಡಮನಿ, ಸದಸ್ಯರಾದ ಬಾಲಪ್ಪ, ಫಕ್ಕೀರಪ್ಪ, ಲೆಕ್ಕಪ್ಪ, ಬಸವರಾಜ ಪುಟ್ಟಪ್ಪನವರ, ಫಕ್ಕಿರೇಶ ಹೆಚ್, ಗ್ರಾಮದ ಮುಖಂಡರಾದ ಹಾಲಪ್ಪ ಲಮಾಣಿ, ಫಕ್ಕೀರಶೆಟ್ರ ಮರೋಳ, ಪ್ರಕಾಶ ಶಿವಪುರ, ಹನುಮಂತಪ್ಪ ಓಲೇಕಾರ, ಗಣೇಶ ಮುದ್ದೇರ, ಪುಟ್ಟವ್ವ ಹೆಚ್, ವಲಯ ಮೇಲ್ವಿಚಾರಕ ಬಸವರಾಜ ಲಮಾಣಿ, ಕುಮಾರ ಚಕ್ರಸಾಲಿ ಸೇವಾಪ್ರತಿನಿಧಿ ಸರಸ್ವತಿ ದೀಪಾವಳಿ ಸೇರಿದಂತೆ ಒಕ್ಕೂಟದ ಪದಾಧಿಕಾರಿಗಳು ಮತ್ತಿತರರು ಇದ್ದರು.



ರಾಣೇಬೆನ್ನೂರ: ತಾಲೂಕಿನ ಚಿಕ್ಕಅರಳಿಹಳ್ಳಿ ಗ್ರಾಮದ ಶ್ರೀ ಗಾಳೆಮ್ಮದೇವಿ ದೇವಸ್ಥಾನದ ನಿರ್ಮಾಣಕ್ಕೆ ದೇವಸ್ಥಾನ ಸಮಿತಿಯವರಿಗೆ 1 ಲಕ್ಷ ರೂ.ಗಳ ಮೊತ್ತದ ಚೆಕ್ ವಿತರಿಸಲಾಯಿತು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಶಿವರಾಯಪ್ರಭು, ತಾಲೂಕು ಯೋಜನಾಧಿಕಾರಿ ಮಂಜುನಾಥಗೌಡ ಎಂ, ದೇವಸ್ಥಾನ ಸಮಿತಿ ಅಧ್ಯಕ್ಷ ಶಿವಪ್ಪ ಹೆಚ್, ಉಪಾಧ್ಯಕ್ಷ ಹನುಮಂತ ಬನ್ನಿಮಟ್ಟಿ, ಕಾರ್ಯದರ್ಶಿ ರಮೇಶ ದೊಡ್ಡಮನಿ ಇತರರು ಇದ್ದರು.

ಪ್ರಗತಿಪರ ಯೋಜನೆಗಳಿಂದ ಸಾಧನೆಯತ್ತ: ಅಧ್ಯಕ್ಷ ಮಂಜನಗೌಡ ಪಾಟೀಲ

ಹಾವೇಮುಲ್‌ಗೆ 8 ಕೋಟಿ ರೂ. ನಿವ್ವಳ ಲಾಭ

ಹಾವೇರಿ: ಹಾವೇರಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು 2025-26ನೇ ಸಾಲಿನಲ್ಲಿ ಸುಮಾರು 8 ಕೋಟಿ ರೂ. ನಿವ್ವಳ ಲಾಭ ಹೊಂದಿದ್ದು, ಹಲವು ಪ್ರಗತಿಪರ ಯೋಜನೆಗಳ ಗುರಿಯೊಂದಿಗೆ ಸಾಧನೆಯತ್ತ ಮುನ್ನುಗ್ಗುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹಾವೇರಿ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಮಂಜನಗೌಡ ಪಾಟೀಲ ಹೇಳಿದರು.

ನಗರದ ಹಾವೇಮುಲ್ ಕಚೇರಿ ಸಭಾಂಗಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕಳೆದ ಆರ್ಥಿಕ ವರ್ಷದಲ್ಲಿ ಹಾವೇಮುಲ್ ಸುಮಾರು 14.95 ಕೋಟಿ ರೂ, ಆರ್ಥಿಕ ನಷ್ಟ ಅನುಭವಿಸಿತ್ತು. ನಮ್ಮ ಆಡಳಿತ ಮಂಡಳಿ ಅಧಿಕಾರಕ್ಕೆ ಬಂದ ಬಳಿಕ ಕೈಗೊಂಡ ಅನೇಕ ಸುಧಾರಣಾ ಕ್ರಮಗಳಿಂದಾಗಿ ಈ ವರ್ಷ ಸಂಸ್ಥೆ ಲಾಭಗಳಿಸುತ್ತಿರುವುದು ಸಂತಸ ತಂದಿದೆ ಎಂದರು. ಹಾವೇರಿ ಜಿಲ್ಲಾ ಹಾಲು ಒಕ್ಕೂಟವು ಧಾರವಾಡ ಜಿಲ್ಲಾ ಹಾಲು ಒಕ್ಕೂಟದಿಂದ ವಿಭಜನೆಗೊಂಡು 2022 ಏ.1ರಿಂದ ತನ್ನ ಕಾರ್ಯಚಟುವಟಿಕೆ ಆರಂಭಿಸಿತು. ಪ್ರತಿದಿನ 1.50ಲಕ್ಷ ಲೀ. ಹಾಲು ಶೇಖರಣೆ ಮಾಡುತ್ತಿದ್ದು, ಒಕ್ಕೂಟ ವ್ಯಾಪ್ತಿಯಲ್ಲಿ 33 ಬಿಎಂಸಿ ಕೇಂದ್ರಗಳು, ಎರಡು ಶೀಥಲೀಕರಣ ಘಟಕಗಳು, 449 ಸಹಕಾರ ಸಂಘಗಳು, ಯುಹೆಚ್‌ಟಿ ಘಟಕ, ಪೌಚ್ ಘಟಕವನ್ನು ಒಳಗೊಂಡಿದ್ದರೂ ಆರ್ಥಿಕ ಹೊಡೆತವನ್ನು ಅನುಭವಿಸಬೇಕಾಯಿತು ಎಂದರು.

ಕಳೆದ 2025-26ನೇ ಸಾಲಿನಲ್ಲಿ 28 ಹೊಸ ಸಂಘಗಳನ್ನು ಸ್ಥಾಪನೆಮಾಡಿದೆ. ಒಕ್ಕೂಟ ನಷ್ಟದಲ್ಲಿದ್ದರೂ ಹಾಲು ಉತ್ಪಾದಕರಿಗೆ ಎರಡು ವರ್ಷಗಳಿಂದ ಖರೀದಿ ದರವನ್ನು ಹೆಚ್ಚಿಗೆ ಪಾವತಿಸಲಾಗಿದೆ. 2024-25ನೇ ಸಾಲಿಗೆ ಹೋಲಿಕೆ ಮಾಡಿದ್ದಲ್ಲಿ ಹಾಲು ಉತ್ಪಾದಕ ಸಂಘಗಳಿಗೆ 5 ರಿಂದ 6 ಬಿಲ್ ಪಾವತಿಗೆ ಬಾಕಿ ಇದ್ದು, ಪ್ರಸ್ತುತ 2 ಬಿಲ್ ಮಾತ್ರ ಬಾಕಿ ಇದೆ. 2026 ಏ.1ರಿಂದ ಅನ್ವಯವಾಗುವಂತೆ ಸಂಘಗಳ ಸಿಬ್ಬಂದಿಗಳಿಗೆ ಹಾಲು ಗುಣಮಟ್ಟದ ಪ್ರೋತ್ಸಾಹ ಧನವನ್ನು ಪ್ರತಿ ಕೆಜಿ ಹಾಲಿಗೆ 15 ಪೈಸೆಯಂತೆ ಹೆಚ್ಚಿಸಿ ಒಟ್ಟು 50 ಪೈಸೆಯಂತೆ ಪಾವತಿಸಲಾಗುತ್ತದೆ. ಕಳೆದ ನಾಲ್ಕು ವರ್ಷಗಳಿಂದ ಬಾಕಿ ಉಳಿಸಿಕೊಂಡಿದ್ದ ಡಿವಿಡೆಂಡ್ ಮತ್ತು ಬೋನಸ್‌ನ್ನು ಹೊಸ ಆಡಳಿತ ಮಂಡಳಿ ಬಂದ ಬಳಿಕ ಸುಮಾರು 60 ಲಕ್ಷ ರೂ.ಹಣವನ್ನು ಹಾಲು ಉತ್ಪಾದಕ ಸಂಘಗಳಿಗೆ ಪಾವತಿಸಲಾಗಿದೆ ಎಂದರು.



> ಮೆಗಾ ಡೇರಿ ನಿರ್ಮಾಣಕ್ಕೆ ಹಿಂದಿನ ಬಿಜೆಪಿ ಸರ್ಕಾರ ತನ್ನ ಬಜೆಟ್‌ನಲ್ಲಿ 70 ಕೋಟಿ ಅನುದಾನ ಘೋಷಿಸಿದ್ದು, ಈ ಪೈಕಿ ಆಗ 65 ಕೋಟಿ ಬಿಡುಗಡೆಗೊಳಿಸಿತ್ತು. ಬಾಕಿ ಉಳಿದ 5ಕೋಟಿ ಅನುದಾನವನ್ನು ಪ್ರಸ್ತುತ ಸರ್ಕಾರದಿಂದ ಬಿಡುಗಡೆ ಮಾಡಿಕೊಂಡು ಬರಲಾಗಿದ್ದು, ಕೊನೆಯ ಹಂತದ ಕಾಮಗಾರಿ ನಡೆಯುತ್ತಿದೆ. ಎರಡ್ಮೂರು ತಿಂಗಳಲ್ಲಿ ಉದ್ಘಾಟನೆ ಮಾಡಲಾಗುವುದು.
>
> ■ ಮಂಜನಗೌಡ ಪಾಟೀಲ, ಅಧ್ಯಕ್ಷರು, ಹಾವೇಮುಲ್.

135 ಅನ್‌ಲೈಸರ್ ವಿತರಣೆ: 2025-26ನೇ ಸಾಲಿನಲ್ಲಿ ಹಾಲಿನ ಗುಣಮಟ್ಟ ಸುಧಾರಿಸಲು ಒಕ್ಕೂಟದಿಂದ ಸಂಘಗಳಿಗೆ 135 ಅನ್‌ಲೈಸರ್‌ಗಳು, 80 ಎಎಂಸಿಯುಗಳನ್ನು ನೀಡಲಾಗಿದೆ. ಬಿಎಂಸಿಗಳಲ್ಲಿ ಕಲಬೆರಕೆ ಹಾಲು ಪತ್ತೆ ಮಾಡಲು ಮಿಲ್ಕ್ ಆಡಲ್ಟ್ರೇಷನ್ ಮಶೀನ್‌ಗಳನ್ನು ನೀಡಿದೆ. ಜತೆಗೆ ಹೊಸದಾಗಿ ಆರು ಬಿಎಂಸಿಗಳನ್ನು ಅಳವಡಿಸಲಾಗಿದೆ. ಕಳೆದ ಎಂಟು ತಿಂಗಳಿನಿಂದ ಕೆಪಿಪಿಪಿ ನಿಯಮಾವಳಿ ಪ್ರಕಾರ 40ಕ್ಕಿಂತ ಹೆಚ್ಚು ಟೆಂಡರ್‌ಗಳನ್ನು ಕರೆದು ಪಾರದರ್ಶಕತೆ ಅಳವಡಿಸಿದ್ದು, ಇದರಿಂದ ಆರ್ಥಿಕವಾಗಿ ಒಕ್ಕೂಟಕ್ಕೆ ಉಳಿತಾಯವಾಗಿದೆ ಎಂದರು.

60 ಫ್ರಾಂಚೈಸಿ ಸ್ಥಾಪನೆ: ಒಕ್ಕೂಟದ ವ್ಯಾಪ್ತಿಯಲ್ಲಿ ಕಳೆದ ಎಂಟು ತಿಂಗಳಿನಿಂದ ಸುಮಾರು 60 ಫ್ರಾಂಚೈಸಿ ಹಾಗೂ ಒಕ್ಕೂಟದಿಂದ 2 ಎಕ್ಸ್‌ಕ್ಲೂಸಿವ್ ಕೇಂದ್ರಗಳನ್ನು ತೆರೆಯಲಾಗಿದೆ. ಇದರಿಂದ ಪ್ರತಿದಿನ 2ಸಾವಿರ ಲೀ ಹಾಲು, 2 ಸಾವಿರ ಕೆಜಿ ಮೊಸರು ಹೆಚ್ಚಿಗೆ ಮಾರಾಟವಾಗುತ್ತಿದೆ. ಮುಂದಿನ ದಿನಗಳಲ್ಲಿ ಪ್ರತಿದಿನ 25ಸಾವಿರ ಲೀ ಹಾಲು ಹಾಗೂ 10ಸಾವಿರ ಕೆಜಿ ಮೊಸರು ಮಾರಾಟ ಮಾಡುವ ಗುರಿ ಹೊಂದಲಾಗಿದೆ. ಒಟ್ಟಾರೆಯಾಗಿ ಹಾಲು ಶೇಖರಣೆಯಲ್ಲಿ ಶೇ. 5ರಷ್ಟು ಪ್ರಗತಿ ಸಾಸಿದ್ದು, ಒಕ್ಕೂಟದಿಂದ ಮಾರಾಟವಾಗುತ್ತಿರುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಪ್ರತಿಶತ 20ರಷ್ಟು ಪ್ರಗತಿ ಸಾಸಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.


ಒಕ್ಕೂಟದ ಉಪಾಧ್ಯಕ್ಷ ಉಜ್ಜನಗೌಡ ಮಾವಿನತೋಪ, ನಿರ್ದೇಶಕರಾದ ಪ್ರಕಾಶ ಬನ್ನಿಹಟ್ಟಿ, ಬಸವೇಶಗೌಡ ಪಾಟೀಲ, ಚಂದ್ರಪ್ಪ ಜಾಲಗಾರ, ಶಂಕರಗೌಡ ಪಾಟೀಲ, ವ್ಯವಸ್ಥಾಪಕ ನಿರ್ದೇಶಕ ಪ್ರದೀಪ ಎಸ್.ಎಂ., ಇತರರಿದ್ದರು.

ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ

ಹಾನಗಲ್: ಹಿಂದೆ ದೇಶದಲ್ಲಿ ಯುಪಿಎ ಸರ್ಕಾರದ ಸಂದರ್ಭದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಕೇಂದ್ರ ಸರ್ಕಾರ ಶೇ. 80 ರಷ್ಟು ಅನುದಾನ ಭರಿಸಿದರೆ, ರಾಜ್ಯ ಸರ್ಕಾರ ಕೇವಲ ಶೇ. 20 ರಷ್ಟು ಮಾತ್ರ ಅನುದಾನ ಭರಿಸಬೇಕಿತ್ತು. ಆದರೀಗ ಈ ಅನುಪಾತ ಸಂಪೂರ್ಣ ಬದಲಾಗಿದ್ದು, ಕೇಂದ್ರ ಸರ್ಕಾರ ಕೇವಲ ಶೇ. 20 ರಷ್ಟು ಅನುದಾನ ಮಾತ್ರ ಭರಿಸಿ ಕೈ ತೊಳೆದುಕೊಳ್ಳುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಬೇಸರ ವ್ಯಕ್ತಪಡಿಸಿದರು.

ತಾಲೂಕಿನ ಹರನಗಿರಿ ಗ್ರಾಮದಲ್ಲಿ 20 ಲಕ್ಷ ರೂ.ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ ಸೇರಿದಂತೆ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದ ಅವರು, 2016 ರಿಂದಲೇ ಕೇಂದ್ರ ಸರ್ಕಾರ ರಾಜ್ಯದ ಮೇಲೆ ಮಲತಾಯಿ ಧೋರಣೆ ಪ್ರದರ್ಶಿಸುತ್ತಿದೆ. ರಾಜ್ಯದಲ್ಲಿ ಹಿಂದೆ ಬಿಜೆಪಿ ಅಧಿಕಾರದಲ್ಲಿ ಇದ್ದಾಗಲೂ ಅನ್ಯಾಯದ ವಿರುದ್ಧ ಧ್ವನಿ ಎತ್ತಲಿಲ್ಲ, ಇದೀಗ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಸ್ವರೂಪ ಬದಲಿಸಿ ಗ್ರಾಮೀಣ ಭಾಗಕ್ಕೆ ಅನ್ಯಾಯ ಮಾಡಿ, ಗ್ರಾಮ ಪಂಚಾಯಿತಿಗಳ ಅಧಿಕಾರ ಕಿತ್ತುಕೊಂಡರೂ ಬಿಜೆಪಿ ನಾಯಕರು ಏನೂ ಆಗಿಯೇ ಇಲ್ಲ ಎಂದು ವರ್ತಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡರಾದ ಸುರೇಶ ಸಂತಣ್ಣನವರ, ಸುರೇಶ ತಳವಾರ, ತಿಪ್ಪಣ್ಣ ಸಂತಣ್ಣನವರ, ಸೋಮಪ್ಪ ಶಿಡ್ಲಾಪೂರ, ಬಸವರಾಜ ಶಿಡ್ಲಾಪೂರ, ಗೂಳನಗೌಡ ಮೇಲ್ಮನಿ, ವಿಠ್ಠಲ ಚವ್ಹಾಣ, ಅಶೋಕ ಸಂತಣ್ಣನವರ, ಅಂಜನಕುಮಾರ ಸಂತಣ್ಣನವರ, ದುಶ್ಯಂತ ಸಂತಣ್ಣನವರ, ಪ್ರಕಾಶ ಸಂತಣ್ಣನವರ, ಕಾಳಪ್ಪ ಬಡಿಗೇರ, ವೀರೇಂದ್ರ ಬಡಿಗೇರ, ಮಂಜುನಾಥ ಚವ್ಹಾಣ, ಪರಶುರಾಮ ಚವ್ಹಾಣ ಇದ್ದರು.



ಬಿಜೆಪಿ 47ನೇ ಸಂಸ್ಥಾಪನಾ ದಿನಾಚರಣೆ



ಹಾವೇರಿ: ಇಲ್ಲಿಯ ಕಾಗಿನೆಲೆ ರಸ್ತೆಯಲ್ಲಿರುವ ಭಾರತೀಯ ಜನತಾ ಪಕ್ಷದ ಜಿಲ್ಲಾ ಕಚೇರಿಯಲ್ಲಿ ಸೋಮವಾರ ಬಿಜೆಪಿ ಪಕ್ಷದ 47ನೇ ಸಂಸ್ಥಾಪನಾ ದಿನಾಚರಣೆಯನ್ನು ಧ್ವಜಾರೋಹಣ ಮಾಡುವ ಮೂಲಕ ವಿಜೃಂಭಣೆಯಿಂದ ಆಚರಿಸಲಾಯಿತು.

ಈ ವೇಳೆ ಕಾರ್ಯಕ್ರಮವನ್ನುದ್ದೇಶಿಸಿ ವಿಭಾಗೀಯ ಸಹ ಪ್ರಭಾರಿ ಭೋಜರಾಜ ಕರೂದಿ ಮಾತನಾಡಿ, ಪಕ್ಷದ ಏಳಿಗೆಗಾಗಿ ಅನೇಕ ಮುಖಂಡರು ಹಾಗೂ ಕಾರ್ಯಕರ್ತರ ಬಲಿದಾನದಿಂದ ಭಾ.ಜ.ಪ ಗಟ್ಟಿನೆಲೆ ಪಡೆದುಕೊಂಡಿದೆ. ರಾಜಕೀಯ ಶಕ್ತಿಯಾಗಿ ದೇಶಾದ್ಯಂತ ಮತ್ತು ಕರ್ನಾಟಕದಲ್ಲಿಯೂ ಆಕಾರ ಹಿಡಿಯುವಲ್ಲಿ ಯಶಸ್ವಿಯಾಗಿದೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಮಾತನಾಡಿ, ಪ್ರಧಾನಿ ನರೇಂದ್ರಮೋದಿ ನಾಯಕತ್ವದಲ್ಲಿ ದೇಶದಲ್ಲಿ ಬಿಜೆಪಿ ಪಕ್ಷ ಸದೃಢವಾಗಿದೆ. ಬಿಜೆಪಿ ಕಾರ್ಯಕರ್ತರ ಒಗ್ಗೂಡಿಕೆ ಹಾಗೂ ಸಂಘಟನಾತ್ಮಕ ಚಟುವಟಿಕೆಯಿಂದ ಪಕ್ಷವು ಮುಂಬರುವ ಎಲ್ಲ ಕಾರ್ಯಕರ್ತರ ಚುನಾವಣೆಯಲ್ಲಿ ಯಶಸ್ವಿಯಾಗಬೇಕೆಂದು ಕರೆ ನೀಡಿದರು.

ಮುಖಂಡ ಗವಿಸಿದ್ದಪ್ಪ ದ್ಯಾಮಣ್ಣವರ ಮಾತನಾಡಿ, ದೇಶಾದ್ಯಂತ ಸಂಘಟನೆಯಲ್ಲಿ ಬಲವಿದೆ, ಸಂಘಟನಾತ್ಮ ಶಕ್ತಿ ಬಲ ಪಡಿಸೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯಕಾರಣಿ ಸದಸ್ಯ ನಾಗೇಂದ್ರ ಕಟಕೋಳ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಂಜುಂಡೇಶ ಕಳ್ಳೇರ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಕಿರಣ ಕೋಣನವರ, ಜಿಲ್ಲಾ ಮಹಿಳಾ ಪ್ರಧಾನ ಕಾರ್ಯದರ್ಶಿ ವಿದ್ಯಾ ಶೆಟ್ಟಿ, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರಪ್ಪ ಹರಿಜನ ಹಾವೇರಿ ನಗರ ಮಂಡಲ ಅಧ್ಯಕ್ಷ ಕಿರಣ ಕೊಳ್ಳಿ, ರುದ್ರೇಶ ಚಿನ್ನಣ್ಣನವರ, ಗುಡ್ಡಪ್ಪ ಭರಡಿ, ನಾಗರಾಜ ಹರಿಗೋಲ, ಕೃಷ್ಣ ಲಮಾಣಿ, ಶ್ರೀಕಾಂತ ವಡ್ಡರ, ಮನೋಜ ಜಾಧವ, ಮೃತ್ಯುಂಜಯ ಮುಷ್ಠಿ, ಸುನೀಲ ರಾಯ್ಕರ್, ಸುನೀಲ ಬೇಟಗೇರಿ, ಶಂಭು ಹತ್ತಿ, ರಾಜಶೇಖರ ಮುಂಡಾಸದ, ಯಲ್ಲಪ್ಪ ಸಿರಗೇರಿ, ಕುಮಾರ, ಈರಣ್ಣ ಹೊನ್ನಾಳಿ, ವಿಜಯಲಕ್ಷ್ಮೀ ಸೇರಿದಂತೆ ಪಕ್ಷದ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಾಂಗ್ರೆಸ್‌ಗೆ ಎ.ಎಂ. ಖಾಜಿ ಸೇರ್ಪಡೆ

ಬ್ಯಾಡಗಿ: ಪಟ್ಟಣದ ಜೀವ ವಿಮಾ ನಿಗಮದ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತ ಹೊಂದಿದ ಎ.ಎಂ. ಖಾಜಿ ಅವರು ಭಾನುವಾರ ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು.

ಬಾಗಲಕೋಟೆ ನಗರದ ಉಪಚುನಾವಣೆಯ ಪ್ರಚಾರಾರ್ಥ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹಾಗೂ ಬ್ಯಾಡಗಿ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಬಸವರಾಜ್ ಶಿವಣ್ಣನವರ್ ಮತ್ತು ಹಾವೇರಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸಂಜೀವ್ ನೀರಲಗಿ ಅವರ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಡಾ. ಎ.ಎಂ. ಸೌಧಾಗರ. ಆಶ್ರಯ ಕಮಿಟಿ ಅಧ್ಯಕ್ಷ ಅಬ್ದುಲ್ ಮುನಾಫ್ ಏರಿಸೀಮೆ. ಹಾಗೂ ಮುಖಂಡರಾದ ಮಜೀದ್ ಮುಲ್ಲಾ ಇನ್ನು ಅನೇಕರು ಉಪಸ್ಥಿತರಿದ್ದರು.



ಹಸಿರು ಕ್ರಾಂತಿಯ ಹರಿಕಾರ ಜಗಜೀವನರಾಂ: ತಹಶೀಲ್ದಾರ್

ಬ್ಯಾಡಗಿ: ದೇಶದ ಅಭಿವೃದ್ಧಿಯ ಹರಿಕಾರರು, ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ ಮಹಾನ್ ನಾಯಕರು ಬಾಬು ಜಗಜೀವನ ರಾಂ ಅವರ ತತ್ವ ಸಿದ್ಧಾಂತಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಹಶೀಲ್ದಾರ್ ಚಂದ್ರಶೇಖರ್ ನಾಯಕ್ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯ ಆವರಣದಲ್ಲಿ ನಡೆದ 119 ನೇ ಡಾ.ಬಾಬು ಜಗಜೀವನ ರಾಂ ಅವರ ಜಯಂತಿಯಲ್ಲಿ ಬಾಬಾ ಜಗಜೀವನ್ ರಾಂ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸುವ ಮೂಲಕ ಮಾತನಾಡಿದರು. ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ರಕ್ಷಣಾ ಸಚಿವರಾಗಿ ಯೋಧರಿಗೆ ಧೈರ್ಯ ತುಂಬಿ, ಪಾಕಿಸ್ತಾನ ವಿರುದ್ಧ ಹೋರಾಡಿ ಜಯಗಳಿಸಿದ ಸಂದರ್ಭ ನಾವು ಮರೆತಿಲ್ಲ, ಅಸ್ಪೃಶ್ಯತೆ ಬಗ್ಗೆ ಜನರಲ್ಲಿ ಅರಿವು ಮೂಡಿಸಿದ ಮಹಾಚೇತನ. ಅಂದಿನ ಕಾಲದಲ್ಲೇ ದೂರದೃಷ್ಟಿ ಇಟ್ಟುಕೊಂಡು ಹಸಿರು ಕ್ರಾಂತಿ ಮಾಡಿದರು ಎಂದು ಸ್ಮರಿಸಿದರು.



ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಮಲ್ಲಿಕಾರ್ಜುನ ಮಾತನಾಡಿ, ದೇಶದ ಸಂವಿಧಾನ ಯಾವುದೇ ಒಂದು ಜಾತಿ ಅಥವಾ ಧರ್ಮಕ್ಕೆ ಸೀಮಿತವಲ್ಲ, ಪ್ರತಿಯೊಬ್ಬ ಭಾರತೀಯ ಮನುಕುಲಕ್ಕೆ ಅದು ಸೇರಿದೆ. ಹಾಗಾಗಿ ನಮ್ಮ ನಮ್ಮಲೇ ಜಾತಿ ಮತಗಳು ಎಂದು ಕಿತ್ತಾಡದೆ ಎಲ್ಲರೂ ಒಂದಾಗಿ ಬದುಕಿ ಬಾಳಬೇಕು. ಜಾತಿ ಇಟ್ಟುಕೊಂಡು ರಾಜಕೀಯ ಮಾಡಬಾರದು. ಪ್ರತಿಯೊಬ್ಬರಿಗೂ ತಮ್ಮದೇ ಆದ ಹಕ್ಕು ಇರುತ್ತದೆ. ಅದಕ್ಕೆ ಧಕ್ಕೆ ತರಬಾರದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಎಂ.ಎಫ್. ನದಾಫ್, ಕೃಷಿ ಇಲಾಖೆ ಅಧಿಕಾರಿ ಗಣೇಶ ಕಮ್ಮಾರ, ಮಾಜಿ ಸೈನಿಕ ಎಂ.ಡಿ. ಚಿಕ್ಕಣ್ಣನವರ, ಸಮಾಜದ ಮುಖಂಡರಾದ ಸುರೇಶ್ ಆಸಾದಿ, ಸೋಮಣ್ಣ ಮಾಳಗಿ, ದುರ್ಗೇಶ್ ಗೋಣೆಮ್ಮನವರ, ನಾಗರಾಜ್ ಹಾವನೂರ್, ಬಸವರಾಜ ತಡಸದ ಹಾಗೂ ಇಲಾಖೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಹೆಣ್ತನದ ಘನತೆ ಗೌರವಗಳ ಪ್ರತೀಕ ಅಕ್ಕಮಹಾದೇವಿ: ತಡಂಬದ

ಹಾವೇರಿ: ತನ್ನ ವೈಚಾರಿಕತೆ ಹಾಗೂ ದಿಟ್ಟತನದ ನಡವಳಿಕೆಗಳ ಮೂಲಕ ಹೆಣ್ತನದ ಘನತೆ ಗೌರವಗಳ ಪ್ರತಿಕವಾಗಿದ್ದಾಳೆ ಶರಣೆ ಅಕ್ಕಮಹಾದೇವಿ ಎಂದು ಮಂಗಳ ತಡಂಬದ ಹೇಳಿದರು.

ಇಲ್ಲಿನ ವಿನಾಯಕ ನಗರದ ನಾಗರಿಕ ವೇದಿಕೆ ಹಾಗೂ ಮಹಿಳಾ ಘಟಕದ ಜಂಟಿ ಆಶ್ರಯದಲ್ಲಿ ವೈರಾಗ್ಯ ನಿಧಿ ಅಕ್ಕಮಹಾದೇವಿ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಹಲವು ವಿದ್ವಾಂಸರು ಕಾಲ ಕಾಲಕ್ಕೆ ಅಕ್ಕಮಹಾದೇವಿಯ ಬದುಕು, ವ್ಯಕ್ತಿತ್ವಗಳನ್ನು ಕುರಿತಂತೆ ಮಾಡಿರುವ ಪ್ರಶಂಸೆಗಳು ಹೆಣ್ಣಾಗಿ ಆಕೆಯ ಸಾಧನೆಯನ್ನು ಸೂಚಿಸುತ್ತವೆ ಎಂದು ಹೇಳಿದರು.

ಬಸವ ಬಳಗದ ಶಿವಬಸಪ್ಪ ಮುದ್ದಿ ಮಾತನಾಡಿ, ಬದುಕಿನ ಎಲ್ಲಾ ಮಾನವೀಯ ಸಂಬಂಧಗಳ ಅರ್ಥಪೂರ್ಣತೆಗಾಗಿ ಬಯಸುವವರಿಗೆ ಅಕ್ಕನ ದಿಟ್ಟತನ, ಅನುಭವಕ್ಕೆ



ಅಕ್ಕನವರು ತನ್ನನ್ನು ಒಪ್ಪಿಕೊಂಡ ಧೀರತೆ, ಅಭಿವ್ಯಕ್ತಿಯಲ್ಲಿನ ಪ್ರಾಮಾಣಿಕತೆಗಳು, ಆಶಯ, ಆತ್ಮ ಶೋಧನಾ ಗುಣವು ನಿಜವಾಗಿ ಮಾದರಿಯಾಗಬಲ್ಲವು ಎಂದರು.

ಬಿ.ಜಿ. ಭರಮಗೌಡ್ರು ಮಾತನಾಡಿ, ಅಕ್ಕಮಹಾದೇವಿ ಕಲ್ಯಾಣದ ಎಲ್ಲಾ ಶರಣ ಸಮೂಹದ ಮೇಲೆ ಗಾಢವಾದ ಪ್ರಭಾವವನ್ನು ಬೀರಿ ಪ್ರಭು ದೇವರಾದಿಯಾಗಿ ಎಲ್ಲಾ ಶರಣರು ವಯಸ್ಸಿನಲ್ಲಿ ಕಿರಿಯಳಾದರೂ ಅನುಭವದಲ್ಲಿ ಹಿರಿಯರಾದ ಆಕೆಯನ್ನು ಅಕ್ಕನೆಂದು ಒಪ್ಪಿಕೊಂಡು ಗೌರವಿಸಿದ್ದಾರೆ ಎಂದು ಹೇಳಿದರು.

ಮಹಿಳಾ ಘಟಕದ ಆಧ್ಯಕ್ಷೆ ಆಶಾ ತಿಮ್ಮಾಪುರ ಮಾತನಾಡಿದರು.

ವೇದಿಕೆಯ ಮಾಜಿ ಅಧ್ಯಕ್ಷ ಟಿ.ಜಿ. ಚನ್ನವೀರಪ್ಪ ಉದ್ಘಾಟಿಸಿದರು. ವೇದಿಕೆಯ ಅಧ್ಯಕ್ಷ ನಿಜಲಿಂಗಪ್ಪ ಕಾಳೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಕ್ಕನ ವಚನಗಳು ಬದುಕಿನಲ್ಲಿ ನೊಂದು, ಬೆಂದವರಿಗೆ ಭರವಸೆಯ ಕಿರಣಗಳಾಗಿವೆ. ಕಷ್ಟಕ್ಕೆ ಹೆದರಿ ಜೀವನವನ್ನು ಮುಕ್ತಾಯಗೊಳಿಸದೇ ಧೈರ್ಯದಿಂದ ಎದುರಿಸುವ, ಹೆಣ್ಣು ಮಾಯೆ ಆಕೆಗೆ ಆಧ್ಯಾತ್ಮ ಸಾಧನೆ ಇಲ್ಲ ಎನ್ನುವಂತಿದ್ದ ಕಾಲದಲ್ಲಿ ತನ್ನ ದಿಟ್ಟತನದಿಂದ ಸಾಧನೆಯಿಂದ ಸ್ತ್ರೀ ಕುಲಕ್ಕೆ ದಾರಿ ದೀಪವಾದವಳು ಎಂದು ಹೇಳಿದರು.

ಮಲ್ಲಿಕಾರ್ಜುನ ಅಗಡಿ, ಶಿವಾನಂದ ತೆಪ್ಪದ, ಎಸ್.ಎಲ್. ಕಾಡದೇವರಮಠ, ಎಸ್.ಬಿ. ಗಂಜಿಗಟ್ಟಿ, ರಮೇಶ್ ದೊಡ್ಡಮನಿ, ಜಯಶ್ರೀ ದೊಡ್ಡಮನಿ, ಭಾಗ್ಯ ಕೋಪರ್ಡೆ, ಅಕ್ಕಮ್ಮ ಎಲಿಗಾರ, ಭುವನೇಶ್ವರಿ ಹಾಲವಾಡಿಮಠ, ಪರ್ವೀನ್ ಯಲಗೇರಿ, ಮುರುಗೆಪ್ಪ ಕಡೆಕೊಪ್ಪ ಮತ್ತಿತರರು ಪಾಲ್ಗೊಂಡಿದ್ದರು. ಶಾಂತಕ್ಕ ಉಳ್ಳಾಗಡ್ಡಿ, ಸಾವಿತ್ರಿಬಾಯಿ, ಭಾರತಿ ಶೆಟ್ಟರ್, ಕಾವ್ಯ ಅಂಗಡಿ ವಚನ ಪ್ರಾರ್ಥನೆ ಮಾಡಿದರು. ಕೋಶಾಧ್ಯಕ್ಷ ಬಸವರಾಜ ಬೆಲ್ಲದ ಸ್ವಾಗತಿಸಿದರು, ಸಾಹಿತಿ ಹನುಮಂತಗೌಡ ಗೊಲ್ಲರ ಪ್ರಾಸ್ತಾವಿಕ ಮಾತನಾಡಿದರು. ಕಾರ್ಯದರ್ಶಿ ಮಲ್ಲಿಕಾರ್ಜುನ ಹಿಂಚಿಗೇರಿ ನಿರೂಪಿಸಿದರು. ಘಟಕದ ಕಾರ್ಯದರ್ಶಿ ಸುಮಂಗಲ ಕಾರಗಿ ವಂದಿಸಿದರು.

ಹಾವೇರಿ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಅನುದಾನ ನೀಡಲು ಮನವಿ

ಹಾವೇರಿ: ಹಾವೇರಿ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ರೂಪಿಸಿ 100 ಕೋಟಿ ರೂ., ಅನುದಾನ ಒದಗಿಸಲು ರಾಜ್ಯ, ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಒತ್ತಾಯಿಸಿ ಹಾವೇರಿ ವಿಶ್ವವಿದ್ಯಾಲಯ ಉಳಿಸಿ ಹೋರಾಟ ಸಮಿತಿಯಿಂದ ಹಾವೇರಿಯ ಪ್ರವಾಸಿ ಮಂದಿರದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರಿಗೆ ಮನವಿ ಸಲ್ಲಿಸಲಾಯಿತು.

ಅಗತ್ಯ ಅನುದಾನ ಸೇರಿದಂತೆ ಹಲವಾರು ಮೂಲಭೂತ ಸೌಲಭ್ಯಗಳ ಕೊರತೆಯಲ್ಲಿಯೂ ನಮ್ಮ ಹಾವೇರಿ ವಿಶ್ವವಿದ್ಯಾಲಯವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ನಮ್ಮ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ ಕಾರ್ಯಕ್ರಮ ನಡೆಯುತ್ತಿರುವುದು ನಮಗೆಲ್ಲರಿಗೂ ಸಂತಸದ ವಿಷಯವಾಗಿದೆ. ಆದರೆ ಪ್ರಥಮ ಘಟಿಕೋತ್ಸವವನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸದೇ ಬೇರೆ ಕಾಲೇಜಿನಲ್ಲಿ ಆಯೋಜಿಸಿರುವುದು ಬೇಸರ ತರಿಸಿದೆ. ವಿಶ್ವವಿದ್ಯಾಲಯದ ಆವರಣದಲ್ಲಿಯೇ ಘಟಿಕೋತ್ಸವ ನಡೆಸಬೇಕೆಂಬುದು ನಮ್ಮ ಜಿಲ್ಲೆಯ ಎಲ್ಲ ಜನರ ಆಶಯವಾಗಿತ್ತು, ಹೀಗಾಗಿ ಇನ್ನುಂದೆ ವಿವಿ ಆವರಣದಲ್ಲೇ ಘಟಿಕೋತ್ಸವ ಆಯೋಜಿಸುವಂತೆ ನಿರ್ದೇಶನ ನೀಡುವಂತೆ ಒತ್ತಾಯಿಸಿದರು.

42 ಎಕರೆ ಪ್ರದೇಶ ವ್ಯಾಪ್ತಿಯಲ್ಲಿರುವ ನಮ್ಮ ಹಾವೇರಿ



ವಿಶ್ವವಿದ್ಯಾಲಯಕ್ಕೆ ಅಗತ್ಯ ಅನುದಾನ, ಖಾಯಂ ಸಿಬ್ಬಂದಿ ನೇಮಕ, ಹೊಸ ವಿಭಾಗಗಳು, ಕೋರ್ಸುಗಳು, ಅಧ್ಯಯನ ಪೀಠಗಳು, ಕಟ್ಟಡಗಳು- ಸಭಾಂಗಣ, ಹಾಸ್ಟೇಲ್‌ಗಳು, ಕ್ಯಾಂಟೀನ್, ಸಮರ್ಪಕ ರಸ್ತೆ ಸೇರಿದಂತೆ ಇನ್ನೂ ಹಲವು ಮೂಲಭೂತ ಸೌಲಭ್ಯಗಳು ಅಗತ್ಯವಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಉಪಕುಲಪತಿಗಳು, ಕುಲಸಚಿವರು (ಮೌಲ್ಯಮಾಪನ) ಹಾಗೂ ಕುಲಸಚಿವರು (ಆಡಳಿತ) ಕೇವಲ ಈ ಮೂವರು ಅಧಿಕಾರಿಗಳು ಮಾತ್ರ ಖಾಯಂ ನೌಕರರಿದ್ದಾರೆ. ಉಳಿದಂತೆ ಎಲ್ಲ ಬೋಧಕ ಸಿಬ್ಬಂದಿಗಳು ಅತಿಥಿ ಉಪನ್ಯಾಸಕರಾಗಿ ಹಾಗೂ ಬೋಧಕೇತರ ಸಿಬ್ಬಂದಿಗಳು ಹೊರಗುತ್ತಿಗೆಯಾಗಿ ದುಡಿಯುತ್ತಿದ್ದಾರೆ. ವಿವಿಗೆ ಆಗತ್ಯವಿರುವ ಹಾಗೂ ಖಾಲಿಯಿರುವ ಎಲ್ಲ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಒತ್ತಾಯಿಸಿದರು.

ವಿವಿಗೆ ಆಗತ್ಯವಿರುವ ಕಟ್ಟಡಗಳು, ಅರ್ಜಿ ಹಾಕುವ ಎಲ್ಲ ವಿದ್ಯಾರ್ಥಿಗಳಿಗೆ ಹಾಸ್ಟೇಲ್ ಸೌಲಭ್ಯ ಕಲ್ಪಿಸಲು ಅಗತ್ಯ ಹಾಸ್ಟೇಲ್ ಮಂಜೂರುಗೊಳಿಸುವುದು, ಘಟಿಕೋತ್ಸವ ಸೇರಿದಂತೆ ವಿವಿಯ ಇನ್ನಿತರ ಕಾರ್ಯಕ್ರಮಗಳನ್ನು ಆಯೋಜಿಸಲು ಅನುಕೂಲವಾಗುವಂತೆ ಸಭಾಂಗಣ ನಿರ್ಮಾಣ, ಕ್ಯಾಂಟೀನ್, ಸಮರ್ಪಕ ರಸ್ತೆ ಸೇರಿದಂತೆ ಹಲವು ಪ್ರಮುಖ ಅಭಿವೃದ್ಧಿ ಕೆಲಸಗಳನ್ನು ತುರ್ತಾಗಿ ಕೈಗೊಳ್ಳಬೇಕಿದೆ. ಹೀಗಾಗಿ ವಿಶೇಷ ಪ್ಯಾಕೇಜ್ ಮೂಲಕ ಅನುದಾನ ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡವಂತೆ ಒತ್ತಾಯಿಸಲಾಯಿತು.

ವಿಶ್ವವಿದ್ಯಾಲಯ ಉಳಿಸಿ ಹೋರಾಟ ಸಮಿತಿಯ ಸಂಚಾಲಕರಾದ ಬಸವರಾಜ ಪೂಜಾರ, ಪ್ರಮುಖರಾದ ಪರಿಮಳ ಜೈನ, ಬಸವರಾಜ ಎಸ್, ಉಡಚಪ್ಪ ಮಾಳಗಿ, ಎಂ.ಆಂಜನೇಯ, ಸುರೇಶ ಛಲವಾದಿ, ಡಾ.ತಿಪ್ಪೇಸ್ವಾಮಿ ಹೊಸಮನಿ, ಖಲಂದರ್ ಅಲ್ಲಿಗೌಡ್ರ, ಮಕಬುಲ್ ಎಂ.ಕೆ, ಅರುಣ ನಾಗಾವತ್, ಸಂಗೀತಾ ಮೋಟಳ್ಳಿ ಇತರರಿದ್ದರು.

ಕಿರುಸುದ್ದಿ



ಗೋಕಾಕ: ನಗರಕ್ಕೆ ರವಿವಾರದಂದು ಆಗಮಿಸಿದ ಶ್ರೀ ಸತ್ಯಸಾಯಿ ಪ್ರೇಮ ಪ್ರವಾಹಿನಿ ರಥಕ್ಕೆ ಇಲ್ಲಿಯ ಶ್ರೀ ಸತ್ಯಸಾಯಿ ಸೇವಾ ಸಮಿತಿಯವರು ಭವ್ಯವಾದ ಮೆರವಣಿಗೆಯೊಂದಿಗೆ ಸ್ವಾಗತಿಸಿದರು.



ಗೋಕಾಕ: ನಗರದ ಸ್ವರಧಾರೆ ಬಳಗದವರು ಭಾನುವಾರದಂದು ಆಯೋಜಿಸಿದ್ದ ಸಂಗೀತ ಕಾರ್ಯಕ್ರಮಕ್ಕೆ ಇಲ್ಲಿಯ ಶೂನ್ಯ ಸಂಪಾದನ ಮಠದ ಶ್ರೀ ಬಸವಪ್ರಭು ಸ್ವಾಮಿಜಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಹಾಂತೇಶ ತಾಂವಶಿ, ಮಲ್ಲಿಕಾರ್ಜುನ ಕಲ್ಲೋಳಿ, ರಜನಿ ಜೀರಗ್ಯಾಳ, ಮಲ್ಲಿಕಾರ್ಜುನ ವಕ್ಕುಂದ, ಕಲಾವಿದರಾದ ವಿಜಯಲಕ್ಷ್ಮೀ ಹಿರೇಮಠ, ಬಾಳಾಸಾಹೇಬ ಕುಲಕರ್ಣಿ, ದಿನೇಶ ಜುಗಳಿ, ಮಹಾದೇವ ಹಿರೇಮಠ ಇದ್ದರು.

ಏ.14 ರಂದು ಅಂಬೇಡ್ಕರ್ ಜಯಂತಿ ಆಚರಣೆ

ಬೆಳಗಾವಿ : ಖಾನಾಪೂರ ತಾಲೂಕು ಆಡಳಿತದ ವತಿಯಿಂದ ಏಪ್ರಿಲ್ 14, 2026 ರಂದು ಡಾ. ಬಾಬಾಸಾಹೇಬ ಅಂಬೇಡ್ಕರ ರವರ 135ನೇ ಜಯಂತಿ ಕಾರ್ಯಕ್ರಮದ ಅಂಗವಾಗಿ ಡಾ. ಬಾಬಾಸಾಹೇಬ ಅಂಬೇಡ್ಕರ ರವರ 135ನೇ ಜಯಂತಿ ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ 9 ಗಂಟೆಗೆ ಪಟ್ಟಣದ ಹಳೆ ತಹಶೀಲ್ದಾರ ಕಾರ್ಯಾಲಯದ ಹತ್ತಿರ ಡಾ. ಬಾಬಾಸಾಹೇಬ ಅಂಬೇಡ್ಕರ ರವರ ಭಾವಚಿತ್ರಕ್ಕೆ ಶಾಸಕ ವಿಠ್ಠಲ ಸೋಮಣ್ಣ ಹಲಗೇಕರ ಹಾಗೂ ಸಮಾಜದ ಮುಖಂಡರಿಂದ ಪೂಜೆ ನೆರವೇರಲಿದೆ.

ನಂತರ ಮೆರವಣಿಗೆಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಡಾ. ಬಾಬಾಸಾಹೇಬ ಅಂಬೇಡ್ಕರ ರವರ ಉದ್ಯಾನವನಕ್ಕೆ ತಲುಪಿದ ನಂತರ ಮಧ್ಯಾಹ್ನ 12 ಗಂಟೆಗೆ ಖಾನಾಪೂರ ಶಾಸಕ ವಿಠ್ಠಲ ಸೋಮಣ್ಣ ಹಲಗೇಕರ ಅವರ ಅಧ್ಯಕ್ಷತೆಯಲ್ಲಿ ವೇದಿಕೆ ಕಾರ್ಯಕ್ರಮ ಜರುಗುವುದು. ತಾಲೂಕಿನ ಎಲ್ಲ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಖಾನಾಪೂರ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಂಬಾಕು ಉತ್ಪನ್ನ ಮಾರಾಟ ಮಾಡುವ ಅಂಗಡಿ ಮಾಲೀಕರಿಗೆ ಜಾಗೃತಿ



ಬೆಳಗಾವಿ : ಜಿಲ್ಲಾ ಚಾರಿ, ತಂಬಾಕು ನಿಯಂತ್ರಣಾಧಿಕಾಗಳ ಮಾರ್ಗದರ್ಶನದಡಿಯಲ್ಲಿ ದಾಳಿಯಲ್ಲಿ ಸಾರ್ವಜನಿಕರಿಗೆ ಕೋಟ್ಪಾ-2003 ಕಾಯ್ದೆ ವಿರುದ್ಧವಾಗಿ ಸಾರ್ವಜನಿಕ ಸ್ಥಳ ಗಳಲ್ಲಿ ಧೂಮಪಾನ ಮಾಡುವ ಮತ್ತು ನೇರ ಪರೋಕ್ಷವಾಗಿ ತಂಬಾಕು ಜಾಹಿರಾತು ಪ್ರದರ್ಶನ, ವೈದ್ಯಕೀಯ ಮಹಾ ವಿದ್ಯಾಲಯ ಆವರಣದ 100 ಮೀಟರ ಅಂತರದೊಳಗೆ ತಂಬಾಕು ಉತ್ಪನ್ನ ಮಾರಾಟ ಮಾಡುವ ಅಂಗಡಿ ಮಾಲಿಕರಿಗೆ ಜಾಗೃತಿ ಮೂಡಿಸಿ ಹಾಗೂ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳನ್ನು ತಿಳಿಸಲಾಯಿತು. ಕೋಟ್ಪಾ-2003 ಕಾಯ್ದೆ ಅಡಿಯಲ್ಲಿ ಒಟ್ಟು 40 ಪ್ರಕರಣಗಳನ್ನು ವಿವಿಧ ಸೆಕ್ಷನಗಳಾದ 4, 6(ಚಿ),6(ಚಿ),6(ಛಿ) ದಾಖಲಿಸಿ ದಂಡ ವಿಧಿಸಲಾಯಿತು ಹಾಗೂ ಸೆಕ್ಷನ್-4 ನಾಮಫಲಕವನ್ನು ವಿತರಿಸಲಾಯಿತು. ಸಾರ್ವಜನಿಕ ರಲ್ಲಿ ತಂಬಾಕು ಸೇವನೆಯ ದುಷ್ಪರಿಣಾಮದ ಕುರಿತು ಅರಿವು ಮೂಡಿಸಲಾಯಿತು ಸದರಿ ದಾಳಿಯಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದಿಂದ ಡಾ.ಶ್ವೇತಾ ಪಾಟೀಲ ಜಿಲ್ಲಾ ಸಲಹೆಗಾರರು ಹಾಗೂ ಕವಿತಾ ರಾಜನ್ನವರ ಸಮಾಜ ಕಾರ್ಯಕರ್ತರು, ಪೊಲೀಸ್ ಇಲಾಖೆಯ ಬಸವರಾಜ ಮಜಟ್ಟಿ ಸದರಿ ದಾಳಿಯಲ್ಲಿ ಉಪಸ್ಥಿತರಿದ್ದರು.



ರಾಯಬಾಗ: ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಸೋಮವಾರ ಬಿಜೆಪಿ ಸಂಸ್ಥಾಪನಾ ದಿನವನ್ನು ಆಚರಿಸಲಾಯಿತು. ಶಾಸಕ ಡಿ.ಎಂ. ಐಹೊಳೆ, ಮಂಡಲ ಅಧ್ಯಕ್ಷ ಪೃಥ್ವಿರಾಜ ಜಾಧವ, ಚಿಕ್ಕೋಡಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸದಾನಂದ ಹಳಿಂಗಳಿ, ಸದಾಶಿವ ಘೋರ್ಪಡೆ, ಅಣ್ಣಾಸಾಹೇಬ ಖೇಮಲಾಪುರೆ, ಸಂಗಣ್ಣ ದತ್ತವಾಡೆ, ಮಾರುತಿ ಬಂತೆ, ರಿಯಾಜ್ ಮೊಮೀನ್, ಮಹಾದೇವ ನಾಯಿಕ, ಮಹೇಶ ಕರಮಡಿ, ಮಹಾದೇವ ಬಿಳಿಕುರಿ, ಮಾರುತಿ ಅಳಗವಾಡಿ, . ವಿಜಯ ಆಕಳೆ, ಸುಭಾಷ ಕಾಂಬಳೆ, ವಿಠ್ಠಲ ಮಾನೆ, ಸತೀಶ ಮಾನೆ ಸೇರಿ ಬಿಜೆಪಿ ಕಾರ್ಯಕರ್ತರು ಇದ್ದರು.

ಡಾ.ಬಾಬೂಜಿ ಭಾವಚಿತ್ರದ ಮೆರವಣಿಗೆ

ಹುಕ್ಕೇರಿ: ಪಟ್ಟಣದಲ್ಲಿ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಮ್ ಅವರ 119ನೇ ಜಯಂತಿ ಭಾನುವಾರ ಆಚರಿಸಲಾಯಿತು. ತಾಲೂಕಾಡಳಿತ, ಸಮಾಜ ಕಲ್ಯಾಣ ಇಲಾಖೆ ಹಾಗೂ ಸಮಾಜ ಬಾಂಧವರು ಸೇರಿ ಮುಂಜಾನೆಪಟ್ಟಣದಲ್ಲಿ ಜಗಜೀವನರಾಂ ಅವರ ಭಾವಚಿತ್ರದ ಮೆರವಣಿಗೆ ಹಮ್ಮಿಕೊಂಡರು. ವಾದ್ಯಮೇಳದೊಂದಿಗೆ ಡಾ.ಅಂಬೇಡ್ಕರ್ ಉದ್ಯಾನವನದಿಂದ ಸಂಚರಿಸಿದ ಮೆರವಣಿಗೆ ಜಗಜೀವನರಾಮರ ಭವನಕ್ಕೆ ತೆರಳಿ ಸಭೆಯಾಗಿ ಮಾರ್ಪಟ್ಟಿತು. ಯಮಕನಮರಡಿ ಸಿದ್ಧಬಸವ ದೇವರು ಸಾನ್ನಿಧ್ಯದಲ್ಲಿ ತಹಶೀಲ್ದಾರ ಬಲರಾಮ ಕಟ್ಟಿಮನಿಅಧ್ಯಕ್ಷತೆ ವಹಿಸಿ ಮಾತನಾಡಿ, ಡಾ.ಬಾಬು ಜಗಜೀವನರಾಮರು ಸಮಾಜ ಕಟ್ಟುವ ಕೆಲಸಮಾಡಿದವರು. ಅವರು ಕಂಡ ಕನಸು ಜಾತಿ ರಹಿತ ಸಮಾಜ ಮತ್ತು ಸಮಾನತೆ ಬರಲು ಎಲ್ಲರೂಶ್ರಮಿಸಬೇಕು ಎಂದರು. ಉಪನ್ಯಾಸ: ಹಿಡಕಲ್ ಡ್ಯಾಂ ಶಾಲೆಯ ನಿವೃತ್ತ ಶಿಕ್ಷಕ ಭಾಸ್ಕರ್ ಮಾನೆ ಉಪನ್ಯಾಸ ನೀಡಿದರು.ತಾಲೂಕು ಪಂಚಾಯತಿ ಇಒ ಟಿ.ಆರ್.ಮಲ್ಲಾಡದ, ಪೊಲೀಸ್ ಇನ್ಸಪೆಕ್ಟರ್ ಶಿವಶಂಕರ ಅವಜಿ, ಬಿಇಒಪ್ರಭಾವತಿ ಪಾಟೀಲ, ಮುಖಂಡರಾದ ಉದಯ ಹುಕ್ಕೇರಿ, ರಮೇಶ ಹುಂಜಿ, ಕೆಂಪಣ್ಣ ಶಿರಹಟ್ಟಿ, ಬಾವುಸಾಹೇಬಪಾಂಡ್ರೆ, ಪರಿಶಿಷ್ಟ ವರ್ಗ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಹೇಶ ಭಜಂತ್ರಿ, ಡಾ.ಆರ್.ಎಚ್. ಹೊಸಮನಿ, ಸಿಡಿಪಿಒ ಹೊಳೆಪ್ಪ ಎಚ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಗುರುಶಾಂತಪಾವಟೆ, ಕ್ಷೇತ್ರ ಸಮನ್ವಯಾಧಿಕಾರಿ ಎ.ಎಸ್.ಪದ್ಮನ್ನವರ, ಹಾಗೂ ವಿವಿಧ ಇಲಾಖೆಅಧಿಕಾರಿಗಳು ಇದ್ದರು. ಗುರುಶಾಂತ ಪಾವಟೆ ಸ್ವಾಗತಿಸಿದರು. ಪ್ರಾಚಾರ್ಯ ಸುಭಾಸ ಘಸ್ತಿನಿರೂಪಿಸಿದರು. ಶಿವಣ್ಣ ಶೆಟ್ಟೆನ್ನವರ ವಂದಿಸಿದರು.



ಹುಕ್ಕೇರಿ: ಸ್ಥಳೀಯ ಜಗಜೀವನರಾಮ ಭವನದಲ್ಲಿ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಅವರ ಭಾವಚಿತ್ರಕ್ಕೆ ಮುಖಂಡರು, ಅಧಿಕಾರಿಗಳು ಪೂಜೆ ಸಲ್ಲಿಸಿದರು.

ಬಿಜೆಪಿ ಸ್ಥಾಪನಾ ದಿನ ಆಚರಣೆ

ಬೆಳಗಾವಿ: ಬಿಜೆಪಿ ಸ್ಥಾಪನಾ ದಿನದ ಅಂಗವಾಗಿ ನಗರದ ಧರ್ಮನಾಥ ಭವನ ಬಳಿ ಇರುವ ಬಿಜೆಪಿ ಬೆಳಗಾವಿ ಗ್ರಾಮಾಂತರ ಜಿಲ್ಲಾ ಕಾರ್ಯಾಲಯದಲ್ಲಿ ಬಿಜೆಪಿ ಸ್ಥಾಪನಾ ದಿನ ಆಚರಣೆಯ ಕಾರ್ಯಾಲಯದ ಆವರಣದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ ಧ್ವಜಾರೋಹಣ ನೆರವೇರಿಸಿದರು. ನಂತರ ಮುಖಂಡರು, ಕಾರ್ಯಕರ್ತರು ಪರಸ್ಪರ ಸಿಹಿ ಹಂಚಿ ಸಂಭ್ರಮಾಚರಣೆಯನ್ನು ಮಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರಾದ ಸುಭಾಷ್ ಪಾಟೀಲ, ಮಾಜಿ ಶಾಸಕರಾದ ಅರವಿಂದ ಪಾಟೀಲ, ಜಿಲ್ಲಾ ಪ್ರದಾನ ಕಾರ್ಯದರ್ಶಿಗಳಾದ ಸಂದೀಪ ದೇಶಪಾಂಡೆ, ಮುಖಂಡರಾದ ಮುರಗೇಂದ್ರಗೌಡ ಪಾಟೀಲ, ಪ್ರಕೋಷ್ಠಗಳ ಜಿಲ್ಲಾ ಸಂಯೋಜಕರಾದ ಮಹೇಶ ಮೋಹಿತೆ,ಜಿಲ್ಲಾ ಉಪಾಧ್ಯಕ್ಷರಾದ ವಿನಯ ಕದಂ, ಜಿಲ್ಲಾ ಕಾರ್ಯದರ್ಶಿ ಶಿವಾನಂದ ಹನುಮಸಾಗರ, ಸಾಮಾಜಿಕ ಜಾಲತಾಣ ರಾಜ್ಯ ಸಮಿತಿ ಸದಸ್ಯರಾದ ನೀತಿನ ಚೌಗಲೆ, ಕೋಶಾಧ್ಯಕ್ಷರಾದ ಸಂತೋಷ ದೇಶನೂರ, ಸಾಮಾಜಿಕ ಜಾಲತಾಣ ಜಿಲ್ಲಾ ಸಂಚಾಲಕರಾದ ಸುಭಾಷ ಸಣ್ಣವೀರಪ್ಪನವರ, ಕಾರ್ಯಾಲಯ ಕಾರ್ಯದರ್ಶಿ ಪ್ರವೀಣ ಮಾಳೆದವರ, ಮಂಜು ಅಪ್ಪಗಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.



ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯರಿಗೆ ಸನ್ಮಾನ

ಮೂಡಲಗಿ : ಸಂಕೇಶ್ವರದ ಅನ್ನಪೂರ್ಣ ನಿರ್ವಹಣಾಶಾಸ್ತ್ರ ಸಂಶೋಧನಾ ಸಂಸ್ಥೆಯವರು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಆಯೋಜಿಸಲಾಗಿದ್ದ ಅನ್ನಪೂರ್ಣ ಮಾನಿನಿ ಪ್ರಶಸ್ತಿ - 2026ರ ಅಂಗವಾಗಿ ಮೂಡಲಗಿಯ ಶ್ರೀ ಶ್ರೀಪಾದಬೋಧ ಸ್ವಾಮೀಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 15 ವಿದ್ಯಾರ್ಥಿನಿಯರನ್ನು ಅವರ ಶೈಕ್ಷಣಿಕ ಸಾಧನೆಗಾಗಿ ಸನ್ಮಾನಿಸಿ ಗೌರವಿಸಲಾಯಿತು.

ಬಿ.ಎಸ್ಸಿ ವಿಭಾಗದ ಶ್ರೀನಿಧಿ ಸಣ್ಣಕ್ಕಿ, ವರ್ಷಾ ಪತ್ತಾರ, ಪೂಜಾ ಪುರಾಣಿಕ, ಬಿ.ಬಿ.ಎ ವಿಭಾಗದ ಪ್ರೇಮಾ ಬೋರನಟ್ಟಿ, ಕಾವೇರಿ ಬೋರನಟ್ಟಿ, ಅಶ್ವಿನಿ ದಡ್ಡನ್ನವರ, ಬಿ, ಕಾಂ ವಿಭಾಗದ ಸಂಗೀತಾ ತೇರದಾಳ, ಲಕ್ಷ್ಮೀ ಕುಲಗೋಡ, ಸವಿತಾ ಮೂಡಲಗಿ, ಬಿ. ಎಸ್. ಡಬ್ಲ್ಯೂ ವಿಭಾಗದ ರಕ್ಷಿತಾ ಬೂದಿಗೊಪ್ಪ, ಅಮೃತಾ ವಿಜಯನಗರ, ಕೀರ್ತನಾ ಪಲ್ಲೇದ, ಬಿ. ಎ. ವಿಭಾಗದಲ್ಲಿ ವಿದ್ಯಾಶ್ರೀ ಬಸ್ತವಾಡ, ದೀಪಾ ಹುಲಕುಂದ, ರೇಷ್ಮಾ ಮಾದರ ಗೌರವಕ್ಕೆ ಭಾಜನರಾಗಿದ್ದಾರೆ.

ಇದೇ ಕಾರ್ಯಕ್ರಮದಲ್ಲಿ ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಪ್ರೊ.



ಗಾಯತ್ರಿ ಸಾಳೋಖೆ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಇವರ ಈ ಸಾಧನೆಗೆ ಮಹಾವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ, ಸರ್ವ ಸದಸ್ಯರು, ಪ್ರಾಂಶುಪಾಲ ಮಹೇಶ ಕಂಬಾರ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಅಭಿನಂದನೆಗಳನ್ನು ಕೋರಿದ್ದಾರೆ. .

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ

ಬೆಳಗಾವಿ: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬೆಳಗಾವಿ ಹಾಗೂ ಕಲಬುರ್ಗಿ ವಿಭಾಗದ ಭೂಮಾಪಕರು, ಸರ್ಕಾರದ ನಿರ್ಲಕ್ಷ್ಯ ಧೋರಣೆ ಖಂಡಿಸಿ ಪರವಾನಗಿ ಪಡೆದ ರಾಜ್ಯ ಭೂಮಾಪಕರು ಬೀದಿಗಿಳಿದು ಬೃಹತ್ ಪ್ರತಿಭಟನೆ ನಡೆಸಿದರು.

» ಬೆಳಗಾವಿಯಲ್ಲಿ ಭೂಮಾಪಕರ ಬೃಹತ್ ಪ್ರತಿಭಟನೆ

ಸೋಮವಾರ ನಗರದ ಚನ್ನಮ್ಮ ವೃತ್ತದಲ್ಲಿ ಪರವಾನಿಗೆ ಭೂಮಾಪಕರ ಖಾಯಂ ಮಾಡಿಕೊಳ್ಳುವಂತೆ ಆಗ್ರಹಿಸಿ ಬೃಹತ್ ಪ್ರತಭಟನೆ ನಡೆಸಿದರು. ಪ್ರತಿಭಟನಾಕಾರರಿಗೆ ರೈತ ಸಂಘಟನೆಗಳ ಮುಖಂಡರುಗಳಾದ, ಕರ್ನಾಟಕ ರಾಜ್ಯ ರೈತ ಸಂಘಟನೆ, ಹಸಿರು ಸೇನೆಯ ಮುಖಂಡರಾದ ಚುನಪ್ಪ ಪೂಜಾರಿ, ಶಶಿಕಾಂಕತ ಗುರುಜಿ ಸಾಥ್ ನೀಡುವುದರ ಮೂಲಕ ಭೂಮಾಪಕರರ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಚೆನ್ನಮ್ಮ ವೃತ್ತದಲ್ಲಿ ಆಯೋಜಿಸಲಾಗಿರುವ ಪ್ರತಿಭಟನೆಯಲ್ಲಿ ಬೆಳಗಾವಿ ಹಾಗೂ ಕಲಬುರಗಿ ವಿಭಾಗದ ಸಾವಿರಾರು ಭೂಮಾಪಕರು ಭಾಗಿಯಾಗಿ ಮಾನವ ಸರಪಳಿ ನಿರ್ಮಿಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶವನ್ನು ಹೊರ ಹಾಕಿ ಪ್ರತಿಭಟಿಸಿದರು.

ಸರ್ಕಾರಿ ಭೂಮಾಪಕರಷ್ಟೇ ಕೆಲಸವನ್ನು ಪರವಾನಗಿ ಭೂಮಾಪಕರ ಮಾಡುತ್ತಾರೆ. ಸಮಾನ ಕೆಲಸಕ್ಕೆ ಸರ್ಕಾರ ಸಮಾನ ವೇತನ ನೀಡಬೇಕಿತ್ತು ಆದರ ಬದಲು ಸರ್ಕಾರ ಪರವಾನಗಿ ಭೂಮಾಪಕರನ್ನು ಜೀತರನ್ನಾಗಿ ದುಡಿಸಿಕೊಳ್ಳುತ್ತಿದೆ ಎಂದು ಪ್ರತಿಭಟನೆಯಲ್ಲಿ ಅಸಮಾಧಾನ ಹೊರ ಹಾಕಿದರು.

ಸರ್ಕಾರಿ ಭೂಮಾಪಕರಿಗೆ 52 ಸಾವಿರ ವೇತನ ಇದೆ, ಪರವಾನಿಗೆ ಭೂಮಾಪಕರಿಗೆ 12 ಸಾವಿರ ಸಂಭಾವನೆ ಇದೆ. ದುಬಾರಿ ದುನಿಯಾದಲ್ಲಿ ಈ ಹಣದಲ್ಲಿ ಜೀವನ ನಡೆಸುವುದು ಕಷ್ಟವಾಗಿದೆ. ಸರ್ಕಾರ ತಕ್ಷಣವೇ ನಮ್ಮ ಬೇಡಿಕೆಗೆ ಸ್ಪಂದಿಸಬೇಕು. ಇಲ್ಲವಾದರೆ ಬೆಂಗಳೂರಲ್ಲಿ ಬೃಹತ್ ಹೋರಾಟ ನಡೆಸುವ ಮೂಲಕ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳುತ್ತೇವೆ ಎಂದು ಜಿಲ್ಲಾಡಳಿತ ಮೂಲಕ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆಯನ್ನು ನೀಡಿದರು.

ಈ ವೇಳೆ ಭೂಮಾಪಕರ ಸಂಘಟನೆಯ ಜಿಲ್ಲಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಮುಖಂಡುಗಳು, ಸಂಘಟನೆಯ ವಿವಿಧ ಪದಾಧಿಕಾರಿಗಳು ಕಲಬುರ್ಗಿ ಜಿಲ್ಲೆಯ ಭೂಮಾಪಕದ ಸಿಬ್ಬಂದಿಗಳು, ಹಾಗೂ ರೈತ ಮುಖಂಡರು ಸೇರಿದಂತೆ ನೂರಾರು ಕಾರ್ಯಕರ್ತರು ಇದ್ದರು.



ನಿರ್ಮಲಾ ಪ್ರಕಾಶರಿಗೆ ರಂಗ ಸೃಷ್ಟಿಯ ರಂಗಗೌರವ ಪ್ರದಾನ

ಬೆಳಗಾವಿ : ವಿಶ್ವರಂಗಭೂಮಿ ದಿನಾಚರಣೆಯ ಹಿನ್ನೆಲೆಯಲ್ಲಿ ಹಿರಿಯ ರಂಗಕರ್ಮಿ ನಿರ್ಮಲಾ ಪ್ರಕಾಶ ಅವರಿಗೆ ಸೋಮವಾರ ರಂಗಸೃಷ್ಟಿಯ ಈ ವರ್ಷದ ರಂಗಗೌರವ ನೀಡಿ ಗೌರವಿಸಲಾಯಿತು.

ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಂಗ ಸನ್ಮಾನ ಸ್ವೀಕರಿಸಿ ಮಾತನಾಡಿದ ನಿರ್ಮಲಾ ಪ್ರಕಾಶ, ಜೀವನದಲ್ಲಿ ಒಳ್ಳೆಯದನ್ನು ಕಲಿಯಲು ಸಿಕ್ಕ ಅವಕಾಶ ಕಳೆದುಕೊಳ್ಳಬಾರದು. ನನ್ನ ಜೀವನದಲ್ಲಿ ಅದನ್ನು ಸದಾ ಅಳವಡಿಸಿಕೊಂಡಿದ್ದೇನೆ ಎಂದರು.

ಮುಖ್ಯ ಅತಿಥಿಯಾಗಿ ಆಗಿ ಆಗಮಿಸಿದ್ದ ಹಿರಿಯ ಸಾಹಿತಿ ಎಲ್.ಎಸ್.ಶಾಸ್ತ್ರಿ ಮನುಷ್ಯನನ್ನು ಸಂಸ್ಕಾರವಂತರನ್ನಾಗಿ ಮಾಡುವ ರಂಗಭೂಮಿ ಶ್ರೇಷ್ಠವಾದ ಕಲೆ. ರಂಗಭೂಮಿ ಬೇರೆ ಕಲಾ ಮಾಧ್ಯಮಗಳಂತೆ ಯಾವತ್ತೂ ಅಡ್ಡದಾರಿ ಹಿಡಿದಿಲ್ಲ ಎಂದರು.

ಪ್ರಶಸ್ತಿಗಳು ಅರಸಿಕೊಂಡು ಬರಬೇಕು. ಅದೇರೀತಿ ಅತ್ಯಂತ ಅರ್ಹರಿಗೆ ರಂಗಸೃಷ್ಟಿ ಈ ಬಾರಿ ಪ್ರಶಸ್ತಿ ನೀಡಿದೆ. ಯಾರೊಬ್ಬರಿಂದಲೂ ಇದಕ್ಕೆ ಅಪಸ್ವರ ಬರುವಂತಿಲ್ಲ, ಸ್ಥಳೀಯ ಪ್ರತಿಭೆ ಗುರುತಿಸಿ ಪ್ರಶಸ್ತಿ ನೀಡಿದ್ದು ಶ್ಲಾಘನೀಯ ಎಂದು ಶಾಸ್ತ್ರಿ ಹೇಳಿದರು.

ರಂಗಸೃಷ್ಟಿ ಅಧ್ಯಕ್ಷ ರಮೇಶ ಜಂಗಲ್ ಅಧ್ಯಕ್ಷತೆ ವಹಿಸಿದ್ದರು. ರಂಗಸೃಷ್ಟಿ ಉಪಾಧ್ಯಕ್ಷರಾದ ಎಂ.ಕೆ.ಹೆಗಡೆ ಮತ್ತು ಶೈಲಜಾ ಬಿಂಗೆ, ಕನ್ನಡ ಭವನ ವಿಶಸ್ಥ ಮಂಡಳಿ ಕಾರ್ಯದರ್ಶಿ ಆರ.ಬಿ.ಕಟ್ಟಿ ವೇದಿಕೆಯಲ್ಲಿದ್ದರು.ಅಮೃತ ಕುಲಕರ್ಣಿ ಪ್ರಾರ್ಥನೆ ಹಾಡಿದರು.

ಶರಣಯ್ಯ ಮಠಪತಿ ಸ್ವಾಗತಿಸಿದರು. ಡಾ.ರಾಮಕೃಷ್ಣ ಮರಾಠೆ ಪ್ರಾಸ್ತಾವಿಕ ಮಾತನಾಡಿದರು. ಶಿರೀಷ್ ಜೋಶಿ ಅಭಿನಂದನೆ ನುಡಿಗಳನ್ನಾಡಿದರು. ಶಾಂತಾ ಆಚಾರ್ಯ ವಿಶ್ವ ರಂಗಭೂಮಿ ಸಂದೇಶ ಪ್ರಸ್ತುತ ಪಡಿಸಿದರು. ಎಂ.ಕೆ.ಹೆಗಡೆ ಅಭಿನಂದನಾ ಪತ್ರ ವಾಚಿಸಿದರು. ಜ್ಯೋತಿ ಬದಾಮಿ ನಿರೂಪಿಸಿದರು. ಶರಣಗೌಡ ಪಾಟೀಲ, ಬಸವರಾಜ ಜಗಜಂಪಿ ಸೇರಿದಂತೆ ಹಲವರು ಇದ್ದರು. ಜಯಶ್ರೀ ಕ್ಷೀರಸಾಗರ ವಂದಿಸಿದರು.



ಲಿಂಗತ್ವ ಅಲ್ಪಸಂಖ್ಯಾತ ಗುರುತಿಗೆ ವೈದ್ಯಕೀಯ ಪರೀಕ್ಷೆ ಕಡ್ಡಾಯಕ್ಕೆ ವಿರೋಧ ವ್ಯಕ್ತಪಡಿಸಿ ಪ್ರತಿಭಟನೆ

ಬೆಳಗಾವಿ: ಲಿಂಗತ್ವ ಅಲ್ಪ ಸಂಖ್ಯಾತರನ್ನು ಗುರುತಿಸಲು ವೈದ್ಯಕೀಯ ಪರೀಕ್ಷೆಯನ್ನು ಕಡ್ಡಾಯಗೊಳಿಸಿ ಹೊರಡಿಸಿ ವಿಧೇಯಕವನ್ನು ವಿರೋಧಿಸಿ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರಿಂದ ಬೆಳಗಾವಿ ನಗರದಲ್ಲಿ ಬೃಹತ್ ಪ್ರತಿಭಟನೆ

ರ‍್ಯಾಲಿಯನ್ನು ನಡೆಸಿದರು.

ಸೋಮವಾರ ನಗರದ ಚೆನ್ನಮ್ಮ ವೃತ್ತದಿಂದ ಪ್ರತಿಭಟನಾ ರ‍್ಯಾಲಿ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿ ಸಮಸ್ತ ಬೆಳಗಾವಿ ಲಿಂಗತ್ವ ಮತ್ತು ಲೈಂಗಿಕ ಅಲ್ಪ ಸಂಖ್ಯಾತರ ಚಳವಳಿ ಸಂಘದ ನೇತೃತ್ವದಲ್ಲಿ ಪ್ರತಿಭಟಿಸಿ ಲಿಂಗತ್ವ ಅಲ್ಪಸಂಖ್ಯಾತರನ್ನು ಗುರುತಿಸಲು ವೈದ್ಯಕೀಯ ಪರೀಕ್ಷೆಯನ್ನು ಕಡ್ಡಾಯಗೊಳಿಸಿ ಹೊರಡಿಸಿ ವಿಧೇಯಕವನ್ನು ಹಿಂಪಡೆಯಬೇಕೆಂದು ಪ್ರತಿಭಟನೆಯಲ್ಲಿ ಆಗ್ರಹಿಸಿದರು. ಲಿಂಗತ್ವ ಅಲ್ಪ ಸಂಖ್ಯಾತರನ್ನು ಗುರುತಿಸಲು ವೈದ್ಯಕೀಯ ಪರೀಕ್ಷೆಯನ್ನು ಕಡ್ಡಾಯಗೊಳಿಸಿದೆ. ಆದರೇ ಇದಕ್ಕೆ ಲೈಂಗಿಕ ಅಲ್ಪ ಸಂಖ್ಯಾತರ ವಿರೋಧವಿದೆ. ಕೂಡಲೇ ಇದನ್ನು ತೊಡೆದು ಹಾಕಬೇಕು.



ಬಸ್ಸಿನಲ್ಲಿ ಆಧಾರಕಾರ್ಡ್ ತೋರಿಸಿದರೂ ಉಚಿತ ಪ್ರಯಾಣಕ್ಕೂ ಅನುವು ಮಾಡಿ ಕೊಡುತ್ತಿಲ್ಲ, ಅಲ್ಲಿಯೂ ಕೂಡ ಕಿರಿಕಿರಿಯುಂಟಾಗುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಮಸ್ತ ಬೆಳಗಾವಿ ಲಿಂಗತ್ವ ಮತ್ತು ಲೈಂಗಿಕ ಅಲ್ಪ ಸಂಖ್ಯಾತರ ಚಳುವಳಿಯ ಪದಾಧಿಕಾರಿಗಳು, ಕಾರ್ಯಕರ್ತರು ಸೇರಿದಂತೆ ಇತರರು ಇದ್ದರು.

ಆಧುನಿಕ ತಂತ್ರಜ್ಞಾನದ ಅರಿವು ಬೆಳೆಸಿಕೊಳ್ಳಿ

ಸಂಕೇಶ್ವರ: ಸ್ಪರ್ಧಾತ್ಮಕ ಜಗತ್ತಿನಲ್ಲಿ ಇಂದಿನ ವಿದ್ಯಾರ್ಥಿಗಳು ಆಧುನಿಕ ತಂತ್ರಜ್ಞಾನದ ಅರಿವು ಬೆಳೆಸಿಕೊಳ್ಳುವ ಮೂಲಕ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಪುಣೆಯ ಮಾಸ್ಟರ್ ಕಾರ್ಡ್ ಸಂಸ್ಥೆಯ ಪ್ರಧಾನ ಸಾಫ್ಟ್‌ವೇರ್ ಎಂಜಿನಿಯರ್ ಮಹೇಶ್ ಮಠ ಹೇಳಿದರು.

ಸಮೀಪದ ನಿಡಸೋಸಿ ಎಸ್‌ಜೆಪಿಎನ್ ಟ್ರಸ್ಟ್‌ನ ಪಾಲಿಟೆಕ್ನಿಕ್ ಕಾಲೇಜ್ ಆಯೋಜಿಸಿದ್ದ ಸ್ಪಂದನಾ-2026' ವಾರ್ಷಿಕ ಸ್ನೇಹ ಸಮ್ಮೇಳನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶೈಕ್ಷಣಿಕ ಕ್ಷೇತ್ರದಲ್ಲಿ ಹತ್ತಾರು ಸೌಲಭ್ಯಗಳಿದ್ದು, ವಿದ್ಯಾರ್ಥಿಗಳು ಇವುಗಳ ಲಾಭ ಪಡೆದು ಉಜ್ವಲ ಭವಿಷ್ಯ ನಿರ್ಮಿಸಿಕೊಳ್ಳಬೇಕು ಎಂದರು.

ಬಿಳಗಿಯ ಜನಪದ ಕಲಾವಿದ ಸಿದ್ದಪ್ಪ ಬಿದರಿ ಮಾತನಾಡಿ, ಶಿಕ್ಷಣದ ಜೊತೆಗೆ ಸಂಸ್ಕಾರ ಮತ್ತು ವಿನಯವಂತಿಕೆ ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುತ್ತದೆ ಎಂದರು.ಅಧ್ಯಕ್ಷತೆ ವಹಿಸಿದ್ದ ಸಿಬಿಎಸ್‌ಇ ಶಾಲೆಯ ಪ್ರಾಚಾರ್ಯ ಉಮೇಶ್ ನಾಯಕ ಮಾತನಾಡಿದರು.ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯ ಪ್ರೊ.



ಬಿ.ಆರ್. ಉಮರಾಣೆ ಅವರು ಕಾಲೇಜಿನ ಶೈಕ್ಷಣಿಕ ಸಾಧನೆಯ ವಾರ್ಷಿಕ ವರದಿ ಮಂಡಿಸಿದರು.

ಸಮಾರಂಭದಲ್ಲಿ ವಿದ್ಯಾರ್ಥಿ ಮುಖಂಡರಾದ ವಸಂತಿ ಬಡಿಗೇರ, ಸಂದೀಪ್ ಡುಗನ್ನವರ ಹಾಗೂ ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು. ಪ್ರೊ. ವಿಜಯಮಹಾಂತೇಶ ಸಜ್ಜನ ಸ್ವಾಗತಿಸಿದರು. ತೇಜಸ್ ಕುಲಕರ್ಣಿ ಮತ್ತು ತೇಜಸ್ವಿನಿ ಕಂಠಿ ನಿರೂಪಿಸಿದರು. ಪ್ರೊ. ಬಿ. ಬಿ. ಫೊಟಲಿ ವಂದಿಸಿದರು.

ಡಾಲ್ಬಿ ಜಪ್ತಿ ಮಾಡಿದ ಪೊಲೀಸರು

ಬೆಳಗಾವಿ : ಯಾವುದೆ ಅನುಮತಿ ಪಡೆಯದೆ ಸಾರ್ವಜನಿಕರಿಗೆ ತೊಂದರೆ ಆಗವ ರೀತಿಯಲ್ಲಿ ಡಾಲ್ಬಿ ಹಚ್ಚಿದ ಪ್ರಕರಣದಲ್ಲಿ ಬೆಳಗಾವಿ ಪೊಲೀಸರು ಸಂಪೂರ್ಣ ಡಾಲ್ಬಿ ಜಪ್ತಿ ಮಾಡಿದ್ದಾರೆ.

ಸುರೇಶ ರಾಮಪ್ಪ ಬಂಗನ್ನವರ, ವೀರಭದ್ರ ನಾಗಪ್ಪ ಯರಗುದ್ದಿ, ರೋಹಿತ್ ದೇವಪ್ಪ ಲಕ್ಕನಗೌಡರ ಇವರು ಸುಳೇಬಾವಿ ಗ್ರಾಮದ ಹೊಸಕೇರಿ ಗಲ್ಲಿಯಲ್ಲಿ ಮದುವೆ ಕಾರ್ಯಕ್ರಮದಲ್ಲಿ ಯಾವುದೇ ರೀತಿಯ ಪರವಾನಿಗೆ ಪಡೆಯದೆ ರಾತ್ರಿ ವೇಳೆಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಜನರಿಗೆ ತೊಂದರೆಯನ್ನುಂಟು ಮಾಡಿ, ಸಾರ್ವಜನಿಕರಿಗೆ ಕಿರುಕುಳವಾಗುವಂತೆ ನಿಯಮೀರಿ ಸೌಂಡ್ ಹೆಚ್ಚಲಾಗಿತ್ತು. ಈ ಬಗ್ಗೆ ಮಾರಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಈ ಪ್ರಕರಣದಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಈ ಕೆಳಕಂಡ ವಸ್ತುಗಳಾದ 12000 ಮೌಲ್ಯದ 1 ಸೌಂಡ್ ಬೇಸ್, 10000 ಮೌಲ್ಯದ 1 ಸೌಂಡ್, 10000 ಮೌಲ್ಯದ ಮಿಕ್ಸರ್, 10000 ಮೌಲ್ಯದ ಜನರೇಟರ್ ಹಾಗೂ 10000 ಮೌಲ್ಯದ ಟ್ರ್ಯಾಕ್ಟರ್ ಟ್ರಾಲಿ ಜಪ್ತಿ ಪಡಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.



ಸಮುದಾಯ ಭವನ ನಿರ್ಮಾಣಕ್ಕೆ ಚಾಲನೆ ನೀಡಿದ ಶಾಸಕ ಐಹೊಳೆ



ರಾಯಬಾಗ: ತಾಲೂಕಿನ ಮೇಖಳಿ ಗ್ರಾಮದಲ್ಲಿ ಜಿ.ಪಂ. ಇಲಾಖೆಯಿಂದಮುಖ್ಯಮಂತ್ರಿಗಳ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಮಂಜೂರಾದ 20 ಲಕ್ಷ ವೆಚ್ಚದಲ್ಲಿ ಕ್ಷತ್ರಿಯ ಸಮಾಜದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಶಾಸಕ ಡಿ.ಎಮ್.ಐಹೊಳೆ ಸೋಮವಾರ ಭೂಮಿ ಪೂಜೆ ನೆರವೇರಿಸಿದರು.

ಮುಖಂಡರಾದ ಸದಾಶಿವ ಘೋರ್ಪಡೆ, ಅಣ್ಣಾಸಾಹೇಬ ಖೇಮಲಾಪುರೆ, ಪಿ.ಎ. ನಾಯಿಕ, ಬಸು ನಾಯಿಕ, ವಿಠ್ಠಲ ಪೂಜೇರಿ, ಮುರಸಿದ್ದ ನಾಯಿಕ, ಸಂಜು ನಾಯಿಕ, ಪುಂಡಲೀಕ ಮುತಾರೆ, ಸುನೀಲ ಭಂಡಾರೆ, ಭೀಮಾ ಪಾಲಭಾವಿ, ಶಿವುನಾಯಕ ನಾಯಿಕ, ಅನಿಲಕಾಂಬಳೆ, ಉತ್ತಮ ಸೂರ್ಯವಂಶಿ, ಪುಂಡಲೀಕ ಪೂಜೇರಿ, ಸತ್ಯಪ್ಪ ಕುದುರೆ, ರಾಜು ನಾಯಿಕ, ಹಣಮಂತ ಭಜಂತ್ರಿ ಸೇರಿದಂತೆ ಅನೇಕರು ಇದ್ದರು.

ಡಾ.ಬಾಬು ಜಗಜೀವನ್ ರಾಂ ಜಯಂತಿ ಆಚರಣೆ

ಮುಗಳಖೋಡ: ಇಲ್ಲಿನ ಪುರಸಭೆ ಕಾರ್ಯಾಲಯದಲ್ಲಿ ಡಾ ಬಾಬು ಜಗಜೀವನ ರಾಮ್ ಜಯಂತಿ ರವಿವಾರ ಆಚರಿಸಲಾಯಿತು.

ಡಾ. ಬಾಬು ಜಗಜೀವನ್ ರಾಮ್ ಅವರ ಭಾವಚಿತ್ರಕ್ಕೆ ಮುಖ್ಯಾಧಿಕಾರಿ ಮಹೇಂದ್ರ ಪವಾಡಿಶೆಟ್ಟಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಮಾತನಾಡಿ ಶೋಷಿತ ಸಮುದಾಯದ ಕಲ್ಯಾಣಕ್ಕಾಗಿ ಹಗಲಿರು ಶ್ರಮಿಸಿದ ನಾಯಕರು ಅವರ ತತ್ವ ಆದರ್ಶ ಗುಣಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಂಡು ಸಮಾಜ ಸುಧಾರಣೆಗೆ ಶ್ರಮಿಸಬೇಕೆಂದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಪರಪ್ಪಗೌಡ ಖೇತಗೌಡರ, ಚೇತನ ಯಡವನ್ನವರ, ಮಹಾಂತೇಶ ಯರಡೆತ್ತಿ, ರಾಜಶೇಖರ ನಾಯಕ, ಪರುಶುರಾಮ ಲಮಾಣಿ, ಸಚಿನ ಪ್ರಧಾನಿ, ಅಲ್ಲಪ್ಪ ಬೆಳಗಲಿ, ಕೆಂಚಪ್ಪ ಹಳಿಂಗಳಿ, ಮಹೇಶ ಚೌಗಲಾ, ಅನಿಲ ದಳವಾಯಿ, ಸಯ್ಯದ್ ನದಾಫ್, ವಿಜಯ್ ನಡುವಿನಕೇರಿ ಇತರರು ಇದ್ದರು.



ನೂತನ ಸಮುದಾಯ ಭವನ ಕಟ್ಟಡಕ್ಕೆ ಭೂಮಿ ಪೂಜೆ



ಯಮಕನಮರಡಿ: ಸಮೀಪದ ಹಳೆ ಗುಡಗನಹಟ್ಟಿ ಗ್ರಾಮದ ಶ್ರೀ ಬ್ರಹ್ಮದೇವರ ದೇವಸ್ಥಾನದ ಆವರಣದಲ್ಲಿ ಸುಮಾರು 65 ಲಕ್ಷ ರೂಗಳ ಸಮುದಾಯ ಭವನ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು. ಸಚಿವ ಸತೀಶ್ ಜಾರಕಿಹೊಳಿ ಅವರ ಆಪ್ತ ಸಹಾಯಕರಾದ ಕಿರಣ್ ಸಿಂಗ್ ರಜಪೂತ ಮಾತನಾಡಿ, ಸಚಿವ ಸತೀಶ ಜಾರಕಿಹೊಳಿಯವರ ಮಾರ್ಗದರ್ಶನದಲ್ಲಿ ಗ್ರಾಮದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಲಾಗಿದೆ. ಬಹುದಿನಗಳ ಬೇಡಿಕೆಯಂತೆ ಶ್ರೀ ಬ್ರಹ್ಮದೇವರ ಮಂದಿರದ ಸಮುದಾಯ ಭವನಕ್ಕೆ ಭೂಮಿಪೂಜೆ ನೆರವೇರಿಸಲಾಗಿದೆ. ಇನ್ನುಳಿದ ಅಭಿವೃದ್ಧಿ ಕೆಲಸಗಳನ್ನು ಹಾಗೂ ಪ್ರಮುಖ ರಸ್ತೆಗಳ ಕಾಮಗಾರಿಗಳನ್ನು ಮಾಡಲಾಗುವುದು ಎಂದರು. ಈ ಸಂದರ್ಭದಲ್ಲಿ ಗುತ್ತಿಗೆದಾರರಾದ ವೀರಣ್ಣ ಬಿಸಿರೊಟ್ಟಿ ಗ್ರಾಮದ ಮುಖಂಡರಾದ ರಾಯಗೌಡ ಪಾಟೀಲ್ ಸಂತೋಷ್ ಪಾಟೀಲ್ ಕೆಂಪಣ್ಣ ಪಾಟೀಲ್ ಆನಂದ್ ಚನ್ನಪ್ಪಗೋಳ ಗುರುಸಿದ್ಧ ಹಂಜಿ, ವಿನಾಯಕ ಚೆನ್ನಪ್ಪಗೋಳ ಮಾರುತಿ ಕಮತೆ, ಪಾಂಡುರಂಗ ಹುದ್ದಾರ ಮಲ್ಲಪ್ಪ ಪಾಸಪ್ಪಗೋಳ ಉಪಸ್ಥಿತರಿದ್ದರು. ಗ್ರಾಮದ ಅಪಾರ ಯುವಕ ಮಿತ್ರರು ಹಿರಿಯರು ಪೂಜಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಿರುಸುದ್ದಿ

ಅರ್ಜಿ ಆಹ್ವಾನ

ಬೆಳಗಾವಿ : ತೋಟಗಾರಿಕೆ ಇಲಾಖೆಯ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ, ತೋಟಗಾರಿಕೆ ವಿಸ್ತರಣೆ ಮತ್ತು ತರಬೇತಿ ಕಾರ್ಯಕ್ರಮದಡಿ 2026-27 ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯ ಪುರುಷ ಹಾಗೂ ಮಹಿಳಾ ರೈತ ಮಕ್ಕಳಿಗೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಡ್ಯಾಂ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ಮೇ 2ರಿಂದ ಫೆಬ್ರವರಿ 28-2027 ರ ವರೆಗೆ 10 ತಿಂಗಳ ತೋಟಗಾರಿಕೆ ತರಬೇತಿಗಾಗಿ ಅರ್ಜಿ ಅಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಏಪ್ರಿಲ್ 13 ರ ವರೆಗೆ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರು (ಜಿ.ಪಂ) ಬೆಳಗಾವಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ಬೆಳಗಾವಿ ರವರ ಕಚೇರಿಯಲ್ಲಿ ಅಥವಾ ಇಲಾಖೆಯ https://horticulturedir.karnataka.gov.in/ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಏಪ್ರಿಲ್ 15 ರ ಸಂಜೆ 5.30 ಗಂಟೆಯವರೆಗೆ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರು (ಜಿ.ಪಂ) ಬೆಳಗಾವಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ), ರಾಣಿ ಚನ್ನಮ್ಮ ವೃತ್ತ, ಬೆಳಗಾವಿ ರವರಿಗೆ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಏಪ್ರಿಲ್ 23ರಂದು ಹಿರಿಯ ಸಹಾಯಕ ತೋಟಗಾರಿಕೆ ಇಲಾಖೆ ನಿರ್ದೇಶಕರು (ರಾವ) ಬೆಳಗಾವಿ ರವರ ಕಚೇರಿಯಲ್ಲಿ ಬೆಳಿಗ್ಗೆ 11 ಗಂಟೆಗೆ ನೇರವಾಗಿ ಮೂಲ ದಾಖಲಾತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಆಯಾ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ಇಲಾಖೆ ನಿರ್ದೇಶಕರು (ಜಿ.ಪಂ) ರವರ ಕಚೇರಿಯಲ್ಲಿ ಮಾಹಿತಿಯನ್ನು ಪಡೆಯಬಹುದು ಎಂದು ತೊಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಚಂದ್ರಗಿರಿದೇವಿ ಜಾತ್ರೆ

ಗಲಗಲಿ: ಗ್ರಾಮದ ಪ್ರಸಿದ್ಧ ಚಂದ್ರಗಿರಿದೇವಿ ಜಾತ್ರಾ ಮಹೋತ್ಸವ ಏ.7ರಂದು ಮಂಗಳವಾರ ಜರುಗಲಿದೆ. ಜಾತ್ರೆ ನಿಮಿತ್ತ ಬೆಳಗ್ಗೆ ಅಭಿಷೇಕ ಹಾಗೂ ವಿಶೇಷ ಪೂಜೆ ಮಧ್ಯಾಹ್ನ ಮಹಾಪ್ರಸಾದ ವಿತರಣೆ ನಡೆಯಲಿದೆ. ಸಂಜೆ ವಾದ್ಯ ವೃಂದದೊಂದಿಗೆ ರಥಕ್ಕೆ ಕಳಸ ತರುವ ಕಾರ್ಯಕ್ರಮ ಜರಗಲಿದ್ದು, ಸಂಜೆ 7.12 ಗಂಟೆಗೆ ಮಹಾರಥೋತ್ಸವ ಜರುಗಲಿದೆ. ರಾತ್ರಿ 10 ಗಂಟೆಗೆ ರಾಘವೇಂದ್ರ ನಾಟ್ಯ ಸಂಘದವರಿಂದ 'ಮಗ ಹೋದರು ಮಾಂಗಲ್ಯ ಬೇಕು' ಎಂಬ ನಾಟಕ ಜರುಗಲಿದೆ ಎಂದು ಜಾತ್ರಾ ಕಮಿಟಿ ಪ್ರಕಟಣೆ ತಿಳಿಸಿದೆ.

ಮತದಾನಕ್ಕೆ ಸಕಲ ಸಿದ್ಧತೆ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ಏ.9ರಂದು ಮತದಾನ ನಡೆಯಲಿದ್ದು, ಮತದಾನಕ್ಕೆ ಬೇಕಾಗುವ ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ.
ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸೋಮವಾರ ಜರುಗಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ 1,26,999 ಪುರುಷ ಮತ್ತು 1,32,775 ಮಹಿಳಾ ಮತದಾರರು ಹಾಗೂ 23 ಇತರೆ ಸೇರಿ ಒಟ್ಟು 2,59,797 ಮತದಾರರಿದ್ದು, ಏ.9ರಂದು ಮತ ಚಲಾಯಿಸಲಿದ್ದಾರೆ. ಅಲ್ಲದೇ 385 ಸೇವಾ ಮತದಾರರು, 170 ಅಂಚೆ ಮತಪತ್ರಗಳು 90 ಪಿಡಬ್ಲೂಡಿ ಮತದಾರರಿದ್ದಾರೆ.
ಏ.7ರಂದು ಸಂಜೆ 6 ಗಂಟೆಯಿಂದ ಚುನಾವಣಾ ಬಹಿರಂಗ ಪ್ರಚಾರ ನಿಷೇಧಿಸಲಾಗಿದ್ದು, ಪ್ರಚಾರ ಅವಧಿ ಕೊನೆಗೊಂಡ ಬಳಿಕ ಹೊರಗಿನ ಮತಕ್ಷೇತ್ರದಿಂದ ಕರೆತಂದ ಮತ್ತು ಈ ಕ್ಷೇತ್ರದ ಮತದಾರರಲ್ಲದೇ ಇರುವ ರಾಜಕೀಯ ಅಧಿಕಾರಸ್ಥರು, ಪಕ್ಷದ ಕಾರ್ಯಕರ್ತರು, ಮೆರವಣಿಗೆ ಸಂಬಂಧ ಕಾರ್ಯಕರ್ತರು ಸೇರಿದಂತೆ ಮುಂತಾದವರು ಆ ಕ್ಷೇತ್ರದಿಂದ ಹೊರಹೋಗಬೇಕು ಎಂದರು.ಮತದಾನ ದಿನ ಏ.9ರಂದು ಜಿಲ್ಲೆಯಾದ್ಯಂತ ಜರಗುವ ಸಂಜೆ, ಜಾತ್ರೆಗಳನ್ನು ನಿಷೇಧಿಸಿ ಆದೇಶಿಸಲಾಗಿದೆ. ಮತಗಟ್ಟೆ ಒಳಗೆ ಅಥವಾ ಮತಗಟ್ಟೆಯ 100ಮೀ ಅಂತರದೊಳಗಿರುವ ಯಾವುದೇ ಸಾರ್ವಜನಿಕ, ಖಾಸಗಿ ಸ್ಥಳದಲ್ಲಿ ಪ್ರಚಾರ ನಿಷೇಧಿಸಿದೆ. ಈ ವ್ಯಾಪ್ತಿಯಲ್ಲಿ ಕರ್ತವ್ಯ ನಿರತ ಅಧಿಕಾರಿಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಸೆಲ್ಯೂಲರ್ ಫೋನ್‌ಗಳು, ಕಾರ್ಡಲೆಸ್ ಫೋನ್ ಇತ್ಯಾದಿಗಳನ್ನು ಬಳಸಲು ನಿಷೇಧಿಸಿದೆ ಎಂದರು.ಜಿಪಂ ಸಿಇಓ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಬಕಾರಿ ಉಪ ಆಯುಕ್ತ ತಿಪ್ಪೇಸ್ವಾಮಿ ಡಿ.ಎನ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ನಿಧನಸುದ್ದಿ

ಕರೆಪ್ಪಾ ಸಿ. ಸನದಿ



ಹಲ್ಯಾಳ: ಗ್ರಾಮದ ಕರೆಪ್ಪಾ ಸಿ ಸನದಿ(70) ಅವರು ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು,ಸೇರಿದಂತೆ ಅಪಾರ ಬಂದು ಬಳಗವನ್ನು ಅಗಲಿದ್ದಾರೆ.



ನೇಸರಗಿ: ಏಪ್ರಿಲ್ 9 ರಂದು ನಡೆಯಲಿರುವ ಬಾಗಲಕೋಟ ಉಪಚುನಾವಣೆ ಪ್ರಯುಕ್ತ ಬಾಗಲಕೋಟ ಕ್ಷೇತ್ರದ ಹಲವಾರು ಕಡೆ ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ ಹಾಗೂ ಧಾರವಾಡ ಶಾಸಕ ವಿನಯ ಕುಲಕರ್ಣಿ ಅವರು ಮನೆ ಮನೆಗೆ ಭೇಟಿ ನೀಡಿ ಕಾಂಗ್ರೆಸ್ ಅಭ್ಯರ್ಥಿ ಪರ ಮಾತಯಾಚನೆ ಮಾಡಿದರು.

ಧರ್ಮ, ಅಧ್ಯಾತ್ಮದ ಅರಿವು ಅಗತ್ಯ: ಸ್ವಾಮೀಜಿ


ಕಕಮರಿ : ದೇಹವೆಂಬ ಬದುಕಿನ ರಥ ಸುರಕ್ಷಿತವಾಗಿ ಎಳೆಯಲು ಧರ್ಮ ಮತ್ತು ಅಧ್ಯಾತ್ಮದ ಅರಿವು ಬೇಕು ಎಂದು ಗುರುದೇವ ಆಶ್ರಮದ ಪ.ಪೂ.ಆತ್ಮಾರಾಮ್ ಸ್ವಾಮೀಜಿ ಹೇಳಿದರು.ಅವರು ಸ್ಥಳೀಯ ಗುರುದೇವಾಶ್ರಮದಲ್ಲಿ ಭಾನುವಾರ ಹಮ್ಮಿಕೊಂಡಿರುವ ಸತ್ಸಂಗ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಶರಣರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾರ್ಥಕ ಬದುಕು ಕಂಡುಕೊಳ್ಳಬೇಕು. ಈ ಗ್ರಾಮದ ಬಗ್ಗೆ ಪ.ಪೂ.ಲಿಂಗೈಕ್ಯ ಸಿದ್ದೇಶ್ವರ ಅಪ್ಪಾಜೀಯರಿಗೆ ಅಚ್ಚು ಮೆಚ್ಚು ಅವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಡೆದು ಈ ಗ್ರಾಮವನ್ನು ಆಧ್ಯಾತ್ಮದ ಕೇಂದ್ರವನ್ನಾಗಿ ಮಾಡೋಣ ಮತ್ತು ನಿಮ್ಮ ಮಕ್ಕಳನ್ನು ಪ್ರತಿ ತಿಂಗಳ ನಡೆಯುವ ಸತ್ಸಂಗ ಕಾರ್ಯಕ್ರಮಕ್ಕೆ ಕರೆದುಕೊಂಡು ಬನ್ನಿ ಮಕ್ಕಳಿಗೆ ಸಂಸ್ಕಾರ ಮತ್ತು ಸಂಸ್ಕೃತಿ ಮೂಡಿಸುವದರಿಂದ ಮಕ್ಕಳು ಅಡ್ಡದಾರಿ ಹಿಡಿಯುವದಿಲ್ಲ . ಮಕ್ಕಳಿಗೆ ಮಾನವೀಯ ಮೌಲ್ಯ ಬೆಳೆಯುವಂತೆ ಮಾಡುವುದು ಸತ್ಸಂಗದ ಉದ್ದೇಶವಾಗಿದೆ ಎಂದರು.ಅತ್ತೀಗೇರಿ ಅದ್ವೈತಾನಂದ ಸ್ವಾಮೀಜಿ ಮಾತನಾಡಿ, ತಂದೆ-ತಾಯಿ ಸೇವೆ ನಿಜವಾದ ಧರ್ಮ, ಗಳಿಸಿರುವ ಹಣದಲ್ಲಿ ಸ್ವಲ್ಪ ಭಾಗವನ್ನು ಸತ್ಕಾರ್ಯಕ್ಕೆ ಬಳಸಬೇಕು ಎಂದರು.ಗಂಗಣ್ಣ ಮಹಾರಾಜರು, ಸಿಂದೂರ ಮಹಾದೇವ ಶಾಸ್ತ್ರೀ, ಗುರನಿಂಗ ಬಿಳ್ಳೂರ, ಈರಪ್ಪ ದಳವಾಯಿ, ಅಪ್ಪಾಸಾಬ ವಾಲಿ, ಅಪ್ಪಯ್ಯ.ರು.ಮಠಪತಿ, ಬಾವುರಾಯ ದಾಶ್ಯಾಳ, ಮಲ್ಲಿಕಾರ್ಜುನ ದಾಶ್ಯಾಳ, ಲಾಯಣ್ಣ ದಾಶ್ಯಾಳ, ಗುರುರಾಜ ಪುಠಾಣಿ, ಸಿದರಾಯ ತಾಂವಶಿ, ಅಪ್ಪುರಾಜ ಬಜಂತ್ರಿ, ಹಣಮಂತ ಸಿಂದೂರ, ತಾಯಂದಿರು ಉಪಸ್ಥಿತರಿದ್ದರು, ಶಿಕ್ಷಕ ಮಲ್ಲಿಕಾರ್ಜುನ ಕರಡಿ ಸ್ವಾಗತಿಸಿದರು, ಶಿಕ್ಷಕ ಮಹಾಂತೇಶ ಮಠಪತಿ ನಿರೂಪಿಸಿ ವಂದಿಸಿದರು.



ಕಕಮರಿ: ಸ್ಥಳೀಯ ಗುರುದೇವಾಶ್ರಮದಲ್ಲಿ ಭಾನುವಾರ ಹಮ್ಮಿಕೊಂಡಿರುವ ಸತ್ಸಂಗ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಗುರುದೇವ ಆಶ್ರಮದ ಪ.ಪೂ.ಆತ್ಮಾರಾಮ್ ಸ್ವಾಮೀಜಿ ಮಾತನಾಡಿದರು. ಅತ್ತೀಗೇರಿ ಅದ್ವೈತಾನಂದ ಸ್ವಾಮೀಜಿ, ಗಂಗಣ್ಣ ಮಹಾರಾಜರು, ಸಿಂದೂರ ಮಹಾದೇವ ಶಾಸ್ತ್ರೀ, ಗುರನಿಂಗ ಬಿಳ್ಳೂರ, ಈರಪ್ಪ ದಳವಾಯಿ, ಅಪ್ಪಾಸಾಬ ವಾಲಿ, ಅಪ್ಪಯ್ಯ.ರು.ಮಠಪತಿ, ಬಾವುರಾಯ ದಾಶ್ಯಾಳ, ಮಲ್ಲಿಕಾರ್ಜುನ ದಾಶ್ಯಾಳ, ಲಾಯಣ್ಣ ದಾಶ್ಯಾಳ ಇದ್ದರು.

ಹಗ್ಗ ಕಟ್ಟೆ ಎಳೆಯದೇ ಚಲಿಸುವ ಜಡಿ ಸಿದ್ಧೇಶ್ವರ ರಥಕ್ಕೆ ಚಾಲನೆ

ಮೂಡಲಗಿ: ಈ ಭಾಗದಲ್ಲಿ ಪವಾಡಪುರುಷ ಎಂದೇ ಪ್ರಸಿದ್ಧಿ ಹೊಂದಿರುವ ಜಡಿ ಸಿದ್ಧೇಶ್ವರ ಮಠದ ಜಾತ್ರೆಯು ಬಹು ವಿಶೇಷತೆಗಳಿಂದ ಕೂಡಿದ್ದು, ಹಗ್ಗ ಕಟ್ಟಿ ಎಳೆಯದೇ ರಥೋತ್ಸವ ನಡೆಯುವುದೇ ಈ ಜಾತ್ರೆಯ ಅಪರೂಪದ ದೃಶ್ಯವಾಗಿದೆ ಎಂದು ಬೆಮುಲ್ ಅಧ್ಯಕ್ಷರೂ ಆಗಿರುವ ಶಾಸಕ ಬಾಲಚಂದ್ರ ಜಾರಕಿಹೊಳಿಯವರು ತಿಳಿಸಿದರು.
ಸೋಮವಾರ ತಾಲೂಕಿನ ಸುಣಧೋಳಿ ಗ್ರಾಮದ ಇತಿಹಾಸ ಪ್ರಸಿದ್ಧ ಜಡಿಸಿದ್ಧೇಶ್ವರ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹಲವು ಪ್ರತೀತಿಗಳನ್ನು ಶ್ರೀಮಠವು ಹೊಂದಿದೆ ಎಂದು ಅವರು ಹೇಳಿದರು.
ಸುಣಧೋಳಿ ಎಂದಾಕ್ಷಣ ನೆನಪಾಗುವುದೇ ಜಡಿಸಿದ್ಧೇಶ್ವರ ಮಠ. ಬ್ರಿಟಿಷರ ಕಾಲದಿಂದಲೂ ಈ ಮಠಕ್ಕೆ ಅನೇಕ ಇತಿಹಾಸವಿದೆ ಎಂದು ಹಿರಿಯರು ಹೇಳುತ್ತಿರುತ್ತಾರೆ.
ಬ್ರಿಟಿಷರ ಕಾಲದ ಅವಧಿಯ ಜಾತ್ರೆಯ ವೇಳೆಯಲ್ಲಿ ಪ್ಲೇಗ್ ಎಂಬ ಮಾರಕ ಸೋಂಕು ಆವರಿಸಿದ್ದರಿಂದ



ಶಾಸಕ ಬಾಲಚಂದ್ರ ಜಾರಕಿಹೊಳಿ ರಥೋತ್ಸವಕ್ಕೆ ಚಾಲನೆ

ಜಾತ್ರೆಯನ್ನು ರದ್ದು ಮಾಡುವಂತೆ, ರಥವನ್ನು ಎಳೆಯದಂತೆ ಬ್ರಿಟಿಷ್ ಸರ್ಕಾರವು ಇಲ್ಲಿನ ಭಕ್ತರಿಗೆ ಆಜ್ಞೆ ಮಾಡಿತ್ತು. ಇದರಿಂದ ಭಕ್ತ ವೃಂದದವರು ಆತಂಕಕ್ಕೆ ಒಳಗಾದರು. ಬ್ರಿಟಿಷರ ಮಾತಿಗೆ ಗೌರವ ಕೊಟ್ಟು, ಜಡಿಸಿದ್ಧೇಶ್ವರ ಮೂರ್ತಿ ಮತ್ತು ರಥದ ಚಕ್ರಗಳಿಗೆ ಪೂಜೆ ಮಾಡುವ ಅನುಮತಿಯನ್ನು ಪಡೆದು ಪೂರ್ವ ಸಿದ್ಧತೆಗಳನ್ನು ಮಾಡಿದ್ದರಂತೆ. ರಥವನ್ನು ಎಳೆಯದಂತೆ ಬ್ರಿಟಿಷ್ ಅಧಿಕಾರಿಗಳು ಆದೇಶ ನೀಡಿದ್ದರಿಂದ ಭಕ್ತರು ಕೈ ಜೋಡಿಸಿ ಹರ-ಹರ ಮಹಾದೇವ, ಜಡಿಸಿದ್ಧೇಶ್ವರ ಮಹಾರಾಜ್ ಕೀ ಜೈ ಎಂದು ಜೈಕಾರ ಹಾಕಿದಾಗ, ರಥವು ತನ್ನಿಂತಾನೇ ಚಲಿಸಿ, ನಂತರ ತನ್ನ ಮೂಲ ಸ್ಥಳಕ್ಕೆ ಬಂದು ನಿಂತಿತು ಎಂಬುದು ಇತಿಹಾಸಗಳಿಂದ ತಿಳಿದು ಬಂದಿದೆ ಎಂದು ಅವರು ತಿಳಿಸಿದರು.
ಶ್ರೀ ಮಠದ ಪೀಠಾಧಿಪತಿ ಶಿವಾನಂದ ಮಹಾಸ್ವಾಮಿಗಳು ಈ ಭಾಗದಲ್ಲಿ ಧಾರ್ಮಿಕ ವಾತಾವರಣವನ್ನು ನಿರ್ಮಿಸುತ್ತಿದ್ದಾರೆ. ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರದಲ್ಲಿ ಅನೇಕ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಾರೆ. ಎಲ್ಲ ಜಾತಿಯ ಜನಾಂಗದವರನ್ನು ವಿಶ್ವಾಸಕ್ಕೆ ಪಡೆದುಕೊಂಡು ಪ್ರತಿ ವರ್ಷವೂ ಜರುಗುವ ಐತಿಹಾಸಿಕ ಜಾತ್ರೆಯನ್ನು ಯಶಸ್ವಿಯಾಗಿ ಮುನ್ನೆಡುಸುತ್ತಿದ್ದಾರೆ. ಶ್ರೀಗಳ ಆಶಯದಂತೆ ಜಡಿಸಿದ್ಧೇಶ್ವರ ಜಾತ್ರೆಯ ಸಂದರ್ಭದಲ್ಲಿ ಭಕ್ತರ ಅನುಕೂಲಕ್ಕಾಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ನಾನು ಕೂಡಿಕೊಂಡು ಕಾಲುವೆಗೆ ನೀರು ಹರಿಸಲು ಕ್ರಮ ತೆಗೆದುಕೊಳ್ಳುತ್ತೇವೆ. ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರನ್ನು ಬಿಡಲಾಗುತ್ತಿದೆ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಹೇಳಿದರು.
ಶಿವಾನಂದ ಮಹಾಸ್ವಾಮಿಗಳು ಶಾಸಕ ಬಾಲಚಂದ್ರ ಜಾರಕಿಹೊಳಿಯವರನ್ನು ಸತ್ಕರಿಸಿ ಆಶೀರ್ವಾದ ಮಾಡಿದರು.
ಈ ಸಂದರ್ಭದಲ್ಲಿ ಸುಣಧೋಳಿ ಮತ್ತು ಸುತ್ತಮುತ್ತಲಿನ ಅನೇಕರು ಉಪಸ್ಥಿತರಿದ್ದರು.

ಗುರುವಂದನೆ ಸಲ್ಲಿಸಿದ ವಿದ್ಯಾರ್ಥಿಗಳು

- ಶಿಂದಿಕುರಬೇಟ ಸರ್ಕಾರಿ ಬಾಲಕಿಯರ ಪ್ರೌಢಶಾಲೆ
- ವಿದ್ಯಾರ್ಥಿಗಳ ಪ್ರೀತಿ-ವಿಶ್ವಾಸ ಎಂದೂ ಮರೆಯಲಾಗದು

ಗೋಕಾಕ: ವಿದ್ಯಾರ್ಥಿಗಳ ಪ್ರೀತಿ, ವಿಶ್ವಾಸ ಎಂದೂ ಮರೆಯಲಾಗದು ಎಂದು ನಿವೃತ್ತ ಮುಖ್ಯೋಪಾಧ್ಯಾಯಿನಿ ಎಸ್.ಎಸ್. ಖೇಮಲಾಪುರೆ ಹೇಳಿದರು.
ಅವರು ತಾಲೂಕಿನ ಶಿಂದಿಕುರಬೇಟ ಗ್ರಾಮದ ಸರ್ಕಾರಿ ಹೆಣ್ಣು ಮಕ್ಕಳ ಶಾಲೆಯ ಆವರಣದಲ್ಲಿ ಜರುಗಿದ ಶಿಂದಿಕುರಬೇಟ ಗ್ರಾಮದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಸನ್ 2008 ರಿಂದ 2011ನೇ ಸಾಲಿನ ವಿದ್ಯಾರ್ಥಿನಿಯರಿಂದ ಗುರುವಂದನಾ ಹಾಗೂ ಸ್ನೇಹಿತೆಯರ ಪುನರ್ಮಿಲನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.
ಶಿಕ್ಷಕರು ವಿದ್ಯಾರ್ಥಿಗಳಿಗೆ ಶಿಕ್ಷಣ ಜೊತೆಗೆ ಸಂಸ್ಕಾರವನ್ನು ನೀಡಿದಾಗ ಮಾತ್ರ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ. ಕಳೆದ ಹಲವಾರು ವರ್ಷಗಳಹಿಂದೆನಮ್ಮಶಾಲೆಯಲ್ಲಿ ಶಿಕ್ಷಣ ಕಲಿತು, ಇಂದು ವಿದ್ಯೆ ಹಾಗೂ ಜ್ಞಾನ ನೀಡಿದ ಗುರುಗಳನ್ನು ಒಂದೇ ವೇದಿಕೆಯಲ್ಲಿ ಅವರನ್ನು ಅಭಿಮಾನ ಹಾಗೂ ಗೌರವದಿಂದ ಸನ್ಮಾನಿಸಿದ ಕ್ಷಣ ನಮ್ಮ ಜೀವನದಲ್ಲಿ ಎಂದೂ ಮರೆಯಲಾಗದ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಸಂಸ್ಕಾರವನ್ನು ಕಲಿಸಬೇಕು ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿಂಗಪ್ಪ ಬಂಬಲಾಡಿ ವಹಿಸಿದ್ದರು.
ಮುಖ್ಯ ಅತಿಥಿಗಳಾಗಿ ನಿವೃತ್ತ ಮುಖ್ಯೋಪಾಧ್ಯಾಯ ಎಂ.ಎಸ್ .ಹಿತ್ತಲಮನಿ, ಎಂ.ಎಂ.ಹಾದಿಮನಿ, ಬಿ.ಎಂ.ಓಬನ್ನವರ, ಪ್ರಾಥಮಿಕ ಶಾಲೆಯ ಪ್ರಧಾನಗುರು ಎಸ್.ಡಿ.ಹಂಚಿನಾಳ, ಎಂ.ವೈ.ಹಣಮಂತಗೋಳ, ಬಿ.ಎಲ್ .ಪಡಸಲಗಿ, ಎಚ್.ಎಸ್.ಬೆಣಚಿನಮರಡಿ, ಎನ್.ಎನ್.ಕುಲಕರ್ಣಿ, ಆರ್.ಎಂ. ಹಿರೇಮನಿ, ಎಸ್.ಎಸ್.ಪೂಜೇರಿ, ಐ.ಎಂ. ಮುನ್ನೊಳಿ, ಆರ್.ಎಚ್.ತುಳಸಿಗೇರಿ, ಎಸ್. ಆರ್. ಅಲ್ಲಯ್ಯನವರಮಠ, ಕೆ.ವಿ.ಕರನೆಲ್ಲಿ, ಎಸ್‌ಡಿಎಂಸಿ ಅಧ್ಯಕ್ಷರಾದ ಶ್ರೀಧರ ಕಂಬಾರ, ದಯಾನಂದ ಕಳಸನ್ನವರ, ಬಸವರಾಜ ಗೋಕಾಕ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರು ತಮ್ಮ ಶಾಲೆಯ ದಿನಗಳನ್ನು ಸ್ಮರಿಸಿಕೊಂಡರು. ವಿದ್ಯೆ ಕಲಿಸಿದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಿದರು. ಕಾರ್ಯಕ್ರಮವನ್ನು ಸವಿತಾ ನಂದರಗಿ ಸ್ವಾಗತಿಸಿದರು. ಸುಶೀಲಾ ಮಾಳವ್ವಗೋಳ ನಿರೂಪಿಸಿದರು. ಸವಿತಾ ಹುಣಶ್ಯಾಳಿ ವಂದಿಸಿದರು.



ರಾಜ್ಯ ಮಟ್ಟದ ಪ್ರಶಸ್ತಿಗೆ ಭಾಜನ

- ತುರನೂರ ಗ್ರಾಮದ ಜ್ಞಾನಪ್ರಬೋಧಿನಿ ವಿದ್ಯಾಲಯದ 9 ವಿದ್ಯಾರ್ಥಿಗಳಿಗೆ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮಟ್ಟದ ಪ್ರಶಸ್ತಿ

ರಾಮದುರ್ಗ: ಸಮೀಪದ ತುರನೂರ ಗ್ರಾಮದ ಜ್ಞಾನಪ್ರಬೋಧಿನಿ ವಿದ್ಯಾಲಯದ 9 ವಿದ್ಯಾರ್ಥಿಗಳು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಮಟ್ಟದ ಪ್ರಶಸ್ತಿಗೆ ಭಾಜನರಾಗಿದ್ದಾರೆ.
ಇತ್ತೀಚೆಗೆ ದಾವಣಗೇರಿ ಜಿಲ್ಲೆಯ ಹರಿಹರ ತಾಲೂಕಿನ ಕೊಂಡಜ್ಜಿಯ ಭಾರತ ಸ್ಕೌಟ್ಸ್ ಗೈಡ್ಸ್ ಮತ್ತು ಕರ್ನಾಟಕ ರಾಜ್ಯ ಸಂಸ್ಥೆಯಿಂದ ನಡೆದ 2024-25ನೇ ಸಾಲಿನ ರಾಜ್ಯ ಮಟ್ಟದ ತರಬೇತಿಯಲ್ಲಿ ಭಾಗವಹಿಸಿ ಇಲ್ಲಿ ನಡೆದ 2024-25ನೇ ಸಾಲಿನ ರಾಜ್ಯ ಪುರಸ್ಕಾರ ಅಂತಿಮ ಪರೀಕ್ಷೆ ಶಿಬಿರದಲ್ಲಿ ವಿಪ್ರ ವಿದ್ಯಾಸಂಸ್ಥೆಯ ಶ್ರೀಮತಿ ರುಕ್ಮಿಣಿಬಾಯಿ ಲ. ಮಾಳದಕರ ಜ್ಞಾನ ಪ್ರಬೋಧಿನಿ ಪ್ರೌಢ ಶಾಲೆ ತುರನೂರ ಶಾಲೆಯ 10ನೇ ತರಗತಿಯ ಸ್ಕೌಟ್ ವಿದ್ಯಾರ್ಥಿಗಳಾದ ಬೈಲಪ್ಪ. ಸಿ.ತುಡಬಿನ, ಮೈಲಾರ, ಮನಿಹಾಳ, ಅಜಯ. ಮುಗನೂರ, ಪ್ರಕಾಶ ಹ. ಕಲ್ಲೇಶನವರ, ಅಭಿಷೇಕ ವಿಠಲ ಮ. ಮಾದರ ಹಾಗೂ ಗೈಡ್ ವಿದ್ಯಾರ್ಥಿನಿರಾದ ರಕ್ಷಿತಾ ಶೆ. ಮಾದರ, ಭೀಮವ್ವ ಸು. ಹುಚಕೆಂಚನ್ನವರ, ಭೂಮಿಕಾ ಲ. ಕಂಠಿ ಸೇರಿದಂತೆ 9 ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತೇರ್ಗಡೆಯಾಗಿ ರಾಜ್ಯ ಮಟ್ಟದ ಪ್ರಶಸ್ತಿ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.
ಪ್ರಶಸ್ತಿ ಪಡೆದ ವಿದ್ಯಾರ್ಥಿಗಳನ್ನು ಹಾಗೂ ತರಬೇತಿ ನೀಡಿದ ಸ್ಕೌಟ್ ಮಾಸ್ಟರ್ ಶಿವಾನಂದ ರಾಠೋಡ ಹಾಗೂ ಗೈಡ್ಸ್ ಕ್ಯಾಪ್ಟನ್ ಎಸ್. ಎಸ್. ಬಡಿಗೇರರನ್ನು ಸಂಸ್ಥೆಯ ಅಧ್ಯಕ್ಷ ಡಾ. ಪಿ. ಎಮ್. ಆಪ್ಟೆ, ಗೌರವಾಧ್ಯಕ್ಷ ವಿ. ಎನ್. ಗೋಡಖಿಂಡಿ, ಕಾರ್ಯದರ್ಶಿ ಗೋಪಾಲಕೃಷ್ಣ ಬಿಂದಗಿ, ಹಾಗೂ ಆಡಳಿತಾಧಿಕಾರಿ ಡಾ. ಎಸ್. ವಿ. ಕುಲಕರ್ಣಿ, ಪ್ರಧಾನ ಗುರುಮಾತೆಯಾದ ಎಸ್.ವಿ.ನಾಡಗೌಡರ ಅಭಿನಂದನೆ ಸಲ್ಲಿಸಿದ್ದಾರೆ.



₹ 3.38 ಲಕ್ಷಗಳ ಉಳಿತಾಯ ಬಜೆಟ್‌ಗೆ ಅನುಮೋದನೆ

ಬೈಲಹೊಂಗಲ: ಬೈಲಹೊಂಗಲ ಪುರಸಭೆಯಿಂದ ನಗರಸಭೆಯಾಗಿ ಮೇಲ್ದರ್ಜೆಗೇರಿದ ಬಳಿಕ ಮೊದಲ ಬಾರಿಗೆ 2026-27ನೇ ಸಾಲಿನ ಆಯ-ವ್ಯಯ ಅಂದಾಜು ಪತ್ರಿಕೆಯನ್ನು ಮಂಡಿಸಲಾಗಿದ್ದು, ರೂ. 3.38 ಲಕ್ಷಗಳ ಉಳಿತಾಯ ಹೊಂದಿದ ಬಜೆಟ್‌ಗೆ ಅನುಮೋದನೆ ನೀಡಲಾಗಿದೆ.
ನಗರಸಭೆ ಕಾರ್ಯಾಲಯದಲ್ಲಿ ನಡೆದ ಸಭೆಯಲ್ಲಿ ಮಾನ್ಯ ಆಡಳಿತಾಧಿಕಾರಿಗಳು ಹಾಗೂ ಬೆಳಗಾವಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬಜೆಟ್ ಮಂಡನೆಯಾಗಿದ್ದು, ಪೌರಾಯುಕ್ತರಾದ ಭಾಗ್ಯಶ್ರೀ ಹುಗ್ಗಿ ಅವರು ಆಯ-ವ್ಯಯದ ವಿವರಗಳನ್ನು ಮಂಡಿಸಿದರು.
ಒಟ್ಟು ರೂ. 43.03 ಕೋಟಿ ಆದಾಯ ಎದುರು ರೂ. 42.99 ಕೋಟಿ ವೆಚ್ಚವಾಗಲಿದ್ದು, ರೂ. 3.38 ಲಕ್ಷಗಳ ಉಳಿತಾಯ ಅಂದಾಜಿಸಲಾಗಿದೆ.
ಸಮಾಜದ ವಿವಿಧ ವರ್ಗಗಳ ಅಭಿವೃದ್ಧಿಗೆ ವಿಶೇಷ ಅನುದಾನ ಮೀಸಲಿಡಲಾಗಿದ್ದು, ಪರಿಶಿಷ್ಟ ಜಾತಿ/ಪಂಗಡಗಳಿಗೆ ಶೇ.24.10ರಷ್ಟು ಅನುದಾನದಲ್ಲಿ ರೂ. 19.28 ಲಕ್ಷ, ಹಿಂದುಳಿದ ವರ್ಗಗಳಿಗೆ ಶೇ.7.25ರಷ್ಟು ಅನುದಾನದಲ್ಲಿ ರೂ. 3.10 ಲಕ್ಷ ಹಾಗೂ ವಿಕಲಚೇತನರ ಕಲ್ಯಾಣಕ್ಕಾಗಿ ಶೇ.5ರಷ್ಟು ಅನುದಾನದಲ್ಲಿ ರೂ. 2.13 ಲಕ್ಷ ಮೀಸಲಾಗಿದೆ.
ನಗರಸಭೆಯ ವ್ಯಾಪ್ತಿಯ 31 ವಾರ್ಡುಗಳಲ್ಲಿ ಅಭಿವೃದ್ಧಿಗೆ ರೂ. 444 ಲಕ್ಷ ಕಾಯ್ದಿರಿಸಲಾಗಿದೆ. ಒಟ್ಟು ರೂ. 252 ಲಕ್ಷ ಅನುದಾನ ಮೀಸಲಾಗಿದೆ.
ನಗರದಲ್ಲಿನ ದೊಡ್ಡಕೆರೆಯನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವ ಯೋಜನೆ ಕೈಗೊಳ್ಳಲಾಗಿದ್ದು, ಎಮ್.ಎಸ್.ಎಸ್.ಆರ್. ಮತ್ತು ಎಮ್. ಕೆ.ಸಿ.ಆರ್. ಪ್ರೌಢಶಾಲೆಗಳ ಹೊಸ ಕಟ್ಟಡ ನಿರ್ಮಾಣ, ದುರಸ್ತಿ ಹಾಗೂ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಸೌಲಭ್ಯ ಒದಗಿಸುವತ್ತ ಗಮನ ಹರಿಸಲಾಗಿದೆ. ಸಭೆಯಲ್ಲಿ ನಗರಸಭೆಯ ಅಧಿಕಾರಿಗಳು, ಜಿಲ್ಲಾ ನಗರಾಭಿವೃದ್ಧಿ ಕೋಶದ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಂದ ಗುರುವಂದನೆ

ನೇಸರಗಿ: ಕುಟುಂಬ, ಸ್ನೇಹ ಎರಡು ಅವಿನಾಭಾವ ಸಂಬಂಧ ಹೊಂದಿವೆ ಎಂದು ನಿವೃತ್ತ ಪ್ರಾಂಶುಪಾಲರಾದ ವಾಯ್ ಎಮ್ ಯಾಕ್ಕೊಳಿ ಹೇಳಿದರು.
ಅವರು ಇಲ್ಲಿನ ಸರ್ಕಾರಿ ಪದವಿ ಮಹಾವಿದ್ಯಾಲಯ ವೇದಿಕೆಯಲ್ಲಿ ಆಯೋಜಿಸಲಾಗಿದ್ದ 1999-2002 ರವರೆಗೆ ಬಿ.ಎ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಂದ ಗುರುವಂದನೆ, ಸ್ನೇಹಿತರ ಪುನರ ಮಿಲನ ಕಾರ್ಯಕ್ರಮ ಮತ್ತು ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಫ್ ಡಿ ಗದ್ದಿಗೌಡರ ವಿರಚಿತ ಗುರು ನೀನು ಶಿಷ್ಯ ನಾನು ಧ್ವನಿಸುರಳಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಕಠಿಣ ಪರಿಶ್ರಮದಿಂದ ಮುಂದೆ ಬಂದಿದ್ದು, ಇದಕ್ಕೆ ನಮ್ಮ ಕುಟುಂಬದ ಸಹಕಾರ ಇದ್ದು, ಹಾಗೆ ನೀವು ನಿಮ್ಮ ಕುಟುಂಬ ಮತ್ತು ಸ್ನೇಹಿತರನ್ನು ಪ್ರೀತಿ ವಿಶ್ವಾಸದಿಂದ ಕಾಣಿರಿ ಎಂದರು.
ನಿವೃತ್ತ ಜಂಟಿ ನಿರ್ದೇಶಕರಾದ ವ್ಹಿ. ಎಸ್. ಪ್ರಕಾಶ, ಪದವಿ ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ. ಎಫ್ ಡಿ ಗದ್ದಿಗೌಡರ



ಮಾತನಾಡಿದರು. ಪ್ರೊ. ಬಿ.ಪಿ.ಮಠದ, ಪ್ರೊ.ಎಸ್. ವ್ಹಿ. ಚಿನಗುಡಿ, ಡಾ. ಎ. ಎಸ್. ನಾಯಿಕ, ಡಾ. ವೆ. ಎಮ್ .ಚಾಲಿಹಾಳ, ಪ್ರೊ. ಆರ್ ಜೆ ಕಟ್ಟಿ,ಪ್ರೊ. ಎಮ್ ಎ ಡವಳೇಶ್ವರ, ಪ್ರೊ. ಬಿ ಎ ಹಸರಡ್ಡಿ,, ಪ್ರೊ, ಎಸ್ ವಿ ಚಿಂಚಣಿ, ಪ್ರೊ. ಬಿ ಕೆ ಮದವಾಲ, ಪ್ರೊ.ಎಸ್. ಕೆ. ಮೂಲಿಮನಿ, ಪ್ರೊ. ಡಿ. ಎಸ್. ಮಲ್ಲಿಭಾಶೆಟ್ಟಿ, ಮಲ್ಲಿಕಾರ್ಜುನ ಮಾಳಣ್ಣವರ ಸೇರಿದಂತೆ ಇತರರು ಇದ್ದರು. ಪಟ್ಟೆದ ಗುರುಗಳು ನೆರವೇರಿಸಿದರು. ಕಳ್ಳಿಬಡ್ಡಿ ಪರಿಚಯಿಸಿದರು.

ಖಾದಿ ಸಹಕಾರಿ ಉತ್ಪಾದಕ ಸಂಘ ಆಡಳಿತ ಮಂಡಳಿ ರದ್ದುಗೊಳಿಸಿ

ಬೆಳಗಾವಿ: ತಾಲೂಕಿನಲ್ಲಿರುವ ಖಾದಿ ಮತ್ತು ಗ್ರಾಮೋದ್ಯೋಗ ಸಹಕಾರ ಉತ್ಪಾದಕ ಸಂಘ, ನಿ. ಹುದಲಿ ಆಡಳಿತ ಮಂಡಳಿಯು ಸರ್ಕಾರದ ಅಧಿನಿಯಮ, ನಿಯಮಗಳು ಹಾಗೂ ಉಪವಿಧಿಗಳ ಮೂಲಕ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸತತವಾಗಿ ತಪ್ಪು ಮಾಡಿಕೊಂಡೆ ಬರುತ್ತಿದೆ ಎಂದು ರಾಜ್ಯ ರೈತ ಸಂಘದ ಸದಸ್ಯರು ಗಂಭೀರವಾಗಿ ಆರೋಪಿಸಿದರು.
ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಗೆ ರೈತ ಸಂಘದ ಕೆಲ ಮುಖಂಡರುಗಳು ಭೇಟಿ ನೀಡಿ ಹುದಲಿಯಲ್ಲಿವ ಗ್ರಾಮೋದ್ಯೋಗ ಸಹಕಾರಿ ಸಂಘದಲ್ಲಿ, ಸಂಘದ ಹಿತಾಸಕ್ತಿಗರ ವಿರುದ್ಧವಾಗಿ ಕಾರ್ಯಭಾರ, ಆಡಳಿತ ಅನುಭವದ ಕೊರತೆಯಿಂದ ಕಾರ್ಯನಿರ್ವಹಣೆಯಲ್ಲಿ ಇಕ್ಕಟ್ಟಿನ ಪರಿಸ್ಥಿತಿ ಮತ್ತು ಆಡಳಿತ ಯಂತ್ರ ಕುಸಿದಿದೆ ಎಂದು ಆರೋಪಿಸಿದರು.
ಸರ್ಕಾರದ ಅನುದಾನ, ನೆರವು ದುರುಪಯೋಗ, ನೌಕರ, ಸಿಬ್ಬಂದಿಗಳ ಮೇಲೆ ಹಿಡಿತವಿಲ್ಲದಿರುವುದು, ಮಾಜಿ



ಕಾರ್ಯದರ್ಶಿ ವಿ.ಎ ಬಲಕುಂದಿ ಹಾಗೂ ಮಾಜಿ ಪ್ರಭಾರ ಕಾರ್ಯದರ್ಶಿ ಎ.ಎಸ್.ಪಾಟೀಲ ರವರ ಅವಧಿಯಲ್ಲಿ ಸಾಕಷ್ಟು ಅಧಿಕಾರ ದುರ್ಬಳಕೆ, ಹಣಕಾಸಿ ಅವ್ಯವಹಾರ, ದುರ್ಬಳಕೆ. ವೇತನ ತಾರತಮ್ಯ. ಅಪಾದಿತ ವ್ಯಕ್ತಿಗಳನ್ನು ರಕ್ಷಣೆಯಲ್ಲಿ ನಿರತರಾಗಿರುವವ ಮೇಲೆ ಕೂಡಲೇ ಕಾನೂನಿನಕ್ರಮ ಕೈ ಗೊಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡರು.
ಯಾವ ಕಾರಣಕ್ಕಾಗಿ ರದ್ದು ಮಾಡಬೇಕು: ಖಾದಿ ಮತ್ತು ಗ್ರಾಮೋದ್ಯೋಗ ಸಹಕಾರ ಉತ್ಪಾದಕ ಸಂಘ.ನಿ.ಹುದಲಿ ಬೆಳಗಾವಿ ಸಂಘದ ಕಾರ್ಯದರ್ಶಿಯಾಗಿ ನಿವೃತ್ತ ನಂತರ ಅದೇ ಹುದ್ದೆಯಲ್ಲಿ ಮುಂದುವರೆಸಿ ವಿ.ಎ.ಬಲಕುಂದಿ ಇವರನ್ನು ಕಾಯ್ದೆ,ಕಾನೂನು ಉಲ್ಲಂಘನೆ ಮಾಡಿ ಸಂಘಕ್ಕೆ ರೂ. 16,41,263 ಮೊತ್ತದ ಮೇಲೆ ದಿ.01-04-2020 ರಿಂದ 31-03-2025 ರ ವರೆಗಿನ ಅವಧಿಗೆ ಶೇ 18% ರಂತೆ ಬಡ್ಡಿ ಸೇರಿಸಿ ಈ ಮೊತ್ತವನ್ನು ಸಾಮೂಹಿಕವಾಗಿ ಮತ್ತು ವಯಕ್ತಿವಾಗಿ ನೋಟಿಸ ತಲುಪಿದ 7ದಿವಸಗಳೊಳಗೆ ಸಹಕಾರ ಸಂಘಕ್ಕೆ ಪಾವತಿ ಮಾಡಲು ಹಿಂದಿನ ಆಡಳಿತ ಮಂಡಳಿ ಅವಧಿಯಲ್ಲಿ ಸಂಘದವತಿಯಿಂದ ದಿ.22-05-2025 ರಂದು ವಕೀಲರ ಮೂಲಕ ನೋಟಿಸ್ ನೀಡಲಾಗಿತ್ತು. ಆದರೆ ಇವರೆಗೂ ಸದರಿ ಆಡಳಿತ ಮಂಡಳಿ ಯಾವುದೆ ಕ್ರಮ ಕೈಗೊಂಡಿರುವುದಿಲ್ಲಾ. ಇದಲ್ಲದೆ, ಮಾಜಿ ಕಾರ್ಯದರ್ಶಿ ವಿ.ಎ. ಬಲಕುಂದಿ ಪ್ರಕರಣದ ರೂ. 16,41,263 ಪ್ರಕರಣದ ಮುಖ್ಯ ಆರೋಪಿತ ಹಾಗೂ ಮಾಜಿ ನಿರ್ದೇಶಕರಾದ ಮಹಾದೇವ ಶಿವಪುತ್ರಪ್ಪಾ ಮೂಳಗಿ ಇರುವ ಇಲ್ಲಿ ಸಾಕಷ್ಟು ಅವ್ಯವಹಾರ ಮಾಡಿದ್ದಾರೆ. ಇದೇ ರೀತಿ ಹಲವಾರು ಪ್ರಕರಣಗಳು ಬೆಳಗಿಕೆ ಬಂದಿದೆ.
ಆದುದರಿಂದ ಖಾದಿ ಮತ್ತು ಗ್ರಾಮೋದ್ಯೋಗ ಸಹಕಾರಿ ಉತ್ಪಾದಕ ಸಂಘ, ನಿ ಹುದಲಿ ಆಡಳಿತ ಮಂಡಳಿಯನ್ನ ರದ್ದಗೊಳಿಸುವಂತೆ ಆಗ್ರಹಿಸಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿಕೊಮಡರು.
ಈ ವೇಳೆ ಸಿದ್ದಗೌಡ ಮೋದಗಿ, ಚಂದ್ರಪ್ಪ ಮಲ್ಲಾಪೂರ, ಅಡಿವೆಪ್ಪಾ ಮೋದಗಿ, ಎಚ್,ಐ ತಶಿಲ್ದಾರ್ ಸೇರಿದಂತೆ ಇತರರು ಇದ್ದರು.

ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಶಿಕ್ಷಕ ವೃತ್ತಿ ಅತ್ಯಂತ ಪವಿತ್ರ

ತೆಲಸಂಗ: ಜಗತ್ತಿನಲ್ಲಿ ಮಕ್ಕಳ ಭವಿಷ್ಯವನ್ನು ರೂಪಿಸುವ ಪವಿತ್ರ ಕಾರ್ಯ ಶಿಕ್ಷಕರಿಗೆ ಮಾತ್ರ ಲಭಿಸಿದೆ. ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾದುದು ಎಂದು ತೆಲಸಂಗ ಸಿ.ಆರ್.ಪಿ ಎಸ್.ಜಿ.ಬಜಂತ್ರಿ ಹೇಳಿದರು.
ಸಮೀಪದ ತೆಲಸಂಗ ಗ್ರಾಮದ ಕಿಲಾರದಡ್ಡಿ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಶಿಕ್ಷಕ ಅಶೋಕ ದೊಡ್ಡಮನಿ ಅವರ ಸೇವಾ ನಿವೃತ್ತಿ ಹಾಗೂ ಸನ್ಮಾನ ಕಾರ್ಯಕ್ರಮದದಲ್ಲಿ ಅವರು ಮಾತನಾಡಿ, ಒಬ್ಬ ಆದರ್ಶ ಶಿಕ್ಷಕನಲ್ಲಿ ಇರಬೇಕಾದ ಗುಣಗಳಲ್ಲಿ ಶಿಸ್ತು ಬಹು ಮುಖ್ಯವಾದುದು. ಕೇವಲ ಸೇವೆಯಲ್ಲಿದ್ದಾಗ ಮಾತ್ರವಲ್ಲ, ನಿವೃತ್ತಿಯ ನಂತರವೂ ಸಮಾಜ ಮತ್ತು ವಿದ್ಯಾರ್ಥಿಗಳು ನಮ್ಮನ್ನು ಗೌರವದಿಂದ ನೆನಪಿಟ್ಟುಕೊಳ್ಳುವಂತಹ ಕೆಲಸ ಮಾಡಬೇಕು. ಅಶೋಕ ದೊಡ್ಡಮನಿ ಇಂದು ಕೇವಲ ಸರ್ಕಾರಿ ಸೇವೆಯಿಂದ ನಿವೃತ್ತರಾಗುತ್ತಿದ್ದೀರೆ ಅಷ್ಟೇ. ಆದರೆ ಸಮಾಜಕ್ಕೆ ಜ್ಞಾನ ಧಾರೆ ಎರೆಯುವ ಕಾರ್ಯದಿಂದ ಅವರಿಗೆ ಎಂದಿಗೂ ನಿವೃತ್ತಿ ಇಲ್ಲ. ಅವರ ಅನುಭವ, ಮಾರ್ಗದರ್ಶನ ಈ ಸಮಾಜಕ್ಕೆ ಮುಂದೆಯೂ ಅತ್ಯಗತ್ಯವಾಗಿದೆ. ಅವರ ಜ್ಞಾನದ ಜ್ಯೋತಿ ಸದಾ ಬೆಳಗುತ್ತಿರಲಿ. ಮಾತು, ನಡವಳಿಕೆ



ಮತ್ತು ಸಮಯಪಾಲನೆಯಲ್ಲಿ ಶಿಸ್ತನ್ನು ಅಳವಡಿಸಿಕೊಂಡ ಶಿಕ್ಷಕ ಮಾತ್ರ ವಿದ್ಯಾರ್ಥಿಗಳಿಗೆ ನಿಜವಾದ ಮಾದರಿಯಾಗಬಲ್ಲರು. ಇಂದು ನಿವೃತ್ತರಾಗುತ್ತಿರುವ ನಮ್ಮ ಶಿಕ್ಷಕರು ಅಂತಹ ಶಿಸ್ತಿನ ಬದುಕಿಗೆ ಒಂದು ಜೀವಂತ ಉದಾಹರಣೆಯಾಗಿದ್ದಾರೆ ಎಂದರು.
ನೌಕರರ ಸಂಘದ ಜಿಲ್ಲಾ ಪ್ರತಿನಿಧಿ ಸುರೇಶ ಕುಂಬಾರ ಮಾತನಾಡಿ, ಜಗತ್ತಿನಲ್ಲಿ ಎಷ್ಟೋ ವೃತ್ತಿಗಳಿವೆ, ಆದರೆ ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾದದ್ದು. ಯಾಕೆಂದರೆ, ಬೇರೆಲ್ಲಾ ವೃತ್ತಿಗಳು ಕೇವಲ ಕೆಲಸವನ್ನು ಕಲಿಸಿದರೆ, ಶಿಕ್ಷಕ ವೃತ್ತಿ ಬದುಕನ್ನೇ ಕಲಿಸುತ್ತದೆ. ಮಕ್ಕಳ ಭವಿಷ್ಯವನ್ನು ರೂಪಿಸುವ, ಅವರನ್ನು ದೇಶದ ಸತ್ಪ್ರಜೆಗಳನ್ನಾಗಿ ಮಾಡುವ ಮಹತ್ತರ ಜವಾಬ್ದಾರಿ ಮತ್ತು ಸೌಭಾಗ್ಯ ಈ ಜಗತ್ತಿನಲ್ಲಿ ಕೇವಲ ಶಿಕ್ಷಕರಿಗೆ ಮಾತ್ರ ಲಭಿಸಿದೆ ಎಂದರು.
ಗ್ರಾಪಂ ಅಧ್ಯಕ್ಷೆ ಭಾರತಾ ಲೋಕಂಡೆ, ಪ್ರಮುಖರಾದ ಕಾಶಿಲಿಂಗ ಲೋಕಂಡೆ, ಮುಖ್ಯ ಶಿಕ್ಷಕ ವಿಜಯ ಕನ್ನಾಳ, ಶಿಕ್ಷಕರುಗಳಾದ ಸುರೇಶ ಕುಂಬಾರ, ಯಾಶಿನ ಕರಜಗಿ, ವಿಠ್ಠಲ ಶೆಲ್ಲೆಪ್ಪಗೋಳ, ಎಸ್.ಬಿ.ಇಸರಗೊಂಡ, ಡಿ.ಎಸ್. ಕಟವಾಣಿ, ಪಾಂಡೇಗಾವಿ, ಸುರೇಶ ರಜಪೂತ, ಸುರೇಶ ಥೈಕಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಿರುಸುದ್ದಿ

ಇಂದು ಚಂದ್ರಗಿರಿದೇವಿ ಜಾತ್ರೆ

ಗಲಗಲಿ: ಗ್ರಾಮದ ಪ್ರಸಿದ್ಧ ಚಂದ್ರಗಿರಿದೇವಿ ಜಾತ್ರಾ ಮಹೋತ್ಸವ ಏ.7ರಂದು ಮಂಗಳವಾರ ಜರುಗಲಿದೆ. ಜಾತ್ರೆ ನಿಮಿತ್ತ ಬೆಳಗ್ಗೆ ಅಭಿಷೇಕ ಹಾಗೂ ವಿಶೇಷ ಪೂಜೆ ಮಧ್ಯಾಹ್ನ ಮಹಾಪ್ರಸಾದ ವಿತರಣೆ ನಡೆಯಲಿದೆ. ಸಂಜೆ ವಾದ್ಯ ವೃಂದದೊಂದಿಗೆ ರಥಕ್ಕೆ ಕಳಸ ತರುವ ಕಾರ್ಯಕ್ರಮ ಜರಗಲಿದ್ದು, ಸಂಜೆ 7.12 ಗಂಟೆಗೆ ಮಹಾರಥೋತ್ಸವ ಜರುಗಲಿದೆ. ರಾತ್ರಿ 10 ಗಂಟೆಗೆ ರಾಘವೇಂದ್ರ ನಾಟ್ಯ ಸಂಘದವರಿಂದ 'ಮಗ ಹೋದರು ಮಾಂಗಲ್ಯ ಬೇಕು' ಎಂಬ ನಾಟಕ ಜರುಗಲಿದೆ ಎಂದು ಜಾತ್ರಾ ಕಮಿಟಿ ಪ್ರಕಟಣೆ ತಿಳಿಸಿದೆ.

ನೂತನ ಪದಾಧಿಕಾರಿಗಳ ಆಯ್ಕೆ

ಜಮಖಂಡಿ: ಸಮೀಪದ ಹುನ್ನೂರು ಮತ್ತು ಕಡಪಟ್ಟಿ ಗ್ರಾಮ ವ್ಯಾಪ್ತಿಯಲ್ಲಿ ಬರುವ ಗಣೇಶ ನಗರದ ಅಭಿವೃದ್ಧಿ ಸಂಘದ ಸಭೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು. ನಿಕಟಪೂರ್ವ ಅಧ್ಯಕ್ಷ ಅನಿಲ ಶುಕ್ಲೆ ಸಭೆಯ ಅಧ್ಯಕ್ಷತೆ ವಹಿಸಿದ್ದರು.ಸಂಘದ ನೂತನ ಗೌರವಾಧ್ಯಕ್ಷರಾಗಿ ಅನೀಲ ಶುಕ್ಲೆ, ಅಧ್ಯಕ್ಷರಾಗಿ ಬಸವರಜ ಉಟಗಿ, ಪ್ರಧಾನ ಕಾರ್ಯದರ್ಶಿಯಾಗಿ ಸೋಮಲಿಂಗ ಬಾಲಗಾವಿ, ಸಹ ಕಾರ್ಯದರ್ಶಿಯಾಗಿ ಸಂಜೀವ ಶಾಸ್ತ್ರಿ, ಖಜಾಂಚಿಯಾಗಿ ರಾಜೀವಮೂರ್ತಿ ಕುಲಕರ್ಣಿ, ಸಲಹ ಸಮೀತಿ ಸದಸ್ಯರಾಗಿ ಶಿವಕುಮಾರ ಗೊಬ್ಬಾಣಿ, ರಮೇಶ ಅಮ್ಮಣಗಿ, ಬಸವರಜ ಆಲಬಾಳ, ಮಹೇಂದ್ರ ಔರಸಂಗ, ಎನ್.ಟಿ.ಜೋಶಿ, ಜಿ.ಎಸ್.ಆವಟಿ, ಕಲ್ಲಪ್ಪ ತೇಲಿ, ವದಿರಾಜ ಗಲಗಲಿ, ಲಕ್ಷ್ಮೀಶ ಮಣ್ಣೂರ, ಗೋಪಾಲ ಪಾಟೀಲ ಅವರನ್ನು ಆಯ್ಕೆ ಮಾಡಲಾಗಿದೆ. ಸಂಘದ ನೂತನ ಪದಾಧಿಕಾರಿಗಳು ಮತತು ಸದಸ್ಯರು ಇದ್ದರು ಎಂದು ಅಧ್ಯಕ್ಷ ಬಸವರಾಜ ಉಟಗಿ ತಿಳಿಸಿದ್ದಾರೆ.

ಜನಗಣತಿ ಡಿಜಿಟಲ್ ಆಧಾರಿತ



ಕೆರೂರ: 2027ರ ಜನಗಣತಿಯು ಸಂಪೂರ್ಣ ಡಿಜಿಟಲ್ ಆಧಾರಿತವಾಗಿದ್ದು, ಜನಗಣತಿ ಮಾಹಿತಿ ದೋಷಮುಕ್ತ ಹಾಗೂ ಪಾರದರ್ಶಕತೆಯಿಂದ ಕೂಡಿರಬೇಕು ಎಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ರಮೇಶ ಮಾಡಬಾಳ ಹೇಳಿದರು.ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 2027 ಜನಗಣತಿಯ ಗಣತಿದಾರರ ಹಾಗೂ ಮೇಲ್ವಿಚಾರಕ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಗಣತಿದಾರರಿಗೆ ಮೂರು ಹಂತಗಳಲ್ಲಿ ತರಬೇತಿ ನಡೆಯಲಿದ್ದು,ತರಬೇತಿಯಲ್ಲಿ ಗಣತಿದಾರರಿಗೆ ಪಾರದರ್ಶಕತೆ ಹಾಗೂ ಮಾಹಿತಿ ದೋಷ ಮುಕ್ತವಾಗಿಡುವ ಬಗ್ಗೆ ಮಾಹಿತಿ ನೀಡಲಾಗುವುದು ಎಂದು ಹೇಳಿದರು.ಸಾರ್ವನಿಕರು ಮನೆಯಲ್ಲಿಯೇ ಕುಳಿತು ಸ್ವಯಂ ಪ್ರೇರಿತರಾಗಿ ಆನ್ ಲೈನ್ ನಲ್ಲಿ ಮಾಹಿತಿ ನೀಡಬಹುದು, ಪಟ್ಟಣದ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 38 ಬ್ಲಾಕ್‌ಗಳಿದ್ದು, 38 ಜನ ಗಣತಿದಾರರು,7 ಜನ ಮೇಲ್ವಿಚಾರಕರು ಇದ್ದಾರೆ,ಕೆರೂರ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು 45 ಜನ ಗಣತಿದಾರರನ್ನು ನೇಮಿಸಲಾಗಿದೆ ಎಂದು ತಿಳಿಸಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪರಶುರಾಮ ಲಮಾಣಿ, ಪಪಂ ಸಿಬ್ಬಂದಿಗಳಾದ ಮಹಾಂತೇಶ ಅಣ್ಣೆನ್ನವರ, ಅಶ್ವಥ ರಂಗನಗೌಡ್ರ, ಹಾಗೂ ಗಣತಿದಾರರು ಭಾಗವಹಿಸಿದ್ದರು.

ವ್ಯಕ್ತಿ ಕಾಣೆ



ಹುನಗುಂದ: ತಾಲೂಕಿನ ಹೂವನೂರ ಗ್ರಾಮದ ನಿವಾಸಿ(ಮೂಲತಃ ಬಸವನಬಾಗೇವಾಡಿ ತಾಲೂಕಿನ ಕುದರಿಸಾಲವಾಡಗಿ) ಯ ಆಯುರ್ವದಿಕ ವೈದ್ಯರಾಗಿ ಕೆಲಸ ಮಾಡುತ್ತಿದ್ದ ಅಶೋಕ ಗುರುಪಾದಪ್ಪ ಅಂಗಡಿ 64 ವರ್ಷ ಅವರು ಕಳೆದ ಮಾ.12ರಂದು ಸಂಜೆ 5 ಗಂಟೆಯ ಸುಮಾರಿಗೆ ಹುನಗುಂದ ತಾಲೂಕಿನ ಹೂವನೂರ ಗ್ರಾಮದ ತನ್ನ ಮನೆಯಿಂದ ಕೂಡಲಸಂಗಮ ಕ್ರಾಸದಲ್ಲಿಯ ತನ್ನ ಆಯುರ್ವೇದಿಕ ಆಸ್ಪತ್ರೆಗೆ ಹೋಗಿ ಬರುತ್ತೇನೆ ಅಂತಾ ಹೇಳಿ ಹೋದವನು ಪುನಃ ಮನೆಗೆ ಬರದೇ ಎಲ್ಲಿಯೋ ಹೋಗಿ ಕಾಣೆಯಾಗಿದ್ದು.ಕಾಣೆಯಾದ ಅಶೋಕ ಅಂಗಡಿ 5.5 ಫೂಟ್ ಎತ್ತರ, ಸದೃಡ ದೇಹವನ್ನು ಹೊಂದಿದ್ದು.ಗೋದಿ ಮೈ ಬಣ್ಣ,ಉದ್ದ ಮುಖ, ಬೋಳು ತಲೆ, ಕುರುಚಲು ಗಡ್ಡ ಚಹರ ಪಟ್ಟಿಯನ್ನು ಹೊಂದಿದ್ದಾರೆ.ಮನೆಯಿಂದ ಹೋಗುವಾಗ ಮೈ ಮೇಲೆ ಬಿಳಿ ಬಣ್ಣದ ನೆಹರು ಶರ್ಟ, ಮತ್ತು ಬಿಳಿ ಬಣ್ಣದ ಧೋತರ ಧರಿಸಿರುತ್ತಾರೆ. ಕನ್ನಡ ಬಾಷೆ ಮಾತಾಡುತ್ತಿದ್ದು.. ಇವರು ಕಾಣೆಯಾಗಿರುವ ಕುರಿತು ಅವರ ಹೆಂಡತಿ ಮಹಾದೇವಿ ಅಶೋಕ ಅಂಗಡಿ ಹುನಗುಂದ ಠಾಣೆಯಲ್ಲಿ ದೂರ ದಾಖಲಿಸಿದ್ದು, ಹುನಗುಂದ ಠಾಣೆ ಗುನ್ನೆ ನಂ. 38/2026 ಕಲಂ ಮನುಷ್ಯ ಕಾಣೆ. ಅಡಿಯಲ್ಲಿ ಪ್ರಕರಣ ದಾಖಲಾಗಿದೆ.



ತೇರದಾಳ: ಸೋಮವಾರ ತಹಶೀಲ್ದಾರ್ ಕಚೇರಿಯಲ್ಲಿ ಡಾ.ಬಾಬು ಜಗಜೀವನರಾಂ 119ನೇ ಜನ್ಮ ದಿನಾಚರಣೆ ನಡೆಯಿತು. ತಹಶೀಲ್ದಾರ್ ವಿಜಯಕುಮಾರ ಕಡಕೋಳ, ಸಿದ್ದಾರ್ಥ ಕಾಳೆ,' ವಿ.ಬಿ.ಹಿರೇಮಠ, ಪ್ರದಸ. ಶಿವಕುಮಾರ ಹಳ್ಳಿ ಹಾಗೂ ಮುಖಂಡರಾದ ಸುಜಿತ ದಾನಿಗೊಂಡ, ದಯಾನಂದ ಕಾಳೆ, ಗೋಪಾಲ ಮಾಂಗ, ಭೀಮಸಿ ದೊಡಮನಿ, ಮಹಾದೇವ ಯಲ್ಲಟ್ಟಿ, ಪ್ರಶಾಂತ ಜಗದಾಳ, ತಂಕರ ಕಡಕೋಳ, ಅನೀಲ ಅಥಣಿ, ರಾಜು ಮಾತಿವಡ್ಡರ, ವೀರಭದ್ರ ಮುದಕನ್ನವರ ಸೇರಿ ಇತರರು ಇದ್ದರು.

ಸಾಧಕರು ಜಾತಿ, ಧರ್ಮ ಮೀರಿದವರು

ತೇರದಾಳ: ಹಸಿರು ಕ್ರಾಂತಿಯ ಹರಿಕಾರ, ಭಾರತವನ್ನು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯನ್ನಾಗಿ ಮಾಡಿದ, ರೈತರಿಗಾಗಿ ಆಧುನಿಕ ಹೊಸ ಕೃಷಿ ನೀತಿಯನ್ನು ಜಾರಿಗೆ ತಂದ ಹಾಗೂ ಭಾರತದ ಉಪರಾಷ್ಟ್ರಪತಿಯಾಗಿ ಎಲ್ಲರಿಲ್ಲಂದಲೂ ಪ್ರೀತಿಯಿಂದ ಬಾಬೂಜಿ ಎಂಬ ಹೆಸರಿನಿಂದ ಪ್ರಖ್ಯಾತಿ ಪಡೆದ ಬಾಬು ಜಗಜೀವನರಾಂ ಅವರು ಭಾರತದಲ್ಲಿ ಕೃಷಿ ಕ್ಷೇತ್ರದಲ್ಲಿ ಐತಿಹಾಸಿಕ ಸಾಧನೆ ಮಾಡಿದ ಧೀಮಂತ ನಾಯಕ ಎಂದು ತಹಶೀಲ್ದಾರ್ ವಿಜಯಕುಮಾರ ಕಡಕೋಳ ಹೇಳಿದರು. ಸೋಮವಾರ ತಹಶೀಲ್ದಾರ್ ಕಚೇರಿಯಲ್ಲಿ ಡಾ.ಬಾಬು ಜಗಜೀವನರಾಂ 119ನೇ ಜನ್ಮ ದಿನಾಚರಣೆ ಆಚರಿಸಿ ಮಾತನಾಡಿದ ಅವರು, ದೇಶಕ್ಕಾಗಿ ಸಾಕಷ್ಟು ನಾಯಕರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅಂತಹ ಮಹಾನ ನಾಯಕರಗಳನ್ನು ನಾವೆಲ್ಲಾ ಇಂದು ಅವರನ್ನು ಒಂದು ಜಾತಿಗೆ ಸಿಮಿತಗೊಳಿಸದೆ ಪಕ್ಷಾತೀತವಾಗಿ, ಜಾತ್ಯತೀತವಾಗಿ ಸೇರಿಕೊಂಡು ಅವರುಗಳೆಲ್ಲಾ ನಮ್ಮ ದೇಶದ ಆಸ್ತಿ ಎಂದು ಅರಿತುಕೊಂಡು ಅವರಿಗೆ ಗೌರವಸಲ್ಲಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಸಾಧಕರು ಜಾತಿಧರ್ಮಕ್ಕೆ ಸೀಮಿತವಾದವರಲ್ಲ ಅವರು ಅವುಗಳನ್ನು ಮೀರಿ ಬೆಳೆದವರಾಗಿದ್ದಾರೆ. ಕಾರಣ ನಾವೂ ಸಹ ಅಂತಹ ಶ್ರೇಷ್ಠವ್ಯಕ್ತಿಗಳ ಜೀವನವನ್ನು ಆದರ್ಶವಾಗಿಟ್ಟುಕೊಂಡು ಬದುಕನ್ನು ನಡೆಸಿದಲ್ಲಿ ನಮ್ಮ ಸಮಾಜವೂ ಕೂಡಾ ಅತ್ಯಂತ ಶ್ರೇಷ್ಠ ಸಮಾಜವಾಗಿ ಹೊರಹೊಮ್ಮುತ್ತದೆ ಎಂದರು. ಸಿದ್ದಾರ್ಥ ಕಾಳೆ, ಹಿರಿಯ ನಿಲಯಪಾಲಕ ವಿ.ಬಿ.ಹಿರೇಮಠ, ಪ್ರದಸ. ಶಿವಕುಮಾರ ಹಳ್ಳಿ ಹಾಗೂ ಮುಖಂಡರಾದ ಸುಜಿತ ದಾನಿಗೊಂಡ, ದಯಾನಂದ ಕಾಳೆ, ಗೋಪಾಲ ಮಾಂಗ, ಭೀಮಸಿ ದೊಡಮನಿ ಹಾಗೂ ಸಿಬ್ಬಂದಿಗಳಾದ ಮಹಾದೇವ ಯಲ್ಲಟ್ಟಿ, ಪ್ರಶಾಂತ ಜಗದಾಳ, ಶಂಕರ ಕಡಕೋಳ, ಅನೀಲ ಅಥಣಿ, ರಾಜು ಮಾತಿವಡ್ಡರ, ವೀರಭದ್ರ ಮುದಕನ್ನವರ ಸೇರಿದಂತೆ ಇತರರು ಇದ್ದರು.



ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದ ಐತಿಹಾಸಿಕ ಹನುಮಾನ ಮಂದಿರದಲ್ಲಿ ಹನುಮ ಜಯಂತಿಯನ್ನು ಪಟ್ಟಣದ ಸದ್ಭಕ್ತರು ಹಾಗೂ ಮಂದಿರದ ಸಮಿತಿಯ ಸದಸ್ಯರು ಶ್ರದ್ಧಾಭಕ್ತಿಯಿಂದ ಆಚರಿಸಿದರು. ಪಟ್ಟಣದ ಸದ್ಭಕ್ತರು ಹಾಗೂ ಮಂದಿರದ ಸಮಿತಿಯ ಸದಸ್ಯರಾದ ಚನ್ನಗೌಡ ಪಾಟೀಲ, ಬಾಬು ಬನ್ನಟ್ಟಿ, ಸಿದ್ದು ಲೇಸಪ್ಪಗೋಳ, ಸುಭಾಸ ಲೇಸಪ್ಪಗೋಳ, ಬಸವರಾಜ ಕೊಟ್ಯಾಳ, ಬಾಳು ತೇಲಿ, ಸುಭಾಸ ಹಳಿಮನಿ, ಪಿಂಟು ಮುತ್ತಪ್ಪನವರ, ರವಿ ಆಶ್ರೀತ, ರಾಘವೇಂದ್ರ ಕುಲಕರ್ಣಿ, ಪುಟ್ಟು ತೇಲಿ, ಡಾ. ಬಿರಾದಾರ ಇತರರು ಇದ್ದರು.

ಮತಕ್ಷೇತ್ರದಲ್ಲಿ 2.59 ಲಕ್ಷ ಮತದಾರರು | 322 ಮತಗಟ್ಟೆ ಸ್ಥಾಪನೆ

ಮತದಾನಕ್ಕೆ ಸಕಲ ಸಿದ್ಧತೆ: ಡಿಸಿ



ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ಏ.9ರಂದು ಮತದಾನ ನಡೆಯಲಿದ್ದು, ಮತದಾನಕ್ಕೆ ಬೇಕಾಗುವ ಎಲ್ಲ ರೀತಿಯ ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಸೋಮವಾರ ಜರುಗಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ 1,26,999 ಪುರುಷ ಮತ್ತು 1,32,775 ಮಹಿಳಾ ಮತದಾರರು ಹಾಗೂ 23 ಇತರೆ ಸೇರಿ ಒಟ್ಟು 2,59,797 ಮತದಾರರಿದ್ದು, ಏ.9ರಂದು ಮತ ಚಲಾಯಿಸಲಿದ್ದಾರೆ. ಅಲ್ಲದೇ 385 ಸೇವಾ ಮತದಾರರು, 170 ಅಂಚೆ ಮತಪತ್ರಗಳು 90 ಪಿಡಬ್ಲ್ಯೂಡಿ ಮತದಾರರಿದ್ದಾರೆ. ಉಪ ಚುನಾವಣೆಗೆ ಒಟ್ಟು 322 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ನವನಗರದ ಸೆಕ್ಟರ ನಂ.43 ರಲ್ಲಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಸ್ಟರಿಂಗ್ ಕೇಂದ್ರ ಸ್ಥಾಪಿಸಲಾಗಿದೆ ಎಂದರು.

ಪ್ರತಿ ಮತಗಟ್ಟೆಗೆ ಒಬ್ಬ ಪ್ರಿಸೆಂಡಿಂಗ್ ಅಧಿಕಾರಿ, ಹಾಗೂ 3 ಜನ ಪೋಲೀಂಗ್ ಅಧಿಕಾರಿಗಳನ್ನು ಗುರುತಿಸಲಾಗಿದ್ದು, ಹೆಚ್ಚುವರಿ ಸಿಬ್ಬಂದಿಗಳು ಸೇರಿ ಒಟ್ಟು 1564 ಸಿಬ್ಬಂದಿಗಳ ನೇಮಕ ಮಾಡಲಾಗಿದೆ. 322 ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ. ಎಂದು ತಿಳಿಸಿದರು.

ನೀತಿ ಸಂಹಿತೆ ಜಾರಿಯಾದಾಗಿನಿಂದ 94.03 ಲಕ್ಷ ರೂ.ಗಳ ನಗದು, 39.73 ಲಕ್ಷ ರೂ.ಗಳ ಮೌಲ್ಯದ ಅಬಕಾರಿ ಇಲಾಖೆಯಿಂದ 14637.01 ಲೀಟರ ಸಾರಾಯಿ, ಪೊಲೀಸ್ ಇಲಾಖೆಯಿಂದ 194.36 ಲೀಟರ ಸಾರಾಯಿ, 9 ವಾಹನ ಜಪ್ತಿ ಮಾಡಿ 21 ಪ್ರಕರಣ ದಾಖಲಿಸಲಾಗಿದೆ. 1.20 ಲಕ್ಷ ರೂ.ಗಳ ಮೌಲ್ಯದ ಸೀರೆಗಳನ್ನು ಜಪ್ತ ಮಾಡಲಾಗಿದೆ ಎಂದರು.

ಏ.7ರಂದು ಸಂಜೆ 6 ಗಂಟೆಯಿಂದ ಚುನಾವಣಾ ಬಹಿರಂಗ ಪ್ರಚಾರ ನಿಷೇಧಿಸಲಾಗಿದ್ದು, ಪ್ರಚಾರ ಅವಧಿ ಕೊನೆಗೊಂಡ ಬಳಿಕ ಹೊರಗಿನ ಮತಕ್ಷೇತ್ರದಿಂದ ಕರೆತಂದ ಮತ್ತು ಈ ಕ್ಷೇತ್ರದ ಮತದಾರರಲ್ಲದೇ ಇರುವ ರಾಜಕೀಯ ಅಧೀಕಾರಸ್ಥರು, ಪಕ್ಷದ ಕಾರ್ಯಕರ್ತರು, ಮೆರವಣಿಗೆ ಸಂಬಂಧ ಕಾರ್ಯಕರ್ತರು ಸೇರಿದಂತೆ ಮುಂತಾದವರು ಆ ಕ್ಷೇತ್ರದಿಂದ ಹೊರಹೋಗಬೇಕು ಎಂದರು.

ಮತದಾನ ದಿನ ಏ.9ರಂದು ಜಿಲ್ಲೆಯಾದ್ಯಂತ ಜರಗುವ ಸಂಜೆ, ಜಾತ್ರೆಗಳನ್ನು ನಿಷೇಧಿಸಿ ಆದೇಶಿಸಲಾಗಿದೆ. ಮತಗಟ್ಟೆ ಒಳಗೆ ಅಥವಾ ಮತಗಟ್ಟೆಯ 100ಮೀ ಅಂತರದೊಳಗಿರುವ ಯಾವುದೇ ಸಾರ್ವಜನಿಕ, ಖಾಸಗಿ ಸ್ಥಳದಲ್ಲಿ ಪ್ರಚಾರ ನಿಷೇಧಿಸಿದೆ. ಈ ವ್ಯಾಪ್ತಿಯಲ್ಲಿ ಕರ್ತವ್ಯ ನಿರತ ಅಧಿಕಾರಿಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಸೆಲ್ಯೂಲರ್ ಫೋನ್‌ಗಳು, ಕಾರ್ಡಲೆಸ್ ಫೋನ್ ಇತ್ಯಾದಿಗಳನ್ನು ಬಳಸಲು ನಿಷೇಧಿಸಿದೆ ಎಂದರು.

ಮತದಾನ ಅಂತ್ಯಗೊಳ್ಳುವ ಸಮಯದ ಮೂರು ದಿನಗಳ ಮುಂಚಿತವಾಗಿನಿಂದ ಅಭ್ಯರ್ಥಿಗಳ ಪ್ರಚಾರವು ಮತದಾನ ಮುಗಿಯುವ 48 ಗಂಟೆಗಳವರೆಗೆ ಹೆಚ್ಚಾಗುವುದರಿಂದ ಯಾವುದೇ ಪಕ್ಷ ಅಥವಾ ಅಭ್ಯರ್ಥಿಯು ಅಸ್ತಿತ್ವದಲ್ಲಿರುವ ಭಿನ್ನಾಭಿಪ್ರಾಯಗಳನ್ನು ಉಲ್ಬಣಗೊಳಿಸುವ ಅಥವಾ ಪರಸ್ಪರದ್ವೇಷವನ್ನು ಉಂಟುಮಾಡುವ,ವಿವಿಧಜಾತಿ, ಸಮುದಾಯಗಳನಡುವೆ ಧಾರ್ಮಿಕ, ಭಾಷಾವಾರು ಉದ್ವಿಗ್ನತೆಯನ್ನು ಉಂಟು ಮಾಡುವ ಯಾವುದೇ ಚಟುವಟಿಕೆಯನ್ನು ಒಳಗೊಂಡಿರಬಾರದು ಎಂದು ಖಚಿತಪಡಿಸಿಕೊಳ್ಳಬೇಕು ಎಂದರು.

ಜಿಪಂ ಸಿಇಓ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಬಕಾರಿ ಉಪ ಆಯುಕ್ತ ತಿಪ್ಪೇಸ್ವಾಮಿ ಡಿ.ಎನ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಸಂಶೋಧನಾ ಮನೋಭಾವ ಅಗತ್ಯ: ರಾಜೂರ

ಬಾದಾಮಿ: ಡಾ.ಎಂ.ಎಂ.ಕಲಬುರ್ಗಿ ಅವರು ನಮ್ಮ ನಾಡಿನಲ್ಲಿ ಸಂಶೋಧನೆಯ ಮಹಾಮಾರ್ಗ ತೆರೆದು ತೋರುವುದರ ಮೂಲಕ ಅನೇಕ ಸತ್ಯಗಳ ದರ್ಶನ ಮಾಡಿಸಿದ್ದಾರೆ. ಅವರ ಸಂಶೋಧನಾ ಮಾರ್ಗದಲ್ಲಿ ನಾವೆಲ್ಲರೂ ಮುನ್ನಡೆಯಬೇಕಾಗಿದೆ ಎಂದು ಡಾ. ವೀರಣ್ಣ ರಾಜೂರ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಹಾಗೂ ಡಾ.ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನ(ರಿ) ಧಾರವಾಡ ಇವರ ಸಹಯೋಗದಲ್ಲಿ ಕುಮಾರೇಶ್ವರ ಸಭಾಭವನದಲ್ಲಿ ನಡೆದ ಡಾ.ಎಂ.ಎಂ.ಕಲಬುರ್ಗಿಯವರ ಸಾಹಿತ್ಯ ಕುರಿತು ನಡೆದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಡಾ.ಎಂ.ಎಂ.ಕಲಬುರ್ಗಿ ಪ್ರತಿಷ್ಠಾನದ ಸದಸ್ಯ ಡಾ.ಬಾಳಣ್ಣ ಸೀಗಿಹಳ್ಳಿಂ ಮಾತನಾಡಿ, ನಿತ್ಯ ಕೇವಲ ಎರಡು ಮೂರು ಗಂಟೆ ಮಾತ್ರ ನಿದ್ದೆ ಮಾಡುತ್ತಿದ್ದ ಡಾ.ಎಂ.ಎಂ. ಕಲಬುರ್ಗಿಯವರು ತಮ್ಮ ಜೀವನವನ್ನೇ ಸಂಶೋಧನೆಗಾಗಿ ಮುಡಿಪಾಗಿಟ್ಟಿದ್ದರು ಎಂದರು.

ವಿಚಾರ ಗೋಷ್ಠಿಯಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ.ರವೀಂದ್ರನಾಥ 'ಸಂಶೋಧನೆ ಮತ್ತು ಗ್ರಂಥಸಂಪಾದನೆ' ಉಪನ್ಯಾಸ ನೀಡಿದರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎಫ್.ಹೊರಕೇರಿ ಮತ್ತು ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯ ಎಂ.ಐ.ಬಾರಾವಲಿ ಮಾತನಾಡಿ ವಿಚಾರ ಸಂಕಿರಣಗಳು ಜ್ಞಾನದ ಪರಿಧಿ ವಿಸ್ತರಿಸಲು ಸಹಾಯಕವಾಗಿವೆ ಎಂದರು.

ಪ್ರಾಂಶುಪಾಲ ಪ್ರೊ.ಎಸ್.ಬಿ.ರಾಯನಗೌಡರ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ನಾಡಿನ ಸಂಶೋಧನಾ ಪರಂಪರೆಯ ಪರಿಚಯವಾಗಲೆಂದು ನಾವು ಈ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿದ್ದು, ನಮ್ಮ ಶ್ರಮ ಸಾರ್ಥಕವಾಗಿದೆ ಎಂದು ಹೇಳಿದರು.

ದೈಹಿಕ ಶಿಕ್ಷಣ ನಿರ್ದೇಶಕ ಪ್ರೊ.ಕಾಂಚನಮಾಲಾ ಪಾಟೀಲ, ಐಕ್ಯುಎಸಿ ಘಟಕದ ಸಂಯೋಜಕ ಡಾ. ಎಂ.ಎನ್.ಸಿದ್ಧಲಿಂಗಪ್ಪನವರ, ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಚಂದ್ರಶೇಖರ ಹೆಗಡೆ, ಉಪನ್ಯಾಸಕ ಡಾ.ವಿ.ಬಿ.ಸಣ್ಣಸಕ್ಕರಗೌಡರ, ಪ್ರೊ.ಗೋವರ್ಧನ ಪಿ.ಬಿ., ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ಆರ್.ಎಸ್.ಪೂಜಾರ, ಡಾ.ಸಣ್ಣವೀರಣ್ಣ ದೊಡ್ಡಮನಿ, ಡಾ.ಸೀಮಾ ಜಿ.ಕೆ. ಡಾ.ಬಾಬುರಾಯಣ್ಣ ಧನ್ನೂರ, ಡಾ.ಐ.ಎನ್.ಹಾಳಿ, ಬಸವರಾಜ ವಡ್ಡರ, ಬಸವರಾಜ ತೋಟದ, ಪೂಜಾ ಶ್ರೀಯಾನ್, ಡಾ.ಶಿಲ್ಪಾ ಕೆ.ಎಚ್. ಸೇರಿದಂತೆ ಸಿಬ್ಬಂದಿ ಇದ್ದರು.



ಬಾಬು ಜಗಜೀವನರಾಂ ಜನ್ಮದಿನಾಚರಣೆ



ಜಮಖಂಡಿ: ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಸಾಂಸ್ಕೃತಿಕ ವಿಭಾಗ ಹಾಗೂ ಐಕ್ಯೂಎಸಿ ಸಂಯುಕ್ತ ಆಶ್ರಯದಲ್ಲಿ ಬಾಬು ಜಗಜೀವನ ರಾಂ ಜನ್ಮ ದಿನದ ಪ್ರಯುಕ್ತ ಸಮತಾ ದಿನ ಆಚರಿಸಲಾಯಿತು.

ಆರ್.ಎಸ್.ಜಾಧವ ಮಾತನಾಡಿ, ಬಾಬು ಜಗಜೀವನರಾಂ ಹಿಂದುಳಿದ ವರ್ಗದಿಂದ ಬಂದಿದ್ದರೂ ಎದುರಿಸಿದ ಸವಾಲುಗಳು ಹಾಗೂ ತಮ್ಮ ಪರಿಶ್ರಮ ಮತ್ತು ದೃಢಸಂಕಲ್ಪದಿಂದ ರಾಷ್ಟ್ರದ ಪ್ರಮುಖ ನಾಯಕರಾಗಿ ಹೊರಹೊಮ್ಮಿದ ರೀತಿಯನ್ನು ವಿವರಿಸಿದರು. ಜೊತೆಗೆ, ಸ್ವಾತಂತ್ರ್ಯ ಹೋರಾಟದಲ್ಲಿ ಹಾಗೂ ನಂತರ ದೇಶದ ಅಭಿವೃದ್ಧಿಗೆ ನೀಡಿದ ಮಹತ್ವದ ಕೊಡುಗೆ ಉಲ್ಲೇಖಿಸಿದರು. ಡಾ.ಎ.ವೈ.ಕಾಂಬಳೆ,

ಪ್ರಾಂಶುಪಾಲ ಡಾ.ಸುನಂದಾ ಎಸ್.ಶಿರೂರ ಮಾತನಾಡಿದರು. ಎಸ್.ಪಿ.ಸಜ್ಜನ, ಆರ್.ಬಿ.ಶಿತೋಳೆ, ಪಿ.ಬಿ.ಚಾಂದಕವಟೆ, ಸುನಂದಾ ಸಣ್ಣಕ್ಕಿ, ಸಂತೋಷ ಯಡಹಳ್ಳಿ ಇದ್ದರು.



ಗಲಗಲಿ: ಬಸವೇಶ್ವರ ಅರ್ಬನ್ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಯಲ್ಲಿ ಬಾಬು ಜಗಜೀವನ ರಾಮ್ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷ ನಿಂಗಣ್ಣ ಗೋಳಿಪಲ್ಲಿ ಹಾಗೂ ನಿರ್ದೇಶಕರು ಹಾಗೂ ಇತರರು ಇದ್ದರು.

ಮುಳುಗಡೆ ಸಮಸ್ಯೆಗೆ ಬಿಜೆಪಿಯೇ ಪರಿಹಾರ: ಚರಂತಿಮಠ



ಬಾಗಲಕೋಟೆ : ಬಾಗಲಕೋಟೆಯ ಜನ ಉತ್ಸಾಹದಲ್ಲಿ ಇದ್ದಾರೆ. ಗ್ರಾಮೀಣದಲ್ಲಿ ಕೂಡ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ ಮುಳಗಡೆ ಸಮಸ್ಯೆಗೆ ಬಿಜೆಪಿಯೇ ಪರಿಹಾರ ಎಂದು ಬಾಗಲಕೋಟೆಯ ಉಪಚುನಾವಣೆಯ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಹೇಳಿದರು.

ನಗರದ 22ನೇಯ ರಸ್ತೆಯ ಪೋಸ್ಟಲ್, ಶಿವಶಕ್ತಿ, ಎನ್.ಜಿ.ಓ,ಬೆಂಡಿಗೇರಿ, ಗೌಡರ ಕಾಲೋನಿಗಳಲ್ಲಿ ಮತಯಾಚನೆ ಮಾಡಿ ಮಾತನಾಡಿದ ಅವರು, ಈ ಭಾರಿ ಅತಿ ಹೆಚ್ಚು ಅಂತರದಿಂದಲೂ ಗೆಲ್ಲುತ್ತೇನೆ. ಹೆಚ್ಚು ಮತಗಳು ಭಾರತೀಯ ಜನತಾ ಪಾರ್ಟಿಗೆ ಬರಲಿವೆ,ಗ್ಯಾರಂಟಿಯೋಜನೆಗಳನ್ನು ಮನೆಯಿಂದ ಕೊಟ್ಟಿದ್ದಲ್ಲ ಸೋಲುವ ಭಯದಿಂದ ಯೋಜನೆಗಳನ್ನು ನಿಲ್ಲಿಸಲಾಗುತ್ತದೆ ಎಂದು ಕಾಂಗ್ರೆಸ್‌ನವರು ಅಪಪ್ರಚಾರ ಮಾಡುತ್ತಿದ್ದಾರೆ ಎಂದರು. ಯಾವುದೇ ಅನುಕಂಪ ಕ್ಷೇತ್ರದಲ್ಲಿ ಇಲ್ಲ, ಕಾಂಗ್ರೆಸ್ಸವರ ಹಣ, ಹೆಂಡ, ಅಧಿಕಾರವನ್ನು ಬಾಗಲಕೋಟೆ ಜನ ದಿಕ್ಕರಿಸಲಿದ್ದಾರೆ, ಅಭಿವೃದ್ಧಿಯ ಮೂಲ ಮಂತ್ರವನ್ನು ಮುಂದುವರಿಸುತ್ತೇವೆ, ಬಾಗಲಕೋಟೆ ನಡುಗಡ್ಡೆ ಕಿಲ್ಲಾ ಪ್ರದೇಶದ 1057 ಮನೆಗಳು (11/ಎ ಆಗಿದೆ) ಭೂಸ್ವಾಧೀನ ಪುನರ್ವಸತಿಗೆ 118.97 ಕೋಟಿ ರೂ. ಗಳ ಅನುಧಾನ ತಂದು ಕಾರ್ಯರೂಪಕ್ಕೆ ತರಲಾಗಿತ್ತು ಅದು ನಿಂತುಹೋಗಿದೆ, ಬಾಗಲಕೋಟೆ ನವನಗರ ಯೂನಿಟ್ 3 ಅಭಿವೃದ್ಧಿ ಸೇರಿದಂತೆ ಅನೇಕ ಮುಳುಗಡೆ ಸಮಸ್ಯೆಗಳಿಗೆ ಪರಿಹಾರವಾಗ ಬೇಕಾದರೆ ಭಾರತೀಯ ಜನತಾ ಪಾರ್ಟಿಗೆ ಮತ ಹಾಕಿ ಎಂದರು.

ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿ, ಸರ್ಕಾರವೆ ಟೀಕಾಣಿ ಹೂಡಿದರು ಬಿಜೆಪಿಯ ಗೆಲುವನ್ನು ತಪ್ಪಿಸಲು ಸಾಧ್ಯವಿಲ್ಲ, ರಾಜ್ಯದಲ್ಲಿ ಹಲವು ಸಮಸ್ಯಗಳಿದ್ದರು ಅವುಗಳಿಗೆ ಸ್ಪಂದಿಸದೆ ಮುಖ್ಯಮಂತ್ರಿ ಉಪಚುನಾವಣೆಯಲ್ಲಿ ವಾರಗಟ್ಟಲೆ ಪ್ರಚಾರದಲ್ಲಿರುವುದು ದೂರಾಡಳಿತ ಮತ್ತು ಭ್ರಷ್ಟಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದರು.

ಜಮಖಂಡಿ ಶಾಸಕ ಜಗದೀಶ ಗುಡಗುಂಟಿ ಮಾತನಾಡಿ 2028ಕ್ಕೆ ಭಾರತೀಯ ಜನತಾ ಪಾರ್ಟಿ ಅಧಿಕಾರಕ್ಕೆ ಬರಲಿದ್ದು, ಲಂಚಕೋರ ಸರ್ಕಾರಕ್ಕೆ ಜನ ಬುದ್ಧಿ ಕಲಿಸಲಿದ್ದಾರೆ. ಉಪಚುನಾವಣೆಯಿಂದಲೆ ಕಾಂಗ್ರೆಸ್ ಸರಕಾರದ ಅವನತಿ ಪ್ರಾರಂಭವಾಗಲಿದೆ ಎಂದರು. ಮತಯಾಚನೆಯಲ್ಲಿ ವಿಧಾನ ಪರಿಷತ್ ಸದಸ್ಯ ಹನಮಂತ ನಿರಾಣಿ, ರಾಜ್ಯಸಭಾ ಸದಸ್ಯರಾದ ನಾರಾಯಣಸಾ ಭಾಂಡಗೆ, ಶೋಭಾ ರಾವ. ಮಹೇಶ ಕಕರಡ್ಡಿ, ಮುತ್ತು ಸೀಮಿಕೇರಿ, ಸೇರಿದಂತೆ ಸಾವಿರಾರು ಕಾರ್ಯಕರ್ತರು ಇದ್ದರು.

ಮತ್ತೊಮ್ಮೆ ಚರಂತಿಮಠ ಗೆಲ್ಲಿಸಿ: ಮಾಜಿ ಸಚಿವ ಶ್ರೀರಾಮುಲು



ಬಾಗಲಕೋಟೆ: ಕಾಂಗ್ರೆಸ್ ಸುಳ್ಳಿನ ಮೇಲೆ ಸರ್ಕಾರವನ್ನು ನಡೆಸುತ್ತಿದೆ, ಅಭಿವೃದ್ಧಿ ಮಾತನ್ನೆ ಮರೆತು ಒಲೈಕೆಯಲ್ಲೆ ಸಮಯ ವ್ಯರ್ಥಗೊಳಿಸುತ್ತಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು. ಬಾಗಲಕೋಟೆ ನಗರದ ವಾರ್ಡ್ ನಂಬರ್ 15ರಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠರ ಪರ ಪ್ರಚಾರ ನಡೆಸಿ ಮಾತನಾಡಿದ ಅವರು, ಚರಂತಿಮಠರು ಶಾಸಕರಾಗಿದ್ದಾಗ ಸಾಕಷ್ಟು ಜನಪರ ಅಭಿವೃದ್ಧಿಯನ್ನು ಈ ಕ್ಷೇತ್ರದಲ್ಲಿ ಮಾಡಿದ್ದು, ಸದನದಲ್ಲಿ ಅನುದಾನದ ಕುರಿತು ಚರ್ಚಿಸುತ್ತಿದ್ದರು. ಆದರೆ, ಕಳೆದ ಮೂರು ವರ್ಷದಲ್ಲಿ ಬಾಗಲಕೋಟೆಯಲ್ಲಿ ಅಭಿವೃದ್ಧಿ ಶೂನ್ಯವಿದೆ. ದಿನದಿಂದ ದಿನಕ್ಕೆ ಬಿಜೆಪಿ ಅಭ್ಯರ್ಥಿ ಪರ ಒಲವು ವ್ಯಕ್ತವಾಗುತ್ತಿದೆ. ಮತ್ತೊಮ್ಮೆ ವೀರಣ್ಣ ಅವರನ್ನು ಗೆಲ್ಲಿಸಿ ಎಂದರು. ಮಾಜಿ ಸಿಎಂ ಜಗದೀಶ ಶೆಟ್ಟರ, ಸಂಸದರಾದ ಕೋಟಾ ಶ್ರೀನಿವಾಸ್ ಪೂಜಾರಿ, ಮಾಜಿ ಸಚಿವರಾದ ಶಂಕರ್ ಪಾಟೀಲ್ ಮುನೇನಕೊಪ್ಪ ಇದ್ದರು.

ದೇಶ ಸೇವೆ ಮಾಡುವ ಸೈನಿಕರು ನಮ್ಮ ಆತ್ಮರಕ್ಷಕರು



ಲೋಕಾಪುರ : ನಾವು ಹೊಟ್ಟೆ ತುಂಬ ಊಟ ಮಾಡಿ, ನೆಮ್ಮದಿ ಜೀವನ ನಡೆಸುತ್ತಿರುವುದಕ್ಕೆ ನಮ್ಮ ದೇಶದ ಸೈನಿಕರೆ ಕಾರಣ, ದೇಶ ಸೇವೆ ಮಾಡುವ ಸೈನಿಕರು ನಮ್ಮ ಆತ್ಮರಕ್ಷಕರು ಎಂದು ವಾಯುಪುತ್ರ ಸೌಹಾರ್ದ ಬ್ಯಾಂಕ ಅಧ್ಯಕ್ಷ ಹಾಗೂ ಮಾಜಿ ಗ್ರಾಪಂ ಅಧ್ಯಕ್ಷ ಲೋಕಣ್ಣ ಕತ್ತಿ ಹೇಳಿದರು.

ಪಟ್ಟಣದ ಶಿಕ್ಷಕರ ಬಡಾವಣೆಯಲ್ಲಿ ಹಮ್ಮಿಕೊಂಡ ನಿವೃತ್ತ ಸೈನಿಕ ಶಿವಾನಂದ ಪೂಜೇರ ಅವರಿಗೆ ಆತ್ಮೀಯವಾಗಿ ಬರಮಾಡಿಕೊಂಡು ಸನ್ಮಾನಿಸಿ ಮಾತನಾಡಿದ ಅವರು ರಾಷ್ಟ್ರಕ್ಕೆ ಶತ್ರುಗಳಿಂದ ಧಕ್ಕೆ ಆಗಬಾರದು ದೇಶದ ನಾಗರಿಕರಿಗೆ ಯಾವುದೇ ತೊಂದರೆಯಾಗದಂತೆ ದಿನದ 24 ಗಂಟೆ ಕಣ್ಣಲ್ಲಿ ಕಣ್ಣಿಟ್ಟು ನಮ್ಮ ರಾಷ್ಟ್ರ ಗಡಿ ಕಾಯುವ ಸೈನಿಕರನ್ನು ನಾವು ಪೂಜ್ಯ ಭಾವನೆಯಿಂದ ನೋಡಲೇಬೇಕು ಹಾಗೂ ಅವರನ್ನು ಗೌರವಿಸಿ ಸನ್ಮಾನಿಸಬೇಕು ಎಂದು ಸೈನಿಕರ ಶ್ರಮ ಕುರಿತು ಕೊಂಡಾಡಿದರು.

ಕಾಶಿಲಿಂಗೇಶ್ವರ ದೇವಸ್ಥಾನದ ಅರ್ಚಕರು ಸಿದ್ದಪ್ಪ ಪೂಜೇರ ಮಾತನಾಡಿ ಸೈನಿಕರ ಅಭೂತಪೂರ್ವವಾದದ್ದು, ಅಂಥವರನ್ನು ಗೌರವಿಸುವುದು ನಮ್ಮ ಪುಣ್ಯವಾಗಿದೆ, ದೇಶದ ಭದ್ರತೆಗಾಗಿ ತಮ್ಮ ಜೀವನವನ್ನು ತ್ಯಾಗ ಮಾಡಿದ ವೀರ ಯೋಧರಿಗೆ ಕೃತಜ್ಞತೆ ಹಾಗೂ ನಮನಗಳನ್ನು ಸಲ್ಲಿಸುವುದು ನಮ್ಮೆಲ್ಲರ ಕರ್ತವ್ಯ ನಮ್ಮ ಸೈನಿಕರಿಗೆ ಪರಮಾತ್ಮನ ಆರ್ಶೀರ್ವಾದ ಸದಾ ಇರುತ್ತದೆ ಎಂದರು. ದೇಶಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟು ಗಡಿಯಲ್ಲಿ ಹಗಲಿರುಳು ಸೇವೆಗೈದು ನಿವೃತ್ತಿ ಹೊಂದಿ ಸ್ವಗ್ರಾಮಕ್ಕೆ ಆಗಮಿಸಿದ ನಿವೃತ್ತ ಸೈನಿಕ ಶಿವಾನಂದ ನಾಗಪ್ಪ ಪೂಜೇರ ಅವರನ್ನು ಮೆರವಣಿಗೆ ಮೂಲಕ ಲೋಕಾಪುರ ಹಾಗೂ ಮಲ್ಲಾಪುರ ಗ್ರಾಮಸ್ಥರು ಅದ್ದೂರಿಯಾಗಿ ಸ್ವಾಗತ ಕೋರಿದರು.

ಶಿವಾನಂದ ಅವರನ್ನು ಲೋಕಾಪುರ ಬಸವೇಶ್ವರ ವೃತ್ತದಿಂದ ತಮ್ಮ ನಿವಾಸದವರೆಗೂ ತೆರೆದ ಜೀಪನಲ್ಲಿ ಶಿವಾನಂದ ಹಾಗೂ ಅವರ ಪತ್ನಿ ಮೆರವಣಿಗೆಯಲ್ಲಿ ಬರುತ್ತಿದ್ದನ್ನು ನೋಡಿ ಪುಷ್ಪಗಳನ್ನು ಹಾಕಿ ಅಭಿಮಾನಿಗಳು ಸಂಭ್ರಮದಿಂದ ಸ್ವಾಗತ ಮಾಡಿದರು. ವರ್ಚಗಲ್‌ದ ಶ್ರದ್ಧಾನಂದ ಮಠದ ಜಗದೀಶಾನಂದ ಸ್ವಾಮೀಜಿ, ಮುಖಂಡರಾದ ಯಮುನಪ್ಪ ಹೊರಟ್ಟಿ, ಹೊಳಬಸು ದಂಡಿನ, ಮುತ್ತಪ್ಪ ಗಡ್ಡದವರ, ಪಿಕೆಪಿಎಸ್ ಅಧ್ಯಕ್ಷ ಹೊಳಬಸು ಕಾಜಗಾರ, ಮಹೇಶ ಮಳಲಿ, ಚಿನ್ನಯ ಉದಪುಡಿ, ಶ್ರೀಕಾಂತ ಪೂಜಾರ, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಸಿ.ಎಂ.ಪಾಟೀಲ, ಮಾಜಿ ಸೈನಿಕರಾದ ವೆಂಕಪ್ಪ ಕೊಳಚಿ, ಸದಾಶಿವ ತಳವಾರ, ಸಿದ್ದಪ್ಪ ಹಡಪದ, ರಮೇಶ ಸಿಮುಗಿ, ಕೃಷ್ಣಾ ಯಾದವಾಡ, ಕೃಷ್ಣಾ ರಂಗಣ್ಣವರ, ಶಿಕ್ಷಕರ ಬಡಾವಣೆಯ ಸಾರ್ವಜನಿಕರು ಹಾಗೂ ಮಲ್ಲಾಪುರ ಗ್ರಾಮಸ್ಥರು ಇದ್ದರು.

ಸಿಎಂ ಬಗ್ಗೆ ಮಾತನಾಡುವ ನೈತಿಕತೆ ಬಿಜೆಪಿಯವರಿಗಿಲ್ಲ: ರಾಯರೆಡ್ಡಿ



ಬಾಗಲಕೋಟೆ: ಎಲ್ಲ ಜಾತಿ, ಧರ್ಮದವರ ಬಡವರ ಪರವಾಗಿ ಧ್ವನಿ ಎತ್ತುವ, ಆಡಳಿತ ನೀಡುವ ಸಿದ್ದರಾಮಯ್ಯ ಅವರ ಬಗ್ಗೆ ಮಾತನಾಡುವ ನೈತಿಕತೆ ಬಿಜೆಪಿಗೆ ಇಲ್ಲ, ಧೈರ್ಯ ಇದ್ದರೇ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ನಾನು ಲಿಂಗಾಯತ ಅಂತ ಹೇಳಲಿ ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ ರಾಯರೆಡ್ಡಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅಣ್ಣ ಬಸವಣ್ಣನ ಭಾವಚಿತ್ರ ಸರ್ಕಾರಿ ಕಚೇರಿಗಳಲ್ಲಿ ಅಳವಡಿಸಲು ಆದೇಶಿಸಿದರು. ಕರ್ನಾಟಕದ ಸಾಂಸ್ಕೃತಿ ನಾಯಕ ಅಂತ ಘೋಷಣೆ ಮಾಡಿದರು. ನಾನು ಬಸವಣ್ಣನ ಅನುಯಾಯಿ ಅಂತ ಬಹಿರಂಗವಾಗಿ ತಿಳಿಸಿದರು.

ಮಹಾನ್ ನಾಯಕ ಸಿಎಂ ಬಗ್ಗೆ ಬಿಜೆಪಿ ನಾಯಕರು ಬಳಸುವ ಭಾಷೆ ಗೌರವ ತರುವುದಿಲ್ಲ, ಹಿಂದೆ ಜೆ.ಎಚ್.ಪಟೇಲ್ ಸರ್ಕಾರ ಇದ್ದಾಗ ಕೂಡಲಸಂಗಮ ಅಭಿವೃದ್ಧಿಗೆ ಸಿದ್ದರಾಮಯ್ಯ ಆರ್ಥಿಕ ಮಂತ್ರಿಯಾಗಿ ಸಾಕಷ್ಟು ಅನುದಾನ ಒದಗಿಸಿದರು. 2016ರಿಂದ 2018 ಅವಧಿಗೆ ನಾನು ಉನ್ನತ ಶಿಕ್ಷಣ ಸಚಿವ ಇದ್ದಾಗ ವಿಜಯಪುರ ಮಹಿಳಾ ವಿವಿಗೆ ಅಕ್ಕಮಹಾದೇವಿ ಎಂದು ನಾಮಕರಣ ಮಾಡಿದರು. ಬಿಜೆಪಿ ನಾಯಕರು ಏನು ಮಾಡಿದ್ದಾರೆ. ಅವರಿಗೆ ಮಾನಸಿಕ ರೋಗ ಅಂಟಿಕೊಂಡಿದೆ ಎಂದರು.

ಸಿದ್ದರಾಮಯ್ಯ ಸಾಲ ಮಾಡಿಲ್ಲ, ನಾವು ಸಾಲಗಾರರಲ್ಲ, ತಮ್ಮ ಆಡಳಿತ ಅವಧಿಯಲ್ಲಿ ಆರ್ಥಿಕ ಶಿಸ್ತು ಮರೆತಿಲ್ಲ. 2011ರಲ್ಲಿ ಬಿ.ಎಸ್.ಯಡಿಯೂರಪ್ಪ, 2022-23 ಆರ್ಥಿಕ ಶಿಸ್ತು ಮರೆತಿದ್ದರು. 33 ಲಕ್ಷ ಕೋಟಿ ಆರ್ಥಿಕ ಉತ್ಪನ್ನ ಕರ್ನಾಟಕದಲ್ಲಿದೆ. ದೇಶದಲ್ಲಿಯೇ ಎರಡನೇ ಸ್ಥಾನ ನಮ್ಮದು. ವಿತ್ತಿಯ ಕಾಯ್ದೆ ಪ್ರಕಾರ ಶೇ.25ಮೀರಿ ಸಾಲ ಮಾಡಬಾರದು. ನಮ್ಮದು ಶೇ.24 ಮಾತ್ರ ಸಾಲ ಮಾಡಿದ್ದೇವೆ. ಜ್ಞಾನವಿದ್ದರು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಜನರಿಗೆ ಸುಳ್ಳು ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿದರು.

ಇನ್ನೂ ರಾಜೀವ ಗಾಂಧಿ ವಿವಿಯಲ್ಲಿ 1 ಸಾವಿರ ಕೋಟಿ ರೂ. ಠೇವಣಿ ಇತ್ತು, ಹಾಗೇ ಬಿಟ್ಟರೇ ಅದಕ್ಕೆ ತೆರಿಗೆ ವಿಧಿಸುವ ಸಾಧ್ಯತೆ ಇದೆ. ಹೀಗಾಗಿ ಬಾಗಲಕೋಟೆ, ಕನಕಪುರದಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆ ಮಾಡಲಾಗುತ್ತಿದೆ. ಎರಡು ವರ್ಷದಲ್ಲಿ ಲೋಕಾರ್ಪಣೆಗೊಳ್ಳಲಿದೆ. ನೀರಾವರಿ, ಶಿಕ್ಷಣ ಕ್ಷೇತ್ರಕ್ಕೆ ಬಿಜೆಪಿ ಕೊಡುಗೆ ಶೂನ್ಯ. ಜನರ ದಿಕ್ಕು ತಪ್ಪಿಸಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

ವಿಪ ಸದಸ್ಯ ಉಮಾಶ್ರೀ, ಶಾಸಕ ಅಲ್ಲಮಪ್ರಭು ಪಾಟೀಲ, ಮುಖಂಡರಾದ ವಸಂತಕುಮಾರ, ಎಸ್.ಜಿ.ನಂಜಯ್ಯನಮಠ, ಸರಸ್ವತಿ ಪಾಟೀಲ ಇತರರು ಇದ್ದರು.

ಕಿರುಸುದ್ದಿ

ಇಂದಿನಿಂದ ಚಿಕಿತ್ಸಾ ಶಿಬಿರ

ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಕಾಯಚಿಕಿತ್ಸಾ ವಿಭಾಗದ ವತಿಯಿಂದ ಎ.7ರಿಂದ ಎರಡು ದಿನಗಳ ಕಾಲ ಬೊಜ್ಜಿನ ಸಮಸ್ಯೆ ಹೊಂದಿರುವವರಿಗೆ ಉಚಿತ ತಪಾಸಣೆ ಹಾಗೂ ಪ್ರಾಚೀನ ಆಯುರ್ವೇದ ಚಿಕಿತ್ಸೆ ಶಿಬಿರ ಏರ್ಪಡಿಸಲಾಗಿದೆ ಎಂದು ಬಿಎಲ್‌ಡಿಇ ಆಯುರ್ವೇದ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಸಂಜಯ ಕಡ್ಲಿಮಟ್ಟಿ ತಿಳಿಸಿದ್ದಾರೆ.

ಪೂರ್ವಭಾವಿ ಸಭೆ ನಾಳೆ

ದೇವರ ಹಿಪ್ಪರಗಿ: ತಾಲೂಕಿನ ಯಾಳವಾರ ಗ್ರಾಮದ ಸೋಮೇಶ್ವರ ವಿದ್ಯಾವರ್ಧಕ ಸಂಘ ವು 1967 ಸ್ಥಾಪನೆಯಾಗಿ ಪ್ರೌಢಶಾಲೆ ಪ್ರಾರಂಭವಾಗಿ 58 ವರ್ಷಗಳಾಗಿದ್ದರಿಂದ ಅದರ ಸವಿನೆನಪಿಗಾಗಿ ಸುವರ್ಣ ಮಹೋತ್ಸವ ಹಾಗೂ ನೂತನ ಪ್ರೌಢಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭ ಹಮ್ಮಿಕೊಂಡಿದ್ದು, ಕಾರ್ಯಕ್ರಮದ ಪೂರ್ವಭಾವಿ ಸಭೆ ದಾರುಕಾಲಿಂಗ ಶಿವಾಚಾರ್ಯರು ಗುರು ಮಹಾಂತೇಶ್ವರ ಗುರುಮಠ ಯಾಳವಾರ ನೇತೃತ್ವದಲ್ಲಿ ಎ.8ರಂದು ಬುಧವಾರ ಮಧ್ಯಾಹ್ನ 12 ಗಂಟೆಗೆ ಶಾಲೆಯ ಪ್ರೌಢಶಾಲೆ ಸಭಾಂಗಣದಲ್ಲಿ ಕರೆಯಲಾಗಿದೆ. ಸಭೆಯಲ್ಲಿ ಸುವರ್ಣ ಮಹೋತ್ಸವ ಅಂಗವಾಗಿ ನೂತನ ಕಟ್ಟಡ ಕಟ್ಟಲಾಗಿದ್ದು, ಈ ಕಾರ್ಯಕ್ರಮದ ರೂಪುರೇಷೆ ಗಳನ್ನು ಚರ್ಚಿಸುವ ಸಲುವಾಗಿ ಸಭೆ ಕರೆಯಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ರಾಜುಗೌಡ ಎಸ್.ನಾಡಗೌಡ ತಿಳಿಸಿದ್ದಾರೆ.

ಬಿಜೆಪಿಯನ್ನು ಇನ್ನಷ್ಟು ಗಟ್ಟಿಗೊಳಿಸೋಣ: ಬೆಳ್ಳುಬ್ಬಿ



ಕೊಲ್ಹಾರ: ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಬಿಜೆಪಿ ಕಟ್ಟಿದ ಹಿರಿಯರ ಮಾರ್ಗದರ್ಶನದಲ್ಲಿ ನಾವುಗಳು ಇನ್ನಷ್ಟು ಗಟ್ಟಿಗೊಳಿಸಬೇಕಾಗಿದೆ ಎಂದು ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಹೇಳಿದರು. ಪಟ್ಟಣದ ದ್ಯಾಮವ್ವ ದೇವಿ ದೇವಸ್ಥಾನದ ಸಭಾಂಗಣದಲ್ಲಿ ಭಾರತೀಯ ಜನತಾ ಪಕ್ಷದ 46ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಮಾಜ ಸೇವೆಯ ಗುರಿಯಾಗಿಸಿಕೊಂಡು ಜನರ ಅಭ್ಯುದಯಕ್ಕಾಗಿ ನಾಡಿನ ದೇಶದ ಹಿತಕ್ಕಾಗಿ ಹಗಲಿರುಳು ಶ್ರಮಿಸುವ ಹಿರಿಯರ ಯುವಕರ ಸಮ್ಮಿಲನದ ಕಾರ್ಯಕರ್ತರನ್ನು ಹೊಂದಿದ ಪಕ್ಷ ಭಾರತೀಯ ಜನತಾ ಪಕ್ಷವಾಗಿದೆ ಎಂದರು. ಸಮಗ್ರ ದೃಷ್ಟಿಕೋನ ಗಮನದಲ್ಲಿಟ್ಟುಕೊಂಡು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಚ್ಯುತಿಬರದ ರೀತಿಯಲ್ಲಿ ಕೆಲಸ ಮಾಡಿ ರಾಜಕೀಯ ಕ್ಷೇತ್ರದಲ್ಲಿ ಬಲಿಷ್ಠವಾಗಿ ಪಕ್ಷವನ್ನು ಕಟ್ಟಲು ಮುಂದೆಬರಬೇಕು ಎಂದು ಯುವ ಸಮೂಹಕ್ಕೆ ಕರೆಕೊಟ್ಟರು. ಜಿಲ್ಲಾ ಮುಖಂಡ ಮಲ್ಲಿಕಾರ್ಜುನ ದೇವರಮನಿ, ಜಗದೀಶ ಸುನಗದ, ಚಂದ್ರಶೇಖರಯ್ಯ ಗಣಕುಮಾರ, ಚಂದ್ರಶೇಖರ ಬೆಳ್ಳುಬ್ಬಿ, ಪಪಂ ಸದಸ್ಯ ಬಾಬು ಭಜಂತ್ರಿ, ಅಮೀನಪ್ಪ ತೆಗ್ಗಿ, ವಿಜಯಕುಮಾರ ಕೊಟ್ಟಗಿ, ಡೋಂಗ್ರಿ ಕಟಬರ, ನಾಮದೇವ ಪವಾರ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.

ಎ.9ರಂದು ಹಂಡೆಹನಮಪ್ಪ ಜಯಂತಿ: ಪಾಟೀಲ



ಆಲಮಟ್ಟಿ: ಅಖಿಲ ಕರ್ನಾಟಕ ವೀರಶೈವ ಲಿಂಗಾಯತ ಹಂಡೇವಜೀರ ಕ್ಷೇಮಾಭಿವೃದ್ಧಿ ಸಂಘ ಬೆಂಗಳೂರು, ಜಿಲ್ಲಾ ಘಟಕ ವಿಜಯಪುರ ಹಾಗೂ ತಾಲೂಕು ಘಟಕ ನಿಡಗುಂದಿ ಸಹಯೋಗದಲ್ಲಿ ಎ.9ರಂದು ಗುರುವಾರ ನಿಡಗುಂದಿಯ ಮುದ್ದೇಶ್ವರ ಕಲ್ಯಾಣ ಮಂಟಪದಲ್ಲಿ ರಾಜ್ಯಮಟ್ಟದ ರಾಜಾ ಹಂಡೆಹನಮಪ್ಪ ಜಯಂತಿ ಜರುಗಲಿದೆ ಎಂದು ರಾಜ್ಯ ಘಟಕದ ಅಧ್ಯಕ್ಷ ಡಾ.ಎಸ್.ಎಸ್.ಪಾಟೀಲ ಹೇಳಿದರು. ಸೋಮವಾರ ಆಲಮಟ್ಟಿಯ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿ ಮಾತನಾಡಿದರು. ನಿಡಗುಂದಿಯ ರುದ್ರಮುನಿ ಶ್ರೀಗಳು ಸಾನಿದ್ಯ ವಹಿಸಲಿದ್ದಾರೆ, ಮುತ್ತಗಿಯ ವೀರರುದ್ರಮುನಿ ಶ್ರೀ, ಚಿಮ್ಮಲಗಿಯ ಸಿದ್ದರೇಣುಕ ಶ್ರೀ, ಇಟಗಿಯ ಗುರುಶಾಂತವೀರ ಶ್ರೀ, ಕರಭಂಟನಾಳದ ಶಿವಕುಮಾರ ಶ್ರೀ, ಬ್ಯಾಲ್ಯಾಳದ ಶ್ರೀಶೈಲ ಮುತ್ಯಾ ವಹಿಸಲಿದ್ದಾರೆ. ಅಧ್ಯಕ್ಷತೆ ಡಾ.ಎಸ್.ಎಸ್.ಪಾಟೀಲ ಶಿವಾನಂದ ಎಸ್ ಪಾಟೀಲ ಸಚಿವರು ಉದ್ಘಾಟಿಸಲಿದ್ದಾರೆ. ಸಿ.ಎಸ್.ನಾಡಗೌಡ ಶಾಸಕರು, ರಾಜುಗೌಡ ಬ.ಪಾಟೀಲ ಶಾಸಕರು, ಸೋಮನಗೌಡ ಬ. ಪಾಟೀಲ ಸಾಸನೂರ, ಎ.ಎಸ್.ಪಾಟೀಲ(ನಡಹಳ್ಳಿ), ಎಸ್.ಕೆ.ಬೆಳ್ಳುಬ್ಬಿ ಪಾಲ್ಗೊಳ್ಳಲಿದ್ದಾರೆ ಎಂದರು. ಪ್ರೇಮಕುಮಾರ ಮ್ಯಾಗೇರಿ, ಬಸವರಾಜ ವಂದಾಲ, ಶಂಕರಗೌಡ ಶಿವಣಗಿ, ಸಿದ್ದನಗೌಡ ಪಾಟೀಲ, ಅವ್ವಣ್ಣ ಗ್ವಾತಗಿ ಇದ್ದರು.



ಮುದ್ದೇಬಿಹಾಳ: ತಾಲೂಕಿನ ಢವಳಗಿ ಸವಿವ ಸಂಘದ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಆತ್ಮೀಯರಾದ ಎನ್.ಎ.ಬಿರಾಜದಾರ ಅವರಿಗೆ ಬೀಳ್ಕೊಡುವ ಸಮಾರಂಭ ನಡೆಯಿತು. ಸರ್ಕಾರಿ ಪಿಯು ಕಾಲೇಜಿನ ಪ್ರಾಂಶುಪಾಲರಾದ ಎಸ್.ಎಸ್.ಅಂಗಡಿ, ಕಮತೆ, ಮಹಾಬಲೇಶ ಗಡೆದ ಸೇರಿದಂತೆ ಸಂಸ್ಥೆಯ ಸದಸ್ಯರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಾಗಾರ: ವಿದ್ಯಾರ್ಥಿಗಳು ಭಾಗಿ

ವಿಜಯಪುರ: ನಗರದ ಪ್ರತಿಷ್ಠಿತ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಬಿ.ಎಂ.ಪಾಟೀಲ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರದಲ್ಲಿ ಕಿವಿ–ಮೂಗು–ಗಂಟಲು ವಿಭಾಗದಿಂದ ಅಲರ್ಜಿ ಕ್ಷೇತ್ರದ ಹೊಸ ಒಳನೋಟಗಳು ಕುರಿತು ಮೇಲೆ ನಿರಂತರ ವೈದ್ಯಕೀಯ ಶಿಕ್ಷಣ ಹಾಗೂ ಕಾರ್ಯಾಗಾರ ನಡೆಯಿತು. ಕಾರ್ಯಾಗಾರ ಉದ್ಘಾಟಿಸಿದ ಬೆಂಗಳೂರಿನ ಅಲರ್ಜಿ ತಜ್ಞ ಡಾ.ಗಾಯತ್ರಿ ಪಂಡಿತ, ಡಾ. ಶ್ರುತಿ ಮಂಜುನಾಥ ಮತ್ತು ಹುಬ್ಬಳ್ಳಿಯ ಚಿಕ್ಕಮಕ್ಕಳ ತಜ್ಞ ಡಾ.ಬಾಹುಬಲಿ ಇಂಗಳೆ ಅವರು, ಅಲರ್ಜಿ ಮತ್ತು ಇಮ್ಯುನಾಲಜಿ ಕ್ಷೇತ್ರದಲ್ಲಿನ ಹೊಸ ಹೊಸ ಆವಿಷ್ಕಾರಗಳ ಕುರಿತು ಮತ್ತು ಅಲರ್ಜಿ ಸಂಬಂಧಿತ ರೋಗಗಳ ಗುರುತಿಸುವಿಕೆ ಮತ್ತು ಚಿಕಿತ್ಸೆಯ ಬಗ್ಗೆ ಉಪನ್ಯಾಸ ನೀಡಿದರು. ನಂತರ ಬಿಎಲ್‌ಡಿಇ ಆಸ್ಪತ್ರೆ ಪಲ್ಮನಾಲಜಿಸ್ಟ್ ವಿಭಾಗದ ಡಾ. ಕೀರ್ತಿವರ್ಧನ್ ಕುಲಕರ್ಣಿ ಅಸ್ತಮಾ ಕುರಿತು ಮಾತನಾಡಿದರು. ಈ ಕಾರ್ಯಗಾರದಿಂದ ವೈದ್ಯರಿಗೆ ರೋಗಿಗಳಿಗೆ ಚಿಕಿತ್ಸೆ ನೀಡಲು ಅನಕೂಲವಾಗಲೆಂದು ಸೇರಿದ ವೈದ್ಯರಿಗೆಲ್ಲರಿಗೂ ಅಲರ್ಜಿ ಚರ್ಮದ ಪರೀಕ್ಷೆ ಮಾಡಿಸಲಾಯಿತು. 60 ಜನ ಈ ಪರೀಕ್ಷೆಯಲ್ಲಿ ಭಾಗವಹಿಸಿದ್ದರು. ಡೀಮ್ಡ್ ವಿವಿ ಕುಲಪತಿ ಡಾ. ಅರುಣ ಇನಾಮದಾರ, ಪ್ರಾಚಾರ್ಯ ಡಾ.ತೇಜಸ್ವಿನಿ ವಲ್ಲಭ, ಹಿರಿಯ ಉಪಪ್ರಾಚಾರ್ಯ ಡಾ.ವಿಜಯಕುಮಾರ ಕಲ್ಯಾಣಪ್ಪಗೋಳ, ವೈದ್ಯಕೀಯ ಅಧೀಕ್ಷಕ ಡಾ.ಎಸ್.ಎನ್.ಬೆಂಟೂರ, ಡಾ.ಎಚ್.ಟಿ.ಲತಾದೇವಿ ಇದ್ದರು. 120ಕ್ಕೂ ಹೆಚ್ಚು ಸ್ನಾತಕೋತ್ತರ ವಿದ್ಯಾರ್ಥಿಗಳು ವೈದ್ಯರು ಭಾಗವಹಿಸಿದ್ದರು.



ವಿಜಯಪುರ: ಜಿಲ್ಲೆಯ ತಿಕೋಟಾ ತಾಲೂಕು ಪಂಚಾಯತಿ ಕಚೇರಿಯಲ್ಲಿ ಹಸಿರು ಕ್ರಾಂತಿಯ ಹರಿಕಾರ, ಬಾಬು ಜಗಜೀವನ್ ರಾಮ್ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಕಾರ್ಯನಿರ್ವಾಹಕ ಅಧಿಕಾರಿ ಬಸವಂತರಾಯಗೌಡ ಬಿರಾದಾರ, ತಾಲೂಕು ಮಾಹಿತಿ, ಶಿಕ್ಷಣ, ಸಂವಹನ ಸಂಯೋಜಕ ಕಲ್ಲಪ್ಪ ನಂದರಗಿ, ಆರ್.ಟಿ.ಕುಲಕರ್ಣಿ, ಜಯಶ್ರೀ ಕೆಂಗಲಗುತ್ತಿ, ರೀತಾ ಮೌರ್ಯ, ವಿಜಯ ಯರಗಟ್ಟಿ ಇದ್ದರು.

ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳ
ಎ.10ರಿಂದ ಪುಸ್ತಕ ಮೇಳ: ಸೂಳಿಭಾವಿ

ವಿಜಯಪುರ: ನಗರದ ದರಬಾರ ಹೈಸ್ಕೂಲ್ ಮೈದಾನದಲ್ಲಿ ಎ.10ರಿಂದ ಐದು ದಿನ ಬುದ್ಧ, ಬಸವ ಹಾಗೂ ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳವನ್ನು ಪ್ರಥಮ ಬಾರಿಗೆ ಹಮ್ಮಿಕೊಳ್ಳಲಾಗುತಿದ್ದು, ಈ ಮೇಳದ ಸಕಲ ಸಿದ್ಧತೆ ಭರದಿಂದ ಸಾಗುತ್ತಿದೆ ಎಂದು ಲಡಾಯಿ ಪ್ರಕಾಶನದ ಮುಖ್ಯಸ್ಥ, ಪ್ರಗತಿಪರ ಚಿಂತಕ ಬಸವರಾಜ ಸೂಳಿಭಾವಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ ಸಾಹಿತ್ಯ ಮೇಳ ವಿಜಯಪುರ ಬಳಗ ಹಾಗೂ ದಲಿತ, ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಈ ಮೇಳ ಏರ್ಪಡಿಸಿದ್ದು, ಸ್ವರಚಿತ ಪುಸ್ತಕಗಳಗಳೊಂದಿಗೆ ಸಾಹಿತಿಗಳ ಜಾಥಾ ಅಪೂರ್ವ ರೀತಿಯಲ್ಲಿ ನಡೆಯಲಿದ್ದು, ಸಾಹಿತಿಗಳೇ ಈ ಜಾಥಾಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

ಎ.10ರಂದು ಮಧ್ಯಾಹ್ನ 12ಕ್ಕೆ ಡಿಎಸ್‌ಎಸ್ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ ಪುಸ್ತಕ ಮೇಳಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಲಿದ್ದಾರೆ. ಬೆಳಗಾವಿ ಪ್ರಾದೇಶಿಕ ಆಯುಕ್ತೆ ಕೆ.ಎಂ.ಜಾನಕಿ ಅಧ್ಯಕ್ಷತೆ ವಹಿಸಲಿದ್ದಾರೆ, ಮುಂಬೈನ ಖ್ಯಾತ ಲೇಖಕ ಜಿ.ವಿ. ಪವಾರ ದಿಕ್ಸೂಚಿ ಭಾಷಣ ಮಾಡಲಿದ್ದಾರೆ ಎಂದರು. ಮಧ್ಯಾಹ್ನ 3ಕ್ಕೆ ಸಾಮಾಜಿಕ ಬದ್ಧತೆ–ಪತ್ರಕರ್ತನಾಗಿ ಅನುಭವಗಳು ಎಂಬ ವಿಚಾರಗೋಷ್ಠಿ ನಡೆಯಲಿದ್ದು, ಹಿರಿಯ ಪತ್ರಕರ್ತ ಬಿ.ಎಂ.ಹನೀಫ್, ಚಂದ್ರಕಾಂತ ವಡ್ಡು ವಿಚಾರ ಮಂಡಿಸಲಿದ್ದು, ಹಿರಿಯ ಪತ್ರಕರ್ತ ರಫೀ ಭಂಡಾರಿ ಅಧ್ಯಕ್ಷತೆ ವಹಿಸಲಿದ್ದಾರೆ. ಬಳಿಕ ವಿವಿಧ ಕಾರ್ಯಕ್ರಮಗಳು ನಡೆಯಲಿವೆ ಎಂದರು. ಎ.11ರಂದು ಶಿಕ್ಷಕ ದಂಪತಿಗಳ ಮೆರವಣಿಗೆ ಎಂಬ ವಿನೂತನ ಕಾರ್ಯಕ್ರಮ ನಡೆಯಲಿದ್ದು, ಸಾವಿತ್ರಿಬಾಯಿ ಫುಲೆ ಮಾರ್ಗದಿಂದ ಪುಸ್ತಕ ಮೇಳದ ಸ್ಥಳದವರೆಗೆ ಈ ಮೆರವಣಿಗೆ ನಡೆಯಲಿದೆ, ಮಧ್ಯಾಹ್ನ 12ಕ್ಕೆ ಖ್ಯಾತ ಚಿಂತಕಿ ಡಾ.ಮೀನಾಕ್ಷಿ ಬಾಳಿ ದಿಕ್ಸೂಚಿ ಭಾಷಣ ಮಂಡಲಿಸದ್ದಾರೆ. ಸಂಜೆ 4 ಕ್ಕೆ ಲೇಖಕರೊಂದಿಗೆ ಸಂವಾದ ನಡೆಯಲಿದೆ, ಸಂಜೆ 6 ಕ್ಕೆ ಕವಿಗೋಷ್ಠಿ ನಡೆಯಲಿದೆ ಎಂದರು.

ಎ.12ರಂದು ಬಸವಾದಿ ಶರಣರ ವಚನಗಳ ಪವಿತ್ರ ಕಟ್ಟುಗಳ ಮೆರವಣಿಗೆ ನಡೆಯಲಿದೆ, ನಂತರ ನಡೆಯಲಿರುವ ಉಪನ್ಯಾಸ ಕಾರ್ಯಕ್ರಮದಲ್ಲಿ ಖ್ಯಾತ ಚಿಂತಕಿ ಡಾ.ಎಚ್. ಅನುಪಮಾ ವಿಶೇಷ ಉಪನ್ಯಾಸ ನೀಡಲಿದ್ದಾರೆ, ನಂತರ ಮುದ್ರಣ ಗುಮ್ಮಟ ಎಂಬ ಪುಸ್ತಕ ಬಿಡುಗಡೆ ಹಾಗೂ ಪ್ರಶಸ್ತಿ ಪ್ರದಾನ, ಛಾಯಾಚಿತ್ರಗಳ ಪ್ರದರ್ಶನ ನಡೆಯಲಿದೆ. ಎ.13 ರಂದು ಕಾಕಾ ಕಾರಖಾನೀಸರ ಸ್ಮರಣೆ ನಡೆಯಲಿದ್ದು, ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ ಉಪನ್ಯಾಸ ಮಂಡಿಸಲಿದ್ದಾರೆ ಎಂದರು. ಎ.14ರಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತ್ಯುತ್ಸವ ನಡೆಯಲಿದ್ದು, ಖ್ಯಾತ ಚಿಂತಕ ಶಿವಸುಂದರ ಪ್ರಧಾನ ಭಾಷಣ ಮಂಡಿಸಲಿದ್ದಾರೆ ಎಂದರು.

ಮುಖಂಡರಾದ ರಾಜಶೇಖರ ಯಡಹಳ್ಳಿ, ಅನಿಲ್ ಹೊಸಮನಿ, ಡಾ.ದೊಡ್ಡಣ್ಣ ಭಜಂತ್ರಿ, ಚಿನ್ನು ಕಟ್ಟಿಮನಿ ಇತರರು ಇದ್ದರು.



ಜ್ಞಾನದ ಕೊರತೆ ನೀಗಿಸಲಿ

ಜಲ ನೀಡುವ ಮೂಲಕ ಅಪೂರ್ವ ಕಾರ್ಯ ಮಾಡಿರುವ ಆಧುನಿಕ ಭಗೀರಥರೆನಿಸಿಕೊಂಡ ಸಚಿವ ಎಂ.ಬಿ.ಪಾಟೀಲರು ಜಿಲ್ಲೆಯ ಜ್ಞಾನದ ಕೊರತೆಯನ್ನೂ ಸಹ ನೀಗಿಸುವ ಭಗೀರಥರಾಗಲಿ ಎಂದು ಪ್ರಗತಿಪರ ಚಿಂತಕ ಬಸವರಾಜ ಸೂಳಿಭಾವಿ ಹೇಳಿದರು. ಈ ಕಾರ್ಯವನ್ನು ಕೈಗೊಳ್ಳುತ್ತಾರೆ ಎನ್ನುವ ವಿಶ್ವಾಸವಿದೆ. ಜಿಲ್ಲೆಯಲ್ಲಿ ಪ್ರತಿ ಗ್ರಾಮದಲ್ಲಿ ಗ್ರಂಥಾಲಯ ಇರಬೇಕು, ಗ್ರಂಥಾಲಯ ಇಲ್ಲದೇ ಇರುವ ಗ್ರಾಮ ಇರಲೇಬಾರದು, ಈ ನಿಟ್ಟಿನಲ್ಲಿ ನಾವು ಆಶಯಪೂರ್ವಕ ಹೆಜ್ಜೆಯನ್ನು ಇರಿಸುತ್ತಿದ್ದೇವೆ. ಪುನಃ ಮಾನವೀಯತೆಯ ನೆಲೆಗಟ್ಟಿನಲ್ಲಿ ಮನುಕುಲವನ್ನು ಮರಳಿ ತರುವ ನಿಟ್ಟಿನಲ್ಲಿ ಪುಸ್ತಕ ಜಗತ್ತು ಕಾರ್ಯೋನ್ಮುಖವಾಗುವ ವೇದಿಕೆಯಾಗಿ ಈ ಮೇಳ ಆಯೋಜಿಸಲಾಗುತ್ತಿದೆ. ಇದು ಒಂದು ಸಾಹಿತ್ಯಿಕ ಜೊತೆಗೆ ಸಾಂಸ್ಕೃತಿಕ ಮೇಳವೂ ಆಗಿದೆ ಎಂದರು.

ದೇಶಿ ಕ್ರೀಡೆ ಕಬಡ್ಡಿ ಪಂದ್ಯಾವಳಿಗೆ ಚಾಲನೆ

ದೇವರಹಿಪ್ಪರಗಿ: ದೇಶಿಯ ಕ್ರೀಡೆಯಾಗಿರುವ ಕಬಡ್ಡಿಯ ಬೆಳವಣಿಗೆ ಹಿತದೃಷ್ಟಿಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಕಬಡ್ಡಿ ಪಂದ್ಯಾವಳಿ ಆಯೋಜಿಸುತ್ತಿರುವುದು ಅತ್ಯಂತ ಶ್ಲಾಘನೀಯ ಸಂಗತಿ ಎಂದು ಧಾರವಾಡದ ಕೆಇ ಬೋರ್ಡ್ ಶಾಲೆಯ ಶಿಕ್ಷಕ ಬಸನಗೌಡ ಆರ್.ಪಾಟೀಲ ಹೇಳಿದರು.

ತಾಲೂಕಿನ ಮುಳಸಾವಳಗಿ ಗ್ರಾಮದ ಶ್ರೀಶೈಲ ಮಲ್ಲಿಕಾರ್ಜುನನ ಐದೇಶಿ ಜಾತ್ರಾ ಮಹೋತ್ಸವದ ಅಂಗವಾಗಿ ಶಂಕರಲಿಂಗ ಯುವಕ ಮಂಡಳಿಯ ಸಹಯೋಗದಲ್ಲಿ ಗ್ರಾಮದ ಕೆಜಿಎಸ್ ಶಾಲಾ ಆವರಣದಲ್ಲಿ ಆಯೋಜಿಸಲಾದ ಕಬಡ್ಡಿ ಪಂದ್ಯಾವಳಿಯ ಕ್ರೀಡಾ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ನಿವೃತ್ತ ಶಿಕ್ಷಣ ಸಂಯೋಜಕ ಕೆ.ಎಲ್. ಜಾಧವ, ಗ್ರಾಮದ ಪಿಕೆಪಿಎಸ್ ಅಧ್ಯಕ್ಷ ಸಂಗನಗೌಡ ಬಿರಾದಾರ, ಕೆಜಿಎಸ್ ಶಾಲಾ ಮುಖ್ಯಗುರು ಶರಣಗೌಡ ಪಾಟೀಲ, ಮಾಜಿ ಗ್ರಾಪಂ ಸದಸ್ಯ ಸಾಯಬಣ್ಣ ಸೊನ್ನಳ್ಳಿ, ಪ್ರೌಢಶಾಲಾ ಶಿಕ್ಷಕರಾದ ಎಸ್.ಬಿ.ಬಿರಾದಾರ, ಜಿ.ಪಿ.ಬಿರಾದಾರ ಮಾತನಾಡಿದರು. ಪ್ರಥಮ ಬಹುಮಾನ ಪ್ರಾಯೋಜಕ ದೇವರಹಿಪ್ಪರಗಿ ಮತಕ್ಷೇತ್ರದ ಹಿರಿಯ ಭಾಜಪಾ ಧುರೀಣರಾದ ಬಸನಗೌಡ ಪಾಟೀಲ ಯಾಡಿಯಾಪುರ ಅವರ ಅನುಪಸ್ಥಿತಿಯಲ್ಲಿ ದ್ವಿತೀಯ ಹಾಗೂ ತೃತೀಯ ಬಹುಮಾನ ಪ್ರಾಯೋಜಕರಾದ ರಾಯನಗೌಡ ಬಿರಾದಾರ ಹಾಗೂ ನಬಿರಸೂಲ್ ಕೊರಬು ಪಂದ್ಯಾವಳಿ ಉದ್ಘಾಟಿಸಿದರು. ಹಿರಿಯ ವೈದ್ಯರಾದ ಡಾ.ಬಿ.ಎಸ್.ನಾಯ್ಕೋಡಿ ಜ್ಯೋತಿ ಬೆಳಗಿಸಿದರು. ಪಶು ವೈದ್ಯಾಧಿಕಾರಿ ಡಾ.ಪ್ರಶಾಂತ ತಳವಾರ ಮೈದಾನದ ಪೂಜೆ ನೆರವೇರಿಸಿದರು. ಅನ್ನದಾನೇಶ್ವರ ಹಿರೇಮಠ ಹಾಗೂ ಶರಣಯ್ಯ ಮಂಗಲಗಿ, ಬಿ.ಎಸ್.ಪೊಲೇಶಿ, ಶಂಕರಗೌಡ ಬಿರಾದಾರ, ಶ್ರೀಮಂತ ಚವ್ಹಾಣ, ಪರಮಾನಂದ ಬಿರಾದಾರ, ಮಲಕನಗೌಡ ಹೊನ್ನಳ್ಳಿ, ಶಾಂತಗೌಡ ಬಿರಾದಾರ, ಶಿವಶಂಕರ ಬಿರಾದಾರ, ಅರವಿಂದ ನಾಯ್ಕೋಡಿ,ಸಿದ್ದು ಹದರಿ, ಶಿವಾನಂದ ಬಿರಾದಾರ, ಕಾಶೀಲಿಂಗ ರೋಡಗಿ, ಮನೋಹರ ಪೂಜಾರಿ, ಸೋಮಣ್ಣ ಹುಗ್ಗೆನವರ, ಶಿವಾನಂದ ಹೊನ್ನಳ್ಳಿ, ಸುರೇಶ ಉಕುಮನಾಳ, ಭೀಮರಾಯ ಬಸರಕೋಡ, ಗೊಲ್ಲಾಳ ರೋಡಗಿ, ಬಸವರಾಜ ಸುರಗಿಹಳ್ಳಿ, ಉಮೇಶ ಮೂಲಿಮನಿ, ಸೋಮು ಹದರಿ, ಮಾಂತು ಬಮ್ಮನಳ್ಳಿ, ಸಲ್ಮಾನ ಮುಲ್ಲಾ, ಪ್ರದೀಪ ಹದರಿ, ಸಿಂಧೂರ ನಾಯ್ಕೋಡಿ, ನಿತಿನ ಉಕುಮನಾಳ, ಸಂದೀಪ ಬಿರಾದಾರ, ಪ್ರೌಢಶಾಲಾ ಶಿಕ್ಷಕ ಅರ್ಜುನ ವಾಲೀಕಾರ, ವಿಶ್ವನಾಥ ಸರಬಡಗಿ ಉಪಸ್ಥಿತರಿದ್ದರು.



ಮಹಿಳೆಯರಿಗೆ ಅಕ್ಕಮಹಾದೇವಿ ಸ್ಫೂರ್ತಿ

ಬಸವನಬಾಗೇವಾಡಿ: ಅಕ್ಕಮಹಾದೇವಿಯವರ ವಚನಗಳನ್ನು ನಿತ್ಯ ಅನುಷ್ಠಾನಕ್ಕೆ ತಂದರೆ ನಮ್ಮ ಬದುಕು ಸುಂದರವಾಗುತ್ತದೆ ಎಂದು ಕನ್ನಡ ಜಾನಪದ ಸಾಹಿತ್ಯ ಪರಿಷತ್ತಿನ ತಾಲೂಕಾಧ್ಯಕ್ಷ ದೇವೇಂದ್ರ ಗೋನಾಳ ಹೇಳಿದರು.

ಸ್ಥಳೀಯ ನಂದಿ ಬಡಾವಣೆಯ ಮಾರುತೇಶ್ವರ ದೇವಸ್ಥಾನದಲ್ಲಿ ಶರಣ ಸಾಹಿತ್ಯ ಪರಿಷತ್ತು ಹಾಗೂ ಕದಳಿ ವೇದಿಕೆ ಸಹಯೋಗದಲ್ಲಿ ಶಿವಶರಣೆ ಅಕ್ಕಮಹಾದೇವಿ ಜಯಂತಿ, ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು ಬಾಹ್ಯ ಸೌಂದರ್ಯಕ್ಕಿಂತ ಅಂತರಂಗದ ಸೌಂದರ್ಯಕ್ಕೆ ಅಕ್ಕಮಹಾದೇವಿ ಹೆಚ್ಚು ಒತ್ತು ಕೊಟ್ಟಿದ್ದರು, ಅಕ್ಕಮಹಾದೇವಿಯ ದಿಟ್ಟ ನಿರ್ಧಾರ ಇಂದಿನ ಮಹಿಳೆಗೆ ಸ್ಫೂರ್ತಿಯಾಗಿ ನಿಲ್ಲುತ್ತದೆ ಎಂದು ಹೇಳಿದರು.

ಸ್ಥಳೀಯ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ಸಾನಿಧ್ಯವಹಿಸಿ ಮಾತನಾಡಿ, ಕನ್ನಡ ಸಾಹಿತ್ಯಕ್ಕೆ ವಚನ ಸಾಹಿತ್ಯದ ಕೊಡುಗೆ ಅಮೂಲ್ಯವಾದದ್ದು, ವಿಶೇಷವಾಗಿ ಅಕ್ಕನ ವಚನಗಳು ನಮಗೆ ಇಂದಿಗೂ ಸ್ಫೂರ್ತಿ ನೀಡುತ್ತವೆ ಎಂದರು.

ಕದಳಿ ವೇದಿಕೆ ಅಧ್ಯಕ್ಷೆ ಸಾವಿತ್ರಿ ಕಲ್ಯಾಣಶೆಟ್ಟಿ ಮಾತನಾಡಿ, ಕದಳಿ ವೇದಿಕೆ ಹಾಗೂ ಚನ್ನಬಸವೇಶ್ವರ ಪ್ರತಿಷ್ಠಾನ ಹಲವಾರು ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಬಂದಿದ್ದು ಬರುವ ದಿನಗಳಲ್ಲಿ ಹೆಚ್ಚಿನ ಕೆಲಸ ಮಾಡುವ ಆಶಯ ಇದೆ ಸಮಾಜದಲ್ಲಿರುವ ನಿಜವಾದ ಪ್ರತಿಭಾವಂತರನ್ನು ಗುರುತಿಸುವ ಕಾರ್ಯ ನಮ್ಮಿಂದ ಆಗಬೇಕಾಗಿದೆ ಎಂದು ಹೇಳಿದರು.

ಪುರಸಭೆ ಮಾಜಿ ಅಧ್ಯಕ್ಷೆ ಜಗದೇವಿ ಗುಂಡಳ್ಳಿ ಉದ್ಘಾಟಿಸಿದರು. ಶಸಾಪ ಅಧ್ಯಕ್ಷ ವೀರಣ್ಣ ಮರ್ತೂರ ಸರಕಾರಿ ಪಪೂ ಕಾಲೇಜಿನ ಸಹ ಶಿಕ್ಷಕಿ ಸರ್ವಮಂಗಳಾ ಕಡಿವಾಳ, ಶಿಕ್ಷಕಿ ಕಮಲಾ ಪದರಾ ಮಾತನಾಡಿದರು. ಡಾ.ವೀಣಾ ಗುಳೇದಗುಡ್ಡ, ರಾಜೇಶ್ವರಿ ಪೂಜಾರಿ ಇದ್ದರು. ಅಂದ ಕಲಾವಿದರಾದ ಕಲ್ಲೇಶ್ ಸಿಗರೂರು, ಅಶೋಕ ಜುಗತಿ ಪ್ರಾರ್ಥಿಸಿದರು. ಶಿಕ್ಷಕ ಶರಣು ಬಸ್ತಾಳ ವಚನ ಗಾಯನಗೈದರು. ಸಂಗೀತಾ ಬಾಗೇವಾಡಿ ಸ್ವಾಗತಿಸಿದರು, ಪಿ.ಎಸ್.ಬಾಗೇವಾಡಿ ವಂದಿಸಿದರು. ಶಿಕ್ಷಕ ಕೊಟ್ರೇಶ ನಿರೂಪಿಸಿದರು. ವಿಶೇಷ ಚೇತನ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಜಾನಕಿ ಚವ್ಹಾಣ, ಮಲ್ಲಮ್ಮ ಕುರಿ, ಶಿಕ್ಷಕಿಯರಾದ ಶಶಿಕಲಾ ದೇಗಿನಾಳ, ಲಕ್ಷ್ಮೀಬಾಯಿ ಹಳ್ಳಿ, ಎಸ್.ಬಿ.ಮುತ್ತಗಿ, ನಿರ್ಮಲಾ ಅಂಗಡಿ, ಪುಷ್ಪಾ ಕುಲಕರ್ಣಿ, ಮಹಾದೇವಿ ಕೊಪ್ಪದ ಅವರನ್ನು ಸನ್ಮಾನಿಸಲಾಯಿತು.



ಸಮತಾವಾದದ ಹರಿಕಾರ ಬಾಬು ಜಗಜೀವನರಾಂ: ವಿಜಯಕರ್

ಮುದ್ದೇಬಿಹಾಳ : ದಲಿತ ನಾಯಕ ಬಾಬು ಜಗಜೀವನರಾಂ ಅವರಿಗೆ ಕೃಷಿ ಮಂತ್ರಿಗಿರಿಯನ್ನು ಕೊಟ್ಟಾಗ ತಾವು ಒಂದು ವರ್ಗಕ್ಕೆ ನಾಯಕರಲ್ಲ, ಬಡ, ಹಿಂದುಳಿದ ಹಾಗೂ ಅಂಚಿನ ರೈತರ ಹೇಳಿಕೆಗಾಗಿ ಹಸಿರು ಕ್ರಾಂತಿಯನ್ನು ಮಾಡುವ ಮೂಲಕ ತಾನು ಏನು ಮಾಡಬಹುದು ಎಂಬುದನ್ನು ಸಾಬೀತು ಪಡಿಸಿದ ಮಹಾನ್ ನಾಯಕರಾಗಿದ್ದರು ಎಂದು ರಾಜಕೀಯ ಮುಖಂಡ ವೈ.ಎಚ್.ವಿಜಯಕರ್ ಹೇಳಿದರು.

ಆಡಳಿತ ಸೌಧ ಆವರಣದಲ್ಲಿ ತಾಲೂಕು ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮಾಜಿ ಉಪಪ್ರಧಾನಿ ಬಾಬು ಜಗಜೀವನ ರಾಮ್ ಅವರ ಜನ್ಮ ದಿನಾಚರಣೆ ಸಂದರ್ಭದಲ್ಲಿ ಮಾತನಾಡಿದ ಅವರು, ಸಮಾಜದ ಎಲ್ಲ ವರ್ಗದವರಿಗೆ ಕೊಡುಗೆ ನೀಡಿದ ಅವರ ಕಾರ್ಯವನ್ನು ನಾವು ಸ್ಮರಿಸಬೇಕಿದೆ ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಬಸಂತಿ ಜಿ.ಮಠ ಮಾತನಾಡಿ, ಸಮಾನತೆಗಾಗಿ ಸದಾ ಹೋರಾಡಿದ ಅವರ ಜನ್ಮದಿನವನ್ನು ಸಮತಾ ದಿನವನ್ನಾಗಿ ಆಚರಿಸುತ್ತಿದ್ದೇವೆ. ಕಾರ್ಮಿಕ ಕಲ್ಯಾಣ ಹಾಗೂ ಕೃಷಿಗಾಗಿ ಅವರು ಕೊಟ್ಟ ಕೊಡುಗೆ ಅಪಾರ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ತಾಲೂಕು ದಂಡಾಧಿಕಾರಿ ಕೀರ್ತಿ ಚಾಲಕ್ ಅವರು, ಬಾಬೂಜಿ ಅವರು ಚಮ್ಮಾರಿಕೆ ತೊರೆದು ಕೃಷಿ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಿದ್ದು ಅಲ್ಲದೆ, ಹಸಿರು ಕ್ರಾಂತಿಯ ಹರಿಕಾರರು ಆದರು. ಮದನ ಮೋಹನ ಮಾಳವಿಯ ಮೇಲೆ ಪ್ರಭಾವ ಬೀರಿದ ಅಸ್ಪೃಶ್ಯತೆ ವಿರುದ್ಧದ ಹೋರಾಟ ಎಲ್ಲ ವರ್ಗಗಳಿಗೂ ಪ್ರೇರಣೆಯ ಎಂದು ಹೇಳಿದರು.

ಬಾಲಚಂದ್ರ ಹುಲ್ಲೂರು ಉಪನ್ಯಾಸ ನೀಡಿದರು. ಡಾ.ಪಿ.ಎಚ್ ಉಪ್ಪಲದಿನ್ನು, ಭಗವಂತ ಕಬಾಡೆ, ತಿಪ್ಪಣ್ಣ ದೊಡ್ಡಮನಿ, ನಾನಪ್ಪ ನಾಯಕ. ಮಂಜು ಕುಂದರಗಿ, ಸಂಗಮೇಶ ಶಿವನಗೆ. ತಾಪಂ ಅಧಿಕಾರಿ ಸಂಗನಗೌಡ ಬಿರಾದಾರ. ಪುರಸಭೆ ಮುಖ್ಯ ಅಧಿಕಾರಿ ಮಲ್ಲಿಕಾರ್ಜುನ ಬಿರಾದಾರ. ಶಿಕ್ಷಕ ಟಿ.ಡಿ.ಲಮಾಣಿ ಭಾಗವಹಿಸಿದ್ದರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.



ಶೋಷಿತ ವರ್ಗಗಳ ಆಶಾದೀಪ ಡಾ.ಜಗಜೀವನರಾಂ: ಮ್ಯಾಗೇರಿ

ಕೊಲ್ಹಾರ: ಭವ್ಯ ಭಾರತದ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಭಾರತದ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ, ಅಪ್ಪಟ ಪ್ರಜಾಪ್ರಭುತ್ವವಾದಿ ಡಾ.ಬಾಬು ಜಗಜೀವನ್ ರಾಂ ಅವರ ಕೊಡುಗೆ ಅಪಾರ ಮತ್ತು ಅನುಪಮ ಎಂದು ತಹಶೀಲ್ದಾರ್ ಸಂತೋಷ ಮ್ಯಾಗೇರಿ ಹೇಳಿದರು.

ಕೊಲ್ಹಾರ ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ ಡಾ.ಬಾಬು ಜಗಜೀವನ್ ರಾಂ ಅವರ 119ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಬಾಬು ಜಗಜೀವನ್ ರಾಂ ಅವರು ಕೇಂದ್ರ ಸರ್ಕಾರದಲ್ಲಿ ನಾಲ್ಕು ದಶಕಗಳ ಕಾಲ ಮಂತ್ರಿಯಾಗಿ ದಾಖಲೆಯನ್ನು ನಿರ್ಮಿಸಿದ ಮಹಾನ್ ರಾಜಕೀಯ ಮುತ್ಸದ್ದಿ ಶೋಷಿತ ವರ್ಗಗಳ ಆಶಾ ದೀಪವಾಗಿ, ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ತಳ ಸಮುದಾಯಗಳ ಉದ್ಧಾರಕ್ಕೆ ತಮ್ಮ ಜೀವನವನ್ನು ಸಮರ್ಪಿಸಿದ ಪ್ರತಿಭಾವಂತರು. ಹಸಿರು ಕ್ರಾಂತಿಯ ಹರಿಕಾರನೆಂದು ಪ್ರಖ್ಯಾತಿ ಹೊಂದಿ ಭಾರತದ ದೇಶವನ್ನು ಆಧುನಿಕತೆಯ ಬಾಗಿಲಿಗೆ ತಂದು ನಿಲ್ಲಿಸಿದ ಕೀರ್ತಿಗೆ ಭಾಜನರಾಗಿದ್ದಾರೆ ಎಂದು ಹೇಳಿದರು.

ತಾಪಂ ಇಒ ಸುನೀಲ್ ಮದ್ದೀನ, ಪಪಂ ಮುಖ್ಯಾಧಿಕಾರಿ ವೀರೇಶ ಹಟ್ಟಿ, ಉಪ ತಹಶೀಲ್ದಾರ್ ಕೃಷ್ಣ ಗೂಡೂರು, ಎನ್.ಕೆ.ನದಾಫ, ಸೈಫಾನ್ ಕೊರ್ತಿ, ರಾಮನಗೌಡ ಪಾಟೀಲ, ಶ್ರೀಶೈಲ ಹಂಡಿ, ಆರ್.ಐ.ಹುಡೇದ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ಪಪಂ ಅಧ್ಯಕ್ಷ ಸಿ.ಎಸ್.ಗಿಡ್ಡಪ್ಪಗೋಳ, ಮುಖಂಡರಾದ ಧಶರತ ಈಟಿ, ನಿಂಗು ಗಣಿ, ಶಿಡ್ಲಪ್ಪ ತಳಗೇರಿ, ಶಿಡ್ಲಪ್ಪ ಮಾದರ, ಚಂದ್ರಶೇಖರ ಈಟಿ, ಅಮ್ಮಿನಪ್ಪ ತೆಗ್ಗಿ, ಸೋಮು ಬ್ಯಾಲಾಳ, ಬಸವರಾಜ ಚಲವಾದಿ, ಶಿವಪುತ್ರ ಮೇತ್ರಿ, ಮಂಜುನಾಥ ಬಾಗಾನಗರ, ಗುರು ಚಲವಾದಿ ಒಳಗೊಂಡಂತೆ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು. ಸಮಾಜ ಕಲ್ಯಾಣ ಇಲಾಖೆಯ ಮನು ಪತ್ತಾರ ಕಲಕೇರಿ ಮಾತನಾಡಿದರು, ಚಂದ್ರಶೇಖರ ಈಟಿ ವಂದಿಸಿದರು.



ಜಗಜೀವನರಾಂ ಹಸಿರು ಕ್ರಾಂತಿಯ ಹರಿಕಾರ: ಇಂಗಳೆ

ಚಡಚಣ: ಡಾ.ಬಾಬು ಜಗಜೀವನ ರಾಂ ಅವರು ಒಬ್ಬ ಹಸಿರು ಕ್ರಾಂತಿಯ ಹರಿಕಾರ ಎಂದು ತಹಶೀಲ್ದಾರ್ ಸಂಜಯ ಇಂಗಳೆ ಅವರು ಹೇಳಿದರು.

ತಹಶೀಲ್ದಾರ್ ಕಚೇರಿಯ ಆವರಣದಲ್ಲಿ ನಡೆದ ಡಾ.ಬಾಬು ಜಗಜೀವನ ರಾಂ ಅವರ 119ನೇ ಜಯಂತಿಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ದಲಿತ ಕುಟುಂಬದಲ್ಲಿ ಜನಿಸಿದ ಡಾ.ಬಾಬು ಜಗಜೀವನ ರಾಂ ಅವರು, ಅಂದಿನ ಕಾಲದಲ್ಲಿ ದಲಿತ ವರ್ಗಗಳ ಮೇಲೆ ಆಗುತ್ತಿರುವ ಅನ್ಯಾಯ, ಶೋಷಣೆಗಳನ್ನು ಎದುರಿಸಿ ಮೆಟ್ಟಿನಿಂತ ಅವರು, ಒಬ್ಬ ವಿದ್ಯಾವಂತನಾಗಿ ಹೊರಹೊಮ್ಮಿ, ದೇಶದ ವಿವಿಧ ಮಂತ್ರಿ ಸ್ಥಾನಗಳನ್ನು ಅಲಂಕರಿಸಿ ದೇಶದ ಉನ್ನತ ಹುದ್ದೆಯಾದ ಉಪಪ್ರಧಾನಿಯಾಗುವಲ್ಲಿ ಯಶಸ್ವಿಯಾದರು. ಸತತ ದೀರ್ಘ 30 ವರ್ಷಗಳ ವರೆಗೆ ಸಂಸದರಾಗಿ ದಾಖಲೆಯನ್ನು ಮಾಡಿದರು. 1974ರಲ್ಲಿ ದೇಶ ಭೀಕರ ಬರಗಾಲ ಪರಿಸ್ಥಿತಿ ಎದುರಿಸುತ್ತಿರುವಾಗ ಕೇಂದ್ರದ ಕೃಷಿ ಸಚಿವರಾಗಿದ್ದ ಅವರು, ಹೆಚ್ಚು ಉತ್ಪಾದನೆ ಕೊಡುವ ಬೀಜಗಳ ಬಳಕೆಯನ್ನು ಉತ್ತೇಜಿಸಿ, ರೈತರಿಗೆ ರಸಗೊಬ್ಬರ, ನೀರಾವರಿ ಸೌಲಭ್ಯಗಳನ್ನು ಒದಗಿಸಲು ಸರಕಾರದ ಯೋಜನೆಗಳನ್ನು ಬಲಪಡಿಸಿ, ಭಾರತದಲ್ಲಿ ಹಸಿರು ಕ್ರಾಂತಿ ಮತ್ತು ಭಾರತೀಯ ಕೃಷಿಯನ್ನು ಆಧುನಿಕರಿಸಲು ಅವರು ನೀಡಿದ ಕೊಡುಗೆಯನ್ನು ಇಂದಿಗೂ ನೆನಪಿಸಿಕೊಳ್ಳಲಾಗುತ್ತಿದೆ ಎಂದರು.

ತಾಪಂ ಇಒ ಅಶೋಕಕುಮಾರ ರಾಠೋಡ ಮಾತನಾಡಿದರು. ಡಾ.ನಾಗರಾಜ ವಲ್ಕಂದಿನ್ನಿ ವಿಶೇಷ ಉಪನ್ಯಾಸ ನೀಡಿದರು.

ಪಪಂ ಮುಖ್ಯಾಧಿಕಾರಿ ಬಿ.ಕೆ. ತಾವಸೆ, ಇಂಡಿ ಸಮಾಜ ಕಲ್ಯಾಣ ಇಲಾಖೆಯ ಮ್ಯಾನೇಜರ ರಾಜಕುಮಾರ ಧೈವಾಡೆ, ಬಿ.ಇ.ಒ. ಚಿದಾನಂದ ಕಟ್ಟಿಮನಿ, ಸಿಡಿಪಿಒ ಸಾಹೇಬಗೌಡ ಜುಂಜುರವಾಡ, ಚಡಚಣ ಹೆಸ್ಕಾಂ ಎಇಇ ವಿಜಯಕುಮಾರ ಹವಾಲ್ದಾರ ಸೇರಿದಂತೆ ಮತ್ತಿತರರು ಇದ್ದರು. ಶಿಕ್ಷಕ ಜಗದೀಶ ಚಲವಾದಿ ನಿರೂಪಿಸಿದರು. ಶಿಕ್ಷಕ ಸುನಿಲ ಯಳಮೇಲಿ ಸ್ವಾಗತಿಸಿದರು.



ಹಣಮಂತ ಸುಣಗಾರಗೆ ಸನ್ಮಾನ

ಸಿಂದಗಿ: ಸಮಾಜದ ಹಿರಿಯ ವ್ಯಕ್ತಿಯನ್ನು ಗುರುತಿಸಿ ನಗರ ಯೋಜನಾ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಆಯ್ಕೆ ಮಾಡಿದ ಸರಕಾರಕ್ಕೆ ಮತ್ತು ಸಿಂದಗಿ ಶಾಸಕರಿಗೆ ಅಭಿನಂದನೆಗಳು ಎಂದು ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಶಿವಾಜಿ ಮೇಟಗಾರ ಹೇಳಿದರು.

ನಗರದ ಮರಗಮ್ಮ ಲಕ್ಕಮ್ಮ ದೇವಸ್ಥಾನದಲ್ಲಿ ನೂತನವಾಗಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ಆಯ್ಕೆಯಾದ ಹಣಮಂತ ಸುಣಗಾರ ಅವರಿಗೆ ತಳವಾರ ಸಮಾಜದ ವತಿಯಿಂದ ಹಮ್ಮಿಕೊಂಡ ಸನ್ಮಾನಿಸಿ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಾಧನೆ ಮಾಡಿದ ಸಾಧಕರಿಗೆ ಸಮಾಜದ ವತಿಯಿಂದ ಸನ್ಮಾನಿಸಿ ಗೌರವಿಸುವ ಕಾರ್ಯ ಶ್ಲಾಘನೀಯ ಎಂದರು.

ಸನ್ಮಾನ ಸ್ವೀಕರಿಸಿದ ನೂತನ ಅಧ್ಯಕ್ಷ ಹಣಮಂತ ಸುಣಗಾರ ಮಾತನಾಡಿ, ಪಕ್ಷ ಹಾಗೂ ಸಮಾಜಕ್ಕೆ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಪಕ್ಷದ ಹಿರಿಯರು, ಸಿಎಂ, ಡಿಸಿಎಂ ಹಾಗೂ ಸಚಿವರು ನನ್ನನ್ನು ಈ ಹುದ್ದೆಗೆ ನೇಮಕವಾಗಲು ಸಹಕರಿಸಿದ್ದಾರೆ. ಹಿರಿಯರು ಹಾಗೂ ಸಾರ್ವಜನಿಕರು ಇಟ್ಟಿರುವ ಭರವಸೆಗೆ ಚ್ಯುತಿ ಬಾರದಂತೆ ನಗರದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಎಸ್.ಎಂ.ಬಿರಾದಾರ, ಭೀಮರಾಯ ಯಾತನೂರ, ಪರಶುರಾಮು ಗೂಳುರ, ಶರಣಪ್ಪ ಸುಂಗಠಾಣ, ಲಕ್ಕಮ್ಮ ಬಿರಾದಾರ, ರವಿ ವಾಲೀಕಾರ, ಬಸು ಪಡಗಾನೂರ, ಶ್ರೀಶೈಲ ಹೂರಕ್ಕೆರಿ, ರಾಜು ಕುರಿ ಸೇರಿ ಮುಖಂಡರು ಇದ್ದರು.



ಸರ್ಕಾರಿ ಜಾಗಗಳ ದಾಖಲಾತಿ ವಿಳಂಬ: ಸದಸ್ಯರ ಖಂಡನೆ

ನಾಲತವಾಡ: ಪಟ್ಟಣದಲ್ಲಿರುವ ಸಿಎ ಸೈಟ್‌ಗಳು, ಗಾರ್ಡನ್ ಜಾಗಗಳು ಹಾಗೂ ವಿವಿಧ ಲೇಔಟ್‌ಗಳಲ್ಲಿರುವ ಸರ್ಕಾರಿ ಜಾಗಗಳನ್ನು ಪಟ್ಟಣ ಪಂಚಾಯತ ಹೆಸರಿಗೆ ದಾಖಲಿಸುವ ಕಾರ್ಯದಲ್ಲಿ ವಿಳಂಬವಾಗಿರುವುದನ್ನು ಖಂಡಿಸಿ ನಾಲತವಾಡ ಪಟ್ಟಣ ಪಂಚಾಯತ ಸದಸ್ಯರು ಸಾಮಾನ್ಯ ಸಭೆಗಳಿಗೆ ಗೈರಾಗಲು ನಿರ್ಧಾರ ಕೈಗೊಂಡಿದ್ದಾರೆ.

ಪಟ್ಟಣ ಪಂಚಾಯತಿ ಸದಸ್ಯರು ಈ ಕುರಿತು ಮುಖ್ಯಾಧಿಕಾರಿಗಳಿಗೆ ಸಲ್ಲಿಸಿದ ಪತ್ರದಲ್ಲಿ, ಈಗಾಗಲೇ ನಡೆದ ಅನೇಕ ಸಭೆಗಳಲ್ಲಿ ಈ ವಿಷಯವನ್ನು ಹಲವು ಬಾರಿ ಪ್ರಸ್ತಾಪಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದೇವೆ ಎಂದು ತಿಳಿಸಿದ್ದಾರೆ. ಆದರೆ ಇದುವರೆಗೆ ಯಾವುದೇ ಸ್ಪಷ್ಟ ಕ್ರಮ ಕೈಗೊಳ್ಳದಿರುವುದರಿಂದ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ಮಹತ್ವದ ವಿಷಯ ನಿರ್ಲಕ್ಷ್ಯಗೊಳ್ಳುತ್ತಿದೆ ಎಂದು ಆಕ್ಷೇಪಿಸಿದ್ದಾರೆ.

ಪಟ್ಟಣದಲ್ಲಿರುವ ಸಿಎ ಸೈಟುಗಳು, ಗಾರ್ಡನ್ ಜಾಗಗಳು ಹಾಗೂ ಎಲ್ಲಾ ಲೇಔಟ್‌ಗಳಲ್ಲಿರುವ ಸರ್ಕಾರಿ ಜಾಗಗಳನ್ನು ನಿಯಮಾನುಸಾರವಾಗಿ ಪಟ್ಟಣ ಪಂಚಾಯತ ಹೆಸರಿಗೆ ದಾಖಲಿಸುವ ಹಾಗೂ ಸಂಬಂಧಿತ ಕ್ರಮಗಳನ್ನು ಪೂರ್ಣಗೊಳಿಸುವ ತನಕ ನಡೆಯುವ ಸಾಮಾನ್ಯ ಸಭೆಗಳಿಗೆ ಹಾಜರಾಗುವುದಿಲ್ಲವೆಂದು ಸದಸ್ಯರು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ ಒಂದು ವೇಳೆ ಎರಡು ತಿಂಗಳ ಅವಧಿಯಲ್ಲಿ ಇದಾಗದಿದ್ದರೆ ಸದಸ್ಯತ್ವ ಸ್ಥಾನದಿಂದ ರಾಜೀನಾಮೆ ಸಲ್ಲಿಸಲಾಗುವುದು ಎಂದು ಎಚ್ಚರಿಸಿದ್ದಾರೆ. ಮನವಿ ಸ್ವೀಕರಿಸಿ ಮಾತನಾಡಿದ ಮುಖ್ಯಾಧಿಕಾರಿ ಈರಣ್ಣ ಕೊಣ್ಣೂರ, ಈಗಾಗಲೆ ನಿಯಮದಂತೆ ಹೊಸ ಲೇಔಟ್ ಗಳ ಜಾಗವನ್ನು ಪ.ಪಂ ಹೆಸರಿಗೆ ಮಾಡಿದ್ದೇವೆ. ಹಿಂದೆ ಗ್ರಾಮ ಪಂಚಾಯತಿ ಅವಧಿಯಲ್ಲಿ ಲೇಔಟಗಳ ದಾಖಲಾತಿ ನೀಡಲು ಸಾಕಷ್ಟು ಬಾರಿ ತಾ.ಪಂಗೆ ಪತ್ರ ಬರೆದರು ಅವರು ದಾಖಲೆ ನೀಡುತ್ತಿಲ್ಲ, ಮತ್ತೊಮ್ಮೆ ಪತ್ರ ಬರೆಯುತ್ತೇನೆ ಎಂದರು.

ಸಾಕಷ್ಟು ಬಾರಿ ಸಾಮಾನ್ಯ ಸಭೆಯಲ್ಲಿ ಸರಕಾರಿ ಜಾಗಗಳನ್ನು ಪಪಂ ಹೆಸರಿಗೆ ಬದಲಾಯಿಸಿಕೊಳ್ಳಿ ಎಂದು ಹೇಳಿದ್ದೇವೆ. ಕೂಡಲೇ ಮುಖ್ಯಾಧಿಕಾರಿ ಸಿ.ಎ ಸೈಟ್ ಜಾಗ, ಗಾರ್ಡನ್ ಜಾಗ ಪಪಂ ಅಂಡರ್ ತೆಗೆದುಕೊಳ್ಳದಿದ್ದರೆ ನಮ್ಮ ಸದಸ್ಯ ಸ್ಥಾನಕ್ಕೆ ರಾಜಿನಾಮೆ ನೀಡುತ್ತೇವೆ ಎಂದು ಬಾಬು ಕ್ಷತ್ರಿ, ಸಂಗಣ್ಣ ಬಾರಡ್ಡಿ ಎಂದರು.

ಸದಸ್ಯರಾದ ಪೃಥ್ವಿರಾಜ್ ನಾಡಗೌಡ, ಸಂಗಣ್ಣ ಬಾರಡ್ಡಿ, ಬಾಬು ಕ್ಷತ್ರಿ, ಪುತ್ರಪ್ಪ ಗುರಿಕಾರ, ರಮೇಶ ಆಲಕೊಪ್ಪರ, ಮಕ್ಬೂಲ ನಾಡದಾಳ ಇನ್ನಿತರರು ಇದ್ದರು.



ಕಿರುಸುದ್ದಿ

ಸಾರ್ವಜನಿಕ ಜೀವನದಲ್ಲಿ ಅಧಿಕಾರ ಶಾಶ್ವತವಲ್ಲ



ಯಲಬುರ್ಗಾ: ಯಾವುದೇ ವ್ಯಕ್ತಿಗೆ ಸಹಾಯ ಮಾಡಲು ಸಾರ್ವಜನಿಕ ಜೀವನದಲ್ಲಿ ಅಧಿಕಾರ ಮುಖ್ಯವಲ್ಲ ಮಾನವೀಯ ತುಡಿತ ಮುಖ್ಯ ಎಂದು ತಾಪಂ ಮಾಜಿ ಉಪಾಧ್ಯಕ್ಷ ಕಳಕಪ್ಪ ಕಂಬಳಿ ಹೇಳಿದರು.
ತಾಲೂಕಿನ ಕರಮುಡಿ ಗ್ರಾಮದ ಕರವೀರಬದ್ರೇಶ್ವರ ಆವರಣದಲ್ಲಿ ಶ್ರೀ ಹುಚ್ಚೀರೇಶ್ವರ ಜಾತ್ರಾಮಹೋತ್ಸವದ ಅಂಗವಾಗಿ ಯಲಬುರ್ಗಾದ ಶ್ರೀ ವೀರಬದ್ರೇಶ್ವರ ವಿಕಲ ಚೇತನರ ಗ್ರಾ.ಅ. ಹಾಗೂ ಶಿ.ಸಂಸ್ಥೆ ಕುಕನೂರಿನ ವಿ.ಎಚ್.ತಳವಾರ ಗ್ರಾ.ಅ. ಹಾಗೂ ಶಿ.ಸಂಸ್ಥೆ ಸ್ಥಳೀಯ ಕರ್ನಾಟಕ ಯುವಕ ಮಂಡಳ ಹಾಗೂ ಗ್ರಾಪಂ ಇವುಗಳ ಸಂಯುಕ್ತ ಆಶ್ರಯದಲ್ಲಿ ಶಿಕ್ಷಣ ಪ್ರೇಮಿ ದಿ.ಕಾಶೀನಾಥ ಕುಕನೂರ ಇವರ ಸ್ಮರಣಾರ್ಥವಾಗಿ ಹಿರಿಯ ನಾಗರಿಕರ ಹಾಗೂ ವಿಕಲ ಚೇತನರಿಗೆ ಉಚಿತ ಸಾಧನಾ ಸಲಕರಣೆಗಳ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಿ.ಎಚ್.ತಳವಾರ ಗ್ರಾ.ಅ.ಹಾಗೂ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ಸಮಾಜ ಸೇವಕರಾದ ಟಿ.ರತ್ನಾಕರರವರು ಮಾತನಾಡಿ ನಮ್ಮ ಸಂಸ್ಥೆವತಿಯಿಂದ ಹಲವಾರು ವಿಧಾಯಕ ಕಾರ್ಯಕ್ರಮವನ್ನು ಈಗಾಗಲೆ ಆಯೋಜಿಸಲಾಗಿದೆ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡಲು ಸದಾ ಸಿದ್ಧವಾಗಿದೆ ಎಂದರು ರತ್ನಾಕರ ಟಿ., ಶಕುಂತಲಾ ಪಾಟೀಲ, ಸಂಗಪ್ಪ ಬಂಡಿ, ವೀರಪ್ಪ ಪತ್ತಾರ, ಬಸವರಾಜ ಉಳ್ಳಾಗಡ್ಡಿ, ಶರಣಪ್ಪಗೌಡ ಪೋ.ಪಾಟೀಲ, ಮುತ್ತಣ್ಣ ಪರಸಪ್ಪ, ಇಮಾಮು ವೀರಣ್ಣ, ಮಾನಶೆಟ್ಟಿ ಗೌಡಪ್ಪ, ಬಲಕುಂದಿ ಮಂಜುನಾಥ, ಉಳ್ಳಾಗಡ್ಡಿ ಕಳಕಪ್ಪ, ರಾಟಿ ವೀರಮ್ಮ, ಕವಲೂರ ವಿಜಯ ಕರೆಕುರಿ ಇತರರು ಮಾತನಾಡಿದರು.
ತೊದೇವಪ್ಪ ತೊಂಡಿಹಾಳ ಮುಂತಾದವರು ಉಪಸ್ಥಿತರಿದ್ದರು. ಡಾ.ಬಸವರಾಜ ಕುಕನೂರ ಅಧ್ಯಕ್ಷತೆ ವಹಿಸಿದ್ದರು. ವಿರುಪಾಕ್ಷಪ್ಪ ಉಳ್ಳಾಗಡ್ಡಿ ಪ್ರಾಸ್ತಾವಿಕವಾಗಿ ನುಡಿದರು. ನಿಖಿಲ್ ಗೊಂಗಡಶೆಟ್ಟಿ ಸ್ವಾಗತಿಸಿದರು. ಉಮೇಶ ಕುಕನೂರ ಪ್ರಾರ್ಥಿಸಿದರು.ಭೀಮಪ್ಪ ಹವಳಿ ನಿರೂಪಿಸಿ, ವಂದಿಸಿದರು.

ಪೊಲೀಸ್ ಇಲಾಖೆಯ ವಿಮರ್ಶನಾ ಸಭೆ



ಬಳ್ಳಾರಿ: ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಬೆಂಗಳೂರಿನ ಪೊಲೀಸ್ ಮಹಾನಿರ್ದೇಶಕ ಹಾಗೂ ಮಹಾ ನಿರೀಕ್ಷಕ ಡಾ.ಎಂ.ಎ.ಸಲೀಂ ಅವರು ಪೊಲೀಸ್ ಇಲಾಖೆಯ ಅಧಿಕಾರಿಗಳೊಂದಿಗೆ ಜಿಲ್ಲೆಯ ಪೊಲೀಸ್ ಇಲಾಖೆಯ ವಿಮರ್ಶನಾ ಸಭೆ ನಡೆಸಿದರು. ಈ ವೇಳೆ ಮಾತನಾಡಿದ ಅವರು, ಪೊಲೀಸ್ ಅಧಿಕಾರಿಗಳು ಬ್ರಷ್ಟಾಚಾರ ಮುಕ್ತ, ನಿಷ್ಪಕ್ಷಪಾತ, ಜನಸ್ನೇಹಿ ಪೊಲೀಸ್ ಆಗಿ ಕರ್ತವ್ಯ ನಿರ್ವಹಿಸಿ ಮಾದರಿಯಾಗಬೇಕು. ಅನುಭವಿ ಪೊಲೀಸ್ ಅಧಿಕಾರಿಗಳು ನೂತನವಾಗಿ ಇಲಾಖೆಗೆ ಸೇರ್ಪಡೆಯಾಗಿರುವ ಕಿರಿಯ ಸಹೋದ್ಯೋಗಿಗಳಿಗೆ ತಮ್ಮ ಅನುಭವವನ್ನು ತಿಳಿಸುವ ಮೂಲಕ ನೂತನ ಪೊಲೀಸರ ನೈಪುಣ್ಯತೆ ಹೆಚ್ಚಿಸಬೇಕು. ಪೊಲೀಸ್ ಇಲಾಖೆ ವ್ಯವಸ್ಥೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದ್ದು, ಅಧಿಕಾರಿಗಳು ಹಾಗೂ ಸಿಬ್ಬಂದಿ ನೂತನವಾಗಿ ಇಲಾಖೆಯಲ್ಲಿ ಅಳವಡಿಸಿಕೊಂಡ ತಂತ್ರಜ್ಞಾನದ ಕುರಿತು ಶಿಕ್ಷಿತರಾಗಿ, ತಂತ್ರಜ್ಞಾನವನ್ನು ಪ್ರಕರಣಗಳ ತನಿಖೆಯಲ್ಲಿ ಅಳವಡಿಕೊಳ್ಳಬೇಕು. ಕಾನೂನು ಸುವ್ಯವಸ್ಥೆ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ವಿಚಾರದಲ್ಲಿ ನಿರ್ಲಕ್ಷತೆ ಬೇಡ ಎಂದರು. ಇದಕ್ಕೂ ಮುನ್ನ ಪೊಲೀಸ್ ಅಧಿಕಾರಿಗಳಿಗೆ ಅಗತ್ಯ ಸಲಹೆ, ಸೂಚನೆಗಳನ್ನು ನೀಡಿದರು. ನಂತರ ನಗರದ ಡಿಎಆರ್ ಪೊಲೀಸ್ ವಸತಿ ಗೃಹಗಳ ಸಂಕಿರಣಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಗೂ ಕುಟುಂಬದ ಸದಸ್ಯರ ಕುಂದು ಕೊರತೆಗಳನ್ನು ಆಲಿಸಿ ಗಮನಸೆಳೆದರು. ನಂತರ ನಗರದ ಬ್ರೂಸ್ ಪೇಟೆ ಪೊಲೀಸ್ ಠಾಣೆಗೆ ಭೇಟಿ ನೀಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪೆನ್ನಕರ್, ಸೇರಿದಂತೆ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.



ಗಂಗಾವತಿ: ಭಾರತೀಯ ಜನತಾ ಪಾರ್ಟಿ ಸಂಸ್ಥಾಪನ ದಿನಾಚರಣೆ ಅಂಗವಾಗಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಅವರ ನಿವಾಸದ ಮೇಲೆ ಭಾರತೀಯ ಜನತಾ ಪಾರ್ಟಿಯ ಧ್ವಜಾರೋಹಣ ಮಾಡಿದರು. ಮಾಜಿ ನಗರ ಘಟಕ ಅಧ್ಯಕ್ಷ ಕಾಶಿನಾಥ್ ಚಿತ್ರಗಾರ, ಅಕ್ಕಿ ಚಂದ್ರಶೇಖರ್, ಸಂಗಯ್ಯ ಸಂತಿಮಠ, ಟಿ.ಆರ್.ರಾಯಬಾಗಿ, ರೇಖಾ ರಾಯಬಾಗಿ, ಚನ್ನಬಸವ ಸ್ವಾಮಿ ಕಲ್ಮಠ, ಮೋಹನ್ ಸಿಂಗ್, ಪರಶುರಾಮ್ ನಾಯಕ್, ಸಂಗಮೇಶ್ ಪತ್ತಾರ್, ಈರಣ್ಣ ನಾಗಲೀಕರ್ ಇತರರಿದ್ದರು.

ನಾಯಕತ್ವ ಗುಣ ಬೆಳೆಸಿಕೊಳ್ಳಿ: ಸಿದ್ದಾರೆಡ್ಡಿ

ಮಸ್ಕಿ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಹಾಗೂ ಸ್ಥಳೀಯ ಸಂಸ್ಥೆ ಸಹಯೋಗದಲ್ಲಿ ಬಯ್ಯಪೂರ ಮಹಾಂತಮ್ಮ ಲಿಂಗನಗೌಡ ಪ್ರಾಥಮಿಕ ಶಾಲೆ ಮತ್ತು ಜೋಗಿನ್ ರಾಮಣ್ಣ ಸ್ಮಾರಕ ಪ್ರೌಢ ಶಾಲೆಯಲ್ಲಿ ಭಾನುವಾರ ಕ್ಲಬ್ ಮತ್ತು ಬುಲ್-ಬುಲ್ಸ್ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಯಿತು.
ಈ ವೇಳೆ ಜೋಗಿನ್ ರಾಮಣ್ಣ ಶಾಲೆಯ ಮುಖ್ಯಗುರು ಸಿದ್ದಾರೆಡ್ಡಿ ಗಿಣಿವಾರ ಮಾತನಾಡಿ, ಬೇಸಿಗೆ ಶಿಬಿರಗಳಲ್ಲಿ ಸ್ಕೌಟ್ಸ್ ಪ್ರಾರ್ಥನೆ, ಧ್ವಜಗೀತೆ, ಇತಿಹಾಸ, ಗಂಟುಗಳು ಪ್ರಥಮ ಚಿಕಿತ್ಸೆ ಬಗ್ಗೆ ಮಾಹಿತಿ ನೀಡಿದರು. ಈ ಶಿಬಿರವು ಏ.7ರವರಗೆ ನಡೆಯಲಿದೆ. ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ವಿದ್ಯಾರ್ಥಿಗಳು ಕ್ಲಬ್ ಬುಲ್ ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.
ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ ಮಕ್ಕಳು ಆಸಕ್ತಿಯಿಂದ ಕಲೆ ಸಾಹಿತ್ಯ ಸಂಗೀತ, ಸಮಯ ಪ್ರಜ್ಞೆ ಶಿಸ್ತು ಸಂಯಮ ನಾಯಕತ್ವ ಗುಣಗಳನ್ನು ಹೊಂದಬೇಕು ಎಂದು ಹೇಳಿದರು.
ಬಸನಗೌಡ ಪಾಟೀಲ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಹಾಗೂ ದೈಹಿಕ ಶಿಕ್ಷಕ ಶಿವಪ್ಪ ಹಸಮಕಲ್, ಶ್ರೀನಿವಾಸರಾವ್ ಸುಗಂಧಿ, ಸಂತೋಷ ನಾಯಕ, ಶಿಲ್ಪಾ ಹಿರೇಮಠ, ಬಸವರಾಜ ಶೆಟ್ಟಿ ಶಿಕ್ಷಕರು, ಲಯನ್ಸ್ ಶಾಲೆಯ ಸ್ಕೌಟ್ಸ್ ಮಾಸ್ಟರ್ ಸತೀಶ ಪಾಟೀಲ್, ತಮನ್ನಾ, ಅದ್ವೈತಿ ಮತ್ತು ಅರ್ಚನಾ ಇತರರಿದ್ದರು.



ಮಸ್ಕಿ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಹಾಗೂ ಸ್ಥಳೀಯ ಸಂಸ್ಥೆ ಸಹಯೋಗದಲ್ಲಿ ಬಯ್ಯಪೂರ ಮಹಾಂತಮ್ಮ ಲಿಂಗನಗೌಡ ಪ್ರಾಥಮಿಕ ಶಾಲೆ ಮತ್ತು ಜೋಗಿನ್ ರಾಮಣ್ಣ ಸ್ಮಾರಕ ಪ್ರೌಢ ಶಾಲೆಯಲ್ಲಿ ಭಾನುವಾರ ಕ್ಲಬ್ ಮತ್ತು ಬುಲ್-ಬುಲ್ಸ್ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಯಿತು.

ಮುಂಗಾರು ಹಂಗಾಮಿನ ಪೂರ್ವ ಸಿದ್ಧತಾ ಸಭೆ | ಸಮದ್ ಪಟೇಲ್ ಹೇಳಿಕೆ

35,785 ಮೆ.ಟನ್ ಗೊಬ್ಬರ ದಾಸ್ತಾನು

ಕಲಬುರಗಿ: ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ, ಪ್ರಸಕ್ತಸಾಲಿನ ಮುಂಗಾರು ಹಂಗಾಮಿನಲ್ಲಿ ಕಲಬುರಗಿ ಜಿಲ್ಲೆಗೆ ಉತ್ತಮ ಮಳೆಯಾಗುವ ಸಂಭವವಿದ್ದು, ಜಿಲ್ಲೆಯಲ್ಲಿ ಡಿಎಪಿ, ಯೂರಿಯಾ ಹಾಗೂ ಇತರೆ ವಿವಿಧ ರೀತಿಯ ರಸಗೊಬ್ಬರ ಸೇರಿದಂತೆ ಒಟ್ಟು 35785 ಮೆ.ಟನ್ ದಾಸ್ತಾನು ಇದ್ದು, ಯಾವುದೇ ರೀತಿಯ ಕೊರತೆ ಇರುವುದಿಲ್ಲ ಎಂದು ಕಲಬುರಗಿ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಹೇಳಿದರು.
ಸೋಮವಾರ ಜಿಲ್ಲಾ ಪಂಚಾಯತ (ಹಳೆ) ಸಭಾಂಗಣದಲ್ಲಿ ಸೋಮವಾರ ಜಿಲ್ಲೆಯ ಕೃಷಿ ಪರಿಕರ ಮಾರಾಟಗಾರರೊಂದಿಗೆ 2026-27ನೇ ಸಾಲಿನ ಮುಂಗಾರು ಹಂಗಾಮಿನ ಪೂರ್ವ ಸಿದ್ದತಾ ಸಭೆ ಆಯೋಜಿಸಿ ಮಾತನಾಡಿ, ಅಧಿಕೃತ ರಸಗೊಬ್ಬರ ಮಾರಾಟಗಾರರು ಕಡ್ಡಾಯವಾಗಿ ಕೆ-ಕಿಸಾನ ತಂತ್ರಾಂಶದಲ್ಲಿ ರೈತರ ಎಫ್ಐಡಿ ನಮೂದಿಸಿ ಯೂರಿಯಾ ಮಾರಾಟ ಮಾಡಬೇಕು. ಒಂದು ವೇಳೆ 'ಓ' ಫಾರಂ ನವೀಕರಿಸದೆ ಮಾರಾಟ ಮಾಡಿದರೆ, ನಿಗದಿಪಡಿಸಿದ ಗರಿಷ್ಠ ಮಾರಾಟ ಬೆಲೆಗಿಂತ ಹೆಚ್ಚಿನ ದರಕ್ಕೆ ಮಾರಿದರೆ ಅಥವಾ ಕೃಷಿಯೇತರ ಉದ್ದೇಶಗಳಿಗೆ ಸರಬರಾಜು ಕಂಡುಬಂದಲ್ಲಿ ಮಾರಾಟಗಾರರ ವಿರುದ್ಧ ರಸಗೊಬ್ಬರ ನಿಯಂತ್ರಣ ಕಾಯ್ದೆ 1985 ಮತ್ತು ಅಗತ್ಯವಸ್ತುಗಳ ಕಾಯ್ದೆ 1955ರ ಅಡಿಯಲ್ಲಿ ನಿರ್ದಾಕ್ಷಿಣ್ಯ ಕ್ರಮಕ್ಕೆಗೊಳ್ಳಲಾಗುವುದು ಎಚ್ಚರಿಕೆ ನೀಡಿದರು.
ಸಭೆಯಲ್ಲಿ ಕಲಬುರಗಿ ವಿಭಾಗದ ಜಂಟಿಕೃಷಿನಿರ್ದೇಶಕ (ಜಾರಿದಳ)ರಾದ ಶಿವಕುಮಾರ ಪ್ರಸಾದ ಮಾತನಾಡಿ, ಜಿಲ್ಲೆಯ ಎಲ್ಲಾ ಕೃಷಿ ಪರಿಕರ ಮಾರಾಟಗಾರರು ಬೀಜ, ರಸಗೊಬ್ಬರ ಮತ್ತು ಕೀಟನಾಶಕ ಹೆಚ್ಚಿನ ಬೆಲೆಗೆ ಮಾರಾಟ ಮಾಡಬಾರದೆಂದು ಕಟ್ಟುನಿಟ್ಟಿನ ಸೂಚನೆಯನ್ನು ನೀಡಿದರು. ರೈತರಿಗೆ ಅನುಕೂಲವಾಗುವಂತೆ ಪ್ರತಿ ಬೀಜ, ಗೊಬ್ಬರ, ಕೀಟನಾಶಕಗಳ ದಾಸ್ತಾನು ಹಾಗೂ ದರಪಟ್ಟಿಯನ್ನು ತಮ್ಮ ತಮ್ಮ ಅಂಗಡಿಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕು. ದಾಸ್ತಾನು ರಜಿಸ್ಟರ್ ಬರೆಯುವುದು. ರಜಿಸ್ಟರ್ನಲ್ಲಿರುವ ದಾಸ್ತಾನಕ್ಕೂ ಭೌತಿಕ ದಾಸ್ತಾನಕ್ಕೂ ಸರಿ ಹೊಂದುವಂತಿರಬೇಕು. ಕಡ್ಡಾಯವಾಗಿ ಪಾಯಿಂಟ್ ಆಫ್ ಸೇಲ್ ಮಶೀನ್ (ಪಾಸ್ ಮಶೀನ) ಬಳಕೆಮಾಡಿ ರಸಗೊಬ್ಬರ ಮಾರಾಟ ಮಾಡಬೇಕು ಎಂದರು.
ಕಲಬುರಗಿ ವಿಭಾಗದ ಉಪ ಕೃಷಿ ನಿರ್ದೇಶಕ (ಜಾರಿದಳ) ರಾದ ಮೃತ್ಯುಂಜಯ ಪತಂಗೆ, ಕಲಬುರಗಿ ಜಿಲ್ಲೆಯಎಲ್ಲಾಸಹಾಯಕಕೃಷಿನಿರ್ದೇಶಕರು,ಸಹಾಯಕ ಕೃಷಿ ನಿರ್ದೇಶಕರು, (ಜಾರಿದಳ), ಕಲಬುರಗಿ, ಕೃಷಿ ಅಧಿಕಾರಿಗಳು, ಜಿಲ್ಲೆಯ ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷರು, ಪಧಾದಿಕಾರಿಗಳು ಹಾಗೂ ಜಿಲ್ಲೆಯ ಕೃಷಿ ಪರಿಕರ ವಿತರಕರು ಉಪಸ್ಥಿತರಿದ್ದರು.



ಕಾಯ್ದೆ ಪಾಲನೆಯಾಗಲಿ

ರೈತರ ಸಹಿ ಪಡೆದು ಅವರಿಗೆ ಕಡ್ಡಾಯವಾಗಿ ರಸೀದಿ ಕೊಡಬೇಕು. ರಸಗೊಬ್ಬರ ನಿಯಂತ್ರಣ ಆದೇಶ, ಬೀಜಕಾಯ್ದೆ ಮತ್ತು ನಿಯಮಗಳು ಸೇರಿದಂತೆ ಕೃಷಿಪರಿಕರ ಮಾರಾಟಕ್ಕೆ ಸಂಬಂಧಿಸಿದ ಕಾಯ್ದೆಗಳನ್ನು ಪಾಲನೆ ಮಾಡುವ ಮೂಲಕ ಮಾರಾಟಗಾರರು ತಮ್ಮ ವಹಿವಾಟು ನಡೆಸುವಂತೆ ತಿಳಿಸಲಾಯಿತು.

ಎ.ಎ.ಡಿ.ಮತ್ತು ಯೂರಿಯಾ ರಸಗೊಬ್ಬರಕ್ಕೆ ಪರ್ಯಾಯವಾಗಿ ತೊಗರಿ, ಉದ್ದು, ಹೆಸರು, ಹತ್ತಿ ಮತ್ತು ಕಬ್ಬು ಬೆಳೆಗೆ ಗಂಧಕ ಅಂಶ ಒದಗಿಸುವ ಸಂಯುಕ್ತ ರಸಗೊಬ್ಬರಗಳಾದ 20:20:0:13 ಹಾಗೂ ಸಮತೋಲನ ಪೋಷಕಾಂಶ ನೀಡುವ ಭೂಮಿಯ ಆರೋಗ್ಯಕ್ಕೆ ಹಿತವಾದ ಸಂಯುಕ್ತಗೊಬ್ಬರಗಳಾದ 14:35:14, 15:15:15, 10:26:26, 12:32:16, 22:22:11, 14:35:14, 17:17:17, 14:28:14, 19:19:19, 20:10:10, 15:15:15, 15:15:15:9(ಎಸ್) ಇತ್ಯಾದಿ ರಸಗೊಬ್ಬರಗಳನ್ನು ಬಳಸಬೇಕು.
■ ಸಮದ್ ಪಟೇಲ್, ಜಂಟಿ ಕೃಷಿ ನಿರ್ದೇಶಕ

ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅನನ್ಯ

ಕುಷ್ಟಗಿ: ಗುರುಗಳ ಸೇವೆ, ತ್ಯಾಗ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಅಮೂಲ್ಯ ಕೊಡುಗೆಯನ್ನು ಸ್ಮರಿಸುವ ಉದ್ದೇಶದಿಂದ ತಾಲೂಕಿನ ಕೇಸೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2005-06ನೇಯ ಸಾಲಿನ 7ನೇಯ ತರಗತಿ ವಿದ್ಯಾರ್ಥಿಗಳು ಆಯೋಜಿಸಿದ್ದ ಗುರುವಂದನಾ ಸ್ನೇಹ ಸಮ್ಮಿಲನ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು.
ಚಂದ್ರಶೇಖರ ದೇವರು ಹಾಗೂ ನಿವೃತ್ತ ಶಿಕ್ಷಕರು ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.
ನಿವೃತ್ತ ಶಿಕ್ಷಕರು ನಿವೃತ್ತ ಹಾಗೂ ಸೇವೆಯಲ್ಲಿರುವ ಗುರುಗಳಿಗೆ ಶಾಲು ಹೊದಿಸಿ, ಹೂಮಾಲೆ ಹಾಕಿ, ನೆನಪಿನ ಕಾಣಿಕೆ ಕೊಡುವ ಮೂಲಕ ಸನ್ಮಾನಿಸಿ ಗೌರವಿಸಿ ಗುರುಗಳಿಗೆ ಗೌರವ ಸಲ್ಲಿಸಿ ಹಳೆಯ ವಿದ್ಯಾರ್ಥಿಗಳು ತಮ್ಮ ಗುರುಗಳ ಪಾದಸ್ಪರ್ಶ ಮಾಡಿ ಕೃತಜ್ಞತೆ ಸಲ್ಲಿಸಿದರು.
ನಿವೃತ್ತ ಪ್ರಾಚಾರ್ಯ ಆದಪ್ಪ ಸಾಲವಾಡಗಿ ಮಾತನಾಡಿ, ಗುರುಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಶಿಲ್ಪಿಗಳು ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅನನ್ಯವಾಗಿದೆ ಎಂದು ಹೇಳಿದರು.
ಸನ್ಮಾನಿತ ಗುರುಗಳು ಮಾತನಾಡಿ ನಮ್ಮ ಕೈನಲ್ಲಿ ಕಲಿತಿರುವ ವಿದ್ಯಾರ್ಥಿಗಳ ಸಾಧನೆಯೇ ಶಿಕ್ಷಕರಿಗೆ ನಿಜವಾದ ಗೌರವವಾಗಿದೆ ವಿದ್ಯಾರ್ಥಿಗಳು ಸಮಾಜಕ್ಕೆ ಉತ್ತಮ ನಾಗರಿಕರಾಗಿ ಬೆಳೆವುದೇ ನಮ್ಮ ಆಶಯ ಎಂದು ಹೇಳಿದ ಅವರು ಇಂತಹ ಕಾರ್ಯಕ್ರಮಗಳು ಗುರು-ಶಿಷ್ಯರ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ ಎಂದರು.
ಹಳೆ ವಿದ್ಯಾರ್ಥಿಗಳಾದ ನಾಗರಾಜ ಚವ್ಹಾಣ, ಶರಬಣ್ಣ ಆಲ್ವಿ, ವನಜಾಶ್ರೀ ಮಳಿಮಠ ಇತರರು ಮಾತನಾಡಿ ಗುರುಗಳು ನಮಗೆ ಪಾಠ ಮಾತ್ರವಲ್ಲ ಜೀವನ ಮೌಲ್ಯಗಳನ್ನು ಕಲಿಸುತ್ತಾರೆ ಇಂದು ಗುರುಗಳನ್ನು ಸನ್ಮಾನಿಸುವ ಅವಕಾಶ ದೊರೆತಿರುವುದು ನಮ್ಮ ಪಾಲಿಗೆ ಹೆಮ್ಮೆಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.
ನಿವೃತ್ತ ಶಿಕ್ಷಕ ಗಂಗಪ್ಪ ನಿರಲಕೇರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು, ಹನಮಂತಪ್ಪ ಪೂಜಾರ, ಶಿವಾನಂದ ಹೂಗಾರ, ಚಂದ್ರಶೇಖರ ಕಿರಗಿ, ಚಿದಾನಂದಕಸ್ತೂರಿ, ಲಕ್ಷ್ಮಣಬಾಗೇವಾಡಿ, ಕೃಷ್ಣಾ ಗೋಡಚೋಲೆ, ಕಸ್ತೂರಿ ಕಂಪಾಪೂರಮಠ, ಬಸನಗೌಡ ಪಾಟೀಲ, ಪುಷ್ಪಾವತಿ ಹಿರೇಮಠ, ರತ್ನಾ ಕುಲಕರ್ಣಿ, ಅಂಬಿಕಾ ಹೊಸಮನಿ, ವಿಮಲಾ ನಿಡಶೇಸಿ, ನಾಗರಾಜ ನಿಡಗುಂದಿ, ವಸಂತಕುಮಾರ ಮಾಳಗಿ, ವಿರೇಶ ಕರಡಕಲ್, ಹೇಮಾವತಿ ಗೋಪಾಲನಾಯಕ ಸೇರಿದಂತೆ ಹಳೆ ವಿದ್ಯಾರ್ಥಿಗಳು ಇದ್ದರು.



ಶೂನ್ಯ ಪೀಠಾರೋಹಣ ಕಾರ್ಯಕ್ರಮ

ಮಾನ್ವಿ: ತಾಲೂಕಿನ ಆಡವಿ ಆಮರೇಶ್ವರ ಗ್ರಾಮದಲ್ಲಿನ ಸುವರ್ಣಗಿರಿ ವಿರಕ್ತಮಠ ಶ್ರೀಆಡವಿ ಆಮರೇಶ್ವರ ಮಠದಲ್ಲಿ 72ನೇ ಜಾತ್ರ ಮಹೋತ್ಸವದ ಅಂಗವಾಗಿ ನಡೆದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಜೀವನದರ್ಶನ ಪ್ರವಚನ ಕಾರ್ಯಕ್ರಮದಲ್ಲಿನ ಪ್ರಸಂಗದಂತೆ ಸುವರ್ಣಗಿರಿ ವಿರಕ್ತಮಠ ಒಳಬಳ್ಳಾರಿಯ ಶ್ರೀಡಾ.ಸಿದ್ದಲಿಂಗ ಮಹಾಸ್ವಾಮಿಗಳು ಶೂನ್ಯ ಪೀಠರೋಹಣವನ್ನು ಮಾಡಿ ಧರ್ಮ ಸಂದೇಶವನ್ನು ನೀಡಿದರು.
12ನೇ ಶತಮಾನದಲ್ಲಿ ಬಸವಣ್ಣನವರು ಶೂನ್ಯ ಪೀಠದ ಪರಿಕಲ್ಪನೆಯನ್ನು ನೀಡಿ ಅಲ್ಲಮ ಪ್ರಭುಗಳನ್ನು ಪ್ರಥಮ ಅಧ್ಯಕ್ಷರನ್ನಾಗಿ ಮಾಡಿದರು. ಶೂನ್ಯ ಪೀಠಾರೋಹಣ ಮಾಡಬೇಕಾದರೆ ಸಾಧಕರು ಮೊದಲು ಷಟ್ ಸ್ಥಲಗಳಾದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣರಾದ ಮೇಲೆ ಐಕ್ಯ ಸ್ಥಳವನ್ನು ತಲುಪಿದಾಗ ಮಾತ್ರ ಶೂನ್ಯ ಪೀಠವನ್ನು ತಲುಪುವುದಕ್ಕೆ ಸಾಧ್ಯವಾಗುತ್ತದೆ ಆಗ ಗುರು ಮುಟ್ಟಿ ಗುರುವಾಗುವುದಕ್ಕೆ ಸಾಧ್ಯವಾಗುವುದು ವೀರಶೈವ ಲಿಂಗಾಯತ ಸಮಾಜದಲ್ಲಿ ಮಾತ್ರ ಸಾಧ್ಯವಾಗುತ್ತದೆ. ಸುವರ್ಣಗಿರಿ ವಿರಕ್ತಮಠ ಒಳಬಳ್ಳಾರಿಯ ಲಿಂ. ಶ್ರೀಚನ್ನಬಸವ ಶಿವಯೋಗಿಗಳು ಮಹಾನ್ ತಪಸ್ವಿಗಳಾಗಿದ್ದರು ಅವರು ನಡೆದಾಡಿದ ಸ್ಥಳಗಳೇಲ್ಲವು ಇಂದು ಪುಣ್ಯಕ್ಷೇತ್ರಗಳಾಗಿವೇ ಶ್ರೀ ಕ್ಷೇತ್ರದಲ್ಲಿ ಶ್ರೀಗಳು ಕಾಶಿಯಿಂದ ತಂದ ಲಿಂಗವನ್ನು ಪ್ರತಿಷ್ಠಾಪಿಸಿ ತಮ್ಮ ತಪಸ್ಸಿನಿಂದ ಪಡೆದ ಶಕ್ತಿಯನ್ನು ಧಾರೆಯೆರೆಯುವ ಮೂಲಕ ಜಾಗೃತ ಕ್ಷೇತ್ರವಾಗಿಸಿದ್ದಾರೆ. ಭಕ್ತರು ಶ್ರೀ ಆಡವಿ ಆಮರೇಶ್ವರ ಲಿಂಗದ ದರ್ಶನ, ಪೂಜೆ ಮಾತ್ರದಿಂದಲೇ ಇಷ್ಟಾರ್ಥಗಳನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಿದೆ. ಶಿವಯೋಗದ ಗಾಳಿ ಬಂದಿದೆ ತುರಿಕೊಂಡವರು ಒಳ್ಳೆ ಆಚಾರವಂತರಾಗಿ, ಜ್ಞಾನವಂತರಾಗಿ, ಸಂಸ್ಕಾರವಂತರಾಗಿ ತಮ್ಮ ಜೀವನವನ್ನು ಸಾಗಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಬೂದುಗುಂಪ ಶ್ರೀಸಿದ್ದೇಶ್ವರ ಮಹಾಸ್ವಾಮಿಗಳು ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಜೀವನದರ್ಶನ ಪ್ರವಚನ ನೀಡಿದರು. ಸಂಗೀತವನ್ನು ಅಮರೇಶ ಸಾಲಿಮಠ ಗವಾಯಿಗಳು ನೀಡಿದರು. ಸುವರ್ಣಗಿರಿ ವಿರಕ್ತಮಠ ಒಳ್ಳಬಳ್ಳಾರಿಯ ಕಿರಿಯ ಶ್ರೀಗಳಾದ ಬಸವಲಿಂಗ ಮಹಾಸ್ವಾಮಿಗಳು, ಸುವರ್ಣಗಿರಿ ವಿರಕ್ತಮಠ ಶ್ರೀ ಅಡವಿ ಅಮರೇಶ್ವರ ಮಠದ ಶ್ರೀ ತೊಂಟದಾರ್ಯ ಮಹಾಸ್ವಾಮಿಗಳು, ಹೊಸಪೇಟೆಯ ಶ್ರೀಸಿದ್ದಲಿಂಗದೇವರು ಸೇರಿದಂತೆ ಶ್ರೀಮಠದ ಭಕ್ತರು ಭಾಗವಹಿಸಿದರು.



ಬಿಜೆಪಿ ಸಂಘಟನೆಗೆ ಶ್ರಮಿಸಿದ ಹಿರಿಯರನ್ನು ಸ್ಮರಿಸಿ

ಯಲಬುರ್ಗಾ: ನಗರದ ಬೂತ್ ನಂಬರ್ 79 ಅಧ್ಯಕ್ಷರ ಮನೆ ಮೇಲೆ ಬಿಜೆಪಿ ಪಕ್ಷದ ಧ್ವಜಾರೋಹಣ ಮಾಡುವ ಮುಖಾಂತರ ಬಿಜೆಪಿ ಪಕ್ಷದ ಸಂಸ್ಥಾಪನೆ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.
ಈ ವೇಳೆಯಲ್ಲಿ 79 ಬೂತ್‌ನಲ್ಲಿ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ಸಂತೋಷಮಾ ಜೋಶಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಾರತೀಯ ಜನತಾ ಪಕ್ಷ (ಬಿಜೆಪಿ) ಏಪ್ರಿಲ್ 6,1980ರಂದು ಸ್ಥಾಪನೆಯಾಯಿತು. ಅಟಲ್ ಬಿಹಾರಿ ವಾಜಪೇಯಿ ಅವರು ಪಕ್ಷದ ಮೊದಲ ಅಧ್ಯಕ್ಷರಾಗಿ ಆಯ್ಕೆಯಾದರು. ಇದು 1951ರಲ್ಲಿ ಶ್ಯಾಮಪ್ರಸಾದ ಮುಖರ್ಜಿ ಸ್ಥಾಪಿಸಿದ ಭಾರತೀಯ ಜನಸಂಘದ (ಬಿಜೆಎಸ್) ಉತ್ತರಾಧಿಕಾರಿ ಪಕ್ಷವಾಗಿದೆ. ಜನತಾ ಪಾರ್ಟಿಯ ದ್ವಿತೀಯ ಸದಸ್ಯತ್ವದ ವಿವಾದದ ನಂತರ ಜನಸಂಘದ ನಾಯಕರು ಪ್ರತ್ಯೇಕಗೊಂಡು ಬಿಜೆಪಿಯನ್ನು ಹುಟ್ಟುಹಾಕಿದರು ಎಂದರು.
ಬಿಜೆಪಿ ಪಕ್ಷದ ಪ್ರಧಾನ ಕಾರ್ಯದರ್ಶಿ ಅಂಬರೀಶ್ ಹುಬ್ಬಳ್ಳಿ, ಜೆಡಿಎಸ್ ಪಕ್ಷದ ತಾಲೂಕಾಧ್ಯಕ್ಷ ಬಸವರಾಜ ಗುಳಗುಳಿ, ಬಿಜೆಪಿ ಪಕ್ಷದ ಕಲ್ಲೇಶಪ್ಪ ಯುವ ಮೋಚಾಧ್ಯಕ್ಷ ಕಲ್ಲೇಶ ಕರಮುಡಿ ಹಾಗೂ ಪಪಂ ಮಾಜಿ ಸದಸ್ಯ ಕಳಕಪ್ಪ ತಳವಾರ ಮಾತನಾಡಿ, ರಾಷ್ಟ್ರೀಯ ಚಿಂತನೆಗಳ ಮೂಲಕ ಅಭಿವೃದ್ಧಿಯ ಪಥಕ್ಕೆ ನಾಂದಿ ಹಾಡಿದ ಪಕ್ಷದ ಹಿರಿಯರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕಿದೆ. ತಳಮಟ್ಟದಿಂದ ಪಕ್ಷವನ್ನು ಬಲಪಡಿಸುತ್ತಿರುವ ಎಲ್ಲ ಕಾರ್ಯಕರ್ತರ ಪರಿಶ್ರಮವನ್ನು ಎಲ್ಲರೂ ಗೌರವಿಸಬೇಕು ಎಂದರು. ದೊಡ್ಡಯ್ಯ ಗುರುವಿನ್, ಶರಣೇಶ್ ಉಳ್ಳಾಗಡ್ಡಿ, ಪರಶುರಾಮ್ ಚೌಹಾಣ್, ಮಲ್ಲಪ್ಪ ಸುರಕೋಡ್, ಚಂದ್ರು ಮರದಡ್ಡಿ, ಮೈಲಾರಪ್ಪ ವಾಲ್ಮೀಕಿ, ಈಶಪ್ಪ ಹುಬ್ಬಳ್ಳಿ, ಮಹಿಳಾ ಪದಾಧಿಕಾರಿಗಳಾದ ಶೀತಲ್ ದೇಸಾಯಿ, ಸವಿತಾ ಮುರಡಿಮಠ್, ರೇಖಾ ಆಯ್ಯನಗೌಡ್ರ, ಲಲಿತಾ ಭಾಸ್ಕರ್ ಹಾಗೂ ಪಕ್ಷದ ಕಾರ್ಯಕರ್ತರು ಇದ್ದರು.



ಡಾ.ಬಾಬೂಜಿ ಜಯಂತಿ ಆಚರಣೆ

ಸಿಂಧನೂರು: ಪಟ್ಟಣದಲ್ಲಿ ಭಾನುವಾರ ತಾಲೂಕು ಆಡಳಿತ, ನಗರಸಭೆ, ತಾಪಂ, ಸಮಾಜ ಕಲ್ಯಾಣ ಇಲಾಖೆ ಮತ್ತು ಮಾದಿಗ ಸಂಘಟನೆಗಳ ವತಿಯಿಂದ ಆಯೋಜಿಸಿದ್ದ ಡಾ.ಬಾಬು ಜಗಜೀವನ ರಾಂ ಅವರ 119ನೇ ಜಯಂತ್ಯುತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು.
ನಗರದ ಬಪ್ಪೂರ ರಸ್ತೆಯಲ್ಲಿರುವ ಡಾ.ಬಾಬು ಜಗಜೀವನ ರಾಂ ವೃತ್ತದಲ್ಲಿ ಅವರ ಭಾವಚಿತ್ರಕ್ಕೆ ತಹಶೀಲ್ದಾರ್ ಅರುಣ್‌ಕುಮಾರ್ ಎಚ್.ದೇಸಾಯಿ ಅವರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.
ಈ ಜಯಂತಿ ಆಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸಾರೋಟದಲ್ಲಿರುವ ಡಾ.ಬಾಬು ಜಗಜೀವನ ರಾಮ್ ಅವರ ಭಾವಚಿತ್ರದ ಭವ್ಯ ಮೆರವಣಿಗೆಗೆ ಶಾಸಕ ಹಂಪನಗೌಡ ಬಾದರ್ಲಿ ಅವರು ಚಾಲನೆ ನೀಡಿದರು.
ನಂತರ ಶಂಕರ್ ಟ್ರಸ್ಟ್ ಕಾಲೇಜಿನ ಉಪಪ್ರಾಚಾರ್ಯ ಶಿವರಾಜ ವಿಶೇಷ ಉಪನ್ಯಾಸ ನೀಡಿದರು.
ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ದೊಡ್ಡಬಸವರಾಜ, ಆರ್‌ಕೆಡಿಸಿಸಿ ಬ್ಯಾಂಕ್ ನಿರ್ದೇಶಕ ಪಂಪನಗೌಡ ಬಾದರ್ಲಿ, ಆರ್‌ಕೆಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ, ತಾಪಂ ಮಾಜಿ ಸದಸ್ಯ ಚಂದ್ರು ಭೂಪಾಲ ನಾಡಗೌಡ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವೈ.ಅನಿಲಕುಮಾರ, ಖಾಜಿ ಮಲಿಕ್ ವಕೀಲ, ನಿರುಪಾದೆಪ್ಪ ಗುಡಿಹಾಳ ವಕೀಲ, ತಾಪಂ ಇಒ ಚಂದ್ರಶೇಖರ, ನಗರಸಭೆ ಪೌರಾಯುಕ್ತ ಪಾಂಡುರಂಗ ಇಟಗಿ, ಡಿವೈಎಸ್ಪಿ ಚಂದ್ರಶೇಖರ ನಾಯಕ, ಸಿಡಿಪಿಒ ಇಲಾಖೆಯ ಅಧಿಕಾರಿಗಳಾದ ಅಶೋಕ ಎಂ., ಲಿಂಗನಗೌಡ, ಬಿಸಿಎಂ ಅಧಿಕಾರಿ ಲಿಂಗಪ್ಪ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರ ಶೇಖರ ಹಿರೇಮಠ, ಎಚ್.ಎನ್. ಬಡಿಗೇರ್, ಅಲ್ಲಮಪ್ರಭು, ಆರ್.ಅಂಬೋಸ್, ಮರಿಯಪ್ಪ ಜಾಲಿಹಾಳ, ರಾಮಣ್ಣ ಸಾಸಲಮರಿ, ಅಮರೇಶ ಗಿರಿಜಾಲಿ, ಪಂಪಾಪತಿ ಹಂಚಿನಾಳ, ಕೆ.ಮರಿಯಪ್ಪ, ಯಮನಪ್ಪ, ಸುಭಾಸ್ ಫ್ರಾಂಕ್ಲಿನ್, ನರಸಪ್ಪ ಕಟ್ಟಿಮನಿ, ಹನುಮಂತಪ್ಪ ಗೋಮರ್ಸಿ, ಮಹಾದೇವಪ್ಪ ದುಮತಿ, ನಾಗರಾಜ ಸಾಸಲಮರಿ, ನಿರುಪಾದಿ ಸಾಸಲಮರಿ, ಪ್ರವೀಣ್ ದುಮತಿ ಉಪಸ್ಥಿತರಿದ್ದರು.



'ಬಸವಗೀತೆ'ಯಲ್ಲಿ ಬಸವಣ್ಣರ ವಚನಗಳ ವಿಶ್ಲೇಷಣೆ

ಕೊಪ್ಪಳ: ಲೇಖಕ ಬಸವರಾಜ ಸ್ವಾಮಿ ವಿರಚಿತ 'ಬಸವಗೀತೆ' ಗ್ರಂಥದಲ್ಲಿ ವಿಶ್ವ ಮಾನವ ಬಸವಣ್ಣ ಅವರ ವಚನಗಳ ವಿಶ್ಲೇಷಣೆ ಇದೆ. ಶ್ರೇಷ್ಠ ವಚನಗಳ ಮೇಲೆ ಬೆಳಕು ಚೆಲ್ಲಿದ್ದಾರೆ ಎಂದು ಮಾಜಿ ಶಾಸಕ ಪರಣ್ಣ ಮುನವಳ್ಳಿ ಹೇಳಿದರು.
ಗಂಗಾವತಿ ನಗರದ ಜಯ ನಗರದಲ್ಲಿನ ಶ್ರೀಗಂಗಾಧರೇಶ್ವರ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ 'ಬಸವಗೀತೆ' ಗ್ರಂಥ ಲೋಕಾರ್ಪಣೆ ಮಾಡಿ ಮಂಗಳವಾರ ಮಾತನಾಡಿದರು.
ಬಸವರಾಜ ಸ್ವಾಮಿ ಅವರ 'ಬಸವಗೀತೆ' ಎಂಬ ಗ್ರಂಥ ತನು, ಮನ ಹಾಗೂ ಅರಿವು ಎಂಬ ಮೂರು ತತ್ವಗಳ ಮೇಲೆ ನಿಂತಿವೆ. ಜ್ಞಾನಕ್ಕಿಂತ ಅರಿವಿನ ಕಡೆ ಹೆಚ್ಚು ಒಲವು ಹೊಂದಿದ್ದಾರೆ. ಈ ಕೃತಿ ಬಸವಣ್ಣ ಅವರ ವಿಚಾರಧಾರೆಗಳನ್ನು ಇಂದಿನ ಪೀಳಿಗೆಗೆ ತಲುಪಿಸುವ ನಿಟ್ಟಿನಲ್ಲಿ ಮಹತ್ವದ ಕಾರ್ಯ ಮಾಡುತ್ತದೆ ಎಂದರು.
ಶ್ರೀಕೊಲ್ಲಿನಾಗೇಶ್ವರರಾವ್ ಗಂಗಯ್ಯ ಸರ್ಕಾರಿ ಪದವಿ ಕಾಲೇಜು ಪ್ರಾಚಾರ್ಯ ಡಾ.ಶಿವರಾಜ ಗುರಿಕಾರ ಮಾತನಾಡಿ, ಒಟ್ಟು 1571 ಪುಟಗಳ ವ್ಯಾಪ್ತಿಯ 959 ವಚನ ಉಳ್ಳ ಕೃತಿಯಲ್ಲಿ ಬಸವಣ್ಣ ಹಾಗೂ ಆತನ ಸಮಕಾಲೀನ ಶರಣರು ನಡೆಸಿದ ಪ್ರಶ್ನೋತ್ತರಗಳಿವೆ. ಬದುಕಿನ ಸಮಸ್ಯೆಗಳಿವೆ. ಸೂಕ್ತ ಪರಿಹಾರ ಒದಗಿಸುವಂತಿವೆ. ಓದುಗರೊಡನೆ ಅನುಶೀಲನೆ ಮಾಡಿ ಬಿಡುವುಕೊಟ್ಟು ಮತ್ತೊಂದು ವಿಷಯದ ಕಡೆಗೆ ಎಳೆದೊಯ್ಯುವಂತಿದೆ. ಬಸವಣ್ಣ ಹಾಗೂ ಆತನ ಸಮಕಾಲೀನರು ಪರಸ್ಪರ ನಡೆಸಿರುವ ಸತ್ಯ ಸಂವಾದ ಬಹಳ ಅಪರೂಪವಾಗಿದ್ದರೆ, ಮಾಂತ್ರಿಕ, ವಾಸ್ತವಿಕ ಬಳಸಿರುವ ಈ ಕೃತಿಯಲ್ಲಿ ಹೊಸ ಪ್ರಯೋಗ ಅಡಕವಾಗಿದೆ ಎಂದರು.
ಕಲ್ಮಠದ ಶ್ರೀಚನ್ನಬಸವಸ್ವಾಮಿ ಮಹಿಳಾ ಪದವಿ ಕಾಲೇಜು ಪ್ರಾಚಾರ್ಯ ಡಾ.ಶರಣಬಸಪ್ಪ ಕೋಲ್ಕಾರ, ಡಾ.ರಾಜಶೇಖರ ನಾರನಾಳ, ಸಾಹಿತಿಗಳಾದ ರುದ್ರಮ್ಮ ಅಮರೇಶಪ್ಪ ಹಾಸಿನಾಳ, ಪವನಕುಮಾರ ಗುಂಡೂರು, ಎ.ಕೆ. ಮಹೇಶಕುಮಾರ, ನಾಗಭೂಷಣ ಅರಳಿ, ಡಾ.ಬಸವರಾಜ ಗೌಡನಭಾವಿ, ಡಾ.ಶಿವಕುಮಾರ ಮಾಲಿ ಪಾಟೀಲ್ ಮಾತನಾಡಿದರು.
ಕಸಾಪ ಜಿಲ್ಲಾಧ್ಯಕ್ಷ ಶರಣೇಗೌಡ ಮಾಲಿ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕಿ ವಿಜಯಲಕ್ಷ್ಮಿ, ಡಾ.ರಾಜಶೇಖರ ನಾರನಾಳ ಪ್ರಾರ್ಥಿಸಿದರು. ತಾಲೂಕು ಕಸಾಪದ ಗೌರವ ಕಾರ್ಯದರ್ಶಿಗಳಾದ ರಮೇಶ ಬಾಳೇಕಾಯಿ ಸ್ವಾಗತಿಸಿದರು. ಶಿವಾನಂದ ತಿಮ್ಮಾಪುರ ನಿರೂಪಿಸಿದರು.
ಸುರೇಶ ಕಲಾಪ್ರಿಯ ವಂದಿಸಿದರು. ಕಸಾಪ ತಾಲೂಕಾಧ್ಯಕ್ಷ ರುದ್ರೇಶ ರ‍್ಯಾಳ್, ಶ್ರೀಗಂಗಾಧರೇಶ್ವರ ದೇವಾಲಯ ಸೇವಾ ಸಮಿತಿ ಗೌರವಾಧ್ಯಕ್ಷ ರುದ್ರಗೌಡ ಪಾಟೀಲ್, ಅಧ್ಯಕ್ಷ ಸೋಮಶೇಖರ ಕಂಪ್ಲಿ ಇದ್ದರು. ಬಸವ ದಳ, ಬಸವ ಕೇಂದ್ರ, ಬಸವ ಬಳಗ, ಶರಣ ಸಾಹಿತ್ಯ, ಬಸವ ಅನುಯಾಯಿಗಳು, ಸಾಹಿತಿಗಳು, ಕವಿಗಳು, ಸಾಹಿತಾಸಕ್ತರು ಭಾಗವಹಿಸಿದ್ದರು.



ಡಾ.ಬಾಬೂಜಿ ಹಾಕಿ ಕೊಟ್ಟ ಮಾರ್ಗದಲ್ಲಿ ಸಾಗಿ

ಕುಕನೂರ: ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ್ ರಾಮ್ ಅವರು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಯುವಕರು ಸಾಗಿ ರಾಜಕೀಯದಲ್ಲಿ ಮುಂದೆ ಬರಬೇಕು ಎಂದು ಮಾಜಿ ತಾಪಂ ಉಪಾಧ್ಯಕ್ಷ ಕಳಕಪ್ಪ ಕಂಬಳಿ ಹೇಳಿದರು.
ಪಟ್ಟಣದ ಅಂಬೇಡ್ಕರ್ ವೃತ್ತದ ಬಳಿ ಬಾಬು ಜಗಜೀವನ್ ರಾಮ್ ರವರ 119ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂದು ಜಗಜೀವನ್ ರಾಮ್ ರವರು ಹಲವು ಕಷ್ಟಗಳನ್ನು ಅನುಭವಿಸಿ ಅನೇಕ ಸವಾಲುಗಳನ್ನು ಎದುರಿಸಿ ಸಮಾಜದಲ್ಲಿ ತಮ್ಮದೇ ಆದ ಸ್ಥಾನ ಪಡೆದುಕೊಂಡರು, ದೇಶದ ಉನ್ನತ ಹುದ್ದೆ ಉಪ ಪ್ರಧಾನ ಮಂತ್ರಿ ಸ್ಥಾನ ಅಲಂಕರಿಸಿ ಹಸಿರು ಕ್ರಾಂತಿ ಹರಿಕಾರರಾಗಿ ಖ್ಯಾತಿ ಪಡೆದರು. ಅವರು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಇಂದಿನ ಯುವಕರು ಸಾಗಬೇಕು. ರಾಜಕೀಯದಲ್ಲಿ ಬೆಳೆದು ಮುಂದೆ ಬರಬೇಕು, ಒಗ್ಗಟಾಗಿ ಇದ್ದು ಪ್ರತಿಯೊಬ್ಬ ಮಹಾನ್ ನಾಯಕರ ಆದರ್ಶಗಳನ್ನೂ ಪಾಲಿಸಬೇಕು,
ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಅಧಿಕಾರ ದೊರಕಬೇಕು ಎಂದು ಹೇಳಿದರು.
ನಂತರ ತಹಶೀಲ್ದಾರ್ ಬಸವರಾಜ ಬೆಣ್ಣೆಶಿರೂರು ಮಾತನಾಡಿ, ಬಾಬು ಜಗಜೀವನ್ ರಾಂ ಅವರ ಆದರ್ಶ ಸಿದ್ಧಾಂತಗಳನ್ನು ಪ್ರತಿಯೊಬ್ಬರು ಪಾಲಿಸಿಕೊಂಡು ಬರಬೇಕು. ಜಗಜೀವನ ರಾಂ ಅವರು ತಮ್ಮ ಅಧಿಕಾರಾವಧಿಯಲ್ಲಿ ದೇಶಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಅಂತಹ ಮಹಾನ್ ನಾಯಕರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಿ ಅವರಿಗೆ ಗೌರವ ಸಲ್ಲಿಸಬೇಕು ಎಂದು ಹೇಳಿದರು.
ಪಪಂ ಅಧ್ಯಕ್ಷರಾದ ಲೀಲಾವತಿ ಮುಧೋಳ ಉಪಾಧ್ಯಕ್ಷರಾದ ಮಂಜುಳಾ ಕಲ್ಮನಿ ತಾಪಂ ಇಒ ಸಂತೋಷ ಪಾಟೀಲ ಬಿರಾದಾರ್, ಸಮಾಜ ಕಲ್ಯಾಣ ಇಲಾಖೆಯ ನಿಲಯ ಪಾಲಕ ವಿಜಯಕುಮಾರ, ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ದಲಿತ ಮುಖಂಡರಾದ ರಾಮಣ್ಣ ಬಂಕದಮನಿ, ಯಮನೂರಪ್ಪ ಗೋರ್ಲೆಕೊಪ್ಪ, ಪರಶುರಾಮ ಸಕ್ರನ್ನವರ, ರಮೇಶ್ ಶಾಸ್ತ್ರಿ ಶಿವಪ್ಪ ಭಂಡಾರಿ, ಬಸವರಾಜ ಬೂದಗುಂಪ, ಭೀಮಣ್ಣ ಗುಡದಳ್ಳಿ, ನಿಂಗಪ್ಪ ಗೋರ್ಲೆಕೊಪ್ಪ, ಮಹಾಂತೇಶ್ ಅರುಬೆರಳಿನ, ಲಕ್ಷ್ಮಣ್ ಬಾರಿಗೀಡದ, ಮಲ್ಲಿಕಾರ್ಜುನ್ ಗೋರ್ಲೆಕೊಪ್ಪ, ಶಂಕರ ಭಂಡಾರಿ, ಲಕ್ಷ್ಮಣ್ ಕಾಳಿ ನಿಂಗರಾಜ್ ಅಪ್ಪು, ವೀರೇಶ್ ಭಂಡಾರಿ, ಶ್ರೀಧರ್ ಭಂಡಾರಿ ಇತರರಿದ್ದರು.



ಕಿರುಸುದ್ದಿ

ನಾಳೆ ಧರಣಿ ಸತ್ಯಾಗ್ರಹ

ಬೀದರ: ರೈತರ ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಸಂಯುಕ್ತ ಕಿಸಾನ ಮೋರ್ಚಾ ಜಿಲ್ಲಾ ಘಟಕವು ಏ.8ರಂದು ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿ ಎದುರಗಡೆ ಧರಣಿ ಸತ್ಯಾಗ್ರಹ ನಡೆಸಲು ನಿರ್ಧರಿಸಿದೆ. ಈ ಕುರಿತು ಮಾಹಿತಿ ನೀಡಿದ ಬಾಬುರಾವ ಹೊನ್ನಾ ಅವರು, ರೈತರ ಸಾಲಮನ್ನಾ, ಬೀಜ ಮತ್ತು ಗೊಬ್ಬರಗಳ ಸಮರ್ಪಕ ಪೂರೈಕೆ, ನಾಬಾರ್ಡ್ ಮೂಲಕ ಸಾಲ ವ್ಯವಸ್ಥೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂದಿರಿಸಲಾಗಿದೆ ಎಂದು ಹೇಳಿದರು. ಇದಲ್ಲದೆ, ಕಬ್ಬು ಪೂರೈಕೆ ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳಿಂದ ಹಣ ಪಾವತಿ ವಿಳಂಬವಾಗಿರುವುದು, ಹಾಲು ಉತ್ಪಾದಕರ (ಹೈನುಗಾರಿಕೆ) ಸಮಸ್ಯೆಗಳು ಹಾಗೂ ಬಗರ್ ಹುಕುಂ ಸಂಬಂಧಿತ ಪ್ರಶ್ನೆಗಳಿಗೂ ಪರಿಹಾರ ಒದಗಿಸಬೇಕೆಂದು ಒತ್ತಾಯಿಸಲಾಗಿದೆ. ಈ ಹಿನ್ನೆಲೆಯಲ್ಲಿ ರೈತರು, ರೈತ ಕೂಲಿ ಕಾರ್ಮಿಕರು ಹಾಗೂ ಕೃಷಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸುವಂತೆ ಸಂಘಟನೆಯು ಕರೆ ನೀಡಿದೆ.

ಹಿಂದು ಸಂತ್ ಸಮಾವೇಶ: ಪೋಸ್ಟರ್ ಬಿಡುಗಡೆ



ಬೀದರ: ಜಿಲ್ಲೆಯ ಭಾಲ್ಕಿ ತಾಲೂಕಿನ ಸೇವಾನಗರ ಶಿವಶಕ್ತಿ ಧಾಮ್ ಬಂಜಾರಾ ಶಕ್ತಿಪೀಠದಲ್ಲಿ ಶ್ರೀಗೋವಿಂದ್ ರಾವ್ ಮಹಾರಾಜ್ ಹಾಗೂ ರಾಮ ಚೈತನ್ಯ ಮಹಾರಾಜರ ದಿವ್ಯ ಸಾನಿಧ್ಯದಲ್ಲಿ, ಬಂಜಾರಾ ಧರ್ಮಗುರುಗಳಾದ ಪರಮ ಡಾ.ರಾಮರಾವ್ ಮಹಾರಾಜರ ಭವ್ಯ ಧ್ಯಾನ ಮಂದಿರ ಉದ್ಘಾಟನೆ ಮತ್ತು ಗುರುಗಳ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ವಿರಾಟ್ ಹಿಂದು ಸಂತ್ ಸಮಾವೇಶವನ್ನು ಕೂಡ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಅಂಗವಾಗಿ ವಿಶ್ವ ಹಿಂದು ಪರಿಷತ್ ಬೀದರ್ ಜಿಲ್ಲಾ ಅಧ್ಯಕ್ಷ ವೀರಶೆಟ್ಟಿ ಖ್ಯಾಮಾ, ಕಾರ್ಯದರ್ಶಿ ಬಸವರಾಜ್ ಬೇಮಳಖೇಡ ಹಾಗೂ ಬಜರಂಗ ದಳದ ನೇತೃತ್ವದಲ್ಲಿ, ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಶೈಲೇಂದ್ರ ಬೆಲ್ದಾಳೆ ಅವರಿಗೆ ಆಹ್ವಾನ ನೀಡಲಾಯಿತು.

ಸತ್ಯನಾರಾಯಣ ಆಯ್ಕೆ

ಬಳ್ಳಾರಿ: ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೂತನ ಖಜಾಂಚಿಯಾಗಿ ಸಿ.ಎಸ್. ಸತ್ಯನಾರಾಯಣ (ಸತ್ತಿ) ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹಾಲಿ ಖಜಾಂಚಿಗಳಾಗಿದ್ದ ನಾಗಳ್ಳಿ ರಮೇಶ್ ಅವರು ಸ್ಕಿಲ್ ಡೆವಲಪ್ಮೆಂಟ್ ಸೆಂಟರ್‌ನ



ಚೇರ್ಮನ್ ಆಗಿ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ ಎಂದು ಸಂಸ್ಥೆಯ ಮುಖ್ಯಸ್ಥರು ತಿಳಿಸಿದ್ದಾರೆ.

ಶ್ರೀಮದುತ್ತಾರಾಧಿ ಮಠಕ್ಕೆ ಸತ್ಯಾತ್ಮತೀರ್ಥ ಶ್ರೀ ಭೇಟಿ

ಬಳ್ಳಾರಿ: ನಗರದ ಸತ್ಯನಾರಾಯಣ ಪೇಟೆ ಬಡಾವಣೆಯ ಶ್ರೀಮದುತ್ತಾರಾಧಿ ಮಠಕ್ಕೆ ಶ್ರೀಸತ್ಯಾತ್ಮತೀರ್ಥ ಸ್ವಾಮೀಜಿ ಅವರು ಸೋಮವಾರ ಭೇಟಿ ನೀಡಿ, ನೂತನ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಿದರು. ಭವ್ಯ ಶ್ರೀಕೃಷ್ಣ ಮಂದಿರ ನಿರ್ಮಾಣ ಕಾಮಗಾರಿ ಭರದಿಂದ ಸಾಗಿದ್ದು, ಸ್ವಾಮೀಜಿ ಅವರು ಭೇಟಿ ನೀಡಿ, ಶ್ರೀಮಠದ ಅರ್ಚಕರಿಗೆ, ಗುತ್ತಿಗೆದಾರರಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು. ಇದಕ್ಕೂ ಮುನ್ನ ಶ್ರೀಮಠದಲ್ಲಿ ಭಕ್ತರಿಗೆ ಶ್ರೀಗಳು ತಪ್ತಮುದ್ರಧಾರಣೆ ನೆರವೇರಿಸಿ, ಫಲ ಮಂತ್ರಾಕ್ಷತೆ ನೀಡಿ ಅನುಗ್ರಹಿಸಿದರು. ನಂತರ ನಗರದ ಅಜಿತ್ ಕುಲಕರ್ಣಿ ಆಸ್ಪತ್ರೆ ಬಳಿಯ ಅನಂತಕೃಷ್ಣ ಅವರ ನಿವಾಸದಲ್ಲಿ ಸಂಸ್ಥಾನ ಪೂಜೆ ನೆರವೇರಿಸಿದರು. ಶ್ರೀಮಠದ ವ್ಯವಸ್ಥಾಪಕರಾದ ಪಂ.ನವೀನ್ ಆಚಾರ, ಪಂ.ಪ್ರವೀಣ್ ಆಚಾರ, ಅಖಿಲ ಭಾರತ ಬ್ರಾಹ್ಮಣ ಮಹಾಸಭಾದ ಕಾರ್ಯದರ್ಶಿ ಡಾ.ಡಿ.ಶ್ರೀನಾಥ್ ಸೇರಿದಂತೆ ನೂರಾರು ಭಕ್ತರಿದ್ದರು. ನಂತರ, ನಗರದ ಪಾರ್ವತಿನಗರ ಬಡಾವಣೆ, ತಾಳೂರು ರಸ್ತೆಯ ಶಾಂತಿ ಶಿಶುವಿಹಾರ ಶಾಲೆಗೆ ಶ್ರೀಗಳು ಭೇಟಿ ನೀಡಿದರು. ಮಕ್ಕಳಿಗೆ ಹಣ್ಣುಗಳನ್ನು ವಿತರಿಸಿ ಆಶೀರ್ವದಿಸಿದರು. ಪಂ.ಜಿತೇಂದ್ರಚಾರ ಹಾಗೂ ಸುಷ್ಮಾ ಜಿತೇಂದ್ರಾಚಾರ ದಂಪತಿ ಇದ್ದರು.



ಸಿರುಗುಪ್ಪ: ನಗರದ ಪ್ಯಾಟೇ ಅಂಜನೇಯ್ಯ ದೇವಸ್ಥಾನದಲ್ಲಿ ಭಾನುವಾರ ಸಂಜೆ ನಡೆದ ಕರ್ನಾಟಕ ರಾಜ್ಯ ಅರ್ಚಕರ ಸಂಘದ (ಮುಜರಾಯಿ ಇಲಾಖೆ) ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಅರ್ಚಕರ ಸಂಘದ (ಮುಜರಾಯಿ ಇಲಾಖೆ) ರಾಜ್ಯಾಧ್ಯಕ್ಷ ಸಿ.ರಂಗರಾಜನ್ ಮಾತನಾಡಿದರು.

ಅರ್ಚಕರ ಸಮಸ್ಯೆಗೆ ಸಂಘದಿಂದ ಸ್ಪಂದನೆ

ಸಿರುಗುಪ್ಪ: ತಾಲೂಕಿನ ಗ್ರಾಮೀಣ ಭಾಗದಲ್ಲಿರುವ ದೇವಾಲಯಗಳ ಅರ್ಚಕರ ಸಮಸ್ಯೆಗೆ ಸಂಘವು ಸ್ಪಂದಿಸುತ್ತದೆ ಎಂದು ಕರ್ನಾಟಕ ರಾಜ್ಯ ಅರ್ಚಕರ ಸಂಘದ (ಮುಜರಾಯಿ ಇಲಾಖೆ) ರಾಜ್ಯಾಧ್ಯಕ್ಷ ಸಿ.ರಂಗರಾಜನ್ ಹೇಳಿದರು. ನಗರದ ಪ್ಯಾಟೇ ಅಂಜನೇಯ್ಯ ದೇವಸ್ಥಾನದಲ್ಲಿ ಭಾನುವಾರ ಸಂಜೆ ನಡೆದ ಕರ್ನಾಟಕ ರಾಜ್ಯ ಅರ್ಚಕರ ಸಂಘದ (ಮುಜರಾಯಿ ಇಲಾಖೆ) ಸಮಾರಂಭದಲ್ಲಿ ಮಾತನಾಡಿದರು. ದೇವಾಲಯಗಳು ಭಾರತ ದೇಶದ ಇತಿಹಾಸದ ಹೆಗ್ಗುರುತು. ಹಿಂದೂ ದೇವಾಲಯಗಳ ಅರ್ಚಕರು ಅದರಲ್ಲಿ ಹಳ್ಳಿಗಳಲ್ಲಿರುವ ದೇವಾಲಯಗಳ ಅರ್ಚಕರಿಗೆ ಯಾವುದೇ ದಕ್ಷಿಣೆ ಇರುವುದಿಲ್ಲ, ಅಂತಹ ದಿನಗಳಲ್ಲಿ ದೇವರನ್ನೇ ನಂಬಿಕೊಂಡು ಬದುಕುವ ಅರ್ಚಕರ ಸಮಸ್ಯೆಗಳಿಗೆ ರಾಜ್ಯ ಅರ್ಚಕರ ಸಂಘ ಸ್ಪಂದಿಸುತ್ತದೆ. ಹಾಳು ಬಿದ್ದ ದೇವಾಲಯಗಳ ಪುನರುತ್ಥಾನ ಮತ್ತು ಅರ್ಚಕರಿಗೆ ವಾಸಿಸಲು ದೇವಾಲಯದ ಹತ್ತಿರ ಮನೆ ನಿರ್ಮಾಣ, ಅರ್ಚಕರಿಗೆ ನೀಡುವ ತಸ್ತಿಕ ಮೊತ್ತವನ್ನು ಪ್ರತಿ ವರ್ಷ ನವೀಕರಿಸದೆ ಶಾಶ್ವತವಾಗಿ ಅದನ್ನು ನೀಡಲು ಸರ್ಕಾರಕ್ಕೆ ಮನವಿ ಮತ್ತು ವಂಶ ಪರಂಪರೆಯಾಗಿ ಅರ್ಚಕರಿಗೆ ಗುಡಿ ಪೂಜೆ ಮಾಡುವ ಅಧಿಕಾರ ಮತ್ತು ಅರ್ಚಕರ ಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷ ಶಿಷ್ಯವೇತನ ನೀಡುವ ಬಗ್ಗೆ ನೀಡುವ ಕುರಿತು ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು. ಸಿರುಗುಪ್ಪ ತಾಲೂಕು ಅಧ್ಯಕ್ಷ ಕಾಳಪ್ಪ ಆಚಾರಿ, ಕಾರ್ಯದರ್ಶಿ ವೀರೇಶಯ್ಯ ಸ್ವಾಮಿ, ಹಿರಿಯ ಅರ್ಚಕ ಹಚೋಳ್ಳಿ ಪ್ರಭುಸ್ವಾಮಿ, ಹಾಸ್ಯ ಕಲಾವಿದ ಜೆ.ನರಸಿಂಹಮೂರ್ತಿ ಭಾಗವಹಿಸಿದ್ದರು.



ಬಳ್ಳಾರಿ: ನಗರದ ಸತ್ಯನಾರಾಯಣ ಪೇಟೆ ಬಡಾವಣೆಯ ಶ್ರೀಮದುತ್ತಾರಾಧಿ ಮಠಕ್ಕೆ ಶ್ರೀಸತ್ಯಾತ್ಮತೀರ್ಥ ಸ್ವಾಮೀಜಿ ಅವರು ಸೋಮವಾರ ಭೇಟಿ ನೀಡಿ, ನೂತನ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಿದರು.

ರೈಲ್ವೆ ಸೇತುವೆಗಳು ಮಂಜೂರು | ಡಾ.ಮಹೇಶ್ವರ ಶ್ರೀ ಹೇಳಿಕೆ

ಹೋರಾಟಕ್ಕೆ ಸಿಕ್ಕ ಜಯ

ಹಗರಿಬೊಮ್ಮನಹಳ್ಳಿ: ರೈಲ್ವೆ ಹೋರಾಟ ಸಮಿತಿಯ ನಿರಂತರ ಹೋರಾಟದ ಫಲವಾಗಿ ಇಲ್ಲಿನ ರಾಮನಗರ ಬಸ್ ನಿಲ್ದಾಣದ ಬಳಿ ಇರುವ ರೈಲ್ವೆ ಗೇಟ್ ಹಾಗೂ ನೇತಾಜಿ ರಸ್ತೆಯ ರೈಲ್ವೆ ಗೇಟ್ ಮೇಲ್ಸೇತುವೆ ಹಾಗೂ ಕೆಳ ಸೇತುವೆ ನಿರ್ಮಾಣ ಕಾಮಗಾರಿ ಮಂಜೂರಾಗಿರುವುದು ಸಂತಸ ತಂದಿದೆ. ಹೋರಾಟಕ್ಕೆ ಸಿಕ್ಕ ಜಯವಾಗಿದೆ ಎಂದು ನಂದಿಪುರದ ಶ್ರೀ ಡಾ.ಮಹೇಶ್ವರ ಸ್ವಾಮೀಜಿ ತಿಳಿಸಿದರು.



ಭಾನುವಾರ ರೈಲ್ವೆ ಹೋರಾಟ ಸಮಿತಿಯಿಂದ ಕರೆಯಲಾಗಿದ್ದ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಇಲಾಖೆಯ ಅಧಿಕಾರಿಗಳು ಸರಿಯಾದ ಮಾಹಿತಿ ಇಲ್ಲದೇ ಸಮಸ್ಯೆ ಇರುವ ಎಲ್‌ಸಿ 37, ಮತ್ತು ಎಲ್‌ಸಿ 38 ಗೇಟ್ ಬಿಟ್ಟು ಎಲ್‌ಸಿ 35 ಗೇಟ್‌ನಲ್ಲಿ ಸೇತುವೆ ಕಾಮಗಾರಿ ಮಂಜೂರು ಮಾಡಲಾಗಿತ್ತು. ಬಳಿಕ ಎಲ್‌ಸಿ 37 ಮತ್ತು 38 ಗೇಟ್ ಗಳಲ್ಲಿನ ಟ್ರಾಫಿಕ್ ಸಮಸ್ಯೆ ಬಗ್ಗೆ ಸಚಿವರಾದ ಸೋಮಣ್ಣ ಹಾಗೂ ಸಂಸದರಾದ ಈ ತುಕಾರಾಂ ಅವರಿಗೆ ತಿಳಿಸಲಾಗಿತ್ತು. ಜೊತೆಗೆ ನೇತಾಜಿ ರಸ್ತೆಯ ಗೇಟ್ ಬಂದ್ ಮಾಡಲಾಗುತ್ತದೆ ಎಂದಿದ್ದ ಅಧಿಕಾರಿಗಳು ಈ ಬಗ್ಗೆ ದಾವಣಗೆರೆ ಬೆಂಗಳೂರು ಇತರಡೆ ಇರುವಂತೆ ಇಲ್ಲೊಂದು ಅಂಡರ್ ಪಾಸ್ ಮಾಡುವಂತೆ ಒತ್ತಾಯಿಸಲಾಯಿತು.

ಈ ಬಗ್ಗೆ ಅಧಿಕಾರಿಗಳು ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದರು. ಭರವಸೆಯಂತೆ ನೇತಾಜಿ ರಸ್ತೆಗೆ ಅಂಡರ್ ಪಾಸ್ ಮಂಜೂರಾಗಿದೆ ಎಂದರು.

ರೈಲ್ವೆ ಹೋರಾಟ ಸಮಿತಿಯ ಕೊಟ್ರೇಶ್ ಶೆಟ್ಟರ್ ಮಾತನಾಡಿ, ಅಮೃತ್ ಭಾರತ ಯೋಜನೆ ಅಡಿಯಲ್ಲಿ ರೈಲ್ವೆ ನಿಲ್ದಾಣ ಅಭಿವೃದ್ಧಿಗೆ ಮೇಲ್ದರ್ಜೆಗೆ ಏರಿಸಲು. ಹೊಸಪೇಟೆಯಿಂದ ತುಮಕೂರು ವರೆಗೆ ಡ್ಯಾಮೋ ರೈಲು ಬಿಡುವಂತೆ, ರೈಲ್ವೆ ನಿಲ್ದಾಣದಲ್ಲಿ ಎರಡು ಕಡೆ ಪ್ಲಾಟ್ ಫಾರಂ ಮಾಡುವಂತೆ ಸಚಿವರಿಗೆ ಸಂಸದರಿಗೆ ಮನವಿ ಸಲ್ಲಿಸಬೇಕಿದೆ ಎಂದರು.

> ರಿಜರ್ವೇಶನ್ ಕೌಂಟರ್ ತೆರೆಯಲು ಹಾಗೂ ಈ ಭಾಗದ ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಹಗರಿಬೊಮ್ಮನಹಳ್ಳಿ ಹಾಗೂ ಕೊಟ್ಟೂರಿಗೆ ರಸ ಗೊಬ್ಬರ ಬಿತ್ತನೆ ಬೀಜ ಕ್ರಿಮಿ ನಾಶಕ ಔಷಧಿಗಳು ನೇರವಾಗಿ ಬರಲಿಕ್ಕೆ ಅಗತ್ಯ ಸೌಲಭ್ಯ ಕಲ್ಪಿಸಲು ಹೋರಾಟ ಮಾಡಬೇಕಿದೆ ಹೋರಾಟದಲ್ಲಿ ಹೆಚ್ಚು ಹೆಚ್ಚು ಜನ ಸೇರಬೇಕಿದೆ
>
> ■ ಡಾ.ಮಹೇಶ್ವರ ಸ್ವಾಮೀಜಿ, ರೈಲ್ವೆ ಹೋರಾಟ ಸಮಿತಿ

ಸತೀಶ್ ಪಾಟೀಲ್ ಮಾತನಾಡಿ, ಈ ಭಾಗದಲ್ಲಿ ಹೆಚ್ಚು ರೈಲ್ವೆ ಸಂಚಾರಕ್ಕೆ ಎರಡು ಲೈನ್ ಆಗಬೇಕು ಬ್ರಿಜ್ ನಿರ್ಮಾಣ ಕಾಮಗಾರಿ ಶೀಘ್ರದಲ್ಲೇ ಪ್ರಾರಂಭಿಸಬೇಕು. ಬೆಂಗಳೂರು ಇಂಟರ್‌ಸಿಟಿ ರೈಲು ಮೈಸೂರ್ ಅಜ್ಮೀರ ಇನ್ನಿತರ ರೈಲು ನಿಲ್ಲಗಡೆ ಬಗ್ಗೆ ಹೋರಾಟ ರೂಪಿಸಬೇಕು ಎಂದರು.

ರೈಲ್ವೆ ಹೋರಾಟ ಸಮಿತಿಯ ಸಂಚಿ ಶಿವಕುಮಾರ್, ಉಪ್ಪಾರ್ ವೆಂಕಟೇಶ್, ಫೋಟೋ ರಾಮಣ್ಣ, ಸತೀಶ್ ಪಾಟೀಲ

ಮುಖಂಡರಾದ ಅಡೂರು ಶಿವಕುಮಾರ್ ಬನ್ನಿಗೋಳು ವೆಂಕಣ್ಣ, ಚೆನ್ನಪ್ಪ ಮಲ್ಕಿಒಡೆಯರ್ ಅಕ್ಕಿ ಬಸವರಾಜ, ಗದ್ದಿಕೇರಿ ನಾಗಭೂಷಣ, ರಾಜು ಪೂರ್ಣಯ್ಯ, ಪಿಗ್ಮಿ ಕೊಟ್ರೆಶಪ್ಪ, ವಕೀಲ ಲಾಕ್ಯಾ ನಾಯ್ಕ್ ಇತರರಿದ್ದರು.

ಸಮರಸ, ಸಮಾಧಾನ ಉತ್ತಮ ಕುಟುಂಬದ ಲಕ್ಷಣ: ಶ್ರೀಗಳು

ಕುರುಗೋಡು: ಸಮರಸ ಮತ್ತು ಸಮಾಧಾನಗಳು ಉತ್ತಮ ಕುಟುಂಬದ ಲಕ್ಷಣಗಳಾಗಿವೆ. ಕುಟುಂಬದಲ್ಲಿ ಗಂಡ, ಹೆಂಡತಿ ಇಬ್ಬರ ಪಾತ್ರ ಮಹತ್ವದ್ದಾಗಿದ್ದು, ಪರಸ್ಪರರು ಒಬ್ಬರಿಗೊಬ್ಬರು ಗೌರವ ಕೊಡುತ್ತ, ಸಮಾಧಾನದಿಂದ ಕುಟುಂಬ ನಿರ್ವಹಣೆ ಮಾಡಿದರೆ ಅಂತಹ ಕುಟುಂಬಗಳು ಸುಖವಾಗಿ ಇರುತ್ತವೆ ಎಂದು ಷಡಕ್ಷರಿ ಮಹಾಸ್ವಾಮಿ ಅವಧೂತರು ತಿಳಿಸಿದರು.

ತಾಲೂಕಿನ ಸೋಮಲಾಪುರ ಗ್ರಾಮದ ಶ್ರೀಚಿದಾನಂದ ಅದೂತರ ಮಠದಲ್ಲಿ ನಡೆದ, 80 ಜೋಡಿಗಳ ಸಾಮೂಹಿಕ ವಿವಾಹದ ನೇತೃತ್ವವನ್ನು ವಹಿಸಿ ಮಾತನಾಡಿ, ನವ ಯುವ ದಂಪತಿಗಳಿಗೆ ಮುಂದಿನ ಕೌಟುಂಬಿಕ ಜೀವನ ಸುಖವಾಗಿರಲೆಂದು ಆಶೀರ್ವಾದ ಮಾಡಿದರು.

ಸಾನಿಧ್ಯ ವಹಿಸಿದ್ದ ಜಡೇಶ ಶಿವಯೋಗ ಮಂದಿರದ ಜಡೇಶ ತಾತನವರು ಮಾತನಾಡಿ, ಯುವಕರು ಸದಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕು. ಗುರು ಹಿರಿಯರ ಮೇಲೆ ಗೌರವ ಇಟ್ಟು ನಡೆದುಕೊಂಡು, ನಿಮ್ಮನ್ನು ಬೆಳೆಸಿದ ತಂದೆ, ತಾಯಿಗಳಿಗೆ ಕೀರ್ತಿ ತರುವ ಕೆಲಸ ಮಾಡಬೇಕು. ನವ ದಂಪತಿಗಳು ಕುಟುಂಬದ ಹಿರಿಯರಿಂದ ಸೈ ಎನಿಸಿಕೊಳ್ಳಬೇಕೆಂದು ತಿಳಿಸಿದರು. ಶ್ರೀಚಿದಾನಂದ ಅವಧೂತರ 34ನೇ ವರ್ಷದ ಪುಣ್ಯತಿಥಿ ಕಾರ್ಯಕ್ರಮ ಅಂಗವಾಗಿ ಸಾಮೂಹಿಕ ವಿವಾಹವನ್ನು ನಡೆಸಿಕೊಡಲಾಯಿತು.

ಬೆಳಗಿನ ಜಾವದಿಂದ ದೇವಸ್ಥಾನದಲ್ಲಿ ತಾತನವರ ಗದ್ದುಗೆಯ ಪ್ರತಿಮೆಗೆ ರುದ್ರಾಭಿಷೇಕ, ವಿಶೇಷ ಪೂಜೆ, ಧಾರ್ಮಿಕ ಕಾರ್ಯಕ್ರಮ ನಡೆಸಲಾಯಿತು.

ತಾಲೂಕಿನ ವಿವಿಧ ಗ್ರಾಮಗಳ ಕುಟುಂಬಗಳಿಂದ ಯುವಕರು, ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಇಂದು ಶ್ರೀಗಳ ಆಶೀರ್ವಾದದೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ಸೋಮಲಾಪುರ ಗ್ರಾಮದ ಎಲ್ಲಾ ಸಮುದಾಯದ ಭಕ್ತಾದಿಗಳು ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ತೊಡಗಿಕೊಂಡು, ಸ್ವಯಂಸೇವೆ ಮಾಡಿ ವಿವಾಹ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಭಕ್ತರಿಗೆ ಮಠದಿಂದ ಅನ್ನದಾಸೋಹ ಆಯೋಜಿಸಲಾಗಿತ್ತು. ಶ್ರೀಮಠದ ಮುಖಂಡರು ವಿವಿಧ ಗ್ರಾಮಗಳ ಮಠದ ಭಕ್ತರು ಸೋಮಲಾಪುರ ಗ್ರಾಮದ ಮುಖಂಡರು ಭಕ್ತರು ಪಾಲ್ಗೊಂಡಿದ್ದರು.



ಹಸಿರುಕ್ರಾಂತಿ ಹರಿಕಾರ ಡಾ.ಬಾಬೂಜಿ

ಹೂವಿನಹಡಗಲಿ: ಹಸಿರು ಕ್ರಾಂತಿಯ ಹರಿಕಾರರಾದ ಡಾ.ಬಾಬು ಜಗಜೀವನ ರಾಂ ಅವರ ತತ್ವಾದರ್ಶ ಹಾಗೂ ಅವರ ಸರಳ ಜೀವನವನ್ನು ಇಂದಿನ ಯುವ ಜನಾಂಗಕ್ಕೆ ತಲುಪಿಸಿದಾಗ ಅವರ ಜಯಂತಿಗೆ ಅರ್ಥ ಬರುತ್ತದೆ ಎಂದು ಶಾಸಕ ಕೃಷ್ಣನಾಯ್ಕ ಹೇಳಿದರು.

ಪಟ್ಟಣದ ತಾಪಂ ರಾಜೀವ ಗಾಂಧಿ ಸಭಾಂಗಣದಲ್ಲಿ ತಾಲೂಕ ಆಡಳಿತ ಆಯೋಜಿಸಿದ್ದ ಡಾ.ಬಾಬು ಜಗಜೀವನ ರಾಂ ಅವರ 119ನೇ ಜಯಂತ್ಯುತ್ಸವ ಕಾಯಕ್ರಮ ಉದ್ಘಾಟಿಸಿ ಮಾತನಾಡಿದರು. ಹಿಂದುಳಿದ ಜನಾಂಗದ ಮಕ್ಕಳು ವಿದ್ಯಾವಂತರಾಗಿ ಉನ್ನತಹುದ್ದೆಯನ್ನುಹೊಂದುವಂತಾಗಬೇಕು. ಸರ್ಕಾರದಿಂದ ದೊರಕುವ ಸೌಲಭ್ಯಗಳನ್ನು ಎಲ್ಲರೂ ಬಳಸಿಕೊಳ್ಳಬೇಕೆಂದು ಹೇಳಿದರು.

ತಹಶೀಲ್ದಾರ್ ಕೆ.ಎಂ.ಗುರುಬಸವರಾಜ ಅಧ್ಯಕ್ಷತೆ ವಹಿಸಿ ಮಾತನಾಡಿ, ಹಿಂದುಳಿದ ಜನಾಂಗದಲ್ಲಿ ಜನಿಸಿದ ಡಾ.ಬಾಬು ಜಗಜೀವನ ರಾಂ ಇವರು, ಸಮಾಜದಲ್ಲಿನ ಸಂಕೋಲೆಗಳನ್ನು ಕಿತ್ತು ಹಾಕುವ ಮೂಲಕ ಮನುಷ್ಯರೆಲ್ಲರೂ ಒಂದೇ ಎಂಬ ಭಾವವನ್ನು ಎಲ್ಲರಲ್ಲಿಯೂ ಬಿತ್ತುವ ಕೆಲಸ ಮಾಡಿದ್ದಾರೆ. ದೇಶದ ದೀನ, ದಲಿತ ಧ್ವನಿಯಾಗಿ ಹೋರಾಟ ಮಾಡಿದ್ದಾರೆ ಎಂದರು.

ತಾಪಂ ಇಒ ಪರಮೇಶ್ವರ ಮಾತನಾಡಿ, ನಮ್ಮಲ್ಲಿನ ಅಸಮಾನತೆಯನ್ನು ಹೋಗಲಾಡಿಸಲು ಮಹಾನೀಯರ, ಜಯಂತಿಗಳನ್ನು ಆಚರಿಸುತ್ತಾ ಬಂದಿದ್ದೇವೆ ಎಂದರು.

ದೇಶದ ಕೃಷಿ ಕ್ಷೇತ್ರಕ್ಕೆ ಹೆಚ್ಚು ಮಹತ್ವ ನೀಡಿದ್ದ ಇವರು, ಉತ್ತಮ ಪ್ರಗತಿ ಸಾಧಿಸಿದ ಪರಿಣಾಮ ಇವರನ್ನು, ಹಸಿರು ಕ್ರಾಂತಿಯ ಹರಿಕಾರರೆಂದು ಕರೆಯುತ್ತಾರೆ. ಅಸಮಾನತೆ ವಿರುದ್ಧ ಹೋರಾ ಡಿದ್ದಾರೆ. ಹಿಂದುಳಿದ ಜನಾಂಗದ ಮಕ್ಕಳು ವಿದ್ಯಾವಂತರಾಗಿ ಉನ್ನತ ಹುದ್ದೆಯನ್ನು ಹೊಂದು ವಂತಾಬೇಕು. ಸರ್ಕಾರದಿಂದ ದೊರ ಕುವ ಸೌಲಭ್ಯಗಳನ್ನು ಎಲ್ಲರೂ ಬಳಸಿಕೊ ಳ್ಳಬೇಕು. ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಆನಂದ ಡೊಳ್ಳಿನ, ಒಳಮೀಸಲಾತಿ ಹೋರಾಟ ಸಮಿತಿ ತಾಲೂಕ ಅಧ್ಯಕ್ಷ ಉಚ್ಚೆಂಗೆಪ್ಪ, ಬಿಜೆಪಿ ವಿಭಾಗೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಎಚ್.ಪೂಜೆಪ್ಪ ಮಾತನಾಡಿದರು.

ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎ.ಕೊಟ್ರಗೌಡ ಇವರು, ಡಾ.ಬಾಬು ಜಗಜೀವನ ರಾಮ್ ಜೀವನ ಚರಿತ್ರೆ ಕುರಿತು ಮಾತನಾಡಿದರು.

ಸಿಪಿಐ ಮಲ್ಲಪ್ಪ ಹೂಗಾರ, ಮುಖಂಡರಾದ ವಿಜಯಕುಮಾರ್, ಪಿ.ನಿಂಗಪ್ಪ, ಶ್ರೀಧರ ನಾಯ್ಕ, ಆನಂದ, ಗೋಣೆಪ್ಪ, ಮುಂಡವಾಡ ಉಮೇಶ್, ಗುಡ್ಡದಯ್ಯ, ತಾಲೂಕು ಮಟ್ಟದ ಅಧಿಕಾರಿಗಳು, ದಲಿತ ಮುಖಂಡರು, ಯುವಕರು ಉಪಸ್ಥಿತರಿದ್ದರು.



ಶೂನ್ಯದಿಂದ ಶಿಖರವೇರಿದ ಬಿಜೆಪಿ: ಮಂಜುನಾಥ ಹಿರೇಮಠ

ಹಗರಿಬೊಮ್ಮನಹಳ್ಳಿ: ಶೂನ್ಯದಿಂದ ಸಾಧನೆಯ ಶಿಖರವನ್ನು ಏರಿದ ಬಿಜೆಪಿ ಪಕ್ಷ ದೇಶದಲ್ಲಿ ಸ.ಸು 18 ಕೋಟಿಗೂ ಹೆಚ್ಚು ಸದಸ್ಯತ್ವವನ್ನು ಹೊಂದಿರುವ ವಿಶ್ವದಲ್ಲಿಯೇ ಅತಿ ದೊಡ್ಡ ಪಕ್ಷವಾಗಿದ್ದು ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತನ ಬೆವರಿನ ಫಲವಾಗಿದೆ ಎಂದು ನಗರ ಘಟಕದ ಅಧ್ಯಕ್ಷ ಮಂಜುನಾಥ ಹಿರೇಮಠ ತಿಳಿಸಿದರು.



ನಗರದ ಪಕ್ಷದ ಕಛೇರಿಯಲ್ಲಿ ನೆಡೆದ 47 ನೇ ಭಾರತೀಯ ಜನತಾ ಪಕ್ಷದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ,ಮಾಜಿ ಉಪ ಪ್ರಧಾನಿ ಬಿಜೆಪಿ ಬೀಷ್ಮ ಲಾಲ್ ಕೃಷ್ಣ ಅಡ್ವಾಣಿ, ಮುರಳಿ ಮನೋಹರ್ ಜೋಶಿ, ಪ್ರಮೋದ್ ಮಹಾಜನ್, ಶ್ರೀಮತಿ ಸುಷ್ಮಾ ಸ್ವರಾಜ್, ವೆಂಕಯ್ಯನಾಯ್ಡು, ರಾಜನಾಥ್ ಸಿಂಗ್, ಅರುಣ್ ಜೇಟ್ಲಿ, ಇನ್ನಿತರ ಹಿರಿಯ ಮುಖಂಡರು ನಿಸ್ವಾರ್ಥ ಸೇವೆಯಿಂದ ಪಕ್ಷಕ್ಕೆ ಸೈದ್ಧಾಂತಿಕ ಅಡಿಪಾಯ ಹಾಕಿದರು.

ಸಮರ್ಥನಾಯಕರಹೋರಾಟ, ಸಂಘಟನೆಗಳಿಂದ ಲಕ್ಷಾಂತರ ಕಾರ್ಯಕರರಿಂದ ಹೆಮ್ಮರವಾಗಿ ಬೆಳೆದಿರುವ ನಮ್ಮ ಪಕ್ಷ ರಾಜ್ಯದಲ್ಲಿ ಬಿ.ಎಸ್ ಯಡಿಯೂರಪ್ಪ, ಅನಂತ್ ಕುಮಾರ್ ಬಿಜೆಪಿ ಪಕ್ಷವನ್ನು ಅತ್ಯಂತ ತಳಮಟ್ಟದಿಂದ ಸಂಘಟಿಸಿ ರಾಜ್ಯದಲ್ಲಿ ಅಧಿಕಾರಕ್ಕೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ.

ಮಂಡಲದ ಪ್ರಧಾನ ಕಾರ್ಯದರ್ಶಿ ಕೋಗಳಿ ಹನುಮಂತಪ್ಪ, ಯುವ ಮೋರ್ಚಾದ ದಿವಾಕರ ಗೌಡ, ಗಜಾಪುರ ಮಂಜುನಾಥ, ಮಲ್ಲಿಕಾರ್ಜುನ, ಎಸ್ಸಿ ಮೋರ್ಚಾದ ಮರಿಯಪ್ಪ, ಚಿರು ಬೆಳ್ಳಕ್ಕಿ, ರಮೇಶ್ ಪೂಜಾರ್, ಸಂದೀಪ್ ಬ್ಯಾಟಿ, ಮಂಜು ಬಸವರಾಜ ಅಶೋಕ್ ಸುರೇಶ್ ಬಸವಪ್ಪ ಇತರರು ಉಪಸ್ಥಿತರಿದ್ದರು.

ಬಳ್ಳಾರಿಯಲ್ಲಿ ಬಿಜೆಪಿ 46ನೇ ಸಂಸ್ಥಾಪನಾ ದಿನಾಚರಣೆ

ಬಳ್ಳಾರಿ: ನಗರದ ಸಂಗನಕಲ್ ರಸ್ತೆಯ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಬಿಜೆಪಿ 46ನೇ ಸಂಸ್ಥಾಪನಾ ದಿನಾಚರಣೆಯನ್ನು ಕೆಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ, ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್‌ಕುಮಾರ್ ಮೋಕಾ ಅವರ ನೇತೃತ್ವದಲ್ಲಿ ಸೋಮವಾರ ಅದ್ದೂರಿಯಾಗಿ ಆಚರಿಸಲಾಯಿತು.



ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಮಾತನಾಡಿ, 1989ರ ಏ.6ರಂದು ದೇಶದ ರಾಜಕೀಯ ಇತಿಹಾಸದಲ್ಲೇ ಅಧ್ಯಾಯಕ್ಕೆ ಚಾಲನೆ ದೊರೆಯಿತು. ಜನಸಂಘದಿಂದ ಉದ್ಭವಿಸಿದ ಭಾರತೀಯ ಜನತಾ ಪಕ್ಷ (ಬಿಜೆಪಿ) ರಾಷ್ಟ್ರದ ಪ್ರಥಮವಾಗಿ ತತ್ವ ಸಿದ್ಧಾಂತಗಳೊಂದಿಗೆ, ರಾಷ್ಟ್ರೀಯತೆ, ಆತ್ಮನಿರ್ಭರ ಭಾರತದ ದೃಷ್ಟಿಕೋನವನ್ನು ಆಧಾರವಾ ಗಿಟ್ಟುಕೊಂಡು ದೇಶ ಸೇವೆಗೆ ಸಮರ್ಪಿತವಾದ ಪಕ್ಷವಾಗಿ ರೂಪಗೊಂಡಿತು ಎಂದರು.

ವಿಧಾನ ಪರಿಷತ್ ಸದಸ್ಯ ವೈ.ವೈ. ಸತೀಶ್, ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮಾತನಾಡಿದರು.

ಬಿಜೆಪಿ ರಾಜ್ಯ ಕಾರ್ಯದರ್ಶಿ ಕೆ.ಎಸ್.ದಿವಾಕರ್, ರೈತಮೋರ್ಚಾ ರಾಜ್ಯ ಕಾರ್ಯದರ್ಶಿ ಎಸ್. ಗುರುಲಿಂಗನಗೌಡ, ನಿಕಟಪೂರ್ವ ಜಿಲ್ಲಾಧ್ಯಕ್ಷ ಗಣಪಾಲ್ ಐನಾಥ್ ರೆಡ್ಡಿ, ಬಳ್ಳಾರಿ ನಗರ ಅಧ್ಯಕ್ಷ ಜಿ.ವೆಂಕಟರಮಣ, ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಶ್ರೀನಿವಾಸ್ ಮೋತ್ಕರ್, ಮಹಾನಗರ ಪಾಲಿಕೆ ಸದಸ್ಯರಾದ ಸುರೇಖಾ ಮಲ್ಲನಗೌಡ, ಚೇತನ ವೇಮಣ್ಣ, ಹನುಮಂತ ಕೆ., ಹನುಮಂತ ಗುಡಿಗಂಟೆ, ಮಹಿಳಾ ಘಟಕದ ವಿಜಯಲಕ್ಷ್ಮೀ, ಸುಗುಣ ರೆಡ್ಡಿ, ಸುಮಾ ರೆಡ್ಡಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

ಬಿಜೆಪಿ ಸಂಸ್ಥಾಪನಾ ದಿನಾಚರಣೆ



ಕೂಡ್ಲಿಗಿ: ಭಾರತೀಯ ಜನತಾ ಪಕ್ಷವೂ ರಾಷ್ಟ್ರ ಮೊದಲು ಎಂಬ ಸಿದ್ದಾಂತದೊಂದಿಗೆ ಪಕ್ಷವು ರೈತರ, ಕೈಗಾರಿಕೆ ಸೇರಿದಂತೆ ಮೇಕ್ ಇನ್ ಇಂಡಿಯಾ, ಶಿಕ್ಷಣ ಸಂಸ್ಕೃತಿ, ಪರಂಪರೆಯನ್ನು ಬಲಪಡಿಸಲೂ ಆದ್ಯತೆ ನೀಡುತ್ತಿದೆ ಎಂದು ಮಂಡಲ ಅಧ್ಯಕ್ಷ ಬಣವಿಕಲ್ಲು ಕೆ.ನಾಗರಾಜ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಸೋಮವಾರ ನಡೆದ ಬಿಜೆಪಿ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. 1980ರಲ್ಲಿ ಸ್ಥಾಪನೆಯಾದ ಬಿಜೆಪಿಯು ಕಳೆದ 46 ವರ್ಷಗಳಲ್ಲಿ ರಾಷ್ಟ್ರ ರಾಜಕೀಯದಲ್ಲಿ ಮಹತ್ವವಾದ ಕೇಂದ್ರ ಸರಕಾರವು ರಾಷ್ಟ್ರೀಯ ಭದ್ರತೆ, ಬಡವರ ಕಲ್ಯಾಣ, ರೈತರ ಅಭಿವೃದ್ಧಿಗೆ , ಸಾಮಾನ್ಯರ ಹಿತಾಸಕ್ತಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ಅಲ್ಲದೆ, ಭಾರತವು ವಿಶ್ವದ ಮಹತ್ತರವಾದ ಪ್ರಮುಖ ಪಾತ್ರ ವಹಿಸುತ್ತಿದೆ. ದೇಶದಲ್ಲಿ ಡಿಜಿಟಲ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಸ್ವಚ್ಛಭಾರತದಂಥ ಸಾಕಷ್ಟು ಯೋಜನೆಗಳ ಮೂಲಕ ಸ್ವಾಭಿಮಾನಿ ದೇಶವಾಗಿಸಲು ಹೆಚ್ಚಿನ ಒತ್ತು ನೀಡಲಾಗಿದೆ. ಇಂಥ ಜನರ ಆಶಯಗಳನ್ನು ಹೊರುವಂಥ ಬಿಜೆಪಿಗೆ ಕಾರ್ಯಕರ್ತರೇ ಶಕ್ತಿಯಾಗಿದ್ದಾರೆ ಎಂದು ತಿಳಿಸಿದರು.

ನಿಕಟಪೂರ್ವ ಜಿಲ್ಲಾ ಉಪಾಧ್ಯಕ್ಷೆ ದೀನಾ ಮಂಜುನಾಥ, ಜಿಲ್ಲಾ ಕಾರ್ಯದರ್ಶಿ ಪವಿತ್ರಾಬಾಯಿ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಪಿ.ಮಂಜುನಾಥ ನಾಯಕ, ಮಂಗಾಪುರ ಸಿದ್ದೇಶ್, ಮುಖಂಡರಾದಪ್ರಕಾಶ್ ನಾಯ್ಕ,ವಾಗೀಶ್‌ಮೂರ್ತಿ, ಬಿ.ಎಂ.ನಾಗರಾಜ ಸೇರಿ ಇತರರಿದ್ದರು.

ಎಂಜಿನಿಯರ್ ಮೇಲೆ ಹಲ್ಲೆ ಪ್ರಕರಣ: ಹೋರಾಟ ಅಂತ್ಯ

ಬಳ್ಳಾರಿ: ಮಹಾನಗರ ಪಾಲಿಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ ವಿ.ವೀರೇಶ್ ಅವರ ಮೇಲೆ, ಪಾಲಿಕೆ ಸದಸ್ಯ ವಿ.ಕುಬೇರ ಅವರು ನಡೆಸಿದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿ ನೌಕರರು ನಡೆಸುತ್ತಿದ್ದ ಅನಿರ್ದಿಷ್ಟ ಧರಣಿ, ಮಾಜಿ ಶಾಸಕ ನಾರಾ ಸೂರ್ಯನಾರಾಯಣ ರೆಡ್ಡಿ ಅವರ ಮಧ್ಯಸ್ಥಿಕೆಯಿಂದ ಅಂತ್ಯಗೊಂಡಿದೆ. ಕಾಂಗ್ರೆಸ್‌ನ ಅನೇಕ ನಾಯಕರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ನೌಕರರ ಮನವೊಲಿಸಲು ಪ್ರಯತ್ನಿಸಿದ್ದರು. ಆದರೂ ಪಾಲಿಕೆ ಅಧಿಕಾರಿಗಳು, ಸಿಬ್ಬಂದಿ, ಹಲ್ಲೆ ನಡೆಸಿದ ಪಾಲಿಕೆ ಕಾಂಗ್ರೆಸ್ ಸದಸ್ಯ ವಿ.ಕುಬೇರ ಅವರನ್ನು ಬಂಧಿಸಬೇಕು, ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಪಟ್ಟು ಹಿಡಿದ್ದರು. ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಮನವೊಲಿಸಿದರು.

ಘಟನೆ ಖಂಡಿಸಿ ಬಿಜೆಪಿ ಅನೇಕ ನಾಯಕರು, ಪಾಲಿಕೆ ಸದಸ್ಯರು, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಹಾಗೂ ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್ ಅವರು ಸೇರಿದಂತೆ ಅನೇಕ ನಾಯಕರು ಭೇಟಿ ನೀಡಿ ನೌಕರರ ಧರಣಿಗೆ ಬೆಂಬಲಿಸಿ, ಕಾಂಗ್ರೆಸ್ ಸದಸ್ಯ ವಿ.ಕುಬೇರ ಅವರನ್ನು ಬಂಧಿಸಬೇಕು, ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿ ನೌಕರರ ಧರಣಿಗೆ ಬೆಂಬಲಿಸಿದ್ದರು.



ಸೋಮವಾರ ಸ್ಥಳಕ್ಕೆ ಮಾಜಿ ಶಾಸಕ ನಾರಾ ಸೂರ್ಯನಾರಾಯಣ ರೆಡ್ಡಿ ಅವರು ಭೇಟಿ ನೀಡಿ ನೌಕರರನ್ನು ಮನವೊಲಿಸಿದ ಹಿನ್ನೆಲೆಯಲ್ಲಿ ಪ್ರತಿಭಟನಾ ನಿರತ ನೌಕರರು, ಸಿಬ್ಬಂದಿಗಳು ತಾತ್ಕಾಲಿಕವಾಗಿ ಧರಣಿಯನ್ನೂ ಹಿಂಪಡೆಯಲಾಗುವುದು ಎಂದು ಘೋಷಿಸಿದರು.

ಬಗರ ಹೂಕುಂ ಸಾಗುವಳಿ ಅಧ್ಯಕ್ಷ ತಿಮ್ಮನಗೌಡ ಸೇರಿದಂತೆ ಅನೇಕ ಗಣ್ಯರು, ನೌಕರರು, ಸಿಬ್ಬಂದಿ ಇದ್ದರು.

ಪಾಲಿಕೆ ನೌಕರರು, ಸಿಬ್ಬಂದಿಗಳು ನಡೆಸಿದ ಅನಿರ್ದಿಷ್ಟ ಧರಣಿ ಹಿನ್ನೆಲೆಯಲ್ಲಿ ಅನೇಕ ಕೆಲಸ ಕಾರ್ಯಗಳು ಸ್ಥಗಿತಗೊಂಡಿದ್ದವು. ನಮಗೆ ನ್ಯಾಯ ಸಿಗುವವರೆಗೆ ನಮ್ಮ ಹೋರಾಟ ನಿಲ್ಲದು ಎಂದು ಪಟ್ಟು ಹಿಡಿದ್ದರು. ನಿಮ್ಮ ಬೇಡಿಕೆಗಳನ್ನು ಸರ್ಕಾರದ ಗಮನಸೆಳೆದು ಖಂಡಿತ ನ್ಯಾಯ ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡುವೆ, ಎಲ್ಲರಂತೆ ಸುಳ್ಳು ಭರವಸೆ ನೀಡಿ ಕೈತೊಳೆದುಕೊಳ್ಳುವ ವ್ಯಕ್ತಿ ನಾನಲ್ಲ, ಆಗುವದಿದ್ದರೆ ಮಾತ್ರ ಭರವಸೆ ನೀಡುವ ಸ್ವಭಾವ ನಮ್ಮದು, ನಿಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರ ದೊರೆಯಲಿದೆ ಎಂದು ಮಾಜಿ ಶಾಸಕ ನಾರಾ ಸೂರ್ಯನಾರಾಯಣ ರೆಡ್ಡಿ ಅವರು ಭರವಸೆ ನೀಡಿದರು.

ವಿದ್ಯಾರ್ಥಿಗಳ ಉನ್ನತ ಸಾಧನೆಯೇ ಗುರುವಿಗೆ ಸಂತಸ

ಸಿರುಗುಪ್ಪ: ಸಮಾಜದ ಪ್ರತಿಯೊಬ್ಬ ವಿದ್ಯಾರ್ಥಿಯು ಉನ್ನತ ಸಾಧನೆ ಮಾಡಿದಾಗ ಶಿಕ್ಷಣ ಕಲಿಸಿದ ಗುರುವಿಗೆ ಸಂತಸವಾಗುತ್ತದೆ ಎಂದು ಭಾರತಿ ವಿದ್ಯಾಕೇಂದ್ರದ ಉಪಾಧ್ಯಕ್ಷ ಕೆ.ಎನ್.ಶ್ರೀಧರ್ ಹೇಳಿದರು. ನಗರದ ಶಾಂತಿನಿಕೇತನ ಅನುದಾನಿತ ಪ್ರೌಢ ಶಾಲೆಯ 2009-10ನೇ ಸಾಲಿನ ವಿದ್ಯಾರ್ಥಿಗಳು ಭಾನುವಾರ ಹಮ್ಮಿಕೊಂಡ ಗುರುವಂದನಾ ಹಾಗೂ ಹಳೆ ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿದರು. ಹಳೆ ವಿದ್ಯಾರ್ಥಿಗಳಾದ ನಂದೀಶ್, ತನುಜಾ, ಮಹೇಶ್, ಪ್ರೇಮಲತಾ, ಶ್ರೀಲೇಖಾ, ವಾಸು, ವಿರೇಶ, ಶಾಂತಮ್ಮ ತಮ್ಮಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಭಾರತಿ ವಿದ್ಯಾ ಕೇಂದ್ರದ ಖಜಾಂಚಿ ಕೆ.ಕೃಷ್ಣ ಮಾನಾಡಿದರು. ಶಿಕ್ಷಕರರಾದ ಮುರುಳಿಧರ ಎಚ್, ಮಲ್ಲಿಕಾರ್ಜುನ ಎ., ಬಿ.ಚನ್ನಪ್ಪ ಮಲ್ಲಿಕಾರ್ಜುನ ಎಚ್., ದೇವೇಂದ್ರಗೌಡ, ಪ್ರಕಾಶಗೌಡ, ಎಂ.ಬಿ. ವಡ್ಡರ, ಕೊಟ್ರಯ್ಯ ಬಿ.ಎಂ., ನಾಗಭೂಷಣ, ಧರ್ಮಣ್ಣ, ಲಲಿತಶಾಸ್ತ್ರೀ, ಕೀರ್ತಿಜ್ಯೋತಿ, ಸುನೀತಾ, ಅನುರಾಧ, ಲಕ್ಷೀದೇವಿಗೆ ಸನ್ಮಾನಿಸಿ ಗುರುವಂದನ ಅರ್ಪಿಸಿ ನೆನಪಿನ ಕಾಣಿಕೆ ನೀಡಿದರು.

